ಕಸ್ತೂರಿ

ಫೆಬ್ರುವರಿ ೧೯೮೦



ರೂ. ೧-೫೦

'ಕಸ್ತೂರಿ'ಯ ಅರ್ಧವಾರ್ಷಿಕ ಪರಿವಿಡಿ

ಸಪ್ಟೆಂಬರ್ ೧೯೭೯ ರಿಂದ ಫೆಬ್ರುವರಿ ೧೯೮೦ ರ ವರೆಗೆ

ಕ್ರಮ : ಲೇಖನದ ಹೆಸರು, ತಿಂಗಳು, ಪುಟಸಂಖ್ಯೆ

ಸ = ಸಪ್ಟೆಂಬರ್, ಅ = ಅಕ್ಟೋಬರ್, ನ = ನವಂಬರ್, ಡಿ = ಡಿಸೆಂಬರ್, ಜ = ಜನೆವರಿ, ಫೆ = ಫೆಬ್ರುವರಿ,

ಕವನ-ಉವಾಚ

ಕಥೆ

ಕಲೆ

ಚರ್ಚೆ-ಚಿಂತನ

ಜೀವನ ಚರಿತ್ರೆ ವ್ಯಕ್ತಿಚಿತ್ರ

ದೇಶ-ನಗರ

ನಗೆಮಲ್ಲಿಗೆ

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ನೀತಿಕಥೆ

ಪದಾರ್ಥ ಚಿಂತಾಮಣಿ

ಪುಸ್ತಕ ವಿಭಾಗ

ಪ್ರಾಣಿ ಜೀವನ

ರಹಸ್ಯ-ಸಾಹಸ-ಸೋಜಿಗ

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ :
ಎಚ್. ಆರ್. ಬಸವರಾಜ್

ಸಂಪಾದಕ :
ಪ. ಸು. ಭಟ್ಟ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
‘ತೂಗು ಬ್ಯಾವಮ್ಮ....’
ಚಿತ್ರ :
ಧನು ಕ್ಷತ್ರಿ

ಚಂದಾದರ :
ಅರ್ಧವರ್ಷ ಅಂಚೆ ಸೇರಿ ರೂ. ೧೦-೦೦
೧ ವರ್ಷ ,, ರೂ. ೧೮-೦೦
(ವಿಶೇಷ ಸಂಚಿಕೆ ಸೇರಿ)

KASTURI February 1980

ಬೆಳಕಿಂಡಿ

ನೀವು ಏನೇ ಮಾಡಿ, ಯಾವ ವಿಷಯದ ಬಗ್ಗೆಯೇ ಯೋಚಿಸಿ, ಆದರೆ ‘ಇಂದಿನ ಯುವಜನಾಂಗ ಹೀಗೆಯೇ ಸಾಗಿದರೆ ಮುಂದೆ ಅದರ ಗತಿಯೇನಾದೀತು ?’ ಎಂದು ಯೋಚಿಸುವ ವ್ಯರ್ಥ ಪ್ರಯತ್ನ ಮಾಡಬೇಡಿ- ಯಾಕೆಂದರೆ ಇಂದಿನ ತರುಣರು ಮುಂದೆ ನಿಮ್ಮ ಹಾಗೆಯೇ ಯೋಚಿಸಲಾರಂಭಿಸುತ್ತಾರೆ ಎಂಬ ಕಾರಣದಿಂದ. ಎಂ. ಆರ್‍ಮ್ರಾನ್

*

‘ಒಂದೇ ಮಾಡೆಲ್ಲಿಗಂಟಿಕೊಂಡವರು ಮೂರ್ಖರು’ ಎನ್ನುವ ಮಹಾ ಮುತ್ಸದ್ದಿಗಳಂಥ ಮಹಾ ಮೂರ್ಖರು ಯಾರಿದ್ದಾರೆ? -ಜಾನ್ ಮೈಜ್‌ಮನ್

*

‘ಗಂಪಯ್ಯನೋರದಿದು ಹತ್ತನೇ ಮದ್ವೇಂತ ಅಚ್ಚರಿಪಡ್ತೀಯಾಕೆ? ಅವ್ರು ರಾಜಕೀಯ ಸೇರಿದಾಗಿನಿಂದ್ಲೂ ಹೀಗೇ ನಡೀತಿದೆ ಒಂದನ್ನ ಬಿಟ್ಟನ್ನೊಂದನ್ನ ಹಿಡಿಯೋದು.’ -ಕೇಳಿದ್ದು

*

ತನ್ನತ್ತ ತೂರಿದ ಕಲ್ಲುಗಳನ್ನು ಕೂಡಿಟ್ಟು ಮನೆ ಕಟ್ಟಿಕೊಳ್ಳುವವನೇ ಮಹಾನುಭಾವ.

*

ಚಂದಾದಾರರಿಗೆ ಸೂಚನೆ

‘ಕಸ್ತೂರಿ’ ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

'ನನ್ನದಲ್ಲದ್ದು'

ಡಾ. ನಾ. ಮೊಗಸಾಲೆಯವರ 'ನನ್ನದಲ್ಲದ್ದು' ಪುಸ್ತಕ ವಿಭಾಗ ಓದಿದೆ. ತುಂಬಾ ದಾರುಣವಾಗಿತ್ತು ಡಾ. ಶ್ರೀನಿವಾಸರ ಕಥೆ. ಡಾ. ಶ್ರೀನಿವಾಸರಿಗೆ ಮೊದಲೇನಾದರೂ ತಮ್ಮ ಹುಟ್ಟಿನ ಬಗೆಗೆ ಗೊತ್ತಿದ್ದರೆ ಅವರು ವ್ಯಾಸಕ್ಟಮಿ ಮಾಡಿಸಿಕೊಂಡು ತಮ್ಮ ಬದುಕನ್ನು ಹಾಳುಮಾಡಿಕೊಳ್ಳುತ್ತಿರಲಿಲ್ಲವೇನೋ. ಆದರೆ ಒಂದು ಸಂದೇಹವೇನೆಂದರೆ ಅವರು ಸ್ವತಃ ಡಾಕ್ಟರರು. ಮೇಲಾಗಿ ಫಾರಿನ್ ರಿಟರ್ನ್ಡ್. ಹೀಗಿದ್ದೂ ಅವರಿಗೆ recanalisation ಆಪರೇಶನ್ ಮಾಡಿಸಿಕೊಳ್ಳುವ ವಿಚಾರವೇ ಬರಲಿಲ್ಲವೆ? ಒಂದು ವೇಳೆ ಹಾಗೆ ಮಾಡಿದ್ದಾಗಿದ್ದಲ್ಲಿ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಮೇಯವೇ ಇರುತ್ತಿರಲಿಲ್ಲ; ಅಲ್ಲದೇ ಕೈಯ್ಯಾರೆ ಹಾಳುಗೆಡವಿಕೊಂಡ ಬದುಕನ್ನು ಸ್ವತಃ ಸರಿಪಡಿಸಿಕೊಳ್ಳಬಹುದಿತ್ತು ಎಂದು ಡಾಕ್ಟರಳಾದ ನನ್ನ ಅಭಿಪ್ರಾಯ.

ಬೆಂಗಳೂರು —ಡಾ. ಎ. ಗೀತಾ ಗುರುರಾವ್

ಜನೆವರಿ 'ಕಸ್ತೂರಿ' ಯಲ್ಲಿ ಪ್ರಕಟವಾಗಿರುವ ಡಾ. ನಾ. ಮೊಗಸಾಲೆಯವರ 'ನನ್ನದಲ್ಲದ್ದು' ತನ್ನದೇ ಆದ ವಿಭಿನ್ನ ರೀತಿಯ ವಸ್ತು ಮತ್ತು ಶೈಲಿಯಿಂದ ಓದುಗರನ್ನು ಆಕರ್ಷಿಸುತ್ತದೆ. ಡಾ. ಶ್ರೀನಿವಾಸರ ಬದುಕು ಹೆಂಗಸರು ಬರೀ ಕಾಮತೃಪ್ತಿಗೆ ಮಾತ್ರವಲ್ಲ ಅವರಿಗೂ ಸ್ವಂತ ಅನಿಸಿಕೆಗಳು, ಜೀವನ ರೀತಿ ಇರುತ್ತವೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತದೆ. ಡಾ. ಶ್ರೀನಿವಾಸರ ಅನಿಸಿಕೆಗಳು ಭಾರತದ ಜೀವನಧರ್ಮಕ್ಕೆ ಬಹಳ ದೂರವಾದುದರಿಂದ ಅವರ ಆತ್ಮಹತ್ಯೆ ಸಮಂಜಸವಾಗಿದೆ. ಡಾ. ಶ್ರೀನಿವಾಸರು ಸತ್ತ ಮೇಲೆ ವತ್ಸಲಳ ಅನಿಸಿಕೆ ಯಾವ ಹೆಂಡತಿಗೂ ಸಹಜ. ಆದರೆ ಅವಳ ಮೊದಲ ಅನಿಸಿಕೆಗಳು ತಪ್ಪು ಎಂದು ಒಪ್ಪಿಕೊಂಡಂತಲ್ಲ. ಆ ರೀತಿ ದಾಂಪತ್ಯವನ್ನು ಯಾವ ಹೆಣ್ಣು ಕೂಡ ಒಪ್ಪಲಾರಳು. ಕಾದಂಬರಿ ಓದುತ್ತಿದ್ದಾಗ ಬಂದ ಡಾ. ಶ್ರೀನಿವಾಸರ ಮೇಲಿನ ಸಿಟ್ಟು ಅದನ್ನು ಓದಿ ಮುಗಿಸಿದ ಮೇಲೂ ಇರುತ್ತದೆ. ಲೇಖಕರು ಬಳಸಿರುವ 'ಕಥೆ ಹೇಳುವ' ಶೈಲಿ ಬಹಳ ಚೆನ್ನಾಗಿದೆ.

ಬೆಂಗಳೂರು —ಸಾಮಾನ್ಯ

'ನನ್ನದಲ್ಲದ್ದು' ಒಂದು ದುರಂತ ಚಿತ್ರಣ, ಸಹಜವಾಗಿ ಮೂಡಿ ಬಂದಿದೆ. ಆದರೆ ನನ್ನದೊಂದು ಜಿಜ್ಞಾಸೆ. ಡಾ. ಶ್ರೀನಿವಾಸರು ವೈದ್ಯಕೀಯ ತರ್ಕದಿಂದಾಗಿ ಹಾಗೂ ಅನಿವಾರ್ಯ ಕಾರಣಗಳಿಂದ ವ್ಯಾಸಕ್ಟಮಿ ಮಾಡಿಸಿಕೊಂಡರು. ಪದ್ಧತಿಯಂತೆ ಮದುವೆಯೂ ಆದರು. ಅವರ ಪತ್ನಿಯು ಎಲ್ಲ ಸ್ತ್ರೀಯರಂತೆ ಮಕ್ಕಳನ್ನು ಪಡೆಯ ಬಯಸುವುದು ಸಹಜ. ವ್ಯಾಸಕ್ಟಮಿ ಶಸ್ತ್ರಚಿಕಿತ್ಸೆಯ ನಂತರ ಗಂಡಸು ನಿರ್ವೀರ್ಯನಾಗುತ್ತಾನೆ. ಆದರೆ ವ್ಯಾಸಕ್ಟಮಿಯ ನಂತರವೂ ಪ್ರತಿಶಸ್ತ್ರಕ್ರಿಯೆ ನಡೆಸಿ, ಮೊದಲಿನಂತೆ ವೀರ್ಯವಂತರಾಗಲು ಸಾಧ್ಯವಿದೆಯೆಂದು ಯಾವುದೋ ಪತ್ರಿಕೆಯಲ್ಲಿ ಓದಿದ ನೆನಪು ನನಗೆ. ಸ್ವತಃ ಡಾಕ್ಟರರಾದ ಶ್ರೀನಿವಾಸರು ಈ ಬಗ್ಗೆ ಆಲೋಚಿಸಿರಲಿಲ್ಲವೆ? ಪ್ರತಿಶಸ್ತ್ರಕ್ರಿಯೆ ಮಾಡಿಸಿಕೊಂಡು ಇಷ್ಟೆಲ್ಲ ದುರಂತಗಳನ್ನು ತಪ್ಪಿಸಲು ಅವರಿಂದ ಸಾಧ್ಯವಿತ್ತಲ್ಲವೆ?

ಪುತ್ತೂರು —ಪಿ. ಸೀತಾರಾಮ

[ಒಂದು ಮಾತು. ವ್ಯಾಸಕ್ಟಮಿಯಿಂದ ಪುರುಷ ನಿರ್ವೀರ್ಯನಾಗುವುದಿಲ್ಲ, ಅವನ ವೀರ್ಯದಲ್ಲಿ ಗರ್ಭಧಾರಣೆಗೆ ಅಗತ್ಯವಾದ ವೀರ್ಯಾಣುಗಳು ಸೇರುವುದನ್ನು ಈ ಶಸ್ತ್ರಕ್ರಿಯೆ ಪ್ರತಿಬಂಧಿಸುತ್ತದೆ. ಒಮ್ಮೆ ಈ ಶಸ್ತ್ರಕ್ರಿಯೆಯ ನಂತರ ಪುರುಷನ ಗರ್ಭಾದಾನ ಶಕ್ತಿ ಶಾಶ್ವತವಾಗಿ ನಿಂತುಹೋಗುವುದೆಂದು ತಿಳಿಯಲಾಗುತ್ತಿತ್ತು. ಆದರೆ ಸುಮಾರು ೨೦ ವರ್ಷಗಳ ಹಿಂದೆ ಮುಂಬಯಿಯ ಡಾ. ಫಡಕೆ ಎಂಬವರು re-canalisation ಎಂಬ ಶಸ್ತ್ರಕ್ರಿಯೆಯನ್ನು ಪರಿಪೂರ್ಣಗೊಳಿಸಿ ಈ ಶಕ್ತಿಯನ್ನು ಪುನಃ ಪಡೆಯಲು ಶಕ್ಯವೆಂಬುದನ್ನು ಸಿದ್ಧಪಡಿಸಿದರು. ಈ ಬಗ್ಗೆ 'ಕಸ್ತೂರಿ'ಯಲ್ಲೇ ಕೆಲ ವರ್ಷಗಳ ಹಿಂದೆ ಲೇಖನ ಬಂದಿದೆ. ಆದರೆ ಇದು ಪ್ರತಿಶಸ್ತ್ರಕ್ರಿಯೆಯಲ್ಲ–ಶಸ್ತ್ರಕ್ರಿಯೆಯೇ. 'ನನ್ನದ–ಲ್ಲದ್ದು'ದ ನಾಯಕನಿಗೆ ಇದು ತಿಳಿದಿರಲಿಕ್ಕಿಲ್ಲವೆಂದು ಭಾವಿಸುವುದಕ್ಕಿಂತ ಅಂದಿನ ಮನಃಸ್ಥಿತಿಯಲ್ಲಿ ಅವರಿಗೆ ಬಹುಶಃ ಇದು ಬೇಕಿರಲಿಲ್ಲವೇನೊ. –ಸಂ]

'ಜ್ಯೋತಿರ್ಗಮಯ'

ಜನೆವರಿ 'ಕಸ್ತೂರಿ' ಯಲ್ಲಿ ಪ್ರಕಟವಾಗಿರುವ ನಾ. ಡಿಸೋಜರವರ ಕಥೆ 'ಜ್ಯೋತಿರ್ಗಮಯ' ಓದಿದೆ. ತುಂಬಾ ಮಾರ್ಮಿಕವಾಗಿ ಮೂಡಿಬಂದಿದೆ.

ಹಳ್ಳಿಗಳ ಪರಿಸ್ಥಿತಿ ಯಾವ ಮಟ್ಟಕ್ಕೆ ಇಳಿದಿದೆ ಎಂಬುದನ್ನು ತೋರಿಸಿಕೊಡುತ್ತದೆ. ಕತ್ತಲಲ್ಲಿ ನಡೆಯುವ ವ್ಯವಹಾರಕ್ಕೆ ಧರ್ಮಜ್ಞ ಹಾಕಿದ ದೀಪದ ಬೆಳಕಿನಿಂದ ಕೊಡಲಿ ಪೆಟ್ಟು ಬಿದ್ದಂತಾಗಿ, ಕೊನೆಗೆ ಧರ್ಮಜ್ಞನನ್ನೆ ಆಹುತಿ ತೆಗೆದುಕೊಂಡುಬಿಟ್ಟರು. ಧರ್ಮಜ್ಞ ಯಾವಾಗಲೂ ಅಮರನೆನಿಸಿಕೊಳ್ಳುತ್ತಾನೆ. ತೆರೆಯ ಮರೆಯಲ್ಲಿ ಜನರು ತಮ್ಮ ಅವನತಿಗೆ ತಾವೇ ಕಾರಣರಾಗುತ್ತಾರೆ ಎಂಬುದನ್ನು ಅರಿಯಲಾರರು.

ಸೊಲ್ಲಾಪುರ. —ರಮೇಶ ಹುದಲಿಕರ

'ಜ್ಯೋತಿರ್ಗಮಯ' ಒಂದು ವಿವೇಚನಾತ್ಮಕ ಕಥೆ. ನಾವಿಂದು ಸಮಾಜ ಸುಧಾರಣೆಯ ಮುಖವಾಡ ತೊಟ್ಟು ನೈತಿಕವಾಗಿ ಮತ್ತು ಸಾಮಾಜಿಕವಾಗಿ ಅದೆಷ್ಟು ಅವನತಿಯತ್ತ ಧಾವಿಸುತ್ತಿರುವೆವು ಎಂಬ ಚಿತ್ರದ ಕ್ಷ-ಕಿರಣ ವರದಿ ಎನ್ನಬಹುದು. ಈ ಸಮಾಜದ ನಗ್ನ ಚಿತ್ರವನ್ನು ಓದುಗರ ಮನ ಮಿಡಿಯುವಂತೆ ಸುಂದರ ಶೈಲಿಯಲ್ಲಿ ಒದಗಿಸಿದ ನಾ. ಡಿಸೋಜ ಅವರಿಗೆ ಅಭಿನಂದನೆಗಳು. ಇಂಥ ವಿಷಯ ವಿವೇಚನಾತ್ಮಕ ಸಾಹಿತ್ಯದಿಂದ ನಾವು ತಿಳಿಯಾದ ಸಮಾಜ ನಿರ್ಮಿಸಬಲ್ಲೆವು ಎಂದುಕೊಂಡರೆ ಅದು ಮೃಗಜಲವೇ ಸರಿ.

ಗಂಧನಹಳ್ಳಿ ಡಾ. ಪಿ. ರಾಘವೇಂದ್ರರಾವ್

'ಸಾಹಿತಿ ಮಹಾಶಯ'

ತಮ್ಮ ಜನವರಿ ಸಂಚಿಕೆಯಲ್ಲಿಯ ದುಷ್ಯಂತರ 'ಸಾಹಿತಿ ಮಹಾಶಯ' ಎಂಬ ಲೇಖನವು ಒಂದು ಶ್ರೇಷ್ಠ ಮಟ್ಟದ ವಿಡಂಬನಾತ್ಮಕ ಲೇಖನ. ಅದು ಓರ್ವ ಸಾಹಿತಿಯ ಆತ್ಮವಿಮರ್ಶೆಯೇ ಆಗಿದೆ. ಸ್ವತಃ ತಾವೂ ಅಂತಹ ಸಾಹಿತಿಗಳಲ್ಲಿ ಓರ್ವರೆಂದು ಹೇಳಿಕೊಂಡ ಲೇಖಕರು, ಸಾಹಿತಿಯ ಸ್ವಭಾವ ಮತ್ತು ನಡತೆಗಳ ಮೇಲೆ ತಮ್ಮ ಅನುಭವದ 'ಕ್ಷ' ಕಿರಣ ಬೀರಿ ಅವುಗಳಲ್ಲಿಯ ಸೂಕ್ಷ್ಮಾತಿಸೂಕ್ಷ್ಮಗಳನ್ನು ಕಂಡುಹಿಡಿದು ಕೂಲಂಕಷವಾಗಿ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಗೋಕಾಕ —ಆರ್ಯೆನ್ನೆ

ನಿಮ್ಮ ಜನವರಿ ಸಂಚಿಕೆಯಲ್ಲಿ ಪ್ರಕಟವಾದ 'ಸಾಹಿತಿ ಮಹಾಶಯ' ಲೇಖನವು ತುಂಬ ಅರ್ಥಗರ್ಭಿತವಾಗಿದೆ. ಇಂದಿನ ಶೇಕಡ ೯೯ ಭಾಗ ಸಾಹಿತಿಗಳ ನಿಜ ರೂಪವನ್ನು ಲೇಖಕರು ಕನ್ನಡಿ ಹಿಡಿದಂತೆ ಚಿತ್ರಿಸಿದ್ದಾರೆ.

ಬೆಂಗಳೂರು —ಎಸ್. ಅನಂತರಾಮರೆಡ್ಡಿ

ಹಂದಿಗನೂರು ಸಿದ್ರಾಮಪ್ಪನವರು

ಜನೆವರಿ 'ಕಸ್ತೂರಿ' ಯಲ್ಲಿ ಪ್ರಕಟವಾದ ಡಾ. ಬಾಪೂರಾವ ನಾಡಗೌಡರು ಬರೆದ 'ಮರೆಯಲಾಗದ ಮಹಾನುಭಾವ' ಲೇಖನ ಅತ್ಯಂತ ಹೃದ್ಯವಾಗಿತ್ತು.

ಕಲೆಯೊಂದು ತಪಸ್ಸು ಎಂದು ತಿಳಿದು ಆ ಕಲಾಸಾಧನೆಗಾಗಿ ಋಷಿಸದೃಶ ಜೀವನವನ್ನು ಸವೆಸಿ ಕಲೆಗಾಗಿ ದುಡಿದು ದೂರಾದ ಮಹಾನುಭಾವ ಹಂದಿಗನೂರು ಸಿದ್ರಾಮಪ್ಪನವರನ್ನು ಮರೆಯುವದಾದರೂ ಎಂತು?

ಧಾರವಾಡ —ಚಂದ್ರಶೇಖರ ವಸ್ತ್ರದ

ಮೊದಲ ಮುಸ್ಲಿಮ್

ಜನೆವರಿ 'ಕಸ್ತೂರಿ'ಯಲ್ಲಿ ಬಂದ ನೋಬೆಲ್ ವಿಜೇತ ಡಾ. ಅಬ್ದುಸ್ ಸಲಾಂ ಈ ಬಹುಮಾನ ಪಡೆದ ಪ್ರಪ್ರಥಮ ಮುಸ್ಲಿಮ್ ಎಂಬುದಾಗಿ ಬರೆದಿದ್ದೀರಿ. ಇಜಿಪ್ತಿನ ಅಧ್ಯಕ್ಷ ಸಾದತ್ ಇವರಿಗಿಂತ ಮೊದಲು ನೋಬೆಲ್ ಶಾಂತಿ ಪಾರಿತೋಷಕ ಪಡೆಯಲಿಲ್ಲವೆ? ಅವರು ಖಂಡಿತ ಮುಸ್ಲಿಮ್.

ಇದೇ ಸಂಚಿಕೆಯಲ್ಲಿ ಪ್ರಕಟವಾದ ಹೋಜು ನಸರುದ್ದೀನ್ ಮುಲ್ಲಾರ ಕುರಿತ ಲೇಖನದ ತಲೆಕಟ್ಟು ನರಸುದ್ದೀನ್ ಆಗಿದೆಯಲ್ಲ!

ಹುಬ್ಬಳ್ಳಿ —ಓದುಗ

[ನೀವು ಹೇಳಿದ ಎರಡೂ ಮಾತುಗಳೂ ಸರಿ. ಉಳಿದುಹೋದ ದೋಷಕ್ಕಾಗಿ ಕ್ಷಮೆ ಇರಲಿ.]

—ಸಂ.

ಕಸ್ತೂರಿ

ಸಂಚಿಕೆ: ೨ | ಕಸ್ತೂರಿ, ಫೆಬ್ರುವರಿ ೧೯೮೦ | ವರ್ಷ: ೨೪

ಸಮಯ - ಕಾಲ ಇತ್ಯಾದಿ

ಗೋವಾ

ಹದಿನಾರು ವರ್ಷಕ್ಕೇ ಹಿರಿತನ ಬರಬಾರದು, ಆದರೆ ಆತನಿಗೆ ಬಂತು. ಜಮೀನ್ದಾರ ಅಪ್ಪನ ಕೃಪೆ! ಒಂದು ದಿನ ಶಾಲೆಯಿಂದ ತನ್ನೆಲ್ಲ ತೋಟ ಪಟ್ಟಿಗಳನ್ನು ನೋಡಿ ಬರಲೆಂದು ಹೊರಟ. ಮಾವಿನ ತೋಟವು ಬಾಗಿ ಸೊಂಪಿತ್ತು. ಅಮೃತ ಫಲಗಳು ಬಾಯಲ್ಲಿ ನೀರು ತರಿಸುವಂತೆ ರಸಪೂರ್ಣವಾಗಿ ನೇತಾಡುತ್ತಿದ್ದವು. ಹಕ್ಕಿ ಪಕ್ಷಿಗಳು ಹಣ್ಣಿನ ಸೋನೆ ಸವಿಯುತ್ತ, ಕುಕ್ಕಿ ರಸಹೀರುತ್ತ ಹಾರಾಡುತ್ತಿದ್ದವು. ಇದನ್ನೆಲ್ಲ ನೋಡಿ ಹದಿನಾರರ ಹಿರಿಯನಿಗೆ ಹಿರಿ ಹಿರಿ ಹಿಗ್ಗು. ಒಡೆಯ ಬಂದುದನ್ನು ಕಂಡ ತೋಟದ ಆಳು ಮುದುಕ— ಕೇಳಿದ: "ಸ್ವಾಮಿ, ಒಂದೆರಡು ಹಣ್ಣುಗಳನ್ನು ಇಳಿಸಿ ಕೊಡಲೇ, ತಿನ್ನಲಿಕ್ಕೆ ?"

"ಏನು, ಮಾವಿನ ಹಣ್ಣು ತಿನ್ನಬೇಕೆ? ಈಗ ಭಿಕಾರಿಗಳು ಕೂಡ ಮಾವಿನ ಹಣ್ಣು ತಿನ್ನುತ್ತಿದ್ದಾರೆ. ನಾನೂ ಅವರ ಸಮವೆ? ಎಲ್ಲಿಯೂ ಮಾವಿನ ಹಣ್ಣು ದೊರಕದಂತಾದಾಗ ಗೆಳೆಯರೊಂದಿಗೆ ಬಂದು ನಮ್ಮ ತೋಟದ ಹಣ್ಣುಗಳನ್ನು ತಿನ್ನುತ್ತೇನೆ. ಅಲ್ಲಿಯವರೆಗೆ ಒಂದೂ ಹಣ್ಣನ್ನು ಹರಿಯಬೇಡ. ತಿಳಿಯಿತೆ?" ಎನ್ನುತ್ತ ಅಲ್ಲಿಂದ ಮುನ್ನಡೆದ. ಮುದುಕ ಮನದಲ್ಲೇ ನಗುತ್ತ ಹೊರಟ.

ಹತ್ತಾರು ದಿನಗಳು ಕಳೆದಿರಬೇಕು. ಹದಿನಾರರ ಹಿರಿಯ ತನ್ನ ಹತ್ತಾರು ಗೆಳೆಯರೊಂದಿಗೆ ತೋಟಿಗೆ ಬಂದ, ಮಾವಿನ ಹಣ್ಣುಗಳನ್ನು ಸವಿಯಲು. ಆದರೆ ಹಿಂದಿನ ಸಲ ಬಂದಾಗ

ಇದ್ದ ಸೊಬಗಾಗಲಿ, ಮಾವಿನ ಸೊನೆ ಸವಿಯಲು ಸದ್ದು ಮಾಡುತ್ತಿದ್ದ ಹಕ್ಕಿಗಳಾಗಲಿ ಕಾಣುಲಿಲ್ಲ. ತಲೆ ಎತ್ತಿ ನೋಡಿದ, ಒಂದಾದರೂ ಮಾವಿನ ಹಣ್ಣು ಕಾಣಲಿಲ್ಲ ಆ ನೂರಾರು ಗಿಡಗಳಲ್ಲಿ. ಬಲು ಕೋಪ ಬಂತು ಆತನಿಗೆ. ಎಂಥ ಅಪಮಾನ! ಗೆಳೆಯರು ಬಂದಾಗ ಹೀಗಾಗಬೇಕೆ? ಮಾಲಿಯನ್ನು ಕರೆದು ಒದರಾಡಿದ. ಆ ಮುದುಕ ಈಗಲೂ ಅಷ್ಟೆ, ಮನದಲ್ಲೆ ನಕ್ಕ.

"ಒಡೆಯಾ, ಏನಾದವು ಮಾವಿನ ಹಣ್ಣುಗಳೆಂದು ಕೇಳಿದಿರಲ್ಲವೆ? ಕೆಲವನ್ನು ಕಾಗೆ-ಗಿಳಿಗಳಂಥ ಹಕ್ಕಿಗಳು ತಿಂದರೆ ಹಲವನ್ನು ಕಾಲ ತಿಂದು ಹಾಕಿತು." ಎನ್ನುತ್ತ ಕೆಳಗೆ ಒಣಗಿ ಬಿದ್ದು ಮಣ್ಣಾಗಿ ಹೋದ ಹಣ್ಣು-ಗೊರಟುಗಳನ್ನು ತೋರಿಸಿದ. ಹದಿನಾರರ ಹಿರಿಯನಿಗೆ ಏನು ಹೇಳಬೇಕೋ ತೋಚದಾಯಿತು.

ಪ್ರತಿಯೊಂದು ವಸ್ತುವಿಗೂ-ವಿಷಯಕ್ಕೂ ತನ್ನದೇ ಆದ ಸಮಯ ಇದೆ. ಬಿತ್ತುವುದಕ್ಕೊಂದು ಸಮಯ. ಬೆಳೆಯುವುದಕ್ಕೊಂದು ಸಮಯ. ತಿನ್ನುವುದಕ್ಕೊಂದು ಮತ್ತು ತಿನಿಸುವುದಕ್ಕೊಂದು ಸಮಯ. ಹಾಗೇ ನಳನಳಿಸುವುದಕ್ಕೊಂದು ಮುರುಟಿ ಮಣ್ಣಾಗುವುದಕ್ಕೊಂದು ಸಮಯ. ಕಾಲ ಎಲ್ಲದಕ್ಕೂ ಕ್ಷಣ-ಕ್ಷಣದ ಪಾಲು ನೀಡಿದೆ. ಕಾಲ ಮೀರಿದರೆ ಎಲ್ಲವೂ ಖರಾಬಾಗುತ್ತದೆ.

ಸಂಚು

ಅದಟ್ಟಡವಿಯ ಎಲ್ಲಾ ಸತ್ತ ಪ್ರಾಣಿಗಳನ್ನು ಒಂದು ರಣಹದ್ದು ಕುಕ್ಕಿ ತಿಂದುತೇಗಿತ್ತು. ಈಗ ತಿನ್ನಲು ಯಾವ ಸತ್ತ ಪ್ರಾಣಿಗಳೂ ಸಿಗುತ್ತಿರಲಿಲ್ಲ.ಹೀಗಾಗಿ ಆಹಾರ ದೊರಕಿಸಿಕೊಳ್ಳಲು ಸಂಚೊಂದನ್ನು ಹೂಡಿ ಆನೆಯೊಂದರ ಬಳಿಬಂತು.

"ನಮಗೊಬ್ಬ ರಾಜನಿದ್ದ. ಕೆಟ್ಟ ರಾಜ. ನಮ್ಮಿಂದ ಮಾಡಲಾಗದ ಕಾರ್ಯವನ್ನು ಮಾಡಲೇಬೇಕೆಂದು ಒತ್ತಾಯಿಸುತ್ತಿದ್ದ. ನಾವೆಲ್ಲ ಸೇರಿ ಆತನನ್ನು ಪಟ್ಟದಿಂದಿಳಿಸಿಬಿಟ್ಟೆವು. ಈಗ ನಮಗೊಬ್ಬ ರಾಜ ಬೇಕು. ನೀವು ಆ ಸ್ಥಾನಕ್ಕೆ ಯೋಗ್ಯರೆಂದು ನಮ್ಮ ಮಂದಿಯ ಅಭಿಪ್ರಾಯ. ದಯವಿಟ್ಟು ಆ ಸ್ಥಾನವನ್ನಲಂಕರಿಸಬೇಕೆಂದು ವಿನಂತಿಸುತ್ತೇನೆ" ಎಂದಿತು.

ಆನೆ ಒಪ್ಪಿತು. ರಣಹದ್ದಿನೊಡನೆ ಹೊರಟಿತು. ರಣಹದ್ದು ಹಾರುತ್ತ ಹಾರುತ್ತ ಹೋದ ಹಾದಿಯಲ್ಲೇ ಸಂತೋಷದಿಂದ ಹೊರಟ ಆನೆ ಒಂದು ತಗ್ಗಿನಲ್ಲಿ ಬಿದ್ದಿತು. ಸುತ್ತಲೂ ಕಂಟಿಗಳು ಬೆಳೆದಿದ್ದರಿಂದಲೂ, ತಗ್ಗು ಜಪ್ಪಳಾಗಿದ್ದರಿಂದಲೂ ಅದರಿಂದ ಹೊರ ಬರುವುದು ಆನೆಗೆ ಅಸಾಧ್ಯವಾಯಿತು. ಘೀಳಿಡತೊಡಗಿದ ಆನೆಯನ್ನು ಸಮೀಪಿಸಿದ ರಣಹದ್ದು,

"ಮಹಾರಾಜರೆ, ಹೇಳಿ ನಿಮಗೇನು ಸೇವೆ ಬೇಕು? ನೀವು ಹೇಳಿದ್ದೇ ನಮಗೆ ಅಪ್ಪಣೆ" ಎಂದಾಗ,

"ನನ್ನನ್ನು ಇಲ್ಲಿಂದ ಹೇಗಾದರೂ ಹೊರಕ್ಕೆಳೆ" ಎಂದಿತು ಆನೆ.

"ಆಯಿತು. ನನ್ನ ಚುಂಚಿನಿಂದ ನಿಮ್ಮನ್ನು ಹೊರಗೆಳೆಯುವೆ" ಎಂದ ರಣಹದ್ದು ಆನೆಯ ಕಣ್ಣು ಕುಕ್ಕಿತು. ಸಂಕಟದಿಂದ ಒದ್ದಾಡಿದ ಆನೆ ಕಣ್ಣು ಕುರುಡಿನಿಂದಾಗಿ ಸುತ್ತ ಮುತ್ತ ಡಿಕ್ಕಿ ಹೊಡೆದು, ಹಸಿವೆ, ಬಳಲಿಕೆಯಿಂದಾಗಿ ಸೊರಗಿ ಸತ್ತು ಹೋಯಿತು. ನಂತರ, ರಣಹದ್ದಿಗೋ ರಸದೌತಣ!

ಹೀಗೇ ಧೂರ್ತರು ಸಂಭಾವಿತರನ್ನು ಬಲೆಯಲ್ಲಿ ಕೆಡಹಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ದುರ್ಬಲರನ್ನು ಕೊಳೆಸಿ ತಾವು ಬೆಳೆಯುತ್ತಾರೆ.

— ಟಾಲ್‌ಸ್ಟಾಯ್

ಕೆಂಪು ಕಲ್ಲಿನಲ್ಲಿ ಕಲೆ

ಶಿಲ್ಪಕಲೆಯಲ್ಲಿ ಭಾರತಕ್ಕೆ ಸರಿಸಮಾನಾಗಿ ಶಿಲ್ಪ ಬಲ್ಲ ದೇಶವೇ ಇಲ್ಲವೆಂದು ಹೇಳಬೇಕು. ಅಂಥ ಕೌಶಲ, ಅಂಥ ಮಹತಿ ಮತ್ತು ಪರಂಪರೆ ನಮ್ಮ ಶಿಲ್ಪಕಲೆಯದು. ಕ್ರಿಸ್ತಪೂರ್ವದ ಎಷ್ಟೋ ನೂರು ವರ್ಷಗಳಷ್ಟು ಹಿಂದೆಯೇ ನಮ್ಮ ಶಿಲ್ಪ ಕಲೆ ಹುಟ್ಟಿತು. ರಾಜಾಶ್ರಯ ದೊರಕಿದ ಕಾಲವೂ ಒಂದಿತ್ತು. ವಿಶ್ವಮಾನ್ಯತೆ ದೊರೆತ ಕಾಲವೂ ಬಂದಾಯಿತು. ಜತೆಜತೆಗೇ 'ಭಾರತೀಯ'ವಾದುದೆಲ್ಲ ಒಳ್ಳೆಯದು, ಶ್ರೇಷ್ಠ ಎಂದರಿತ ವಿದೇಶೀಯರ ಲಗ್ಗೆಗಳಿಂದಾಗಿ ನಮ್ಮ ಕಲಾಕೃತಿಗಳು 'ಪರದೇಶಿ'ಯಾಗಬೇಕಾಯಿತು. ಹಾಗೇ ನಮ್ಮವರ ಅಸಡ್ಡೆ ಮತ್ತು ಕೆಲ ಧರ್ಮಾಂಧರ ಮೂರ್ತಿಭಂಜಕತೆಯಿಂದಾಗಿ ನಮ್ಮ ಶಿಲ್ಪಕೃತಿಗಳು ಅಂಗಹೀನವಾಗಿ ಕುಗೊಳಿಸುವಂತಾಯಿತು.

ಇಂದು ಭಾರತೀಯ ಶಿಲ್ಪಕಲೆಯ ಬಗ್ಗೆ ಭಾರತಕ್ಕಿಂತ ಬೇರೆ ದೇಶಗಳೇ ಹೆಚ್ಚು ಆಸಕ್ತಿ ತೋರಿಸುತ್ತಿವೆ. ಬೇರೆ ಬೇರೆ ದೇಶಗಳ ಪ್ರಾಚ್ಯವಸ್ತು ಸಂಗ್ರಹಾಲಯಗಳಲ್ಲಿರುವ 'ನಮ್ಮ' ಶಿಲ್ಪಕೃತಿಗಳೇ ಇದಕ್ಕೆ ಸಾಕ್ಷಿ. ಹೇಗೇ ಆಗಲಿ ಈ ಕೃತಿಗಳನ್ನವರು ಹೇಗೇ ತಮ್ಮವುಗಳನ್ನಾಗಿಸಿಕೊಂಡಿರಲಿ ಅವರ ಗುಣಗ್ರಾಹಿ ದೃಷ್ಟಿ ಮತ್ತು ಸಂಶೋಧನಾ ಮನೋಭಾವ ಮಾತ್ರ ಪ್ರಶಂಸನೀಯ.

ಇಲ್ಲಿ ಈಗ ವಿವರಿಸಲ್ಪಟ್ಟಿರುವ ಎರಡೂ ಶಿಲ್ಪಕೃತಿಗಳ ರಚನೆಯ ಕಾಲದಲ್ಲಿ ಸುಮಾರು ಎಂಟುನೂರು ವರ್ಷಗಳಷ್ಟು ಅಂತರವಿದೆ. ಎರಡೂ ಶಿಲ್ಪಕೃತಿಗಳನ್ನು ತೌಲನಿಕ ದೃಷ್ಟಿಯಿಂದ, ಆಯಾ ಕಾಲದ ಶಿಲ್ಪಕಲೆಯ ಪ್ರೌಢಿಮೆ ಹಾಗೂ ಬೆಳವಣಿಗೆಯನ್ನು ಅರಿತುಕೊಳ್ಳುವ ಉದ್ದೇಶದಿಂದ ಆರಿಸಿಕೊಳ್ಳಲಾಗಿದೆ. ಎರಡೂ ಪ್ಯಾರಿಸ್ಸಿನ ಗೈಮೆಟ್ ಮ್ಯೂಸಿಯಂನಲ್ಲಿವೆ.

ಮೊದಲನೆಯದು 'ತಾಯಿ–ಮಗು'. ಎಲಿಫಂಟಾ ಗುಹೆಗಳಲ್ಲಿನ ಒಂದು ದೇವಾಲಯದಿಂದ ಸಂಗ್ರಹಿಸಲ್ಪಟ್ಟದ್ದು. ೪೦ ಸೆಂಟಿಮೀಟರ್ ಪಿಡವುಳ್ಳ ಕೆಂಪು ಕಲ್ಲಿನಲ್ಲಿ ಕೆತ್ತಲ್ಪಟ್ಟ ಹತ್ತನೆಯ ಶತಮಾನದ ಈ ಶಿಲ್ಪ ಭಿನ್ನವಾಗಿದೆ. ತಾಯಿ ಮುಖದಲ್ಲಿರುವ ಮಮತೆ, ವಾತ್ಸಲ್ಯ, ಮಗುವನ್ನೆತ್ತಿಕೊಂಡಿರುವ ರೀತಿ, ಮಗು (ಮುಖ ಭಿನ್ನವಾಗಿದೆ) ಮಾತೆಯ ಮುಖದ ಮೇಲೆ ಕೈ ಎಳೆಯುತ್ತಿರುವ ರೀತಿ ಇವೆಲ್ಲ ಶಿಲ್ಪಿಯ ಕಲ್ಪನೆಯ, ಕೌಶಲದ, ಜಾಣ್ಮೆಯ ಕುರುಹುಗಳಾಗಿವೆ. ಶಿಲ್ಪವನ್ನು ನೋಡುತ್ತಿದ್ದಂತೆ ಅನಿರ್ವಚನೀಯ ಆನಂದವುಂಟಾಗುತ್ತದೆ. ಜತೆಗೇ ಮಗುವಿನ ತಲೆ ಕಡಿದುದನ್ನು ಕಂಡು ಮನಕರಗುತ್ತದೆ– ಕಡಿದವನ ಬಗ್ಗೆ ರಕ್ತ ಕುದಿಯುತ್ತದೆ. ಈ ಶಿಲ್ಪದಲ್ಲಿರುವ ನಯ ನಾಜೂಕು ಆಗಿನವರೆಗಿನ ಶಿಲ್ಪಕಲಾ ಬೆಳವಣಿಗೆಗೆ ಒಂದು ಉದಾಹರಣೆ.

ಇನ್ನು ಎರಡನೆಯ ಶಿಲ್ಪ: 'ನಾಗರಾಜ'. ಇದು ಒಂದನೆಯ ಅಥವಾ ಎರಡನೆಯ ಶತಮಾನಕ್ಕೆ ಸಂಬಂಧಿಸಿದ್ದು. ಮಥುರಾ ಶೈಲಿಯದು. ಅಲ್ಲಿ ಸಾಮಾನ್ಯವಾಗಿ ಸಿಕ್ಕುವ ಕೆಂಪು ಮರಳು ಕಲ್ಲಿನ ಈ ನಾಗರಾಜ ಸುಕಾಲ–ದುಷ್ಕಾಲ ಎರಡಕ್ಕೂ ಕಾರಣೀಭೂತನಂತೆ. ಮಳೆ ತರಿಸಿ ಸಮೃದ್ಧಿಯುಂಟು ಮಾಡಬಲ್ಲ, ಹಾಗೆಯೇ ಮಳೆ ಬಾರದಂತೆ ಮಾಡಿ ಬರಗಾಲ ತರಬಲ್ಲನಂತೆ. ಹಾವುಗಳನ್ನು ಸುತ್ತಿಕೊಂಡಿರುವ ಈ ಶಿಲ್ಪದಲ್ಲಿ ನಾವು ಮಥುರಾ ಶೈಲಿಯ ಶಿಲ್ಪಗಳು ಒಂದನೆಯ ಶತಮಾನದ ಕಾಲಕ್ಕೆಯೇ ಎಷ್ಟು ಪ್ರೌಢಿಮೆಗಳಿಸಿದ್ದವೆಂಬುದನ್ನು ಕಾಣಬಹುದು.

ಸೌಂದರ್ಯವನ್ನು ಕಂಡು ಮೆಚ್ಚುವುದರಲ್ಲೇ ತೃಪ್ತಿಪಟ್ಟುಕೊಳ್ಳುವ ನಮ್ಮವರ ವರ್ತನೆಗೆ ಮನಸ್ಸು ರೋಸಿಹೋಗುತ್ತದೆ. ಇಂಥ ಶಿಲ್ಪಗಳನ್ನು ಕಂಡಾಗ.

(ಚಿತ್ರಗಳಿಗಾಗಿ ಪುಟ ೧೨-೧೩ ನೋಡಿ)


PATIL





ಪೆಡ್ಡಿಂಗರೊಂದಿಗೆ ಪ್ರಪಂಚ ಪರ್ಯಟನೆ

ಹ.ಶು.ಭಟ್ಟರಿಂದ ಅನುವಾದಿತ

"ನ್ಯೂಯಾರ್ಕಿಗೆ ನಿಮ್ಮ ಭೇಟಿ ಇದೇ ಮೊದಲೇ?"

ನಾನು ಹೊರಗೆ ಇಣಕಿ ನೋಡುತ್ತಿದ್ದುದನ್ನು ಆತ ಗಮನಿಸಿದ್ದ. ಅಮೇರಿಕನ್ ಕ್ಯಾಬ್ ಡ್ರೈವರ್‌ನೊಂದಿಗೆ ಹೊಂದಿಕೊಳ್ಳಲು ಯಾವುದು ಉತ್ತಮ – ವಿದೇಶ ಪ್ರಯಾಣ ಕೈಗೊಂಡಿರುವ ಮುಗ್ಧ ವ್ಯಕ್ತಿ ಎಂಬ ಕಲ್ಪನೆಯೇ ಅಥವಾ ಅನುಭವಿ ಪ್ರಯಾಣಿಕನೆಂದೆ? ಮುಗ್ಧ ಪ್ರಯಾಣಿಕನಾಗಿರುವುದೇ ಉತ್ತಮವೆನಿಸಿತು.

"ಹೌದು, ಇದು ಭಯಾನಕ." ನಾನು ಮನ್‌ಹಟ್ಟನ್‌ನ ಗಗನಚುಂಬಿ ಕಟ್ಟಡಗಳ ಕಡೆಗೆ ಕೈ ತೋರಿಸುತ್ತೇನೆ.

"ಭಯಪಡುವಂತಾದ್ದೇನೂ ಇಲ್ಲ–" ಆತ ನನಗೆ ಭರವಸೆ ನೀಡುತ್ತಾನೆ. "ಇದು ಪ್ರಪಂಚದ ಅತ್ಯಂತ ಭವ್ಯ ನಗರ. ನೀವು ಎಲ್ಲಿಂದ ಬಂದವರು?"

"ಭಾರತದಿಂದ."

"ಭಾರತವೆಂದರೆ ನನಗೆ ಭಯ. ಹೊಟ್ಟೆ–ಗಿಲ್ಲದ ಆ ಜನಗಳು! ರಸ್ತೆಗಳಲ್ಲಿ ಓಡಾಡುವ ಆ ದನಗಳು! ಟಿ.ವಿ.ಯಲ್ಲಿ ನಾನು ಅದೆಲ್ಲ ಕಂಡಿದ್ದೇನೆ."

ಪರಕೀಯನೊಬ್ಬನಿಂದ ಈ ಮಾತನ್ನು ನಾನು ಸಹಿಸುವುದಿಲ್ಲ. "ಹೌದು, ನಿಮ್ಮಲ್ಲಿ ದುಡ್ಡು ಕೊಳೆಯುತ್ತಿರುವ, ಬೊಜ್ಜು ಬೆಳೆದ ಜನಗಳು ಬಹಳಷ್ಟಿದ್ದಾರೆ. ನಿಮ್ಮ ರಸ್ತೆಗಳಲ್ಲಿ ಗೂಂಡಾಗಳೂ, ಪೋಲಿಗಳೂ ಬಹಳಷ್ಟಿದ್ದಾರೆ. ಅವರ ಕುರಿತು ನಾನು ನಮ್ಮ ಪತ್ರಿಕೆಗಳಲ್ಲಿ ಓದುತ್ತಿರುತ್ತೇನೆ."

ಆತ ನಗುತ್ತಾನೆ. "ನಾನು ದಪ್ಪನಾಗಿದ್ದೇನೆ, ಆದರೆ, ನಾನು ದುಡ್ಡಿನ ಮನುಷ್ಯನಲ್ಲ. ಟ್ಯಾಕ್ಸಿ ಓಡಿಸಿ ದುಡ್ಡು ಮಾಡೋಕಾಗೋಲ್ಲ. ಗೂಂಡಾಗಳಿರಲಿ ಇಲ್ಲದಿರಲಿ, ಯಾವುದೇ ದೈವೀ ಸಾಮ್ರಾಜ್ಯಕ್ಕಿಂತ ನನಗೆ ನ್ಯೂಯಾರ್ಕ್ ನಗರವೇ ಸಾಕು. ನ್ಯೂಯಾರ್ಕಿನಲ್ಲಿ ಏನು ಬೇಕಿದ್ದರೂ ಸಿಗುತ್ತದೆ."

ತನ್ನ ನಗರದಲ್ಲಿ ಏನೆಲ್ಲ ಸಿಗುತ್ತದೆಂಬ ದೊಡ್ಡ ಪಟ್ಟಿಯನ್ನೇ ಆತ ಮಾಡುತ್ತಾನೆ. ಪ್ರಪಂಚದಲ್ಲೇ ಅತ್ಯಂತ ಭವ್ಯ ಹೋಟೇಲುಗಳು, ಪ್ರಪಂಚದ ಅತಿ ದೊಡ್ಡ ಕಟ್ಟಡಗಳು, ವಸ್ತುಸಂಗ್ರಹಾಲಯಗಳು, ಪ್ರಪಂಚದಲ್ಲೇ ಅತ್ಯುತ್ತಮದ ಮನರಂಜನೆ. ಸುರಸುಂದರಿಯರು. ಅವನೊಬ್ಬ ಮಾತುಗಾರ. ಆತನ ಮಾತು ಸಾಗಿತ್ತು; ನಾನು ಟ್ಯಾಕ್ಸಿ ಮೀಟರ್ ಓಡುವುದನ್ನು ಗಮನಿಸುತ್ತಿದ್ದೆ. ಟ್ಯಾಕ್ಸಿ–ಡ್ರೈವರ್ ಜನಾಂಗವನ್ನೆ ನಂಬಕೂಡದೆಂದು ನನಗೆ ಅನುಭವ ಹೇಳಿಕೊಟ್ಟಿದೆ. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಈಜಿಪ್ಟ್‌ನಲ್ಲಿ ನಾನು ವಂಚಿತನಾಗಿದ್ದೇನೆ. ನನ್ನ ಹುಟ್ಟೂರು ದೆಹಲಿಯಲ್ಲೇ ವಂಚಿತನಾಗಿದ್ದೇನೆ. ಇವರ ತಂತ್ರವೆಲ್ಲ ನನಗೆ ಗೊತ್ತು. ಅಮೇರಿಕನ್ ಕ್ಯಾಬಿಯೊಬ್ಬ ಈಗ ನನ್ನನ್ನು ವಂಚಿಸಲು ಅಸಾಧ್ಯ. ವಿಮಾನ ನಿಲ್ದಾಣದಿಂದ ಮನ್‌ಹಟ್ಟನ್‌ನಲ್ಲಿರುವ ನನ್ನ

ಹೋಟೇಲಿಗೆ ಮೂರು ಡಾಲರುಗಳಿಗಿಂತ ಹೆಚ್ಚು ಬಾಡಿಗೆ ಆಗಲಾರದೆಂದು ನನಗೆ ಗೊತ್ತು. ನನ್ನ ಜೇಬಿನಲ್ಲಿ ಎರಡು ಡಾಲರ್ ನೋಟುಗಳು ಮತ್ತು ನಾಲ್ಕು ಕಾಲು ಡಾಲರ್ ನಾಣ್ಯಗಳನ್ನು ಕಾದಿಟ್ಟಿದ್ದೇನೆ. ಮೀಟರ್ ೧.೫೦ ಡಾಲರ್ ತೋರಿಸುತ್ತದೆ.

ಆತ ತನ್ನ ಮಾತು ಮುಗಿಸುತ್ತಾನೆ. "ಹೌದು ಸರ್, ಬೇರೆ ಯಾವುದೇ ನಗರದಲ್ಲಿ ದೊರೆಯುವ ಏನು ಬೇಕಿದ್ದರೂ ನ್ಯೂಯಾರ್ಕಿನಲ್ಲಿ ದೊರೆಯುತ್ತದೆ. ಬೇರೆ ಕಡೆಗಿಂತ ಚೆನ್ನಾಗಿರೋದೇ ಇಲ್ಲಿ ಸಿಗುತ್ತೆ. ದುಡ್ಡು ಮಾತ್ರ ಬೇಕು; ಧಾರಾಳ ಬೇಕು."

ನನ್ನ ಮನಸ್ಸಿನಲ್ಲಿದ್ದುದನ್ನು ಹೇಳಲು ನಿರ್ಧರಿಸುತ್ತೇನೆ– "ನನ್ನಲ್ಲಿ ಇರೋದೆಂದರೆ ದಿನಕ್ಕೆ ೧೭ ಡಾಲರ್ ಮಾತ್ರ. ಇದರಲ್ಲಿ ಹೋಟೇಲು, ಟ್ಯಾಕ್ಸಿ, ಊಟ, ಕುಡಿತ ಎಲ್ಲಾನೂ ಮುಗೀಬೇಕು. ದಿನಕ್ಕೆ ೧೭ ಡಾಲರಿನಲ್ಲಿ ನ್ಯೂಯಾರ್ಕಿನಲ್ಲಿ ಚೆನ್ನಾಗಿ ಮಜಾ ಮಾಡಬಹುದೆಂತ ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಜಾಹೀರಾತು ನೋಡಿದ್ದೇನೆ. ದಿನಕ್ಕೆ ೫ ಡಾಲರ್‌ನಲ್ಲಿ ನ್ಯೂಯಾರ್ಕ್ ಹೇಗೆ ನೋಡೋದೆಂತ ಒಂದು ಪುಸ್ತಕವನ್ನೂ ಓದಿದ್ದೇನೆ." ಮೀಟರ್ ೧.೭೫ ತೋರಿಸುತ್ತದೆ.

"ಅದಕ್ಕೆ ಕಡಿಮೆಗೂ ನೋಡಬಹುದು. ಹಗಲು ಮತ್ತು ರಾತ್ರಿ ಕೂಡ ಕೇವಲ ಒಂದೂವರೆ ಡಾಲರ್‌ನಿಂದಲೇ ನೋಡಬಹುದು."

ಈ ಮಾಹಿತಿ ನನ್ನ ತಲೆಗೆ ಹೊಕ್ಕುವವರೆಗೆ ಆತ ಕಾದಿರುತ್ತಾನೆ. "ನೀವು ಎಂಪಾಯರ್ ಸ್ಟೇಟ್ ಬಿಲ್ಡಿಂಗ್ ಹತ್ತಿದರೆ ಸಾಕು. ಒಂದೂವರೆ ಡಾಲರಿಗೇನೇ ಹಗಲು ಮತ್ತು ರಾತ್ರಿ ಕೂಡ ಪೂರ್ತಿ ನ್ಯೂಯಾರ್ಕ್ ನೋಡಬಹುದು. ಹೇಗಿದೆ?"

ಈ ಕ್ಯಾಬಿ ಬಲು 'ಸ್ಮಾರ್ಟ್ ಅಲೆಕ್'! ಮೀಟರ್ ೨ ಡಾಲರ್ ತೋರಿಸುತ್ತದೆ.

ಎರಡು ಕಟ್ಟಡಗಳ ಅಂತರದಲ್ಲಿ ನನ್ನ ಹೋಟೇಲಿನ ಹೆಸರು ಕಾಣಿಸುತ್ತದೆ. ನಡೆದೇ ಹೋದರೆ ಹೋಟೇಲು ದ್ವಾರಪಾಲಕನ ಕಣ್ಣು ತಪ್ಪಿಸಬಹುದು. "ಇಲ್ಲೇ ನಿಲ್ಲಿಸು. ನನಗೆ ಕೊಂಚ ಖರೀದಿ ಮಾಡಬೇಕಾಗಿದೆ."

ಟ್ಯಾಕ್ಸಿ ರಸ್ತೆ ಪಕ್ಕಕ್ಕೆ ನಿಲ್ಲುತ್ತದೆ. ಮೀಟರ್ ಓದುವುದಕ್ಕೂ ಅವಕಾಶ ಕೊಡದೆ ಆತ ಮೀಟರ್ ಫ್ಲ್ಯಾಗ್ ಎಳೆಯುತ್ತಾನೆ. ನನಗೆ ಕಸಿವಿಸಿ ಅನಿಸುತ್ತದೆ. ನನ್ನ ಬ್ಯಾಗನ್ನು ಆತನಿಂದ ದೂರ ರಸ್ತೆ ಪಕ್ಕದಲ್ಲಿಟ್ಟು, ೨.೨೫ ಡಾಲರ್ ಹೊರ ತೆಗೆಯುತ್ತೇನೆ. "ಎಷ್ಟಾಯಿತು?"

"ಇಟ್ಟುಕೊಳ್ಳಿ. ಮಜಾ ಮಾಡಿ." ಆತ ಕೈ ಬೀಸುತ್ತಾನೆ. ಟ್ಯಾಕ್ಸಿ ಹೊರಟು ಹೋಗುತ್ತದೆ.

೧೩ ನೇ ಮಹಡಿಯಲ್ಲಿ ೧೩೧೩ !

ಬ್ಯಾಗ್ ಎತ್ತಿಕೊಂಡು ಹೋಟೇಲಿಗೆ ಹೋಗುತ್ತೇನೆ. ಈ ಹೋಟೇಲಿನಲ್ಲಿ ದ್ವಾರಪಾಲಕನಿಲ್ಲ. ಸ್ವಾಗತಕಾರನಿಗೆ ಟಿಪ್ ಕೊಡದೇನೇ ನಾನು ರೂಂ ಬಗ್ಗೆ ಮಾತಾಡುತ್ತೇನೆ.

"ಬಾತ್ ಇರುವ ರೂಂ ಬೇಕು. ಎರಡು ರಾತ್ರಿಗೆ. ಬಾಡಿಗೆ ರೇಂಜು..." ನಾನು ಬಾಡಿಗೆ ಪಟ್ಟಿಯಲ್ಲಿ ೭.೫೦ ಡಾಲರ್ ಎಂದಿರುವ ಕಡೆ ಬೆರಳಿಡುತ್ತೇನೆ.

ಕ್ಲಾರ್ಕ್ ಪುಸ್ತಕ ಬಿಡಿಸಿ ನೋಡುತ್ತಾನೆ. "೭.೫೦ ಡಾಲರ್ ರೂಂ ಖಾಲಿ ಇಲ್ಲ. ೮ ಡಾಲರ್ ರೂಂ ಇದೆ. ಆಗಬಹುದೇ?"

ನಾನು ಒಪ್ಪುತ್ತೇನೆ. ಫಾರಂ ತುಂಬಿಸುವಾಗ ನನಗೆ ಅರಿವಾಗುತ್ತದೆ. ಬಾಡಿಗೆ ಮೇಲೆ ತೆರಿಗೆಯೂ ಇದೆ. ಬೇಡವೆನ್ನಲು ತಡವಾಗಿತ್ತು. ರೂಂ ನಂಬರ್ ಆತ ಬರೆಯುತ್ತಾನೆ – ೧೩ನೇ ಮಹಡಿಯಲ್ಲಿ ೧೩೧೩. ವಿಚಿತ್ರ! ಕ್ರಿಶ್ಚಿಯನ್ ದೇಶಗಳಲ್ಲಿ ೧೩ನೇ ಮಹಡಿ ಅಥವಾ ೧೩ನೇ ರೂಂ ಇಲ್ಲವೆಂದು ನನಗೆ ಹೇಳಿದವರಾರು! ಆತ ಸೇವಕನಿಗೆ ಚಾವಿ ಕೊಡುತ್ತಾನೆ. ಸೇವಕ ನನ್ನ ಬ್ಯಾಗ್ ಎತ್ತಿಕೊಂಡು ಹಿಂದೆಯೇ ಬರುವಂತೆ ಆಜ್ಞಾಪಿಸುತ್ತಾನೆ. ಸೇವಕನಿಂದ ತಪ್ಪಿಸಿಕೊಳ್ಳುವಂತಿಲ್ಲ.

ರೂಂ ೧೩೧೩ ಎಲಿವೇಟರ್ ಪಕ್ಕಕ್ಕಿದೆ. ಎಲಿವೇಟರ್ ಮೇಲೆ ಕೆಳಗೆ ಹೋಗುವ ಸದ್ದು, ಹಾಗಲ್ಲಿ ಜನ ಮಾತಾಡುವ ಸದ್ದು ಕೇಳಿಸುತ್ತದೆ. ಪಕ್ಕದಲ್ಲಿ ಖಾಲಿ ಜಾಗ.

ಆ ಕಡೆ ಗಗನಚುಂಬಿ ಕಟ್ಟಡಗಳು. ಕಿಟಕಿಯಿಂದ ಕೆಳಗೆ ನೋಡಿದರೆ ಖಾಲಿ ಡಬ್ಬಗಳು, ಬಾಟಲಿಗಳು, ಪತ್ರಿಕೆಗಳು ಮುಂತಾದವುಗಳ ರಾಶಿ. ಗಣಿಯಲ್ಲಿದ್ದಂತೆ ಅನುಭವ. ರೂಂ ೧೩೧೩ ನನಗೆ ಕೊಟ್ಟಾಗ ರೂಂ ಪೂರ್ತಿ ಹೊಗೆ ತುಂಬಿದೆ. ಇರುವ ಒಂದೇ ಒಂದು ಮೇಜಿನ ಮೇಲೆ ಖಾಲಿ ಬೀಯರ್ ಬಾಟಲ್‌ಗಳಿವೆ. ಆ್ಯಷ್ ಟ್ರೇಯಲ್ಲಿ ಸಿಗರೇಟು ತುಂಡುಗಳು ತುಂಬಿವೆ. ಹಾಸಿಗೆ ಕೊಳಕಾಗಿದೆ. ಮಂಚದ ಕಾಲಬುಡದಲ್ಲಿ ಗೋಡೆಗೆ ತಾಗಿ ಕೊಂಡಿರುವ ಟಿ.ವಿ. ಧೂಮ್ರಪಾನದಿಂದ ಶ್ವಾಸಕೋಶದ ಕಾನ್ಸರ್ ಉಂಟಾಗುವುದೆಂದು ಎಚ್ಚರಿಕೆ ನೀಡುತ್ತದೆ. ಒಂದು ನಿರ್ದಿಷ್ಟ ಬ್ರಾಂಡ್ ಸಿಗರೇಟು ಸೇವಿಸಿದರೆ, ಮನ ಸೂರೆಗೊಳ್ಳುವ ಹಳ್ಳಿಯಲ್ಲಿ ಸುರಸುಂದರಿಯರೊಂದಿಗೆ ಮಜಾ ಮಾಡಬಹುದೆನ್ನುತ್ತದೆ. ರೂಂ ಇನ್ನೂ ಸಿದ್ಧವಿಲ್ಲವೆಂದು ಸೇವಕ ಹೇಳುತ್ತಾನೆ. ಈ ಮಾಹಿತಿಗಾಗಿ ನಾನವನಿಗೆ ಕಾಲು ಡಾಲರ್ ಕೊಡುತ್ತೇನೆ. ಬೆಳ್ಳಿಯ ನಾಣ್ಯವನ್ನು ಅಂಗೈನಲ್ಲಿ ಹಿಡಿದ ಸೇವಕ ೫ ಸೆಕೆಂಡುಗಳವರೆಗೆ ಅದನ್ನೇ ದಿಟ್ಟಿಸಿ ನೋಡುತ್ತಾನೆ. ನನಗೆ ಮಾನ ತೆಗೆದಂತಾಗುತ್ತದೆ. ಸೇವಕಿ ಶೀಘ್ರವೇ ಬರುವಳೆಂದು ಹೇಳಿ ಹೊರಟು ಹೋಗುತ್ತಾನೆ.

ಬಾತ್ ರೂಂಗೆ ಹೋಗಲು ನಾನು ಮಂಚದ ಮೇಲಿಂದ ದಾಟುತ್ತೇನೆ. ಶವರ್ ಕೆಳಗೆ ಒದ್ದೆ ಟವೆಲ್‌ಗಳ ರಾಶಿ ಬಿದ್ದಿವೆ. ಸಾಬೂನು ಇಲ್ಲ. ಫ್ಲಷ್ ಸರಿಯಾಗಿದೆ. ಮಂಚದ ಮೇಲೆ ಜಿಗಿದು ಟಿ.ವಿ. ಆಫ್ ಮಾಡುತ್ತೇನೆ. ಕೆಳಗೆ ಲಾಬಿಗೆ ಹೋಗುತ್ತೇನೆ. ಅಮೇರಿಕನ್ನರು ಹೇಳುವಂತೆ ನಾನು ನ್ಯೂಯಾರ್ಕಿಗೆ - ಬಂದಿದ್ದೇನೆ. ದಿನಕ್ಕೆ ೧೭ ಡಾಲರ್‌ನಲ್ಲಿ ರೂಂಗೇನೇ ೮.೨೫ ಡಾಲರ್ ತೆತ್ತ ಮೇಲೆ ನಾನು ಮಜಾ ಮಾಡಲಿದ್ದೇನೆ!

ಬಜೆಟ್ ಮಿತಿ ಇದ್ದಾಗ ಎಚ್ಚರಿಕೆ ಅಗತ್ಯ. ಜಾಗರೂಕತೆಯ ಲೆಕ್ಕಾಚಾರ ಅಗತ್ಯ. ವಿವೇಕವೂ ಬೇಕು. ಸ್ನೇಹಿತರು ಮತ್ತು ಅಪರಿಚಿತರಿಗೆ ಮಸ್ಕಾ ಹಾಕುವ ನಾಜೂಕು ಕಲೆಯೂ ಚೆನ್ನಾಗಿ ಗೊತ್ತಿರಬೇಕು. ನನ್ನಲ್ಲಿ ಈ ಎಲ್ಲ ಗುಣಗಳೂ ಇವೆ. ನನ್ನೊಂದಿಗೆ ಒಂದ ಡಜನ್ ಫೋಲ್ಡರ್‌ಗಳಿವೆ; ನಗರದ ಮ್ಯಾಪ್ ಅದರ ಸಬ್‌ವೇ ವ್ಯವಸ್ಥೆ, ಬಸ್ ರೂಟ್-ಗಳು, ಹೋಟೇಲುಗಳು ಹಾಗೂ ಅಗ್ಗದ ಚೆನ್ನಾದ ರೆಸ್ಟೋರಾಗಳ ಪಟ್ಟಿಯೂ ಇದೆ ಪ್ರವಾಸ ವ್ಯವಸ್ಥೆಯ, ವಸ್ತುಸಂಗ್ರಹಾಲ-ಯಗಳ ಥಿಯೇಟರ್‌ಗಳ ಸಿನೆಮಾಗಳ, ನೈಟ್ ಕ್ಲಬ್‌ಗಳ – ಎಲ್ಲ ವಿವರಗಳೂ ನನ್ನಲ್ಲಿವೆ.

ಹೋಟೇಲಿನ ಡೈನಿಂಗ್ ರೂಂಗೆ ಹೋಗುತ್ತೇನೆ. ಟ್ಯಾಕ್ಸಿ ಬಾಡಿಗೆ ಮತ್ತು ದ್ವಾರಪಾಲಕನ ಟಿಪ್‌ನಿಂದ ಮಾಡಿದ ಉಳಿತಾಯದ ನಂತರ ಚೆನ್ನಾಗಿ ಊಟ ಮಾಡಲು ಸಾಕಷ್ಟು ಹಣ ಇದ್ದೇ ಇರಬೇಕು. ಇತರ ಮೂವರು ಇದ್ದ ಟೇಬಲ್ ಕಡೆ ಹೋಗುತ್ತೇನೆ. ಒಬ್ಬರಿಗೊಬ್ಬರು ತಲೆ ಅಲ್ಲಾಡಿಸುತ್ತೇವೆ. ಮೆನೂ ಕಾರ್ಡ್ ಹಿಂದೆ ಮುಖ ಹುದುಗಿಸುತ್ತೇನೆ. ಭರ್ಜರಿ ಊಟ ಮಾಡಿದರೆ ನನ್ನ ದಿನದ ಬಜೆಟ್‌ನ ಅರ್ಧಕ್ಕೂ ಹೆಚ್ಚು ಹಣ ಖಾಲಿಯಾಗಬಹುದು. ನನ್ನ ವಯಸ್ಸಿಗೆ ಕೊಂಚವೇ ತಿಂದರೆ ಸಾಕೆಂದು ನಿರ್ಧಾರ ಮಾಡುತ್ತೇನೆ. ಒಂದೂವರೆ ಡಾಲರಿನ 'ಸ್ಪೆಶಲ್' ಹಾಗೂ ೭೫ ಸೆಂಟ್ಸ್ ಬೆಲೆಯ ಬೀಯರ್ ಆರ್ಡರ್ ಮಾಡುತ್ತೇನೆ.

ಫೋಲ್ಡರ್‌ಗಳ ಪರಿಶೀಲನೆ ಆರಂಭಿಸುತ್ತೇನೆ. 'ನ್ಯೂಯಾರ್ಕ್ ಸ್ಟೇಟ್ ಸೀಯಿಂಗ್' ೪.೫೦ ರಿಂದ ೨೭ ಡಾಲರುಗಳಿಗೆ ಹದಿನಾಲ್ಕು ಪ್ರವಾಸ ಮಾಡಬಹುದು. ಕಡಿಮೆಯ ಪ್ರವಾಸ ಮಾಡಿದರೆ ಸಾಯಂಕಾಲಕ್ಕೆ ೫ ಡಾಲರ್ ಉಳಿಯಬಹುದು. ಇದರಲ್ಲಿ ರಾತ್ರಿ ಊಟ ಮತ್ತು ಥಿಯೇಟರ್ ಸಾಧ್ಯವೇ? 'ನ್ಯೂಯಾರ್ಕ್‌ನಲ್ಲಿ ಈ ವಾರ' ಹಾಗೂ ಟಿಕೆಟ್ ದರ ಪರಿಶೀಲಿಸಿದ ನಂತರ ವಿಹಾರ ಬೇಡವೆಂದು ನಿರ್ಧರಿಸುತ್ತೇನೆ.

ನಾಲ್ಕು ನಾಟಕಗಳಿಗೆ ಆದ್ಯತೆ ನೀಡುತ್ತೇನೆ. ಥಿಯೇಟರುಗಳು ಎಲ್ಲಿವೆ ಎಂದು ನೋಡಲು ಮ್ಯಾಪನ್ನು ಹರಡುತ್ತೇನೆ.

(ಮುಂದುವರಿಯುವುದು)

ಭಾರಿ ಮನುಷ್ಯ!

ದೊಡ್ಡ ಬಂಗ್ಲೇ ಕಟ್ಟಿಸಿ – ಸುತ್ತಲು ಕಂಪೌಂಡ್ ಜಗಿಸಿ
ಯಾರು ಬಂದರೂ – ನಾಯಿ ಬವ್ ಅನ್ನೋಹಾಂಗ
ಮಾಡಿ – ತಾ ಒಬ್ಬನs – ಸುತ್ತಾಡತಿರತಾನ ಇವಾ ಭಾರೀ ಮನುಷ್ಯ!
ಇವನ ಮನಿ – ದೊಡ್ಡ – ದೊಡ್ಡ – ಕಂಟ್ರಾಕ್ಟದಾರರು
ತಾವs – ನಿಂತು ಕಟ್ಟಿಸಿದರು – ಆದ್ರೂ ಮನಿ ಇವನ್ದs ಆತು !
ಹ್ಯಾಂಗೋ ಏನೋ – ಸದ್ದ ಇಲ್ದ – ಗದ್ದಲ ಇಲ್ದ –
ಬಣ್ಣಾ ಸುಣ್ಣಾ ಆಗಿ – ಹೋಮ ಹವನ ಆಗಿಹೊಯ್ತು.
ನಮ್ಮ ಮನಿ ಕಟ್ಟಬೇಕಾದ್ರ – ಏಳೂಹನ್ನೊಂದಾಯ್ತು
ಅರ್ಧಮರ್ಧಾ ಗೋಡೆ – ಆರು ತಿಂಗಳ – ಬಿಸಿಲಿಗೆ ಬಾಯಿ
ತೆರ್ದು ಬಿರುಕು ಬಿಟ್ಟಿದ್ದವು – ಸಾಲದ ಸರ್ಟಿಫಿಕೇಟು
ಸರಕಾರದಿಂದ ಬರುವ ಮುನ್ನ – ಹತ್ತು ಮಂದಿ ಹಾದಾಡಿ
ಬಿದ್ದ ನಾಲ್ಕ ಕಲ್ಲು – ಎತ್ತಿಕೊಂಡು ಹೋಗಿ – ಹಾದಾಡಾಕ ಹಾದೀ ಮಾಡಿದ್ರು
ಅಂತೂ ನಮ್ಮದೂ ಮನಿ – ಭಾರೀ ಬಂಗ್ಲೇದ ಮುಂದ – ಸಿಂಹದ
ಮುಂದ ಕುರಿ ನಿಂತ್ಹಾಂಗ ನಡಿಕ್ಕೋತ – ನಿಂತಿತು!
ಅವರ ಮನಿಸ್ಯಾರು ಹಾದು ಹೋಗೋ ಮುಂದ ನಮ್ಮ
ಮನ್ಯಾಗ ಎಲ್ಲಾ ಹುಡಿ – ಅವರ ಗೇಟಿನ್ಯಾಗ
ನಾಯಿ ನಿಂತು 'ಗುರ್ ಗುರ್' ಅಂದರ ನಮ್ಮಾಕಿ –
'ಹಚ್ಯಾ ಹಚ್ಯಾ' ಅನ್ನೋಹಾಂಗಿಲ್ಲ – ಯಾಕಂದ್ರs
ಭಾರೀ ಮನಸ್ಯಾನ ಸಂಪತ್ತಿ – ಭಾರೀ ನಾಯಿ!

—ಬಿ. ಆರ್. ನಾಡಪ್ಪಿ

ಆ ಕಡೆ ಗಗನಚುಂಬಿ ಕಟ್ಟಡಗಳು. ಕಿಟಕಿಯಿಂದ ಕೆಳಗೆ ನೋಡಿದರೆ ಖಾಲಿ ಡಬ್ಬಗಳು, ಬಾಟಲಿಗಳು, ಪತ್ರಿಕೆಗಳು ಮುಂತಾದವುಗಳ ರಾಶಿ. ಗಣಿಯಲ್ಲಿದ್ದಂತೆ ಅನುಭವ. ರೂಂ ೧೩೧೩ ನನಗೆ ಕೊಟ್ಟಾಗ ರೂಂ ಪೂರ್ತಿ ಹೊಗೆ ತುಂಬಿದೆ. ಇರುವ ಒಂದೇ ಒಂದು ಮೇಜಿನ ಮೇಲೆ ಖಾಲಿ ಬೀಯರ್ ಬಾಟಲ್‌ಗಳಿವೆ. ಆ್ಯಷ್ ಟ್ರೇಯಲ್ಲಿ ಸಿಗರೇಟು ತುಂಡುಗಳು ತುಂಬಿವೆ. ಹಾಸಿಗೆ ಕೊಳಕಾಗಿದೆ. ಮಂಚದ ಕಾಲಬುಡದಲ್ಲಿ ಗೋಡೆಗೆ ತಾಗಿಕೊಂಡಿರುವ ಟಿ.ವಿ. ಧೂಮ್ರಪಾನದಿಂದ ಶ್ವಾಸಕೋಶದ ಕಾನ್ಸರ್ ಉಂಟಾಗುವುದೆಂದು ಎಚ್ಚರಿಕೆ ನೀಡುತ್ತದೆ. ಒಂದು ನಿರ್ದಿಷ್ಟ ಬ್ರಾಂಡ್ ಸಿಗರೇಟು ಸೇವಿಸಿದರೆ, ಮನ ಸೂರೆಗೊಳ್ಳುವ ಹಳ್ಳಿಯಲ್ಲಿ ಸುರಸುಂದರಿಯರೊಂದಿಗೆ ಮಜಾ ಮಾಡಬಹುದೆನ್ನಿಸುತ್ತದೆ. ರೂಂ ಇನ್ನೂ ಸಿದ್ಧವಿಲ್ಲವೆಂದು ಸೇವಕ ಹೇಳುತ್ತಾನೆ. ಈ ಮಾಹಿತಿಗಾಗಿ ನಾನವನಿಗೆ ಕಾಲು ಡಾಲರ್ ಕೊಡುತ್ತೇನೆ. ಬೆಳ್ಳಿಯ ನಾಣ್ಯವನ್ನು ಅಂಗೈನಲ್ಲಿ ಹಿಡಿದ ಸೇವಕ ೫ ಸೆಕೆಂಡುಗಳವರೆಗೆ ಅದನ್ನೇ ದಿಟ್ಟಿಸಿ ನೋಡುತ್ತಾನೆ. ನನಗೆ ಮಾನ ತೆಗೆದಂತಾಗುತ್ತದೆ. ಸೇವಕಿ ಶೀಘ್ರವೇ ಬರುವಳೆಂದು ಹೇಳಿ ಹೊರಟು ಹೋಗುತ್ತಾನೆ.

ಬಾತ್ ರೂಂಗೆ ಹೋಗಲು ನಾನು ಮಂಚದ ಮೇಲಿಂದ ದಾಟುತ್ತೇನೆ. ಶವರ್ ಕೆಳಗೆ ಒದ್ದೆ ಟವೆಲ್‌ಗಳ ರಾಶಿ ಬಿದ್ದಿವೆ. ಸಾಬೂನು ಇಲ್ಲ. ಫ್ಲಷ್ ಸರಿಯಾಗಿದೆ. ಮಂಚದ ಮೇಲೆ ಜಿಗಿದು ಟಿ.ವಿ. ಆಫ್ ಮಾಡುತ್ತೇನೆ. ಕೆಳಗೆ ಲಾಬಿಗೆ ಹೋಗುತ್ತೇನೆ. ಅಮೇರಿಕನ್ನರು ಹೇಳುವಂತೆ ನಾನು ನ್ಯೂಯಾರ್ಕಿಗೆ ಬಂದಿದ್ದೇನೆ. ದಿನಕ್ಕೆ ೧೭ ಡಾಲರ್‌ನಲ್ಲಿ ರೂಂಗೇನೇ ೮.೨೫ ಡಾಲರ್ ತೆತ್ತ ಮೇಲೆ ನಾನು ಮಜಾ ಮಾಡಲಿದ್ದೇನೆ!

ಬಜೆಟ್ ಮಿತಿ ಇದ್ದಾಗ ಎಚ್ಚರಿಕೆ ಅಗತ್ಯ. ಜಾಗರೂಕತೆಯ ಲೆಕ್ಕಾಚಾರ ಅಗತ್ಯ. ವಿವೇಕವೂ ಬೇಕು. ಸ್ನೇಹಿತರು ಮತ್ತು ಅಪರಿಚಿತರಿಗೆ ಮಸ್ಕಾ ಹಾಕುವ ನಾಜೂಕು ಕಲೆಯೂ ಚೆನ್ನಾಗಿ ಗೊತ್ತಿರಬೇಕು. ನನ್ನಲ್ಲಿ ಈ ಎಲ್ಲ ಗುಣಗಳೂ ಇವೆ. ನನ್ನೊಂದಿಗೆ ಒಂದು ಡಜನ್ ಫೋಲ್ಡರ್‌ಗಳಿವೆ; ನಗರದ ಮ್ಯಾಪ್ ಅದರ ಸಬ್‌ವೇ ವ್ಯವಸ್ಥೆ, ಬಸ್ ರೂಟ್‌ಗಳು, ಹೋಟೇಲುಗಳು ಹಾಗೂ ಅಗ್ಗದ ಚೆನ್ನಾದ ರೆಸ್ಟೋರಾಗಳ ಪಟ್ಟಿಯೂ ಇದೆ. ಪ್ರವಾಸ ವ್ಯವಸ್ಥೆಯ, ವಸ್ತುಸಂಗ್ರಹಾಲಯಗಳ ಥಿಯೇಟರ್‌ಗಳ ಸಿನೆಮಾಗಳ, ನೈಟ್ ಕ್ಲಬ್‌ಗಳ – ಎಲ್ಲ ವಿವರಗಳೂ ನನ್ನಲ್ಲಿವೆ.

ಹೋಟೇಲಿನ ಡೈನಿಂಗ್ ರೂಂಗೆ ಹೋಗುತ್ತೇನೆ. ಟ್ಯಾಕ್ಸಿ ಬಾಡಿಗೆ ಮತ್ತು ದ್ವಾರಪಾಲಕನ ಟಿಪ್‌ನಿಂದ ಮಾಡಿದ ಉಳಿತಾಯದ ನಂತರ ಚೆನ್ನಾಗಿ ಊಟ ಮಾಡಲು ಸಾಕಷ್ಟು ಹಣ ಇದ್ದೇ ಇರಬೇಕು. ಇತರ ಮೂವರು ಇದ್ದ ಟೇಬಲ್ ಕಡೆ ಹೋಗುತ್ತೇನೆ. ಒಬ್ಬರಿಗೊಬ್ಬರು ತಲೆ ಅಲ್ಲಾಡಿಸುತ್ತೇವೆ. ಮೆನೂ ಕಾರ್ಡ್ ಹಿಂದೆ ಮುಖ ಹುದುಗಿಸುತ್ತೇನೆ. ಭರ್ಜರಿ ಊಟ ಮಾಡಿದರೆ ನನ್ನ ದಿನದ ಬಜೆಟ್‌ನ ಅರ್ಧಕ್ಕೂ ಹೆಚ್ಚು ಹಣ ಖಾಲಿಯಾಗಬಹುದು. ನನ್ನ ವಯಸ್ಸಿಗೆ ಕೊಂಚವೇ ತಿಂದರೆ ಸಾಕೆಂದು ನಿರ್ಧಾರ ಮಾಡುತ್ತೇನೆ. ಒಂದೂವರೆ ಡಾಲರಿನ 'ಸ್ಪೆಶಲ್' ಹಾಗೂ ೭೫ ಸೆಂಟ್ಸ್ ಬೆಲೆಯ ಬೀಯರ್ ಆರ್ಡರ್ ಮಾಡುತ್ತೇನೆ.

ಫೋಲ್ಡರ್‌ಗಳ ಪರಿಶೀಲನೆ ಆರಂಭಿಸುತ್ತೇನೆ. 'ನ್ಯೂಯಾರ್ಕ್ ಸ್ಟೇಟ್ ಸೀಯಿಂಗ್' ೪.೫೦ ರಿಂದ ೨೭ ಡಾಲರುಗಳಿಗೆ ಹದಿನಾಲ್ಕು ಪ್ರವಾಸ ಮಾಡಬಹುದು. ಕಡಿಮೆಯ ಪ್ರವಾಸ ಮಾಡಿದರೆ ಸಾಯಂಕಾಲಕ್ಕೆ ೫ ಡಾಲರ್ ಉಳಿಯಬಹುದು. ಇದರಲ್ಲಿ ರಾತ್ರಿ ಊಟ ಮತ್ತು ಥಿಯೇಟರ್ ಸಾಧ್ಯವೇ? 'ನ್ಯೂಯಾರ್ಕ್‌ನಲ್ಲಿ ಈ ವಾರ' ಹಾಗೂ ಟಿಕೆಟ್ ದರ ಪರಿಶೀಲಿಸಿದ ನಂತರ ವಿಹಾರ ಬೇಡವೆಂದು ನಿರ್ಧರಿಸುತ್ತೇನೆ.

ನಾಲ್ಕು ನಾಟಕಗಳಿಗೆ ಆದ್ಯತೆ ನೀಡುತ್ತೇನೆ. ಥಿಯೇಟರುಗಳು ಎಲ್ಲಿವೆ ಎಂದು ನೋಡಲು ಮ್ಯಾಪನ್ನು ಹರಡುತ್ತೇನೆ.

(ಮುಂದುವರಿಯುವುದು)

ಭಾರಿ ಮನುಷ್ಯ!

ದೊಡ್ಡ ಬಂಗ್ಲೇ ಕಟ್ಟಿಸಿ – ಸುತ್ತಲು ಕಂಪೌಂಡ್ ಜಗಿಸಿ
ಯಾರು ಬಂದರೂ – ನಾಯಿ ಬವ್ ಅನ್ನೋಹಂಗ
ಮಾಡಿ – ತಾ ಒಬ್ಬನs – ಸುತ್ತಾಡತಿರತಾನ ಇವಾ ಭಾರೀ ಮನುಷ್ಯ!
ಇವನ ಮನಿ – ದೊಡ್ಡ – ದೊಡ್ಡ – ಕಂಟ್ರ್ಯಾಕ್ಟದಾರರು
ತಾವs – ನಿಂತು ಕಟ್ಟಿಸಿದರು – ಆದ್ರೂ ಮನಿ ಇವನ್ದs ಆತು!
ಹ್ಯಾಂಗೋ ಏನೋ – ಸದ್ದ ಇಲ್ದ – ಗದ್ದಲ ಇಲ್ದ –
ಬಣ್ಣಾ ಸುಣ್ಣಾ ಆಗಿ – ಹೋಮ ಹವನ ಆಗಿಹೊಯ್ತು.
ನಮ್ಮ ಮನಿ ಕಟ್ಟಬೇಕಾದ್ರ – ಏಳೂಹನ್ನೊಂದಾಯ್ತು
ಅರ್ಧಮರ್ಧಾ ಗೋಡೆ – ಆರು ತಿಂಗಳು – ಬಿಸಿಲಿಗೆ ಬಾಯಿ
ತೆರ್ದು ಬಿರುಕು ಬಿಟ್ಟಿದ್ದವು – ಸಾಲದ ಸರ್ಟಿಫಿಕೇಟು
ಸರಕಾರದಿಂದ ಬರುವ ಮುನ್ನ – ಹತ್ತು ಮಂದಿ ಹಾದಾಡಿ
ಬಿದ್ದ ನಾಲ್ಕ ಕಲ್ಲು – ಎತ್ತಿಕೊಂಡು ಹೋಗಿ – ಹಾದಾಡಾಕ ಹಾದೀ ಮಾಡಿದ್ರು
ಅಂತೂ ನಮ್ಮದೂ ಮನಿ – ಭಾರೀ ಬಂಗ್ಲೇದ ಮುಂದ – ಸಿಂಹದ
ಮುಂದ ಕುರಿ ನಿಂತ್ಹಾಂಗ ನಡಿಕ್ಯೋತ – ನಿಂತಿತು!
ಅವರ ಮನಿಸ್ಯಾರು ಹಾದು ಹೋಗೋ ಮುಂದ ನಮ್ಮ
ಮನ್ಯಾಗ ಎಲ್ಲಾ ಹುಡಿ – ಅವರ ಗೇಟಿನ್ಯಾಗ
ನಾಯಿ ನಿಂತು 'ಗುರ್ ಗುರ್' ಅಂದರ ನಮ್ಮಾಕಿ –
'ಹಚ್ಯಾ ಹಚ್ಯಾ' ಅನ್ನೋಹಾಂಗಿಲ್ಲ – ಯಾಕಂದ್ರs
ಭಾರೀ ಮನಸ್ಯಾನ ಸಂಪತ್ತಿ – ಭಾರೀ ನಾಯಿ!

—ಬಿ. ಆರ್. ನಾಡಪ್ಪಿ



ಬಸವರಾಜ ಕಟ್ಟೀಮನಿ ಅವರೊಂದಿಗೆ

ಮಾಧವ ನಾ. ಮಹಿಷಿ

ಹಲ ತಿಂಗಳುಗಳ ಹಿಂದಷ್ಟೆ ೬೧ ರಲ್ಲಿ ಕಾಲಿರಿಸಿರುವ ಬಸವರಾಜ ಕಟ್ಟೀಮನಿಯವರ ಲೇಖನ ಸಾಮರ್ಥ್ಯಕ್ಕೆ ದೊರೆತ ಉಚ್ಚ ಗೌರವದ ಮನ್ನಣೆ ಈ ಸಲ ಬೆಳಗಾಂವಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟ. 'ಸಂಯುಕ್ತ ಕರ್ನಾಟಕ' ಬೆಳಗಾಂವಿಯಲ್ಲಿದ್ದಾಗ ಅಲ್ಲಿ ಪತ್ರಿಕೋದ್ಯಮಿಯಾಗಿ ಲೇಖನಿಯನ್ನೇ ಜೀವನಾಧಾರ, ಜೀವನಧರ್ಮವೆಂದು ಸ್ವೀಕರಿಸಿದ ಅವರ ಪತ್ರಿಕೋದ್ಯಮ 'ತರುಣ ಕರ್ನಾಟಕ', 'ಸಮಾಜ', 'ಪ್ರತಿಭಾ', 'ಸ್ವತಂತ್ರ ಕರ್ನಾಟಕ'ಗಳ ಮೂಲಕ ವಿಕಸಿಸಿ 'ಉಷಾ' ಮತ್ತು 'ಸ್ವತಂತ್ರ'ಗಳ ಸಂಪಾದಕನಾಗುವವರೆಗೆ ಬೆಳೆದು ಅವರ ಜೀವನದ ಪ್ರಥಮ ಘಟ್ಟವನ್ನು ಪೂರ್ತಿಗೊಳಿಸಿತು.

ಪತ್ರಿಕೋದ್ಯಮವನ್ನು ಜೀವನೋಪಾಯಕ್ಕಾಗಿ ಅವಲಂಬಿಸದಿರುವ ನಿರ್ಣಯವನ್ನು ಬಹು ಬೇಗ ಕೈಕೊಂಡದ್ದರಿಂದಲೋ ಏನೊ ಇಷ್ಟೊಂದು ಹುಲುಸಾದ ಸಾಹಿತ್ಯದ ಬೆಳೆ ಬೆಳೆಯಲು ಅವರಿಗೆ ಆಗಿರಬೇಕು. ಇದುವರೆಗೆ ೩೫ ಕಾದಂಬರಿಗಳನ್ನು, ಹತ್ತು ಕಥಾಸಂಕಲನಗಳನ್ನು, ಒಂದು ನಾಟಕವನ್ನು, ಒಂದು ಕವನಸಂಕಲನವನ್ನು ಆತ್ಮಚರಿತ್ರಾತ್ಮಕವಾದ ಮೂರು ಕೃತಿಗಳನ್ನು ಅವರು ಹೊರತಂದಿದ್ದಾರೆ.

ಕಟ್ಟೀಮನಿಯವರ ವ್ಯಕ್ತಿತ್ವದ ಒಂದು ಒಡೆದು ಕಾಣುವಂತಹ ಅಂಶವೆಂದರೆ ಅವರು ವಿವಾದಪ್ರಿಯ ವ್ಯಕ್ತಿ ಎಂಬುದು. ಅದಕ್ಕಾಗಿ ಅವರು ಯಾರನ್ನು ಎದುರು ಹಾಕಿಕೊಳ್ಳಲೂ ಹಿಂಜರಿದವರಲ್ಲ. ಇಂಥ ಒಂದು ವಿವಾದಾತ್ಮಕ ಪ್ರಸಂಗವೇ ನನ್ನ ಅವರ ಪರಿಚಯಕ್ಕೆ ಮೊದಲಾಯಿತು. ೧೯೬೬ರಲ್ಲಿ ಶಿರಹಟ್ಟಿಯಲ್ಲಿ ಬೇಂದ್ರೆಯವರ ೭೦ನೆಯ ಹುಟ್ಟುಹಬ್ಬವನ್ನು ಉತ್ಸಾಹದಿಂದ ಆಚರಿಸಲಾಯಿತು. ನಮ್ಮೂರು ಎಂಬ ಅಭಿಮಾನದಿಂದ ನಾನೂ ಅಲ್ಲಿಗೆ ಹೋಗಿದ್ದೆ—ಸಮಾರಂಭದಲ್ಲಿ ನನಗೆ ಸಕ್ರಿಯ ಪಾತ್ರವೇನೂ ಇಲ್ಲದಾಗಲೂ. ಅಲ್ಲಿ ಬೇಂದ್ರೆಯವರು ಆಡಿದ ಮಾತಿನಲ್ಲಿರುವ ಒಂದು ವಾಕ್ಯವನ್ನೆತ್ತಿಕೊಂಡು, ಅದನ್ನು ಉಗ್ರದಾಗಿ ಖಂಡಿಸಿ ಎರಡು ದಿನಗಳ ನಂತರ ಕಟ್ಟೀಮನಿ ಬರೆದೊಂದು ಲೇಖನ 'ವಿಶ್ವವಾಣಿ'ಯಲ್ಲಿ ಪ್ರಮುಖವಾಗಿ ಪ್ರಕಟ

ನಾಯಿತು. ಕಟ್ಟೀಮನಿಯವರು ಶಿರಪಟ್ಟಿಗೆ [illegible]ಲ್ಲ. ಅವರಂ ಪತ್ರಿಕಾ ವರದಿಯನ್ನೋದಿ ಹಾಗೆ ಬರೆದದ್ದು ಬೇಂದ್ರೆಯವರಿಗೆ ಖಂಡಿತ ಅನ್ಯಾಯವೆನಿಸಿದ್ದರಿಂದ ಅದನ್ನು ಸರಿಪಡಿಸುವುದು ನನ್ನ ಕರ್ತವ್ಯವೆಂಬ ಭಾವನೆಯಿಂದ ನಾನು, ಬೇಂದ್ರೆಯವರು ಆಡಿದ ಆ ಮಾತಿನ ಹಿಂದಿನ ಮುಂದಿನ ವಾಕ್ಯಗಳನ್ನುದ್ಧರಿಸಿ 'ವಿಶ್ವವಾಣಿ'ಯ ಸಂಪಾದಕರಿಗೊಂದು ಪತ್ರ ಬರೆದೆ. ಅದೇಕೋ ಪ್ರಕಟವಾಗಲಿಲ್ಲವೆಂಬ ಮಾತು ಬೇರೆ. ಕಟ್ಟೀಮನಿ ದುಡುಕಿದರೆಂದು ಪ್ರಾಮಾಣಿಕವಾಗಿ ನನಗನಿಸಿತ್ತು, ಆದರೆ ನನ್ನ ಪ್ರತಿಕ್ರಿಯೆ ಓದುಗರ ಗಮನಕ್ಕೆ ಬಾರದೇ ಹೋಯಿತಲ್ಲ ಎಂದು ನನಗಾಗ ಬೇಸರವಾದದ್ದೂ ನಿಜ.

ಮುಂದೆ ಕೆಲ ತಿಂಗಳುಗಳಲ್ಲೇ ನನ್ನ ವಿದ್ಯಾಗುರುಗಳಾದ ಮುಗಳಿಯವರನ್ನು ಅವರಿಗೆ ೬೦ ತುಂಬಿದ ಸಂದರ್ಭದಲ್ಲಿ ಸತ್ಕರಿಸಬೇಕೆಂದು ಧಾರವಾಡದಲ್ಲಿ ನಡೆದ ಅಭಿಮಾನಿಗಳ ಪೂರ್ವಭಾವಿ ಸಭೆಯಲ್ಲಿ ಕಟ್ಟೀಮನಿಯವರನ್ನು ಮೊದಲ ಬಾರಿಗೆ ಹತ್ತಿರದಿಂದ ನೋಡುವ ಸಂದರ್ಭ ಒದಗಿತು. ಆದರೆ ಮೊದಲ ನಾಲ್ಕಾರು ಸಭೆಗಳಲ್ಲಿ ಪರಸ್ಪರರ ನೇರ ಪರಿಚಯವೆಂಬುದೇ ಆಗಲಿಲ್ಲ. ನಾವಿಬ್ಬರೂ ಪರಸ್ಪರರಿಗೆ ಅಪರಿಚಿತರಿರಬೇಕೆಂದು ಬಹುಶಃ ಅಲ್ಲಿನ ಇತರ ಯಾರಿಗೂ ಅನಿಸಿರಲಿಕ್ಕಿಲ್ಲವಾದ್ದರಿಂದ ಔಪಚಾರಿಕವಾಗಿ ಯಾರೂ ಪರಿಚಯ ಮಾಡಿಕೊಡಲಿಲ್ಲ ಕೂಡ. ಇಂತು ಒಂದೆಡೆಯೆ ಕುಳಿತಿರುತ್ತಿದ್ದಾಗಲೂ ಅಪರಿಚಿತತೆಯ ಅಗೋಚರ ಅಡ್ಡಗೋಡೆ ನಮ್ಮ ಮಧ್ಯೆ ಇರುತ್ತಿದ್ದಂತೆಯೇ ಒಂದು ದಿನ ಅದು ಇದ್ದಲ್ಲೇ ಕರಗಿ ಹೋಗುವಂಥ ಒಂದು ಘಟನೆ ನಡೆಯಿತು. ಈ ಸತ್ಕಾರ ಸಮಾರಂಭದ ಅಂಗವಾಗಿ ಮುಗಳಿಯವರಿಗೆ ಅರ್ಪಿಸಲೆಂದು ಸಂಭಾವನಾಗ್ರಂಥವೊಂದನ್ನು ಸಿದ್ಧಪಡಿಸಲು ನಿರ್ಧರಿಸಿ ಕಟ್ಟೀಮನಿಯವರನ್ನೂ ನನ್ನನ್ನೂ ಅದಕ್ಕೆ ಸಂಪಾದಕರೆಂದು ಸಮಿತಿ ನಿರ್ಧರಿಸಿಬಿಟ್ಟಿತು. ಆ ಕ್ಷಣದಿಂದಲೇ ಸ್ನೇಹದ ಬೀಜ ಬಿತ್ತಿದಂತಾಗಿ, ಮುಂದದು ಮೊಳೆತು ವೃಕ್ಷವಾಗಿ ಬೆಳೆದು ಹಲವು ಹತ್ತು ಟಿಸಿಲುಗಳು ಒಡೆದಿವೆ. ಇಂದಿಗೂ ಅನೇಕ ವಿಷಯಗಳಲ್ಲಿ ಅದರಲ್ಲೂ ರಾಜಕೀಯ ವಿಚಾರಧಾರೆಯಲ್ಲಿ ಅವರೊಂದಿಗೆ ತೀವ್ರ ಭಿನ್ನಾಭಿಪ್ರಾಯ ನನಗಿದೆಯಾದರೂ ಅವರಿಂದ ಅವರ ವ್ಯಕ್ತಿತ್ವದ ಬಗ್ಗೆ ನನಗಿರುವ ಗೌರವಕ್ಕೆಷ್ಟೂ ಕುಂದು ಬಂದಿಲ್ಲ. ಸ್ನೇಹಕ್ಕೆ ಚ್ಯುತಿಯುಂಟಾಗಿಲ್ಲ. ನಾನಿಂದು ಕೈಲಿ ಲೇಖನಿ ಹಿಡಿದು ಅಷ್ಟಿಷ್ಟು ಬರೆಯುತ್ತಿರುವುದಕ್ಕೆ ಅವರಿಂದ ಪರೋಕ್ಷವಾಗಿ ಸಿಕ್ಕ ಉತ್ತೇಜನವೂ ಕಾರಣವೆಂಬುದನ್ನು ನಾನು ಮರೆಯುವಂತಿಲ್ಲ. ಧಾರವಾಡದಲ್ಲಿ ನಾನಿನ್ನೂ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಅವರು ಬೆಂಗಳೂರಿನಿಂದ ಪ್ರಕಟಿಸುತ್ತಿದ್ದ ಮಾಸಪತ್ರಿಕೆ 'ಸ್ವತಂತ್ರ' ಅಂದಿನ ಯುವಕರಿಗೊಂದು ಆದರ್ಶವೆನಿಸುತ್ತಿದ್ದ ಪತ್ರಿಕೆ. ಅಲ್ಲಿ ಬರುತ್ತಿದ್ದ ಪ್ರಶ್ನೋತ್ತರ ವಿಭಾಗದಲ್ಲಿ ಮೊಟ್ಟಮೊದಲ ಬಾರಿ ನನ್ನ ಪ್ರಶ್ನೆಯೊಂದನ್ನು ಅವರು ಉತ್ತರಿಸಿದಾಗಲೇ ನನ್ನ ಹೆಸರನ್ನು ಮುದ್ರಣದಲ್ಲಿ ಕಂಡಾಗ ನನಗಾದ ಬಾಲಿಶ ಆನಂದವನ್ನು ನಾನಿನ್ನೂ ಮರೆತಿಲ್ಲ.

ಇಂದಿರಾ ಗಾಂಧಿಯವರು ೧೯೭೫ರಲ್ಲಿ ಆಪತ್ ಸ್ಥಿತಿಯನ್ನು ಘೋಷಿಸಿದಾಗ ಕಟ್ಟೀಮನಿಯವರ ವಿಧಾನ ಪರಿಷತ್ ಸಭಾಸದಸ್ಯತ್ವದ ಅವಧಿ ಮುಗಿದಿತ್ತು. ನಾನಾಗ ಕೆಲ ತಿಂಗಳು ಆಸ್ಪತ್ರೆಯ ವಾಸಿಯಾಗಿರಬೇಕಾದ ಪ್ರಸಂಗ ಬಂದಿತ್ತು. ಅಲ್ಲಿರುವಾಗಲೇ 'ಸಂಯುಕ್ತ ಕರ್ನಾಟಕ'ದಲ್ಲಿ ಕಟ್ಟೀಮನಿಯವರು ಬರೆದೊಂದು ಪತ್ರ ಪ್ರಕಟವಾಯಿತು. ಇಂದಿರಾರವರಿಗೆ ಸಾಹಿತಿಗಳಿಂದ ಬೆಂಬಲ ದೊರಕಿಸುವ ಸ್ಪಷ್ಟ ಉದ್ದೇಶದಿಂದ ಅವರು ಪ್ರಗತಿಶೀಲ ಚಳವಳಿ*ಯನ್ನು ಪುನರುಜ್ಜೀವಿಸಲು ಕರೆ ಕೊಟ್ಟಿದ್ದರು. ಅವರು ಮತ್ತೆ ದುಡುಕಿದ್ದಾರೆನಿಸಿ ಕ್ಷಣಾರ್ಧ ಸಿಟ್ಟು ಬಂತು, ನಂತರ ಅದನ್ನು ಲೇವಡಿ ಮಾಡಿ ಸಂಪಾದಕರಿಗೆ ನಾನೊಂದು ಪತ್ರ ಬರೆದೆ. ಅದನ್ನು ಓದಿದ ಸಂಪಾದಕ

---

* ೪೦ರ ದಶಕದಲ್ಲಿ ಮಾರ್ಕ್ಸಿಸ್ಟ್ ಪ್ರಚೋದಿತ ಪ್ರಗತಿಶೀಲ ಆಂದೋಲನ ದೇಶದ ಇತರೆಡೆಗಳಲ್ಲಿಯಂತೆ ಕರ್ನಾಟಕದಲ್ಲೂ ಪುಟಿದೆದ್ದಾಗ ಕಟ್ಟೀಮನಿ ಅದರ ಧ್ವಜವನ್ನೆತ್ತಿ ಹಿಡಿದವರಲ್ಲಿ ಪ್ರಮುಖರು.

ಮಂಡಳಿಯಲ್ಲಿಯ ನನ್ನ ಕೆಲ ಮಿತ್ರರು ಮೆಚ್ಚಿಕೊಂಡರಾದರೂ ಅಂದಿನ ಅವಸ್ಥೆಯಲ್ಲಿ ಪ್ರಕಟಿಸಲು ಧೈರ್ಯ ಸಾಲದೆ ಹಾಗೇ ಇಟ್ಟು ಬಿಟ್ಟರಂತೆ.

ಕಟ್ಟೀಮನಿ ಮೂಲತಃ ಲೇಖಕರಾಗಿಯೇ ನಮ್ಮೆದುರು ನಿಲ್ಲುತ್ತಾರಾದರೂ ಅವರ ವ್ಯಕ್ತಿತ್ವದ ಇನ್ನೂ ಕೆಲವು ಮುಖಗಳನ್ನು ಮರೆಯುವಂತಿಲ್ಲ. ಕುಂದರನಾಡಿನ ಕಂದನೆನ್ನಿಸಿದ ಅವರು ಕ್ರಾಂತಿದೃಷ್ಟಿಯುಳ್ಳ ಸ್ವಾತಂತ್ರ್ಯ ಯೋಧ, ಸಾಮಾಜಿಕ ನ್ಯಾಯಕ್ಕಾಗಿ ದೀನ ದಲಿತರ ಪಕ್ಷ ವಹಿಸಿ ಹೋರಾಡಿದ ಧೀರ, ಜಾತಿವ್ಯವಸ್ಥೆಯ ವಿರುದ್ಧ ಸಿಡಿದೆದ್ದ ಬಂಡುಗಾರ. ಕೆಲ ಕಾಲವಾದರೂ ಸಕ್ರಿಯ ರಾಜಕಾರಣಿ. ಈ ಕಾರಣಕ್ಕಾಗಿಯೇ ಕೆಲ ದಿನಗಳ ಹಿಂದೆ 'ಕಸ್ತೂರಿ'ಯ ಪ್ರತಿನಿಧಿಯಾಗಿ, ಸಮ್ಮೇಲನಾಧ್ಯಕ್ಷಪದ ದೊರೆತುದಕ್ಕಾಗಿ ಅವರನ್ನು ಅಭಿನಂದಿಸಲೆಂದು ಕರ್ನಾಟಕ ವಿಶ್ವವಿದ್ಯಾಲಯದ ಬಳಿ ನವೋದಯನಗರದಲ್ಲಿರುವ ಅವರ ಮನೆಗೆ ಹೋದಾಗ ನನ್ನನ್ನು ಕಾಡುತ್ತಿದ್ದ ಪ್ರಶ್ನೆಗಳಿಗೆ ಖಂಡಿತ ರಾಜಕೀಯ ಛಾಯೆಯಿದೆ. ಅಂತೆಯೆ, ಸರ್ವವಿದಿತವಿರುವ ಅವರ ಸಾಹಿತ್ಯದ ಬಗ್ಗೆ ನಾನವರನ್ನು ಅಷ್ಟಾಗಿ ಕೇಳಲಿಲ್ಲ. ಸುಮಾರು ಎರಡು ಗಂಟೆಗಳ ಕಾಲ ಅವರೊಂದಿಗೆ ಮುಕ್ತ ವಾತಾವರಣದಲ್ಲಿ ಮಾತಾಡುತ್ತ ಕಳೆದೆ. ಆಗಿನ ಕೆಲ ಮುಖ್ಯ ಪ್ರಶ್ನೆಗಳನ್ನೂ ಅವುಗಳಿಗೆ ಅವರಿತ್ತ ಉತ್ತರಗಳನ್ನೂ ಇಲ್ಲಿ ನೋಡಬಹುದು.

"ಸಾಹಿತಿ ಮತ್ತು ಸರಕಾರ ಇವರಲ್ಲಿ ಯಾವ ಬಗೆಯ ಸಂಬಂಧವಿರಬೇಕು? ಸಾಹಿತಿಯು ಸರಕಾರದ ಅಥವಾ ಆಳುವವರ ಅನುಚರನಾಗಿರಬೇಕೆ?"

"ಸಾಹಿತಿಯ ರಾಜಕೀಯ ವಿಚಾರಧಾರೆ ಮತ್ತು ಪ್ರಚಲಿತ ಸರಕಾರದ ವಿಚಾರಧಾರೆ ಒಂದೇ ಆಗಿದ್ದಲ್ಲಿ ಪರಸ್ಪರ ಅನ್ಯೋನ್ಯ ಸಂಬಂಧವಿರುತ್ತದೆ. ವಿಚಾರಗಳಲ್ಲಿ ಹೊಂದಾಣಿಕೆ ಇರದಿದ್ದರೆ ಸಾಹಿತಿಯ ಮನಸ್ಸಿನಲ್ಲಿ ಸರಕಾರದ ಬಗ್ಗೆ ಅಸಮಾಧಾನವಿರುತ್ತದೆ. ನಿಜವಾದ ಸಾಹಿತಿಯು ಯಾರ ಅನುಚರನೂ ಆಗಿರುವುದಿಲ್ಲ. ತಾನು ನಂಬಿದ ತತ್ವಗಳಿಗೆ ಮಾತ್ರ ಅವನು ಬದ್ಧನಾಗಿರುತ್ತಾನೆ," ಎಂದರು ಕಟ್ಟೀಮನಿ.

"ನಾನು ಈ ಪ್ರಶ್ನೆ ಕೇಳುವಾಗ ನನ್ನ ಕಣ್ಣೆದುರಿಗೆ ಇರುವ ಸಾಹಿತಿ ಮೂಲತಃ ಕೆಲವೊಂದು ತತ್ವಗಳಿಗೆ ಎನ್ನುವುದಕ್ಕಿಂತ ಮೌಲ್ಯಗಳಿಗೆ ನಿಷ್ಠನಾದವನು. ತಾನು ನಂಬಿದ ಮೌಲ್ಯಗಳಿಗಾಗಿಯೇ ತನ್ನನ್ನು ಅರ್ಪಿಸಿಕೊಳ್ಳುವ ಬರಹಗಾರನೇ ನೈಜ ಸಾಹಿತಿಯಲ್ಲವೇ?" ನಾನು ಮರು ಪ್ರಶ್ನೆ ಮಾಡಿದೆ.

"ನನ್ನ ದೃಷ್ಟಿಯಲ್ಲಿ ಶುದ್ಧ ಸಾಹಿತ್ಯ ಅಥವಾ ಕಥೆ ಕಾದಂಬರಿ ಕಾವ್ಯ ನಾಟಕಾದಿಗಳ ರಚನೆಯಲ್ಲಿ ತೊಡಗಿದವನೇ ನಿಜವಾದ ಸಾಹಿತಿ. ಪ್ರಚಲಿತ ವಿಷಯಗಳ ಬಗ್ಗೆ ಪತ್ರಿಕೆಗಳಲ್ಲಿ ಬರುವುದನ್ನೆಲ್ಲ ಸಾಹಿತ್ಯವೆಂದು ವರ್ಗೀಕರಿಸಲಾಗುವುದಿಲ್ಲ."

"ಹಾಗೆ ಹೇಳಲಿಕ್ಕಾಗುವುದಿಲ್ಲವಲ್ಲ. ಚರ್ಚಿಲ್ಲರ ಆತ್ಮಕಥನ ರೂಪದಲ್ಲಿರುವ ಗ್ರಂಥ ಸಂಪುಟಕ್ಕೆ ನೋಬೆಲ್ ಪಾರಿತೋಷಕ ಬಂತಲ್ಲ. ಅವುಗಳಲ್ಲಿ ಮುಖ್ಯವಾಗಿ ಬರುವುದು ಆಯಾ ಕಾಲದ ಪ್ರಚಲಿತ ವಿಷಯಗಳ ಚರ್ಚೆಯೇ ಅಲ್ಲವೆ? ಇಂದು ಪ್ರಚಲಿತ ವಿಷಯಗಳ ಕುರಿತು ಬರೆದದ್ದು ನಾಳೆ ಇತಿಹಾಸವೆನಿಸುತ್ತದೆ."

"ಇಂಗ್ಲೀಷಿನಲ್ಲಿ ಬೆಳೆದಿರುವಂತೆ ಸಾಹಿತ್ಯದ ಆ ಪ್ರಕಾರ ಕನ್ನಡಕ್ಕಿನ್ನೂ ಹೊಸತು."

"ಒಪ್ಪಬೇಕಾದ ಮಾತು. ಆದರೆ ಕನ್ನಡದಲ್ಲಿ ಈ ಬಗೆಯ ಗ್ರಂಥಗಳು ಬಂದಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಸ್ವಾತಂತ್ರ್ಯದ ರಜತೋತ್ಸವದ ಸಂದರ್ಭದಲ್ಲಿ ಹಾಮಾ ಅವರ 'ಸ್ವಾತಂತ್ರ್ಯದ ೨೫ ವರ್ಷಗಳು' ಬಂತಲ್ಲ. ಅದರ ಬಗ್ಗೆ ನಿಮ್ಮ ಅಭಿಪ್ರಾಯ?"

"ಹೌದೆ? ನಾನದನ್ನು ನೋಡಿಯೇ ಇಲ್ಲವಲ್ಲ! ಕೆಲವೊಮ್ಮೆ ಮಹತ್ವದ ಪುಸ್ತಕಗಳೂ ಗಮನಕ್ಕೆ ಬಾರದೇ ಹೋಗಿ ಬಿಡುತ್ತವೆ." ಅವರ ಧ್ವನಿಯಲ್ಲಿ ಒಂದು ಬಗೆಯ ಕಳವಳವನ್ನು ಗುರುತಿಸಬಹುದಿತ್ತು.

"ತುರ್ತು ಪರಿಸ್ಥಿತಿಯ ಕಾಲದಲ್ಲಿ ನಮ್ಮ (ಭಾರತೀಯ) ಸಾಹಿತಿಗಳು ವರ್ತಿಸಿದ ರೀತಿಯ ಬಗ್ಗೆ ಏನು ಹೇಳುವಿರಿ?"

"ಕೆಲವರು ಪ್ರತಿಭಟನೆ ಮಾಡಿದರು, ಇನ್ನು ಕೆಲವರು ಪ್ರತಿಭಟನೆ ಮಾಡಲಾಗದೆ ಸುಮ್ಮನಿದ್ದರು, ಅಸಹಾಯರಾಗಿ. ಇನ್ನು ಕೆಲವರು ಪ್ರತಿಭಟನೆಯ ನಾಟಕ ಮಾಡಿ ತುರ್ತು ಪರಿಸ್ಥಿತಿಯ ಹೀರೋಗಳೂ ಆದರು; ಆದರೆ ಅವರು ನಿಜವಾಗಿಯೂ 'ಝೀರೋ'ಗಳಾಗಿದ್ದರು. ಬಂಧಿಸಲ್ಪಟ್ಟಾಗ ಜೇಪಿ ಚಳವಳಿಗೂ ತಮಗೂ ಸಂಬಂಧವಿಲ್ಲವೆಂದು ಕೋರ್ಟಿನಲ್ಲಿ ಹೇಳಿ ಬಿಡುಗಡೆ ಹೊಂದಿದರು.

"ಶಿಸ್ತು ಬೇಕು. ಇಂದಿರಾ ಅವರು ಅದನ್ನೇ ಹೇಳುತ್ತಿದ್ದರು; ಆರೆಸ್ಸೆಸ್ ಕೂಡ ಅದನ್ನೇ ಹೇಳುತ್ತದೆ. ಅಷ್ಟರ ಮಟ್ಟಿಗೆ ಅದರ ನಿಲುವನ್ನು ನಾನೂ ಒಪ್ಪುತ್ತೇನೆ. ಈ ಕಾರಣಕ್ಕಾಗಿಯೇ ಆ ಕಾಲದಲ್ಲಿ ನಾನು ಇಂದಿರಾರವರಿಗೆ ಬೆಂಬಲ ನೀಡಿದೆ. ಬಿಗುವಿನ ಆಡಳಿತವಿಲ್ಲದಿದ್ದರೆ ಪ್ರಜಾಪ್ರಭುತ್ವವೆಲ್ಲಿ ಉಳಿಯುತ್ತದೆ? ದೇಶವೆಲ್ಲಿ ಉಳಿಯುತ್ತದೆ?

"ಶಿಸ್ತು ರಾಷ್ಟ್ರಜೀವನದಲ್ಲಿ ಅತ್ಯಗತ್ಯ, ಅನಿವಾರ್ಯ ಎಂಬುದನ್ನು ನಾನೂ ಒಪ್ಪುತ್ತೇನೆ. ಅದು ಯಾರೂ ಒಪ್ಪತಕ್ಕ ಮಾತೇ ಆಗಿದೆ. ಆದರೆ ಇಂದಿರಾ ತುರ್ತು ಪರಿಸ್ಥಿತಿ ಸಾರದೇ ಶಿಸ್ತನ್ನು ಸ್ಥಾಪಿಸಬಹುದಿತ್ತಲ್ಲ? ಅದಕ್ಕಾಗಿ ಮೂಲಭೂತ ನಾಗರಿಕ ಹಕ್ಕುಗಳನ್ನೆಲ್ಲ ಹತ್ತಿಕ್ಕಿಬಿಡುವುದು ಅವಶ್ಯವಿತ್ತೆ?"

"೭೪–೭೫ರಲ್ಲಿ ದೇಶದಲ್ಲೆಲ್ಲ ಅರಾಜಕತೆಯ ಪರಿಸ್ಥಿತಿ ಉಂಟಾಗಿತ್ತು. ಸಿ.ಐ.ಎ. ದವರು ಅಂಥ ಪರಿಸ್ಥಿತಿಯನ್ನು ಇಲ್ಲೂ ನಿರ್ಮಾಣ ಮಾಡಲು ಹೊಂಚು ಹಾಕಿದ್ದರು. ಚಿಲಿಯಲ್ಲಿ ಅಲೆಂಡೆಯ ಕೊಲೆ, ಬಂಗ್ಲಾದೇಶದಲ್ಲಿ ಮುಜೀಬುರ್ರಹಮಾನರ ಕಗ್ಗೊಲೆ ಇದೆಲ್ಲ ಏನನ್ನು ಸೂಚಿಸುತ್ತದೆ? ಭಾರತದಲ್ಲೂ ಅಂಥ ಪರಿಸ್ಥಿತಿ ಉದ್ಭವಿಸುವ ಸಂಭವವಿತ್ತು. ಅಂಥ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಬಿಗುವಿನ ಕೈ ಬೇಕಾಗಿತ್ತು. ಅದು ಇಂದಿರಾಗೆ ಮಾತ್ರ ಸಾಧ್ಯವೆಂದು ನನಗನಿಸಿದ್ದರಿಂದ ನಾನಾಕೆಗೆ ಬೆಂಬಲ ಕೊಟ್ಟೆ. ನಾನು ತಪ್ಪಿರಬಹುದು; ಆದರೆ ನಾನು ಪ್ರಾಮಾಣಿಕವಾಗಿ ಹಾಗೆ ನಂಬಿದ್ದೆ. ಇಂದಿರಾ ಹುಶಾರಾಗಿರದಿದ್ದರೆ ಆಕೆಯ ಕೊಲೆಯೂ ಆಗಬಹುದಿತ್ತು; ಬಂಗ್ಲಾದೇಶದಲ್ಲಿಯಂತೆಯೇ ಇಲ್ಲೂ ಪ್ರತಿಗಾಮೀ ಸರಕಾರ ಬರಬಹುದಿತ್ತು. ತೃತೀಯ ಜಗತ್ತಿನ ದೇಶಗಳಲ್ಲಿ ಈ ಬಗೆಯ ಅರಾಜಕತೆಯನ್ನು ನಿರ್ಮಾಣ ಮಾಡುವುದಕ್ಕೆ CIA, World Bank, multi-nationals ಎಲ್ಲವೂ ಹೊಣೆ. ಜಗತ್ತಿನಲ್ಲಿ ಅಮೇರಿಕನ್ ಸಾಮ್ರಾಜ್ಯವಾದದ – ಇದರ ರೂಪ ತುಸು ಭಿನ್ನ; ಇದು ಆರ್ಥಿಕ ಸಾಮ್ರಾಜ್ಯವಾದ – ವಿಸ್ತರಣೆಯ ವಿವಿಧ ಅಂಗಗಳಿವು."

"ನಿಮ್ಮ ಮಾತಿನ ಜಾಡನ್ನೇ ತುಸು ವಿಸ್ತರಿಸಿ ಹೀಗೆ ಹೇಳಬಹುದು: ಬ್ರಿಟಿಶ್ ಮಾದರಿಯ ಸಾಮ್ರಾಜ್ಯವಾದಕ್ಕೆ ಎರಡನೆಯ ಮಹಾಯುದ್ಧ ಮಂಗಳ ಹಾಡಿತು. ಅನಂತರದಲ್ಲಿ ಉದ್ಭವಿಸಿದ್ದು ನವೀನ ಮಾದರಿಯ ಆರ್ಥಿಕ ಸಾಮ್ರಾಜ್ಯವಾದ. ಒಂದೆಡೆ ಅಮೇರಿಕ, ಇನ್ನೊಂದೆಡೆ ರಶಿಯ ತಂತಮ್ಮ ಪ್ರಭುತ್ವ ವಿಸ್ತರಣಕ್ಕಾಗಿ ಜಗತ್ತಿನ ತುಂಬೆಲ್ಲ ಕೋಲಾಹಲವೆಬ್ಬಿಸುವುದರಲ್ಲಿ ನಿರತವಾಗಿವೆ."

"ತಪ್ಪು. ಅಮೇರಿಕದ ಮಟ್ಟಿಗೆ ಇದು ನಿಜ. ರಶಿಯ ಸಮಾಜವಾದೀ ದೇಶ. ಅದು ಸಾಮ್ರಾಜ್ಯಶಾಹಿಯೆಂದು ಒಪ್ಪಲು ಶಕ್ಯವಿಲ್ಲ."

ಈ ವಾದಸರಣಿಯನ್ನು ಬೆಳೆಸಿಕೊಂಡು ಹೋಗಲು ನಾನು ಬಯಸಲಿಲ್ಲ. ಮುಂದಿನ ಪ್ರಶ್ನೆ ಕೇಳಿದೆ.

"ಪ್ರಗತಿಶೀಲ ಚಳವಳಿಗೆ ಇಂದಿನ ಪರಿಸ್ಥಿತಿಯಲ್ಲಿ relevance ಇದೆಯೆ?"

"ಪ್ರಗತಿಶೀಲ ಚಳವಳಿ ಯಾವ ಉದ್ದೇಶದಿಂದ ಪ್ರೇರಿತವಾಯಿತೋ ಅದೇ ಉದ್ದೇಶದಿಂದ ಈಗಿನ ಬಂಡಾಯ ಸಾಹಿತ್ಯ ಹುಟ್ಟಿಕೊಂಡಿದೆ. ಅಲ್ಲಿದ್ದದ್ದೆಲ್ಲ ಇಲ್ಲಿದೆ. ಆಗ ಇದ್ದದ್ದಕ್ಕಿಂತ ಕಠಿಣ ಪರಿಸ್ಥಿತಿ ಈಗ ನಮ್ಮ ದೇಶದಲ್ಲಿದೆ. ಬೆಲೆಗಳು ಏರಿವೆ. ಅದಕ್ಕೆ ತಕ್ಕ ಹಾಗೆ ಬಡವರ ಸಂಪಾದನೆ ಹೆಚ್ಚಿಲ್ಲ. ಆದರಿಂದಾಗಿ ಶ್ರಮಜೀವಿಗಳು, ಕೂಲಿಕಾರರು ಮತ್ತು ನೌಕರ

ದಾರರು ಬಹಳ ಕಷ್ಟ ಅನುಭವಿಸುತ್ತಿದ್ದಾರೆ. ಜಾತೀಯತೆ ಹೆಚ್ಚಾಗಿದೆ. ಭ್ರಷ್ಟಾಚಾರ ಬೆಳೆದಿದೆ. ಆದುದರಿಂದ ಇದೆಲ್ಲದರ ಬಗ್ಗೆ ವಿಸ್ತಾರವಾಗಿ ಬರೆದು ಒಳ್ಳೆಯ ಬದುಕಿಗಾಗಿ ಹೋರಾಡಲು ಜನರಿಗೆ ಪ್ರೇರಣೆ ಒದಗಿಸಬೇಕಾದ್ದು ಕವಿಗಳ ಕರ್ತವ್ಯ. ಅದನ್ನೀಗ ಬಂಡಾಯ ಸಾಹಿತಿಗಳು ಮಾಡುತ್ತಿದ್ದಾರೆ. ಒಂದು ಕಾಲಕ್ಕೆ ಬೇಂದ್ರೆ, ಕುವೆಂಪು, ದಿನಕರ ದೇಸಾಯಿ, ಅಡಿಗ ಇವರು ಸಹ ಬಂಡಾಯವಾದಿ ಕವಿತೆಗಳನ್ನು ಬರೆದಿದ್ದಾರೆ. ವಚನಕಾರರು, ದಾಸರು, ಸರ್ವಜ್ಞ ಇವರು ಸಹ ತಮ್ಮ ಕಾಲಕ್ಕೆ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಲು ಕಾವ್ಯ ರಚಿಸಿದರು. ಅದೇ ಪರಂಪರೆಯೇ ಇಂದಿಗೂ ಮುಂದುವರಿದಿದೆ. ತಾವು ಬರೆವದ್ದು ಪ್ರಗತಿಶೀಲ ಅಂತ ಆಗ ಬೇಂದ್ರೆ ಮುಂತಾದವರು ಹೇಳಲಿಲ್ಲ ಅಷ್ಟೆ."

"ಇಲ್ಲಿ ಇನ್ನೊಂದು ಮಾತನ್ನು ಕೇಳಬೇಕಾಗುತ್ತದೆ. ಸಮಾಜದ ಮೇಲಿನ ಸ್ತರದಲ್ಲಿ ಹುಟ್ಟಿದವರು ದೀನ ದಲಿತರ ಬಗ್ಗೆ, ಹರಿಜನ ಗಿರಿಜನರ ಬಗ್ಗೆ ಬರೆಯಲು ಅಧಿಕಾರ ಪ್ರಶ್ನಾರ್ಹ: ಅಂಥಾ ಸಮಾಜದಲ್ಲಿ ಹುಟ್ಟಿ ಬೆಳೆದವರೇ ಅಲ್ಲಲ್ಲಿನ ಸ್ಥಿತಿಗತಿಗಳನ್ನು ಪ್ರಾಮಾಣಿಕವಾಗಿ ಅಧಿಕಾರಯುತವಾಗಿ ಬರೆಯಬಲ್ಲರು ಎಂದು ಇತ್ತೀಚೆ ಕೆಲವರು ಹೇಳುತ್ತಿದ್ದಾರೆ. ಕಾರಂತರ 'ಚೋಮನ ದುಡಿ'ಯ ಬಗೆಗೆ ಈ ಬಗೆಯಧ್ವನಿ ಇತ್ತೀಚೆಗೆ ಕೇಳಿ ಬಂದಿತ್ತಲ್ಲವೆ?"

"ಇರಬೇಕು. ಆದರೆ ಈ ವಾದವನ್ನು ನಾನೊಪ್ಪಲಾರೆ. ಬರೆಯಬೇಕೆಂಬುವನು ತನಗೆ ಬೇಕೆನಿಸಿದ್ದರ ಬಗ್ಗೆ ಬರೆಯಬಲ್ಲ ಅದರ ಬೆಲೆಯನ್ನು ವಿಮರ್ಶಕರು ಕಟ್ಟಬೇಕು, ಕಾಲ ಕಟ್ಟುವುದು. ಸಮಾಜದ ಕೆಳಗಿನ ಸ್ತರದಲ್ಲಿರುವವರು ಬರೆಯಲು ಮುಂದಾದರೆ ಅದು ಖಂಡಿತ ಸ್ವಾಗತಾರ್ಹ. ಅದರಿಂದಾಗಿ ನಮಗೆ ಪರಿಚಿತವಲ್ಲದ ಅನೇಕ ಮುಖಗಳು ನೇರವಾಗಿ ಅವುಗಳನ್ನು ಕಂಡು ಅನುಭವಿಸಿದವರಿಂದ ನಮಗೆ ನೋಡಸಿಕ್ಕುವ ಒಟ್ಟಾರೆ ಸಾಹಿತ್ಯಕ್ಕೆ ಪ್ರಯೋಜನವೇ ಆದೀತು. ಆದರೆ ಈ ಮಾತನ್ನು ನಾನು ಇನ್ನೊಮ್ಮೆ ಒತ್ತು ಕೊಟ್ಟು ಹೇಳುತ್ತೇನೆ— ಇವರು ಇಂಥದೇ ಬರೆಯಬೇಕು, ಹೀಗೆಯೇ ಬರೆಯಬೇಕೆಂದು ಯಾರೂ ಪ್ರತಿಬಂಧ ಹೇರಲಾರರು. ಒಂದು ಕಾಲಕ್ಕೆ 'ತುತ್ತಿನ ಚೀಲ'ದಂಥ ಕ್ರಾಂತಿಕಾರಿ ಗೀತವನ್ನು ಬರೆದ ಬೇಂದ್ರೆಯವರ ಕಾವ್ಯ ಇಂದು ಆಧ್ಯಾತ್ಮ ಭಾವದಿಂದ ತುಂಬಿ ತುಳುಕುತ್ತಿದ್ದರೆ. ಹಾಗೆ ಬರೆಯಬೇಡವೆಂದು ಅವರಿಗೆ ಹೇಳಲು ಯಾರಿಗೂ ಅಧಿಕಾರವಿಲ್ಲ."

"ಬೌದ್ಧಿಕರ ನಮ್ಮ ಆಳುವವರು ಬಗ್ಗೆ— ಸರಕಾರ, ರಾಜಕಾರಣಿ— ಅಸಡ್ಡೆಯಿಂದಿದ್ದಾರೆಂಬುದೇ ನಮ್ಮಲ್ಲಿ ಬೌದ್ಧಿಕ ಪರಂಪರೆ ಬೆಳೆಯುವುದಕ್ಕೆ ದೊಡ್ಡ ಆತಂಕವೆನ್ನಲಾಗುತ್ತಿದೆ. ನಿಮ್ಮ ಅಭಿಪ್ರಾಯ?"

"ಎಲ್ಲಾ ಕಾಲದ ಆಳುವವರೂ ಬೌದ್ಧಿಕರು ತಮ್ಮನ್ನು ಅನುಸರಿಸಿಕೊಂಡು ಹೋಗಬೇಕೆಂದು ಬಯಸುತ್ತಾರೆ. ಆಳುವ ಆಸನಕ್ಕೆ ಬಂದೊಡನೆ ಸರ್ವಾಧಿಕಾರತ್ವ ತಾನೇ ಬರುತ್ತದೋ ಯಾರಿಗೆ ಗೊತ್ತು! ಸಾಹಿತಿಗಳು ತೆಪ್ಪಗಿರಬೇಕೆಂದು ಸರಕಾರ ಪ್ರಶಸ್ತಿಗಳನ್ನೊ, ಹಣವನ್ನೊ ಕೊಡುತ್ತದೆ. ಸಾಹು–ಜೈನ್ ಕಂಪನಿಯು ಸ್ಥಾಪಿಸಿದ ಜ್ಞಾನಪೀಠ ಕೂಡ ಇಂಥದೇ ಒಂದು ಬಂಡವಾಳಶಾಹಿ ಉದ್ದೇಶ ಹುಟ್ಟಿದೆ. ಇವರೆಲ್ಲ ಇನ್ಕಂ ಟ್ಯಾಕ್ಸ್ ತಪ್ಪಿಸುವವರು, ಸುಳ್ಳು ಲೆಕ್ಕ ಬರೆಯುವವರು. ಬಂಡವಾಳಶಾಹಿ ಉಳಿಯಬೇಕೆಂಬುದೇ ಇವರ ಉದ್ದೇಶ. ಒಂದು ಕೋಟಿ ಟ್ಯಾಕ್ಸ್ ತಪ್ಪಿಸಿ ಒಂದು ಲಕ್ಷ ಬಹುಮಾನ ಕೊಡುತ್ತಾರೆ. ಒಟ್ಟು ಈ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದು ಇವರ ಉದ್ದೇಶ."

"ಇದು ಸರಕಾರ ಹಾಗು ಬಂಡವಾಳದಾರರು ಸಾಹಿತ್ಯ ಕೃತಿಗಳಿಗೆ ನೀಡುವ ದೊಡ್ಡ ಮೊತ್ತದ ಬಹುಮಾನಗಳ ಕುರಿತ ನಿಮ್ಮ ಅಭಿಪ್ರಾಯವಾಯಿತು. ಆದರೆ ನನ್ನ ಪ್ರಶ್ನೆಯ ಉದ್ದೇಶ ಇದಾಗಿರಲಿಲ್ಲ. ಬೌದ್ಧಿಕರ ಬಗ್ಗೆ ಸರಕಾರ ಅಸಡ್ಡೆಯಿಂದಿದೆಯೆಂದರೆ ಸರಕಾರ ಬೌದ್ಧಿಕ ಅಸ್ತಿತ್ವವನ್ನೇ ಗಮನಿಸುವುದಿಲ್ಲ. ಫ್ರಾನ್ಸಿನಲ್ಲಿ ಎಮಿಲ್ ರೆಝೋಲಾ ಬರೆದ ಒಂದು ಲೇಖನ

ದಿಂದಾಗಿ ಕಳೆದ ಶತಮಾನದಲ್ಲಿ ಯುರೋಪ್ಯ ಸೈನ್ಯಾಧಿಕಾರಿಯೊಬ್ಬನಿಗಾದ ಅನ್ಯಾಯವನ್ನು ಸರಿಪಡಿಸಲು ಶಕ್ಯವಾಯಿತು. ಇತ್ತೀಚೆ ರಶಿಯದಲ್ಲಿ ಸಂಭವಿಸಿದ ಘಟನೆಗಳನ್ನೇ ನೋಡಿದರೆ ಅಲ್ಲಿ ಪ್ರತಿಭಟಿಸುವ ಬರಹಗಾರರನ್ನು ಸುಮ್ಮನೆ ಬಿಡುವುದಿಲ್ಲ. ಸೆರೆಮನೆಗಟ್ಟುತ್ತಾರೆ. ಹುಚ್ಚರಾಸ್ಪತ್ರೆಗೆ ಸೇರಿಸುತ್ತಾರ, ದೇಶ ಬಿಟ್ಟು ಹೊರಗಟ್ಟುತ್ತಾರೆ. ಆದರೆ ನಮ್ಮಲ್ಲಿ ತುರ್ತುಪರಿಸ್ಥಿತಿ ಜಾರಿಯಲ್ಲಿದ್ದ ಕೆಲ ತಿಂಗಳುಗಳನ್ನು ಬಿಟ್ಟರೆ ಯಾವಾಗಲೂ ಬೌದ್ಧಿಕ ಕೂಗಿದರೆ ಕುಂತಶೋಷಣೆ, ಬರೆವರೆ ಲೇಖನಿ ಸವೆದದ್ದೊಂದೇ ಲೆಕ್ಕ."

"ಹೌದು, ದುರ್ದೈವದಿಂದ ಅಂಥ ಪರಿಸ್ಥಿತಿ ಇದೆ. ಆಳುವವರ ಕಣ್ತೆರೆಸಲು ನಾವೆಲ್ಲ ಹೋರಾಡಬೇಕು."

"ನಿಮ್ಮ ಎಲ್ಲ ಕೃತಿಗಳಲ್ಲಿ ಶ್ರೇಷ್ಠವೆಂದು ನಿಮಗನಿಸಿದ್ದು ಯಾವುದು ಮತ್ತು ಯಾಕೆ ?"

"ನನ್ನ ಅಭಿವ್ಯಕ್ತಿಯ ಮುಖ್ಯ ಮಾಧ್ಯಮ ಕಾದಂಬರಿ. ಅವುಗಳಲ್ಲಿ ನನಗೆ ಶ್ರೇಷ್ಠವೆನಿಸಿದ್ದು 'ಮಾಡಿ ಮಡಿದವರು.' ಕಾದಂಬರಿಯ ವಸ್ತು, ಪಾತ್ರಚಿತ್ರಣ, ಸನ್ನಿವೇಶ ನಿರೂಪಣೆ, ಆರಂಭ, ಬೆಳವಣಿಗೆ ಅಂತಿಮ ರಸಾವೇಶ ಮತ್ತು ಪರಿಣಾಮಕಾರಿಯಾದ ಅಂತ್ಯ ಹಾಗೂ ವಾಸ್ತವತೆಯ ಸ್ಪರ್ಶ ಇವುಗಳಿಂದಾಗಿ ಅದು ಉತ್ತಮ ದರ್ಜೆಯ ಕಾದಂಬರಿಯೆಂದು ನನಗನಿಸುತ್ತದೆ. ಇದರೊಟ್ಟಿಗೆ ನನಗೆ ಇನ್ನೂ ಒಂದು ಮಾತನ್ನು ಹೇಳಬೇಕೆನಿಸುತ್ತದೆ. ನನಗೆ ಬಲು ಮೆಚ್ಚುಗೆಯಾದ ನಾಲ್ಕು ಕನ್ನಡ ಕೃತಿಗಳೆಂದರೆ ಬೇಂದ್ರೆಯವರ 'ಸಖೀಗೀತ', ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು, ಕಾರಂತರ 'ಕುಡಿಯರ ಕೂಸು' ಹಾಗು ತರಾಸುರವರ 'ಚಂದವಳ್ಳಿಯ ತೋಟ,'"

"ನಿಮಗೆ ಮತ್ತೇನಾದರೂ ಹೇಳುವುದಿದೆಯೆ?"

"ಇದೆ, ಖಂಡಿತ ಇದೆ. ಮನುಷ ತನ್ನಲ್ಲಿರುವ ಶಕ್ತಿಯನ್ನು ಪಯೋಗಮಾಡಿಕೊಂಡು ಕವಿಯೋ, ಸಾಹಿತಿಯೋ, ಕಲಾವಿದನೋ ಮತ್ತೇನೋ ಆಗಲೆತ್ನಿಸುತ್ತಾನೆ. ಪ್ರತಿಭಾ ಶಕ್ತಿಯುಳ್ಳವ ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ಜೀವನವನ್ನು ಆಳವಾಗಿ ವೀಕ್ಷಿಸಿ, ಅನುಭವ ಪಡೆದು, ಆ ಅನುಭವವನ್ನು ಕಲ್ಪನೆ ಹಾಗು ಪ್ರತಿಭೆಯ ಮೂಲಕ ಸಾಹಿತ್ಯ ಕೃತಿಯಲ್ಲಿ ಪರಿವರ್ತಿಸಿ ಲೋಕಕ್ಕೆ ತನ್ನದೇ ಆದ ಕೊಡುಗೆ ನೀಡಿ ಒಂದು ದಿನ ಸದ್ದಿಲ್ಲದೆ ಮಾಯವಾಗುವುದು ಕಲಾವಿದನಿಗೆ ಪ್ರಿಯವಾದ ವಿಚಾರ. ಜನತೆಯ ಹೋರಾಟದಲ್ಲಿ ಪ್ರತ್ಯಕ್ಷ ಭಾಗವಹಿಸಲು ಸಾಧ್ಯವಾದರೆ ಭಾಗವಹಿಸಲಿ; ಆಗದಿದ್ದರೆ ಅವನೇನೂ ಪ್ರತಿಗಾಮಿಯಾಗುವುದಿಲ್ಲ. ದಲಿತರ ಬಗ್ಗೆ ಬರೆದದ್ದು ಮಾತ್ರ ನಿಜವಾದ ಸಾಹಿತ್ಯ, ಉಳಿದಿದ್ದುದು ಜೊಳ್ಳು ಎಂದು ಹೇಳುವುದು ಬಾಲಿಶವಾದದ್ದು. ನಮಗೆ ಶಕ್ಯವಿದ್ದಷ್ಟು ಕಾರ್ಯಮಾಡಿ ತಣ್ಣಗೆ ಹೊರಟು ಹೋಗುವುದು ಲೇಸು. ನಮಗಿಂತ ದೊಡ್ಡವರು, ಪ್ರಕಾಂಡ ಪಂಡಿತರು, ಮಹಾ ಪ್ರತಿಭಾಶಾಲಿಗಳು ಲೋಕದಲ್ಲಿ ನೂರಾರು ಜನ ಇದ್ದಾರೆಂಬ ಅರಿವು ನಮಗಿದ್ದರೆ ಸಾಕು."

*

ತಾಸೆರಡು ತಾಸು ಮಾತಾಡಿ ವಾತಾವರಣದ ಗಾಂಭೀರ್ಯದೊಂದಿಗೆ ಬಸವರಾಜ ಕಟ್ಟೀಮನಿಯವರ ಮುಖವೂ ಗಂಭೀರವಾಗಿತ್ತು. ಆದರೂ ಆರು ದಶಕಗಳನ್ನು ದಾಟಿದ ಈ ಸಾಹಿತಿಯ ಮುಖದಲ್ಲಿ ವೃದ್ಧಾಪ್ಯದ ಕಳೆಯನ್ನು ಗುರುತಿಸಲು ನನಗಾಗಲಿಲ್ಲ. ಶುಭ ಹಾರಯಿಸಿ ಅವರನ್ನು ಬೀಳ್ಕೊಳ್ಳುವಾಗ ಅವರ ಮುಖದಲ್ಲಿ ಮಂದಹಾಸ ಮಿನುಗುತ್ತಿತ್ತು.


ಕಾಡುತ್ತಿವೆ ಭೂತಕಾಲದ ಭ್ರೂಣಗೂಢಗಳು :
ಹುಗಿದ ಹಳಬಾವಿಯೊಳ ಕತ್ತಲ ಹಳಸುಗಾಳಿ
ಅಂಬೆಗಾಲಿಟ್ಟು ತಲೆಕೆಳಗು ತೆವಳುತ್ತೇರಿ
ಅಳ್ಳಳ್ಳಾಯಿ ಜಪಿಸುವ ಬಿಸಿಲಕೋಲಿಗೆಗರಿ ತೆಕ್ಕಾಮುಕ್ಕಿ
ಹಾಯುತ್ತಿದೆ ತುಳಸಿವೃಂದಾವನದ ಹೃದವರಿಗೂ.

—ಎಂ. ಗೋಪಾಲಕೃಷ್ಣ ಅಡಿಗ

ಕೇಳುತ್ತ ಹೋದಂತೆಲ್ಲಾ ನಿಗೂಢವಾಗುವ

ಒಪ್ಪಮಯ್ಯನ ಸಾಧನೆ - ಸಾಧನಗಳು

ನನ್ನನ್ನು ಮೂಕವಿಸ್ಮಿತನನ್ನಾಗಿಸಿದುವು.



ಡ್ರೈವರು ಹಳ್ಳಿಯ ಅಶ್ವತ್ಥಕಟ್ಟೆಯ ಬಳಿ ಜೀಪು ನಿಲ್ಲಿಸಿದ ತಕ್ಷಣ ಅಗತ್ಯವಾದ ಫಾರಂಗಳನ್ನು ಹಿಡಿದು ಕೆಳಗಿಳಿದೆ. ಸಂಶೋಧನೆಯ ಕೆಲಸ. ಮುತುವರ್ಜಿಯಿಂದ ಹಳ್ಳಿಯ ಮನೆ ಮನೆಗೂ ಹೋಗಬೇಕು. ಹೋದ ಪ್ರತಿ ಮನೆಯ ತಲಾವಾರು ಲೆಕ್ಕ ಆಗಬೇಕು. ನಂತರ ವರಸೆಯಾಗಿ ಮನೆಮಂದಿಯ ಆರೋಗ್ಯ–ಅನಾರೋಗ್ಯ, ಅನಾರೋಗ್ಯವಿದ್ದರೆ ಆಯಾ ಮನೆ ಅನುಸರಿಸುವ ಚಿಕಿತ್ಸಾಕ್ರಮ ಇತ್ಯಾದಿ ಮಾಹಿತಿಗಳನ್ನು ಫಾರಂಗಳಲ್ಲಿನ ಪ್ರಶ್ನೆಮಾಲಿಕೆಯಲ್ಲಿ ಕ್ರಮವಾಗಿ ಆಯಾ ಮನೆಯವರಿಂದಲೇ ಸಂಗ್ರಹಿಸಬೇಕು. ಸಂಗ್ರಹ ಸತ್ಯಕ್ಕೆ ಹತ್ತಿರವಾಗಬೇಕಾದರೆ ಗೃಹಸಂದರ್ಶನ ಸರಳವಾದ ಸ್ನೇಹಸ್ತರದಲ್ಲಿ ಜರುಗಿರಬೇಕು. ಇಂತಹ ವಾತಾವರಣ ಏರ್ಪಡಬೇಕಾದರೆ ಸಂದರ್ಶಕ ಬಹು ಸ್ಮೈರಣೆಯಿಂದ ಹಳ್ಳಿಯ ಮನೆಮಂದಿಯೊಂದಿಗೆ ಬೆರೆಯಬೇಕು. ಸ್ವತಃ ಪ್ಯಾಂಟು ಬೂಟು ನಗರ ಡಿಗ್ರಿ ಇತ್ಯಾದಿಗಳುಂಟಿಸುವ ಬಲ್ಮೆ ಬೀಗುಗಳನ್ನು ವರ್ಜಿಸಿ ತನ್ನ ಮೇಲೆ ಇರಬಹುದಾದ ಅಪನಂಬಿಕೆ ಉಪೇಕ್ಷೆ ಇತ್ಯಾದಿ ಭಾವನೆಗಳನ್ನು ತಾಳ್ಮೆಯಿಂದ ತೊಲಗಿಸಿ ಸ್ವತಃ ತಾನೂ ಪೂರ್ವಗ್ರಹಪೀಡಿತನಾಗದೆ ಮಾಹಿತಿ ಸಂಗ್ರಹ ಕಾರ್ಯದಲ್ಲಿ ತೊಡಗಬೇಕು. ದಿನಕ್ಕೆ ಎಂಟು ಹತ್ತು ಮನೆಯ ನಿರಾತುರ ಸಂದರ್ಶನ.

ಎಲ್ಲ ಹಳ್ಳಿಯಂತೆಯೇ ಇದೂ ಸುಮಾರು ಎಪ್ಪತ್ತು–ಎಂಭತ್ತು ಮನೆಯ ಒಂದು ಹಳ್ಳಿ. ಬಹುಪಾಲು ಮಣ್ಣಿನ ಮನೆಗಳು, ಗುಡಿಸಲುಗಳು. ಅಪರೂಪಕ್ಕೆ ಮಂಗಳೂರು ಹಂಚು ಹೊದಿಸಿದ ಮನೆ, ಪ್ರತ್ಯೇಕ ಇಪ್ಪತ್ತು ಗುಡಿಸಲುಗಳ ಹರಿಜನ ಕಾಲೋನಿ. ಊರ ಬಾಗಿಲಲ್ಲೇ ಸರಕಾರೀ ಶಾಲೆ, ಅಶ್ವತ್ಥಕಟ್ಟೆ, ಅಮ್ಮನ ಗುಡಿ. ಇಲ್ಲಿಂದ ಟಾರು ರಸ್ತೆಗೆ ಸೇರುವ ಮಣ್ಣುರಸ್ತೆ. ರಸ್ತೆಯಂಚಿಗೆ ಅಂಟಿಕೊಂಡಂತೆ ಆಧುನಿಕತೆ ಮುಂದುವರಿಕೆ ಇತ್ಯಾದಿಗಳ ಸುರುಹೋ ಎಂಬಂತೆ ಮುಳ್ಳುತಂತಿ ಸುತ್ತುವರೆದಿದ್ದ ಒಂದು ಫಾರಂ. ಅದರ ಮಧ್ಯ ಒಂದು ನವನಾಗರಿಕ ಮನೆ.

ಇಂದಿಗೆ ಮೂರನೆಯ ದಿನದ ಕೆಲಸವಾದ್ದರಿಂದ ಹಳ್ಳಿಯ, ಹಳ್ಳಿಯ ಹಿರಿಯರ ಪರಿಚಯ ಸಹಜವಾಗಿದೆ. ಅಕೋ ಅಶ್ವತ್ಥಕಟ್ಟೆಯ ಮೇಲೆಯೋ ಹಳ್ಳಿಯ ಅನೇಕ ಹಿರಿಯರು ಬೀಡಿ ಸೇದುತ್ತಲೋ ಚಾ ತರಿಸಿ ಕುಡಿಯುತ್ತಲೋ ಇದ್ದಾರೆ. ಅವರುಗಳೆಲ್ಲಾ ಯಥಾಪ್ರಕಾರ ವಂದನೆ ಸಲ್ಲಿಸಿ ಚಾ ನಿರಾಕರಿಸಿ ಜನ ದನ ಕುರಿ ಕೋಳಿ ತೊಪ್ಪೆ ಹಿಕ್ಕಿ ಬಚ್ಚಲುಗುಂಡಿಗಳು ಜುಂಗುಡುವ ನೊಣಗಳು ದಾರಿಗಡ್ಡನಿಂತ ಗಾಡಿಗಳನ್ನು ಸಂಭಾಳಿಸಿಕೊಂಡು ನನ್ನ ಸಂದರ್ಶನಾಗೃಹದ ಮುಂದೆ ನಿಂತೆ. ಹಳೇ ಕಾಲದ ಕಲ್ಲುಚಪ್ಪಡಿಯ ಮೇಲೆ ಮಣ್ಣು ಹರಡಿದ ಸೂರಿನ ಮಣ್ಣು ದೇಹದ ದೊಡ್ಡ ಮನೆ. ಯಾರು ಯಾವಾಗ ಕಟ್ಟಿದ್ದರೋ. ತಳಿ ಬೆಳೆದಂತೆ ಭಾಗ ವಿಭಾಗಗಳಾಗಿರಬೇಕು. ಹೆಬ್ಬಾಗಿಲ ಒಳ ಹೊಕ್ಕರೆ ಮಧ್ಯ ಕಲ್ಲು ಹಾಸಿದ್ದ ತೆರೆದ ಅಂಗಳ. ಅದರ ಸುತ್ತ ಒಕ್ಕಡೆಯಲ್ಲಿ ಕಾಲ್ನಡಿಗೆಗಾಗಿ ಜಾಗ. ಮತ್ತೊಂದು ಪಾರ್ಶ್ವದಲ್ಲಿ ಐದಾರು ಬಾಗಿಲುಗಳು. ಅವುಗಳಲ್ಲಿ ಆಗಲೇ ಕೆಲವಕ್ಕೆ ಬೀಗ ಬಿದ್ದಿದೆ. ಬೆಳಿಗ್ಗೆ ಬೇಗನೇ ಬಂದಿದ್ದೇನೆ. ಶಾಲೆಯ ಗಂಟೆ ಇನ್ನೂ ಹೊಡೆದಿಲ್ಲ. ನನಗೆ ಇದೇ ಹೊತ್ತಿಗೆ ಮುಂಚೆಯಾದರೆ ಹೊಲ ಮಾಗಿನಲ್ಲಿ ಕೆಲಸಮಾಡುವ ರೈತರಿಗೆ ನಸುಕೂ ಬೇಗವಲ್ಲ. ಬೀಗ ಬಿದ್ದ ಮನೆಗಳಿಗೆ ವರಸೆಯಾಗಿ ಕ್ರಮಾಂಕವಿತ್ತು ಬಾಗಿಲು ತೆರೆದಿದ್ದ ಮನೆಯತ್ತ ನಡೆದಿದ್ದೆ.

ಹಳ್ಳಿಯ ಜನಕ್ಕೆಲ್ಲ ನಾನು ಬಂದಿರುವ, ವಿಚಾರಿಸುವ ವಿಷಯ ಗೊತ್ತು. ಅದರ ಬಗೆಗೆ ಊಹಾಪೋಹದ ಚರ್ಚೆಗಳು ನಡೆದಿರುತ್ತವೆಯೊಂದು ನನಗೂ ಗೊತ್ತು. ಆದರೂ ಮನೆ ಮನೆ ಬೇರೆ. ಮನೆಯಲ್ಲಿನ ಜನದ ಮನಸ್ಸು [illegible] ಒಂದೊಂದು ತರಹ. ಆದ್ದರಿಂದ ಸಂದರ್ಶನ ಮೊದಲ ಕೆಲಸ. ತನ್ನ ಕೆಲಸದ ಪರಿಚಯ, ವಿಶ್ವಾಸ ಸಂಪಾದನೆ, ನಂತರ ಸಂದರ್ಶನಕಾರ್ಯ. ಈ ಪೂರ್ವಭಾವೀ ಸಿದ್ಧತೆಗೆ ಸಂದರ್ಭ ಜಾಣಿಸಿ ಮಾತುಗಳನ್ನಾಡುತ್ತಿದ್ದಾಗ ನನ್ನ ಸುತ್ತ ಕಣ್ಣು ಮನೆಯೊಳಗಿನ ನೂರಾರು ವಿಷಯ ತಡಕುತ್ತವೆ.

ಭಾಗ ವಿಭಾಗಗಳಾಗಿ ಶೇಷ ಉಳಿದ ಕೇವಲ ಬಾಡೂವರೆ ಅಂಕಣದ ಒಂದೇ ಸಣ್ಣಕಿಟಕಿಯ ಮನೆ. ಹೊಗೆಹತ್ತಿ ಕಪ್ಪಾದ ಗೋಡೆಗೆ ಸುಣ್ಣದ ಬದಲು ಸಗಣಿಯ ಸಾರಣೆ. ಒಂದು ಮೂಲೆಯಲ್ಲಿ ರಾಗಿಯ ಗುಡಾಣಿ. ಅದರ ಪಕ್ಕದಲ್ಲಿ ಒಂದರ ಮೇಲೊಂದು ನಿಲ್ಲಿಸಿದ ಎರಡು ಸಾಲು ಮಡಕೆಗಳು. ನೆಲುವಿನ ಮೇಲೆಯೂ ಒಂದೆರಡು ಮಡಕೆಗಳು. ಒಕ್ಕರೆ ಮುಕ್ಕಲ್ಲು ಒಲೆ. ಒಲೆಯ ಮೇಲೆರಡು ಮಡಕೆಗಳು. ಸೊಟ್ಟುಗ ಒಲೆಯಲ್ಲಿ ಬೂದಿ. ಮೂಲೆಯಲ್ಲಿ ಸೌದೆಪುರಲೆ. ಇತ್ತಕಡೆಯ ಮೂಲೆಯಲ್ಲಿ ಹುಲ್ಲಿನರಾಶಿ, ಗಳುಗಳು, ಒರಗಿಸಿದ ನೇಗಿಲು, ಬರಲು. ಅದರ ಒತ್ತಿಗೆ ಸಂದೂಕದಂಥ ಮರದ ಪೆಟ್ಟಿಗೆ. ಅದರ ಮೇಲೆ ಒಂದು ಗೋಣಿತಾಟಿನ ಸುರುಳಿ. ಬಾಗಿಲೆದುರಿನ ಗೋಡೆಯ ಮೇಲೆ ಹೊಗೆಗಪ್ಪಾದ ದೇವರ ಪಟಗಳ ಸಾಲು. ಒಂದು ಕನ್ನಡಿ. ಗೂಟದಲ್ಲಿ ತೊಡುವ ಬಟ್ಟೆಗಳು. ನೆಲದ ಮೇಲೆ ಗೋಣಿ ತಾಟುಗಳ ಮೇಲೆ ದುಬ್ಬಟಿಗಳನ್ನು ಹೊದ್ದು ಮನೆಯವರು ಇನ್ನೂ ಮಲಗಿದ್ದಾರೆ. ಐದಾರು ದುಬ್ಬಟಿಗೂಡುಗಳೂ ಒಂದು ತೊಟ್ಟಿಲೂ ಇದೆ.

ಪೆಟ್ಟಿಗೆಯ ಮೇಲೆ ಸುರುಳಿ ಸುತ್ತಿಟ್ಟಿದ್ದ ಗೋಣಿಪಟ ಹಾಸಿಗೆ ಯಜಮಾನನದೇ ಇರಬೇಕು. ನಾನು ಕೂಗಿದ್ದಕ್ಕೆ ಅವನೇ ಬಾಗಿಲ ಬಳಿ ಬಂದುಸ್ವಾಗತಿಸಿ ನನ್ನೆದುರಿಗೆ ಕುಕ್ಕುರುಗಾಲುಹಾಕಿ ಕೂತಿದ್ದ. ತನಗಿರುವ ಇಷ್ಟಗಲ ಮನೆ ಇಷ್ಟಗಲ ಹೊಲ ಎರಡು ಎತ್ತುಗಳಲ್ಲಿ ಈ ಸಂಸಾರ ಹೊತ್ತು ಪ್ರಪಂಚ ಕಂಡು ಎರಡು ಕೂಳಿಗಾಗಿ ಕಷ್ಟಪಡುವ ರೈತ. ನವವತ್ತು ವರ್ಷ ಚೆಡ್ಡಿ ಅರೆತೋಳು ಅಂಗಿಯಲ್ಲೇ ಕಳೆದಿದ್ದಾನೆ. ಆಸೆ ಇಂಗಿ ಹೋಗಿ ನಿರಾಸೆ ಪಡಲೂ ನಿತ್ರಾಣಪಟ್ಟು ದಿನ ದಿನ ಎಣಿಸುವುದನ್ನೂ ಹೊಗೆ ಹಿಡಿದ ಪಟದಲ್ಲಿರುವ ಭಗವಂತನಿಗೇ ಬಿಟ್ಟು ಜೀವನ ನೂಕುತ್ತಿದ್ದಾನೆ.

ನಮ್ಮ ಮಾತು ಕೇಳಿ ಅಲ್ಲಲ್ಲಿ ದುಪ್ಪಟಿ ಗೂಡಾಗಿದ್ದವರು ಎದ್ದಿದ್ದರು. ಈ ಕಡೆ ಒಬ್ಬಳು ಮುದುಕಿ. ತೊಟ್ಟಿಲ ಪಕ್ಕದಲ್ಲಿ ಬಾಣಂತಿ—ಪ್ರಾಯಶಃ ಇವನ ಹೆಂಡತಿ ಇರಬೇಕು. ಎದ್ದವೇ ಕೊಯರ್ಗುಡುವ ಮಕ್ಕಳನ್ನು ಅಸ್ಸಿ ಮಾಡಿ ಸುಮ್ಮನಾಗಿಸಿದ್ದಳು ಬೆದರಿಕೆ ಬಡತನ ಇವುಗಳನ್ನು ಹಾಸಿ ಹೊದ್ದು ಬೆಳೆದ ಮಕ್ಕಳು ಪಾಪ, ಬದಲಾಗದೆ ತೆಪ್ಪಗಾಗಿ ಪಿಳಿ ಪಿಳಿ ನನ್ನನ್ನೇ ನೋಡುತ್ತ ಕೂತವು. ತೊಟ್ಟಿಲ ಆ ಪಕ್ಕ ಮಲಗಿದ್ದ ಹುಡುಗಿ ಮಲಗಿಯೇ ನನ್ನತ್ತ ನೋಡಿದಳು. ನನ್ನ ಸಂಶೋಧಕನ ಮನಸು ಜಾಗ್ರತವಾಗಿತ್ತು. ಇಷ್ಟು ಹೊತ್ತಿನಲ್ಲಿ ಈ ವಯಸ್ಸಿನ ಹುಡುಗಿ ಮಲಗಿರುವುದು ಅಪರೂಪ. ಏಕೆ ಇನ್ನೂ ಮಲಗಿದ್ದಾಳೆ?

ಜನಗಣತಿಯಾಗಿ ಮಾತಿನ ಮಜಲು ಸಮರ್ಪಕವಾಗಿದೆಯೆಂಬ ಭಾವನೆ ಮೂಡುತ್ತಲೇ ಪ್ರಶ್ನಮಾಲಿಕೆಯನ್ನು ಪ್ರಯೋಗಿಸಿದ್ದೆ.

'ಎಲ್ಲರೂ ಆರೋಗ್ಯವೋ?'

'ಹೂ ಸ್ವಾಮಿ.'

'ನೀವು?'

'ಹೂ.'

'ನಿಮ್ಮ ತಾಯಿ?'

'ಹೂ.'

'ನಿಮ್ಮ ಹೆಂಡತಿ?'

'ಹೂ.'

'ಬಾಣಂತಿ, ಆರೋಗ್ಯವೋ?'

'ಹೂ.'

'ಹೆರಿಗೆ ಇಲ್ಲೇ ಆಯಿತೋ, ಆಸ್ಪತ್ರೆಯಲ್ಲೋ?'

'ಇಲ್ಲೇ ಸ್ವಾಮಿ.'

'ನಿಮ್ಮ ಹಿರಿಯಮಗಳು?'

'ಅವಳೂ ಚೆಂದಾಕಿದ್ದಾಳೆ ಸ್ವಾಮಿ.'

ಆದರೀ ಉತ್ತರ ಮಿಕ್ಕ ಉತ್ತರಗಳಂತೆ ನಿಸೂರಾಗಿ ಬಂದಿರಲಿಲ್ಲ. ಯಜಮಾನ ಉಗುಳು ನುಂಗಿದ್ದ. ಹುಡುಗಿ ಇನ್ನೂ ಮಲಗೇ ಇದ್ದಳು. ನಾನು ಮೆಲ್ಲನೆ ಕೇಳಿದ್ದೆ.

'ಯಾಕೆ ಇನ್ನೂ ಮಲಗಿದ್ದಾಳೆ? ಖಾಯಿಲೇನಾ?'

ಯಜಮಾನ ಉಪೇಕ್ಷೆಯಿಂದ ತಲೆ ಕೆರೆದಿದ್ದ. ಇವನ ಉಪೇಕ್ಷಾ ಭಾವವನ್ನು ತೊಡೆಯಬೇಕು. ಇಲ್ಲೇ ಇರುವುದು ಸಂಶೋಧಕನ ಜಾಣ್ಮೆ. ನನ್ನ ನಯ ಪುಸಲಾವಣೆಗೆ ಬಲಿಬಿದ್ದು ಯಜಮಾನ ಹೇಳಿದ್ದ. 'ಆ ಮಗೀಗೆ ಖಾಯಿಲೇಂತ ಆಗಿಲ್ಲ ಸ್ವಾಮಿ. ಅವ್ಳಿಗೆ ಹುಳ ಮುಟ್ಟದೆ. ಅದ್ರಿಂದ


ಬದ್ಕಾಗಿ ಮಲಕೊಂಡವಳೆ! ಯಾಕೆ ಮಲಗ್ಬಿಟ್ಳೆ!? ನಾನು ವಿವರ ಕೇಳಿದ್ದೆ.

ನನ್ನ ಮಾತುಗಳು ಸುತ್ತ್ಯಾಗಿದ್ದ ಬಂಜಾರ ಅಂದವನಾಗಿ ಇದ್ದ ಬಾಯಿ ಬಿಡತ್ತು. 'ಅವ್ರ ಕೆಲಸದ ಸುಮರಾ ಬೇಕು ಮಾರಾ. ನಮ್ಮಗೆ ಹಾವು ಕಚ್ತು ಸ್ವಾಮಿ! ಹಾವು! ಉತ್ತರಿಯಿಂದ ನಾನು ಬೆರಗಾದ್ದೆ.

'ಹಾವೇ?'

ಚಳಿ ಬಿಟ್ಟು ಬಂಜಾರನ ಈಗ ಉತ್ಸುಕತೆ ಯಿಂದ ಉತ್ತರಿಸತೊಡಗಿದ್ದ. 'ಹೌದು ಸ್ವಾಮಿ. ಕಮಲಿಗೆ ಶನಿವಾರ ರಾತ್ರಿ ಹಾವು ಮುಟ್ಟಿಸ್ ಬುಟ್ಟೈತೆ' ಕಮಲಿಯೆಂದರೆ ತೊಟ್ಟಿಲ ಆ ಪಕ್ಕ ಮಲಗಿದ್ದ ಹುಡುಗಿಯೇ. ಆತ್ತ ಕಡೆ ಸಂಭ್ರಾಂ ತಿಯಿಂದ ನೋಡಿದ್ದೆ. ಈವತ್ತು ಮಂಗಳವಾರ. ಶನಿವಾರ ರಾತ್ರಿ ಹಾವು ಕಡಿದೂ ಇನ್ನೂ ಬದುಕಿ ದ್ದಾಳೆ. ನನ್ನ ಕಡೆ ತಿರುಗಿ ನೋಡುತ್ತಲೂ ಇದ್ದಾಳೆ. ಹಿಂದ್ ಗಾಬರಿ ಬೇಡ. ಹಾವು ಎಂದ ಕ್ಷಣ ನಾಗರ ಹಾವು ಸಾವು ಇವುಗಳೇ ಮನಸ್ಸಿಗೆ ಬಂದು ಭಯ ಗೊಳಿಸಿಬಿಡುತ್ತೆ. ವಿಷದ ಹಾವು ಅಲ್ಲದಿರಬಹು ದು. ಹಾವೇ ಅಲ್ಲದಿರಬಹುದು. ಕಡಿದುದೂ ರಾತ್ರಿಯಂತೆ. ಹಾವೇ ಕಚ್ಚಿತೋ ಇಲ್ಲವೋ ಕಂಡ ವರು ಯಾರು? ಹಡೆಯುತ್ತಿದ್ದ ಗಾಬರಿಯನ್ನು ಹತೋಟಿಗೆ ತಂದುಕೊಂಡು ನಿಧಾನವಾಗಿ ವಿವ ರವನ್ನು ಸಂಗ್ರಹಿಸಿದ್ದೆ.

ನೋಡಿ ಸ್ವಾಮಿ ನೀವು ಕಾಣಾ ಹಂಗೆ ನಮ್ಮನೆ ಇರೋದು ಇಷ್ಟೇ ಅಗಲ. ಇದೋ ಇಲ್ಲೇ ನಾವು ಮನೀಕೊಳಾದು. ಅಲ್ಲೇ ಅಡುಗೆ ಮಾ- ಡಾದು. ಅಲ್ಲೇ ಸೌದೆ ಸೊಪ್ಪು ದನೀಗೆ ಹುಲ್ಲು ತಂದು ಒಟ್ಟಿಕ್ಯಾದು. ದರಿದ್ರಕಾಲ ಸ್ವಾಮಿ. ದೊರಗೆ ಏನಿಟ್ರೂ ಬೆಳಿಗ್ಗೆ ತಂಕ ಇರ್ತದೇಂತ ನಂಬಿಕೆ ಇಲ್ಲ. ದನಾನ ಅಂಗಳದಾಗೆ ಕಟ್ತೀವಿ. ಎರಡು ಹೊತ್ತು ಕೂಳಿಗೆ ನಾನೂ ನನ್ನ ಮನೆ ಮಕ್ಳು ನಮ್ಮವ್ವ ಎಲ್ಲ ಹೊಲತ್ತಾವ ದನ ಕುರೀ ತಾವ ಸೌದೆ ಸೊಪ್ಪುಗೇಂತ ಕಾಡಿನ ತಾವ ದಿನ ಎಲ್ಲ ತಡಕ್ತೀವಿ. ಸಂಜೆ ಮನೆಗೆ ಬರ್ತಿವಿ. ಮೊನ್ನೆ ಶನಿವಾರನೂ ಹಂಗೇ ಹೋಗಿ ಬಂದ್ವಿ. ಇಲ್ಲೇ ಸೌದೆ ಸೊಪ್ಪು ಹುಲ್ಲು ಒಟ್ಟಿಕ್ಕಿದ್ವಿ. ಅದರೊಳಗೆ ಕಿರುಬೆರಳ ಗಾತ್ರದ ಒಂದು ಹಾವಿನ ಮರಿ ನಾವು ಕಾಣದ ಹಂಗೆ ಸೇರ್ಕೊಂಡು ಬುಟ್ಟೈತೆ. ಒಂದೂ ವರೆ ಗೇಣುದ್ದದ ಮಂಡಲದ ಹಾವು. ಕುರ್ಣೀಟು ವಿಷವು. ಅದು ಉಸಿರು ಸುಯ್ದರೂ ಸಾಕು ಕೊಳೀತದೆ ಸ್ವಾಮಿ. ಇನ್ನು ಕಚ್ಚಿದ್ರೆ ಬದು ಕ್ತಾರಾ? ಇದ್ರ ವಿಷ್ಯ ನಮಗೆ ಗೊತ್ತಿಲ್ಲ. ಸಂಜಾ ಆಗೆ ನಾವು ಉಂಡ್ಬಿ ಮಲಗಿದ್ವಿ. ಒಂದ ರಾಶೆ ಹಾಸಿ ರಾಗಿ. ನೀವು ಕಾಣಾ ಹಂಗೇ ನಾನು ಬಾವ.ನಮ್ಮಾ ವ ಇರೋದು ಇನೊಂದೇ ಸೀಮೆಯೆಣ್ಣೆ ಬುಡ್ಡಿ. ರಾತ್ರಿ ಆರಿಸೇ ಮಲೀಕೊಳ್ಳಾದು. ಬೆಳಿಗ್ಗೆ ಕಾದುಕುತ್ತಿ ಬಾರು ಜೀವ. ನೆಂಕ್ಟಿ ತಲೆ ಕೊಡ ಕಿಲ್ಲ ಬೆಳಿಗ್ಗೆ ತಂಕ ಗ್ಯಾನವಿಲ್ಲದಂಗೆ ನಿದ್ದೆ ಬತ್ತದೆ. ರಾತ್ರಿನಾಗೆ ಆ ಹಾವಿನ ಮರಿ ತೂರಾಡ್ತಾ ತೂರಾಡ್ತಾ ಹೋದ್ದು ನಮ್ಮವ್ವ. ಇಲ್ಲೇ ಮಲೀಕೋಳಾದು. ಅವಳ ತಾವ ಬಂದೈತೆ.



ಸಾಕಪ್ಪಾ ಕು... ಶೀಘ್ರಲಿಪಿಯಲ್ಲಿ ಎಷ್ಟು ಅರ್ಹತೆ ಯಿದೆಯೆಂದು ಗೊತ್ತಾಯ್ತು... ಸರ್ಟಿಫಿಕೇಟಿಲ್ಲಾ ಅಗತ್ಯವಿಲ್ಲ... ಬಿಡಿ...

ಎಂಥವಪ್ಪ ಬುಳಬುಳಾಂತದೇಂತ ನಮ್ಮವ್ವ ರಾತ್ರೆ ಎದ್ಲಂತೆ. ತಡಕಿ ಏನೂ ಕಾಣದೆ ತಿರುಗಿ ಮಲಗಿಬುಟ್ಲಂತೆ. ಆ ಮರಿ ಅಲ್ಲಿಂದ ಪಕ್ಕಕ್ಕೆ ಹೊಳ್ಳಿ ಹೊಳ್ಳಿ ನಮ್ಮ ಕಮಲಿ ತಾಕೆ ಹೋಗೈತೆ. ಅವ್ಳಿಗೂ ಬುಳಬುಳಾಂತೇನೋ. ನಿದ್ದೆಗಣ್ಣಾಗೆ ಕೈ ಹೆಂಗೆ ಕೊಸರಿದ್ಲೊ ಹೊಳ್ಳಿದ್ಲೊ ಏನು ಮಾಡಿದ್ಲೋ ಅವಳಿಗೇ ಗೊತ್ತಿಲ್ಲ. ಮರಿ ಅವಳ ಮೊಣಕೈ ಮುಟ್ಟಿಸೈತೆ. ಆ ಕ್ಷಣ ಅವ್ಳು ಕೈ ಜಾಡ್ಸಿ ಕಿರಿಚಿ ಕೊಂಡ್ಲಂತೆ. ನಮ್ಗೆ ಯಾರ್ಗೂ ಎಚ್ಚರಾನೇ ಇಲ್ಲ. ಇವಳ ಹೊಳ್ಳಾಟದಾಗೆ ಆ ಮರೀನೂ ಬೆದರಿರ ಬೈದು. ಅದು ತಿರ್ಗಿ ನಮ್ಮವ್ವಂತಾಕೆ ಬಂದೈತೆ. ಇದೇನಪ್ಪ ಬುಳಬುಳಾಂತದೇಂತ ನಮ್ಮವ್ವ ದುಪ್ಪಟ್ಟಿ ಸಮೇತ ಅದ್ನ ಇಡ್ದು ಕೈನಾಗೇ ಅದುಮಿ ಅಪ್ಪಚ್ಚಿ ಮಾಡಿ ಬಿಸಾಕಿದ್ಲಂತೆ ಬಿಸಾಕಿ ಪಕ್ಕದಾಗೆ ನಳ್ಳಾಡೋ ಮಗೀಗೆ ಇದ್ಯಾಕೆ ಹಿಂಗಾಡೀಯಾ ಮನೀಕೋ ಮರಿ ಅಂದ್ಲಂತೆ. ನಿದ್ದೆಗಣ್ಣು. ನಮ್ಮವ್ವನಿಗೂ ಏನು ಎಂತೋಂತ ಗೊತ್ತಾಗಿಲ್ಲ. ಮಗೀಗೆ ಹರಿಗಂದು ಮನೀ ಕೊಂಡ್ಳು. ಬೆಳಗಾಗ ಎಳ್ತಿವಿ ನಮ್ಮಗ ಏಳನೇ ಇಲ್ಲ. ಎಬ್ಬಿಸಾಕೆ ಹೋದ್ರೆ ಮಗ ಹೆಂಗೆ ಹೆಂಗೊ ಆಗ್ತದೆ. ಮೈ ಕೆಂಡ ಕಾರತದೆ. ಬಾಯಾಗ ನೊರೆ ವಸಡಿಂದ ರಕ್ತ ಸುರೀತದೆ. ಎಡಗೈ ಪೂರಾ ಊದ್ಕೊಗದೆ. ಮಾತೇ ಆಡಾಕಿಲ್ಲ. ಇದೆಂತ ಗಾಚಾರ ಬಂತಪ್ಪಾಂತ ನಾಕನೇ ಮೈಲಿಯಾಗೆ ಶಾಪು ಮಡಿಕೊಂಡಿರೋ ಡಾಕ್ಟರನ ಕರ ಕೊಂಡು ಬಂದೆ. ಅವ್ರು ಮಗಾ ನೋಡಿದ್ರು. ಚುಚ್ಚದ್ದೇ ಏನೂಂತ ಕೇಳಿದ್ರೆ ಹೇಳ್ದೆ ಈ ಔಸ್ತಿ ಕೊಡೀಂತ ಅಂದು ದುಡ್ಡು ತಕೊಂಡು ಹೊಂಟೋದ್ರು. ಡಾಕ್ಟ್ರ ಹ್ವಾದ ಮ್ಯಗೆ ನಮ್ಮವ್ವ ರಾತ್ರೆ ಹಿಂಗೆ ಹಿಂಗೆ ಆಯ್ತುಂತ ಜ್ಞಾಪಿಸ್ ಕೊಂಡ್ಳು. ಹುಡುಕಿದ್ರೆ ಇಲ್ಲೇ ಬಿದ್ದಿತ್ತು ಸ್ವಾಮಿ ಆ ಹಾವಿನ ಮರಿ. ತಕ್ಷಣ ಅನುಮಾನ ಆಗಿ ಮಗೀನ ಕೈ ನೋಡಿದ್ರೆ ಎರಡು ತಾವ ಹಲ್ಲೂರಿರೋ ಗುರ್ತು ಕಂಡ್ತು. ಹಿಂಗೆ ಅಂಗೇಂತ ತಿಳಿದ ಮ್ಯಾಗೆ ನನ್ನ ಜಂಗಬಲಾನೇ ಉಡುಗ್ಹೋಯ್ತು.

'ನಾಕೇ ತಿಂಗ್ಳ ಹಿಂದೆ ಮ್ಯಾಗಳ ಮನೆ ಸೋಮಣ್ಣನ ಹುಡುಗಿ ಹುಳ ಮುಟ್ಟುಸ್ವಾಮಿ. ಕೈಗೆ ಬಂದ ಹುಡುಗಿ. ಮನೆನೋರೆಲ್ಲ ಇದ್ರು. ಹುಳ ಮುಟ್ಟಿದ ಕ್ಷಣ ಆ ಹುಡುಗಿ ಕಿರುಚೊಂಡ್ಳು. ಹಾಡು ಹಗಲು ಏನೇನೋ ಮಾಡಿದ್ರು ಕಡೀಗೂ ಉಳಿಸಿಕೊಳ್ಳಾಕೆ ಆಗ್ಲಿಲ್ಲ. ನನ್ನ ಉಳಿಸ್ಕೊಳೀ ಉಳಿಸ್ಕೊಳೀ ಅಂತ ಕೂಕ್ಕೊಂಡೂ ಕೂಕ್ಕೊಂಡೂ ಎಲ್ಲಾರ ಕಣ್ಣ ಮುಂದೆ ಆ ಮಗ ಸತ್ಹೋಯ್ತು. ನಮ್ಮಗೀಗೆ ಹಂಗಾಗ ಬಾರದೂಂತ ಆ ಕ್ಷಣ ಬೈಸಿಕಲ್ನಾಗೆ ನಾನು ರಾಮೇನಹಳ್ಳಿಗೆ ಹೊಂಟೆ.'

ರಾಮೇನಹಳ್ಳಿ ? ಪಟ್ಟಣದ ಆಸ್ಪತ್ರೆಗೆ ಹೋಗದೆ ಇಲ್ಲಿಗೇಕೆ ಹೋದ? ವಿಚಾರಿಸಿದ್ದಕ್ಕೆ ಯಜಮಾನ ಹೇಳಿದ್ದ. ರಾಮೇನಹಳ್ಳೀಲಿ ರಾಮಪ್ಪ ಅಂತ ಒಬ್ಬ ಓಷ್ಟಮಯ್ಯ ಇದ್ದಾನೆ. ಹಾವು ಕಚ್ಚಿದ್ದಕ್ಕೆ ಅವನ ಮಂತ್ರ ಕುರ್ತೇಟು. ಸಾವಿರಾರು ದನ ನೂರಾರು ಜನ ಅವನ ಕೈಯಿಂದ ಉಳಿದು ಕೊಂದಿದ್ದಾರೆ. ಇವನ ತಾವ ಹೋಗದೆ ಪಟ್ಟಣದ ಆಸ್ಪತ್ರೇ ತಾಕೆ ಯಾಕೆ ಹೋಗಲಿ ಸ್ವಾಮಿ? ಅಲ್ಲಿ ನೀವು ಮಾಡೋದೇನು? ಅವತ್ತು ಬಂದು ಹೋದ್ನಲ್ಲ, ಅವ ಮಾಡಿದ್ದೇನು? ಹಂಗೇ ಚುಚ್ಚಿ ದುಡ್ಡ ಕಿತ್ತು ಕಡೇಗೆ ಕೈಅಲ್ಲಾಡಿಸೋದು ತಾನೆ?'

ನಾನು ಅವನ ಮುಖ ನೋಡಿದ್ದೆ. ಬಡವ ದುಡ್ಡಿಲ್ಲ. ಆಸ್ಪತ್ರೆಗೇಂತ ಹೊರಟ್ರೆ ನೂರು ತರ ಹದ ಖರ್ಚನ್ನ ಸಂಭಾಳಿಸಬೇಕು. ಹೋಗುಕ್ಕೆ ಇರುಕ್ಕೆ ಔಷಧಕ್ಕೆ ಕೊನೇಗೆ ಬರುಕ್ಕೆ ಖರ್ಚು, ಈ ರಾಮೇನಹಳ್ಳಿ ಓಷ್ಟಮಯ್ಯ ಪ್ರಾಯಶಃ ದುಡ್ಡು ಮುಟ್ಟಲಾರ. ಆದರೂ ಬದುಕು ಸಾವಿನ ಪ್ರಶ್ನೆ ಎದ್ದಾಗ ದುಡ್ಡು ಮುಖ್ಯವೇ? ನಾನು ಕೇಳಿದ್ದೆ.

'ಆಸ್ಪತ್ರೆಗೆ ಯಾಕೆ ಹೋಗ್ಲಿಲ್ಲ?'

ಸ್ವಲ್ಪವೂ ಅಳುಕಿಲ್ಲದ ಧ್ವನಿಯಲ್ಲಿ ಅವನು ಉತ್ತರಿಸಿದ್ದ.

'ನಮ್ಮ ರಾಮಪ್ಪನ ತಾವ ದಗಾ ಮೋಸಾ ಒಂದೂ ಇಲ್ಲಾ ಸ್ವಾಮಿ. ಇವತ್ತು ಬಾ ನಾಳೆ ಬಾ, ಇಷ್ಟು ತರಾ ಅಂತನ್ನೋದರ ಸೋಂಕಿಲ್ಲ ಸ್ವಾಮಿ. ಕೈಲಾದ್ರೆ ಆಯ್ತುಂತಾನೆ. ಜೀವ ಉಳಿಸ್ತಾನೆ. ಇಲ್ಲ. ಆಗಾಕಿಲ್ಲಾಂತ ಹೇಳಿ ಬುಡ್ತಾನೆ. ಹಾವು ವಿಷ ವಿಷಾರಿ–ಮಂತ್ರ ಮಂತ್ರಸಿದ್ಧಜನ ಗರುಡಮಚ್ಚೆ ವಿಷಾರಿಕಲೆ ಮೂಲಿಕೆಗಳು ತಲೆ ಕಲಸಿತು. ನಂಬಿಕೆ–ಅಪನಂಬಿಕೆಗಳ ಹೆಣಿಗೆಯಾಗಿ ಕಗ್ಗಂಟಾಗಿರುವ ಇವುಗಳ ಪ್ರತೀತಿ ಅನಾದಿಕಾಲ

ದಿಂದ ಇದೆ. ನಂಬುವವರು ನಂಬದವರಲ್ಲಿ
ಮನೋನಿಶ್ಚಯವಿಲ್ಲ, ಸರಳವಾಗಿ ನಂಬಿದವರಿಗೆ
ಮಂತ್ರಚಿಕಿತ್ಸೆ ಕುರ್ತೇಟು. ಹಾಗೆ ಚಿಕಿತ್ಸೆ ಪಡೆದು
ಬದುಕಿಕೊಂಡ ಸಾವಿರ ಉದಾಹರಣೆ ಇದೆ.
ಆಧುನಿಕ ಥಳಕಿನ ಚಿಕಿತ್ಸೆ ಪಡೆದೂ ಸಾಯುವವ
ರಿಲ್ಲವೆ? ಹಾಗೆ ಕೆಲವು ಸಲ ಮಂತ್ರಚಿಕಿತ್ಸೆ ನಿಷ್ಕ್ರಿ
ಯವಾಗಬಲ್ಲದು ಎಂದರೆ ನಂಬದವರು ಮಂತ್ರ
ಹಾಕಿಯೂ ಸತ್ತ, ಮಂತ್ರವಿದ್ಯೆಯ ಮಂತ್ರಗಾ
ರರ ವೈವಿಧ್ಯಗಳ ಉದಾಹರಣೆಗಳನ್ನು ಕೊಡುತ್ತಾ
ನಕ್ಕು ತಲೆಯಳ್ಳಾಡಿಸುತ್ತಾರೆ. ತಲೆಝುಂಕಿಸಿ
ಎಚ್ಚರಗೊಂಡೆ. ನಾನೀಗ ಸತ್ಯಶೋಧನೆಗೆ ಬಂದಿ
ದ್ದೇನೆ. ಯಾವ ಪೂರ್ವಗ್ರಹಪೀಡನೆಗೂ ಅವ
ಕಾಶ ಕೊಡದೆ ವಸ್ತುಸ್ಥಿತಿ ಸಂಗ್ರಹಿಸಬೇಕು.
ನಾನು ಕೇಳಿದ್ದೆ.

‘ಈತ ಯಾಕೆ ಸೋಮಣ್ಣನ ಮಗಳನ್ನು
ಉಳಿಸ್ಕೊಳ್ಳಿಲ್ಲ?’

‘ಅವತ್ತು ಅವ ಊರಾಗೆ ಇರ್ಲಿಲ್ಲ. ಊರಾಗೆ
ಇದ್ದಿದ್ರೂ ಈ ಹುಡುಗಿ ಬದುಕ್ಕೊತಾ ಇರ್ಲಿ
ಲ್ಲಾಂತ ಕಾಣುತ್ತೆ. ಯಾಕೆಂದ್ರೆ ಹಾವು ಕಡಿದ
ದ್ದಕ್ಕೂ ಸತ್ತಿದ್ದೂಕ್ಕ ಹತ್ತು ನಿಮಿಷ ಕೂಡ ಇಲ್ಲ
ಬುದ್ಧಿ. ರಾಮಪ್ಪ ಸತ್ತೋರ್ನ ಬದುಕಿಸಾಕಿಲ್ಲ.
ಕುಟುಕು ಜೀವಾನಾರ ಇದ್ರೆ ವಿಷ
ಈಚೆಗೆ ಹೊಂಡಿಸ್ತಾನೆ.’

‘ಈತನ್ನ ನೀವು ಕರಕೊಂಡು ಬಂದ್ರಾ?’

‘ಅವನ್ನ ಕರಕೊಂಡು ಬರಾ ಹೊತ್ಗೆ ಸಂಜೇನೇ
ಆಗಿತ್ತು. ಬಂದೋನೇ ಹುಡುಗಿ ನೋಡ್ದ,
ಹೆಂಗಿತ್ತೂಂತೀರ ಮಗು, ನೋಡಾಕಾಯ್ತಿರ
ಲಿಲ್ಲ. ಕಣ್ಣು ಆಗಲೇ ತೇಲ್ತಾ ಅವೆ. ಬಾಯಾಗೆ
ನೊರೆ ವಸಡಾಗೆ ರಕ್ತ. ಉಸಿರು ತಿದಿ ಬರ್ತಾ
ಐತೆ. ನಂಗೆ ಹೇಳ್ದ. ಕಡ್ಡಿಕಾದು ಮಂಡಲ
ನನ್ನ ಮಂತ್ರ ನಾಗರಕ್ಕೆ ಕುರ್ತೇಟು. ಅದರ
ಮ್ಯಾಗೆ ಹೊತ್ತು ಮುಣಗ್ತಾ ಬಂದೈತೆ. ಸಂಜೆ
ಹೊತ್ನಲ್ಲಿ ಮಂತ್ರದ ಶಕ್ತಿ ಕಡಿಮೆ. ಆದ್ರೂ
ಒಂದು ಕೈ ನೋಡಾನ. ಹಿಂಗಂದು ಮಂತ್ರಿಸಿ
ಕೈಗೆ ಔಸ್ತಿಕಟ್ಟ ಬೆಳಿಗ್ಗೆ ಬತ್ತೀನೀಂತ ಹ್ವಾದ.

ನಾನು ನೂರು ಪ್ರಶ್ನೆ ಕೇಳಿದ್ದೆ. ಯಾವ
ಮಂತ್ರ? ಎಲ್ಲಿ ಕೂತು ಯಾವ ಭಾಗಕ್ಕೆ ಎಷ್ಟು
ಹೊತ್ತು ಹಾಕಿದ್ದು, ಅದರ ಕೈಂಕರ್ಯವೇನು
ಅವನು ಕಟ್ಟಿದ್ದ ಔಷಧ ಯಾವ್ದು? ನನ್ನ
ಪ್ರಶ್ನೆಗಳಿಗೆ ತನಗೆ ತೋಚಿದಂತೆ ಅವನು
ಉತ್ತರಿಸಿದ.

‘ನೋಡಿಸ್ವಾಮಿ ಇಲ್ಲಿಗೆ ಬಂದು ಹಿಂಗೆ ಕೂತು
ಮಂತ್ರಹಾಕ್ದೆ. ಎಷ್ಟೊತ್ತೂತೀರ. ನಾನು ಉಂಡೇ
ಳೋ ಅಷ್ಟೊತ್ತು. ನೋವು ನೋವೂಂತ
ಬಡ್ಕೊತಿತ್ತಲ್ಲ ಮಗ–ಮಂತ್ರ ಹಾಕ್ತಾ ಹಾಕ್ತಾ
ಸಲೀಸಾಯ್ತು. ಮೊಣಕೈಗೆ ಔಸ್ತಿ ಕಟ್ಟುತ್ಲೇ
ಹಾಯಾಗಿ ನಿದ್ದೆ ಹೋತು. ನಾಳೆ ಅವ್ನೆ ಬರ್ತಾ
ನಲ್ಲ. ಅವನ ತಾವಾನೇ ಎಲ್ಲಾ ಕೇಳ್ಕಳಿ. ಮಾರ
ಣೆಗೆ ಹೊತ್ತಿಗೆ ಮುಂಚಲೇ ಬಂದಿದ್ದ. ಬಂದವ್ನೆ
ಮಗ ನೋಡಿ, ನಿನ್ನ ಮಗ ಉಳ್ಕೊತದೆ ಕಣಲೇ.
ಅಂತ ನಂಬ್ಕೆ ಕೊಟ್ಟು ತಿರ್ಗ ಮಂತ್ರ ಹಾಕಿ
ಔಸ್ತಿ ಕಟ್ಟಿ ಹ್ವಾದಾ. ಮಂತ್ರ ಹಾಕ್ತಾ ಹಾಕ್ತಾ
ನಮ್ಮಗ ತಿರ್ಗ ನಿದ್ದೆ ಹೋತು. ಇವತ್ತು ಬೆಳಿ
ಗ್ಗೇನೂ ಬಂದು ಮಂತ್ರ ಹಾಕಿ ಜಾಸ್ತಿ ಕಟ್ಟಿ
ನನ್ನ ಸಂಗಡ ಹೇಳ್ದ. ನೋಡೋ ಅಪ್ಪ ಊತ
ಕಡಿಮೆ ಆಗ್ಯದೆ. ಮೈಯಾಗಿರೋ ವಿಷಾನ ಔಸ್ತಿ
ಹೀರ್ತಾ ಹೀರ್ತಾ ಇನ್ನೂ ಊತ ಕಮ್ಮಿ ಆಗ್ತದೆ.
ನಾಳೆ ಸಂಜಪ್ಪಲ್ಲಿ ಊತ ಕೆಳಗಿಳೀತದೆ. ಮೊಣಕೈ
ಯಿಂದ ಮಣಿಕಟ್ಟಿಗೆ ಬಂದು ಕಡೇಕೆ ಬೆರಳಿಗೆ
ಇಳ್ದು ಹೊಂಟೋಗ್ತದೆ. ನಿನ್ನ ಮಗ್ನಿಗೆ ವ್ರಣ
ಆಗದ್ದಂಗೆ ನಾಳೆಯಿಂದ ಹೊಟ್ಟೆಗೂ ಔಸ್ತಿ
ಕೊಟ್ಟೊಯ್ತಿನಿ. ಹಿಂಗೆ ನಂಬ್ಕೆ ಕೊಟ್ಟು ಹ್ವಾದ.
ಈ ತೊಡೆಗಾತ್ರಕ್ಕಿತ್ತು ಸ್ವಾಮಿ ಊತ. ನೋವು
ರಂಪಾಟ ಎಷ್ಟಿತ್ತೂಂತ. ಈಗ ನೀವೇ ನೋಡಿ
ಸ್ವಾಮಿ ನಮ್ಮಗ ಮಿಸುಕಾಕಿಲ್ಲ. ನಮ್ಮ ಓಷ್ಟ
ಮಯ್ಯ ಹೇಳ್ದಂಗೆ ಊತ ಕಡಿಮೆ ಆಯ್ತಾ ಐತೆ.
ಆಕೋ ನೋಡಿ ಮೊಣಕೈಯಿಂದ ಕೆಳಾಕೆ ಇಳಿ
ಯಾಕೂ ಸುರು ಆಗೈತೆ.’

ನಾಳೆ ನಾನೂ ರಾಮೇನಹಳ್ಳಿಯ ಓಷ್ಟಮಯ್ಯ
ಬರುವ ಹೊತ್ತಿಗೆ ಹಾಜರಿದ್ದೆ. ಓದೇ ಪಾಂಡಿ
ತ್ಯವೇ, ಹೊಸಕಾಲದ ಓದು ಬೋಧಿಸುವ ವೈಖ
ರಿಗಳೇ ಪವಾಡವೆಂದು ಹೇಳಿಸಿಕೊಳ್ಳುವ ವಿದ್ಯೆ
ಯೊಂದರ ದೊರ್ದಂತ ತಾನೆಂಬ ದಾಷ್ಟೀರ
ಯಾವುದರ ಅತಿಯೂ ಕಾಣದೆ ತೀರ ಸಾಧಾರಣ
ಹಳ್ಳಿಗನೊಬ್ಬನಂತೆ ಕಾಣುತ್ತಿದ್ದ ರಾಮಪ್ಪನಿಗೆ
ವಯಸ್ಸೂ ಆಗಿರಲಿಲ್ಲ. ನನ್ನಂಥ ನೂರು ತಿಳಿ

ಗಿಡ [illegible] ಅವನು ಕಂಡಿರಬೇಕು. ತನ್ನ ವೇಷ ವಿದ್ಯೆ ಜೀವು ನಾನು ಪ್ರತಿನಿಧಿಸಬಹುದಾದ ಪಿನ್ನೆಲೆಗಳೆಲ್ಲವನ್ನೂ ತೀರ ಸಾಧಾರಣವೆಂಬಂತೆ ನೋಡಿ ತನ್ನ ಕೆಲಸವನ್ನು ಪ್ರಾರಂಭಿಸಿದ್ದ.

ಕಮಲಿಯನ್ನು ಪತ್ತಿರ ಕೂರಿಸಿಕೊಂಡು ಬಾಯಲ್ಲಿ ಎಂಥದೋ ಗುನುಗಿಕೊಳ್ಳುತ್ತಾ ಹಾವುಕಡಿದ ಮೊಣಕೈಯನ್ನು ಮೇಲಿಂದ ಕೆಳಕ್ಕೆ ಹಿಡಿದಿದ್ದ ಸೊಪ್ಪಿನಿಂದ ನಿವಾಳಿಸಿದ್ದ. ಕೇವಲ ಒಂದೆರಡು ನಿಮಿಷಗಳ ಕೈಂಕರ್ಯ. ಆದರೂ ಒಂದೆರಡು ನಿಮಿಷ! ಓಪ್ಪಮಯ್ಯನ ಕಾಯ ಮನಸ್ಸು ಅದೆಂಥ ಕಾರ್ಯತತ್ಪರತೆಯನ್ನು ತೋರಲು ಸಮರ್ಥವಾಗಿದ್ದವು! ಆತನಲ್ಲಿ ತನ್ನ ವಿದ್ಯೆಯ ಪ್ರಭಾವದ ಮೇಲೆ ಅದೆಂಥ ನಂಬಿಕೆ ಯಿತ್ತು! ಕಮಲಿ ತುಸು ಕೂಡ ಕೃತ್ರಿಮತೆಯನ್ನು ಅರಿಯದ ಬಾಲೆ, ಮೊದಲು ನನ್ನತ್ತ ಅವನತ್ತ ಭಯ ಶಂಕೆಗಳಿಂದ ನೋಡುತ್ತಿದ್ದವಳು ಕಡೆಗೆ ಅದೆಂಥ ತತ್ಪರತೆಯುಳ್ಳ ಓಪ್ಪಮಯ್ಯನ ಕಾರ್ಯವನ್ನು ನೋಡಬೇಕಾಗಿತ್ತು! ಮಂತ್ರ ಮನಸ್ಸು ದೃಷ್ಟಿ [illegible] ಏನನ್ನಾದರೂ ಸಾಧಿಸಬಲ್ಲ ವಾಗಿದ್ದರೆ ಅವುಗಳೆಲ್ಲವನ್ನೂ ಆ ಕ್ಷಣಗಳು ಖಂಡಿತ ಸಾಧಿಸಬಲ್ಲವಾಗಿದ್ದುವು.



ಹಿಂದುಳಿದವರನ್ನು ಮುಂದೆ ತರಬೇಕು ಅಂದ್ರಲಾ ಬುದ್ಧಿ. ಇವರು ಹಿಂದೆ ಕುಳಿತಿದ್ದರು...

ಮಂತ್ರಕೈಂಕರ್ಯ ಮುಗಿಸಿ ತಾನು ತಂದಿದ್ದ ತೊಗಟೆಯೊಂದನ್ನು ತೆಯ್ದು ಕಮಲಿಯ [illegible] ಕೈಗೆ ಲೇಪನಮಾಡಿ ಕಟ್ಟುಕಟ್ಟಿದ್ದ. ಯಜಮಾನನ ಬಳಿ ಬಂದು ಬೇರು ಕೊಟ್ಟು, 'ಇಷ್ಟಿಷ್ಟು ತೆಯ್ದು ಮೂರು ಹೊತ್ತು ಒಂದು ವಾರ ಹೊಟ್ಟೆಗೆ ಹಾಕಬೇಕು. ಇನ್ನು ನಾನು ಬರುವ ಅಗತ್ಯವಿಲ್ಲ' ಎಂದು ಹೇಳಿ ಒಂದು ತೊಟ್ಟು ನೀರೂ ಕುಡಿ ಯದೆ ಹೊರಗೆ ನಡೆದಿದ್ದ.

ನಾನು ರಾಮಪ್ಪನನ್ನು ಕೂರಿಸಿಕೊಂಡು ಕೇಳಿದ್ದೆ. 'ಈ ಮಂತ್ರವಿದ್ಯೆಯನ್ನು ಯಾರಿಂದ ಕಲಿತಿರಿ? ಇದರ ಬಗೆಗೆ ನಿಮಗೆ ನಂಬಿಕೆ ಇದೆಯೆ? ಇದರ ವಿವರ? ಆ ಸೊಪ್ಪು ಕೈಯಲ್ಲಿ ಹಿಡಿದಿ ದ್ದರಲ್ಲ, ಅದೇಕೆ? ಯಾವುದಾ ಸೊಪ್ಪು? ಬೇರೊಂದು ಕೊಟ್ಟರಲ್ಲ, ಅದರ ವಿವರ ಏನು ?

'ವಿಷಹಾರೀ ಮಂತ್ರವಿದ್ಯೆ ನನ್ನ ಮನೆತನದ್ದು. ತಾತನೋ ಮುತ್ತಾತನೋ ಯಾರಿಂದ ಎಲ್ಲಿ ಹೇಗೆ ಕಲಿತರೋ. ಸಾಯುವುದಕ್ಕೆ ಮುಂಚೆ ತಮ್ಮ ಕುಟುಂಬದಲ್ಲಿ ಸತ್ಪಾತ್ರರು ಯಾರು ಎಂಬುದನ್ನು ಕಂಡುಕೊಂಡು ಅವರಿಗೆ ಮಾತ್ರ ಉಪದೇಶ ಮಾಡ್ತಾರೆ. ಇನ್ನು ಮಂತ್ರ ಸಂಸ್ಕೃ ತವೋ ಕನ್ನಡವೋ; ಅದನ್ನ ಉಚ್ಚರಿಸುವ ರೀತಿಯೋ. ಅದರ ವಿವರದಲ್ಲಿ ಯಾವ ಉಪ ಯೋಗವೂ ಇಲ್ಲ. ಯಾಕೆಂದರೆ ವಿದ್ಯೆ ಇರೋದು ಬರೆಯೋ ಓದೋ ಅಕ್ಷರದಲ್ಲಲ್ಲ. ಓದೋ ರೀತಿಯಲ್ಲೂ ಅಲ್ಲ. ಮಂತ್ರಶಕ್ತಿ ನಮ್ಮ ಚೇತನಕ್ಕೆ ಅಂಟಬೇಕಾದರೆ ಭಗವಂತನ ಅನುಗ್ರಹ ಹಿರಿಕರ ಆಶೀರ್ವಾದ ನಾವು ಅದರಲ್ಲಿಟ್ಟಿರೋ ಶ್ರದ್ಧೆ ಎಲ್ಲ ಬೇಕು. ಇನ್ನು ಆ ಸೊಪ್ಪು ಆ ಬೇರು ಇಂಥಾದ್ದೇ ಆಗಬೇಕು ಅನ್ನೋ ಕಟ್ಟಿಲ್ಲ. ಹಿರಿ ಯೋರು ಹೇಳಿಕೊಟ್ಟಿರೋ ಹಾಗೆ ಬಂದಷ್ಟು ಬೇರುಗಳನ್ನು ಸಂಗ್ರಹ ಮಾಡಿಟ್ಟಿದೀನಿ. ಆ ಕ್ಷಣಕೆ ಯಾವುದು ಮನಸ್ಸಿಗೆ ತೋಚಿತೋ ಅದನ್ ಕೊಡ್ತಿನಿ.'

ಪಾರದ ದಿನವಲ್ಲಿ ಹಳ್ಳಿಯು ಕೆಲಸ ಪೂರೈಸಿತ್ತು. ಹೋದಷ್ಟು ದಿನ ಕಮಲಿಯನ್ನು ನೋಡುತ್ತಿದ್ದೆ. ಮೊಣಕೈಯ ಊತ ಮಣಿಕಟ್ಟಿಗೆ ನುತರ ಬೆರಳಿಗಿಳಿಯುತೊಡಗಿತ್ತು. ಹದಿನೈದು ದಿನ ಬಿಟ್ಟು ಹೋಗಿ ಕಂಡೆ. ಯಾವ ಊತ ಊನವೂ ಇರದೆ ಕಮಲಿ ಸ್ವಸ್ಥವಾಗಿದ್ದಳು.

ಸಂಗತಿಯನ್ನು ಸಹೋದ್ಯೋಗಿಗಳ ಜೊತೆ ಚರ್ಚಿಸಿ ವೈದ್ಯಕೀಯ ರಾಸಾಯನಿಕ ಶಾರೀರಿಕ ಮಾಧ್ಯಮಗಳಲ್ಲಿ ವಿಜ್ಞಾನದ ಹೆಸರಿನಲ್ಲಿ ತಮ್ಮಂಕೆಗೆ ನಿಲುಕದಷ್ಟು ಎತ್ತರದ ಪ್ರೌಢ ಭಾಷೆಯಲ್ಲಿ ತರ್ಕದ ತಕ್ಕಡಿ ತೂಗಿದ್ದರು.


ಏನು, ಸಂಗತಿ ನಡೆದದ್ದು ರಾತ್ರಿಯೇ? ಏಂದು? ಊರು ಗುರುತು ಕಂಡ ಮಾತ್ರಕ್ಕೆ ಕಚ್ಚಿದ್ದು ಹಾವೇ ಎಂದು ನಿರ್ಧರಿಸೋಣ ತಪ್ಪಲ್ಲವೆ? ದಂಷ್ಟ್ರ ಚಿಹ್ನಗಳನ್ನು ಕಂಡವ ಹಳ್ಳಿಯೊನೊಬ್ಬ. ಇವನನ್ನ ನಂಬೋದು ಹ್ಯಗೆ? ಮಸಲ ಹಾವೇ ಕಚ್ಚಿತೂಂತ ಇಟ್ಟುಕೊಳ್ಳೋಣ, ಯಾವಾಗಲೂ ಹಾವಿನ ವಿಷಚೀಲ ಭರ್ತಿಯಾಗಿರುವದಿಲ್ಲ; ಭರ್ತಿಯಾಗಿದ್ದರೂ ಪೂರ್ತಿ ವಿಷವನ್ನ ಪಿಚಕರಿಸದೆ ಇರುವ ಸಂದರ್ಭವೂ ಉಂಟೆಂಬುದನ್ನು ನೆನಪಿನಲ್ಲಿಟ್ಟುಕೋಬೇಕು. ಮೇಲಾಗಿ ಕಚ್ಚಿರೋದು ಮಂಡಲದ ಹಾವಿನ ಮರಿ. ನಾಗರಹಾವಿನ ವಿಷದ ತೀಕ್ಷ್ಣತೆ ಇದಕ್ಕಿಲ್ಲವಾದರೂ ಈ ಹಾವು ಕಚ್ಚಿ ಸತ್ತೋರು ಮೈಕೈ ಊನವಾಗಿರೋರು ಇದಾರೆನ್ನೋದು ದಿಟ. ಇದರ ಮೇಲೆ ಈ ಓಷ್ಪಮಯ್ಯ ಪರಂಪರಾನುಗತವಾಗಿ ಗುಟ್ಟಾಗಿ ಇಳಿದು ಬಂದಿರೋ ವಿದ್ಯೆಯ ಪ್ರವೀಣ. ಇವನ ಮಂತ್ರ ತಂತ್ರ ಇವ ಲೇಪಿಸುವ ಔಷಧಿಗಳು ರಹಸ್ಯದಲ್ಲಿ ಅಡಗಿವೆ. ತಾನೇ ಹೇಳಿಕೊಂಡಿರೋ ಹಾಗೆ ಇವ ನಾಗಮಂತ್ರ ಪ್ರವೀಣ. ಸಂಜೆ ಹೊತ್ತು ಮಂತ್ರ ಹಿಡಿಯೋಲ್ಲ. ಇಂಥೋನ ವೈದ್ಯ, ನಂಬೋದು ಹ್ಯಾಗೆ ? ತಾನು ಆಡಿದ್ದೆ ಮಂತ್ರ ಕಟ್ಟಿದ್ದೇ ಔಷಧಿ ಅಂತ ಅನ್ನೋ ಇವನ ವೈಖರಿ ತುಂಬಾ ವಿಚಿತ್ರದ್ದಲ್ಲವೆ? ಒಂದು ಖಾಯಿಲೆಗೆ ತತ್ಸಂಬಂಧ ಔಷಧ ಕೊಟ್ಟು ಕಾಣಿಸೋದು ವೈದ್ಯ. ಈ ವೈದ್ಯ ಯಾವಾಗ ಕರುಡಾಗದೆ ವೈಜ್ಞಾನಿಕವಾಗುತ್ತೆ ಗೊತ್ತೆ? ಗುಟ್ಟು ಬಿಟ್ಟಾಗ. ಸಾವಿರಾರು ಸೂಟ್ಟೆಯಲ್ಲಿ ಅವವೇ ಖಾಯಿಲೆಗಳನ್ನು ಅವವೇ ಔಷಧ ಕೊಟ್ಟು ಗುಣಪಡಿಸಿದಾಗ. ತತ್ಸಂಬಂಧವಾದ ಪರಿಸರದಲ್ಲಿ ಪುನರ್ಘಟಿತವಾಗೋದು ಯಾವುದಿದೆ ಅದನ್ನ ನಂಬೌದು, ಈ ಯದ್ವಾ ತದ್ವಾ ಅಲ್ಲ. ಈ ಓಷ ಮಯ್ಯಂದು ಅಸಂಬದ್ಧವಾದದ್ದು. ಬದುಕಿದರೆ ತನ್ನಿಂದ. ಸತ್ತರೆ ದೇವರಿಂದ ಅಂತನ್ನೋದನ್ನ ಸಿದ್ಧಾಂತ ಕರಿಯೋದೂ ಮೌಢ್ಯವೇ.

ಪ್ರತಿಪಕ್ಷ ಟೇಬಲ್ ಗುದ್ದಿದ್ದಿತು. ಈ ಓಷ್ಪ ಮಯ್ಯ ಅವನ ಹಿನ್ನಲೆಗಳನ್ನು ಅವೈಜ್ಞಾನಿಕ, ಅಪ್ರಬುದ್ಧ ಎಂದೆಲ್ಲ ಕರೆಯೋದು ತಪ್ಪು. ಯಾಕಂದರೆ ಅನಾದಿಕಾಲದಿಂದ ವಿಷಹಾರೀ ವಿದ್ಯೆ ಪ್ರಸಿದ್ಧವಾಗಿದೆ. ತನ್ನ ಕಾಲ ಮೇಲೆ ನಿಂತುಕೊಳ್ಳತಕ್ಕಂಥ ಸತ್ಯ ಮಾತ್ರ ಕಾಲರಾಯನ ಪರೀಕ್ಷೆಯಲ್ಲಿ ಗೆಲ್ಲುತ್ತೆ. ನಿಲ್ಲುತ್ತೆ. ಹೊರತು ಅಪನಂಬಿಕೆ ಮೌಢ್ಯ ಅಸತ್ಯ ಇವುಗಳು ಜೊಳ್ಳು ಹಾರಿಹೋದ ಹಾಗೆ ಹಾರಿಹೋಗುತ್ತೆ. ಮನುಷ್ಯರಿಗೆ ಮಾತ್ರವಲ್ಲ. ದನಕ್ಕೂ; ಬರೀ ಹಾವು ಕಚ್ಚಿದ್ದಕ್ಕೆ ಅಲ್ಲ ಕಾಮಾಲೆಗೆ ಉಳುಕಿಗೆ ಅನೇಕ ಆದಿವ್ಯಾಧಿಗಳಿಗೆ ಮಂತ್ರ ಹಾಕೋ ಜನ ನಮ್ಮಲ್ಲಿದ್ದಾರೆ. ಇದರ ಮೂಲ ಏನು ಎಂತೂಂತ ಕಂಡುಕೊಳ್ಳದೆ ಅಪನಂಬಿಕೆ ಪಡೋದು ಶುದ್ಧ ಅಪ್ರಬುದ್ಧ. ಇನ್ನು ನಾಟಿ ಔಷಧಿ ಕ್ವಿನೈನ್ ಬಂದದ್ದು ಕೊಕೈನ್ ಬಂದದ್ದು ಡಿಜಿಟಾಲಿಸ್ ಬಂದದ್ದು ಆದಿವಾಸಿ ನಾಟಿ ಔಷಧಿಗಳ ಮೂಲದಿಂದಲೇ. ಆಧುನಿಕ ವೈದ್ಯ ಮಾಡಿರೋದೆಲ್ಲ ಪರಿಷ್ಕಾರವಾಗಿ ಮಾಡಿದೆ. ಇಂಥ ಖಾಯಿಲೆಗೆ ಇಂಥದೇ ಕುರ್ತೇಟು ಔಷಧ ಇದೆ; ಎಲ್ಲ ಪರಿಸರಗಳಲ್ಲೂ ಆ ಖಾಯಿಲೇನೆ ಈ ಔಷಧ ಗುಣಪಡಿಸುತ್ತೆಂತ ಯಾರೂ ತೊಡೆ ತಟ್ಟಿಕೊಂಡು ಹೇಳೋ ಹಾಗಿಲ್ಲ. ಯಾಕಂತೀರ? ಬಹು ಹೆಚ್ಚು ಬಳಕೆ ಆಗುತ್ತಿರೋ ಆಸ್ಪಿರಿನ್ನಿನ ಗುಣ–ಅವಗುಣ ಗಳನ್ನು ಆಖೈರಾಗಿ ಹೇಳೋ ಭೂಪ ಇನ್ನೂ ಹುಟ್ಟಿಕೊಂಡಿಲ್ಲ. ಈ ಹಳ್ಳಿ ವೈದ್ಯ ತನ್ನಳವಿನಲ್ಲಿರೋ ವಿದ್ಯೆ ಉಪಯೋಗಿಸಿ ಜೀವ ಉಳಿಸ್ತಾನಲ್ಲ ಇದು ಆಧುನಿಕ ವೈದ್ಯ. ಜೀವ ಉಳಿಸುತ್ತಲ್ಲ ಅದಕ್ಕೆ ಹೆಚ್ಚೇ ಕಡಿಮೆಯೇ ಹ್ಯಾಗಾಗುತ್ತೆ? ಇದಕ್ಕೂ ಮಿಗಿಲಾಗಿ ಇನ್ನೂ ಒಂದು ವಿಷಯ ಇದೆ. ವ್ಯಕ್ತಿಗತವಾದ ವಿಚಿತ್ರಗಳ ಆಗರ ಈ ದೇಶ.

ಕೈಗುಣ ನಂಬಿಕೆ ಸ್ವಸನ್ಮೋಹಿ ಏನೆಲ್ಲ ಆದಿವ್ಯಾಧಿಗಳನ್ನು ತಳ್ಳಿಹಾಕಬಲ್ಲದು! ಇನ್ನು ಇವಕ್ಕೂ ಗಂಭೀರವಾದ ಸ್ತರದಲ್ಲಿ ಮಂತ್ರಶಕ್ತಿ ಹುದುಗಿದೆ. ಇದರ ಆಳ ಅಗಲಗಳ ಬಗೆಗೆ ತೀರ ಅನನುಭವಿಗಳಾದ ನಾವು ಚರ್ಚಿಸೋದೂ ಹ್ಯಾಗೆ?

ಹಾಗಂದ ಮಾತ್ರಕ್ಕೆ ವಿಜ್ಞಾನ ಅಪ್ಪನ ವಿಚಾರಕ್ಕೆ ನೆಲೆಯೇ ಇಲ್ಲವೇ ಅಂತಲ್ಲ. ವಿಚಾರಕ್ಕೆ ಕಾಲದೇವ ರೂಪ ಇತ್ಯಾದಿ ವಸ್ತುನಿಷ್ಠ ನಿಯಮಗಳ ಅಗತ್ಯ ಇದೆ. ಈ ಬಂಧಗಳಿಲ್ಲಿಲ್ಲದೆ ಸ್ವತಂತ್ರವಾಗಿರೋ ವಿಷಯಗಳ ವಿಚಾರ ವಿಚಾರಿಸೋದಾದರೂ ಹ್ಯಾಗೆ? ತಿಳಿವು ಹೆಚ್ಚಾದ ಹಾಗೆ ಮನೋಭಾವ ಬದಲಿಸುತ್ತೆ; ನಡೆಯೋ ಜಾಡೂ ಬದಲಾಯಿಸುತ್ತೆ. ರಾತ್ರಿ ಹಗಲು ಹ್ಯಾಗೆ ಇದೆಯೋ ಸ್ಪಷ್ಟ ಅಸ್ಪಷ್ಟ ನಂಬಿಕೆ ಅಪನಂಬಿಕೆ ಅನ್ನೋದು ಎಂದೂ ಇವೆ. ಇವುಗಳೆಲ್ಲವೂ ಇದ್ದು ತನ್ನಂತೆ ಇರುವುದೇ ಈ ಲೋಕ ನಮ್ಮಲ್ಲಿ ಅನೇಕರು ಓಷ್ಟಮಯ್ಯನ ವಿದ್ಯೆಯನ್ನು ನಂಬದೇ ಇರುವ ಹೊತ್ತಿನಲ್ಲೇ ನೂರು ಬೇರೆ ಜನ ಅವನನ್ನು ನಂಬಿ ಉಪಯೋಗ ಪಡೆದಿರುತ್ತಾರೆ. ನಿಗಿನಿಗಿ ಹೊಳೆಯುವ ಆಸ್ಪತ್ರೆಯಲ್ಲೂ ಡಾಕ್ಟರು ಕೈಬಿಟ್ಟಾಗ ಕತ್ತೆತ್ತಿ ಕಾಣದವನನ್ನು ಮೊರೆ ಹೋಗೋದು ಸ್ವಾಭಾವಿಕ. ಈ ಶಕ್ತಿಯ ಇರುವು ಯೋಗ್ಯತೆ ಇವುಗಳ ಬಗ್ಗೆ ಎಷ್ಟು ಬೇಕಾದರೂ ಚರ್ಚಿಸಬಹುದು. ಆದರೆ ಮೊರೆ ಹೋಗೋದಂತೂ ನಿಜ.

ಪಕ್ಷ–ಪ್ರತಿ ಪಕ್ಷ ಅವವೇ ಪ್ರಶ್ನೋತ್ತರಗಳು ಎದ್ದು ಬಿದ್ದು ಹೋದವು. ಆದರೂ ಶೇಷ ಉಳಿಯಿತು. ಅನಿತರ ಸಾಧಾರಣ ವಿಷಯಗಳ ಬಗೆಗೆ ಸಮಾಧಾನ ಹೇಳಲಾಗುವುದೂ ಉಂಟೆ? ✡



ಪ್ರೇಮ: ವಿಶ್ವಾಸದಲ್ಲಿ ಜನ್ಮತಾಳುತ್ತದೆ, ಆಶೆಯಲ್ಲಿ ಬದುಕುತ್ತದೆ ಮತ್ತು ದಾನದಿಂದ ಸತ್ತು ಹೋಗುತ್ತದೆ.

—ಮೆನೊತ್ತಿ

ದೇಶಭಕ್ತಿ ಮತ್ತು ಮಾನವ ಪ್ರೇಮ ಎರಡರಲ್ಲೂ ನಾನು ಯಾವ ಅಂತರವನ್ನೂ ಕಂಡಿಲ್ಲ.

—ಮಹಾತ್ಮಾ ಗಾಂಧಿ

ಮನುಷ್ಯ ಪ್ರೇಮದಿಂದ ಕಾಣದ ಹೊರತೂ ಯಾವ ವಸ್ತು-ಸ್ಥಿತಿಯನ್ನೂ ಅರಿತುಕೊಳ್ಳಲಾರ.

—ಗಯಟೆ

ಎಲ್ಲಾ ಪಾಪಗಳ ಮೂಲ ಭಗ್ನ ಅಥವಾ ವಿಫಲ ಪ್ರೇಮ.

—ಫ್ರಾಂಜ್ ವೆರ್ಫೆಲ್

ನಿಜವಾದ ಪ್ರೇಮ ಕೇವಲ ಸ್ವತಂತ್ರ ಸಮಾಜದಲ್ಲಿ ಮಾತ್ರ ಸಾಧ್ಯ, ಮತ್ತು ನಿಜವಾದ ಸ್ವತಂತ್ರ್ಯ ಪ್ರೇಮವು ವಾಸ್ತವಿಕತೆಯಾದಾಗ ಮಾತ್ರ ಸಾಧ್ಯವಾಗುತ್ತದೆ.

—ಎಡ್ವರ್ಡ್ ಕಾರ್ಪೆಂಟರ್

ಕಾಮ-ಪ್ರೇಮಗಳೆರಡೂ ಆದಿಕಾಲದಿಂದಲೂ ಜತೆಗೂಡಿ ಬಂದಿವೆ. ಇವುಗಳಿಲ್ಲದೆ ಯಾವ ಹುಚ್ಚುತನವೂ ಇಲ್ಲ.

—ಥಿಯೋಡೋರ್ ರ್‍ಯಾಕ್



ಈಗಿನ ದಿನಗಳಲ್ಲಿ ಇನ್ನೂ ಫಿಲ್ಟರ್ ಕಾಫಿಯನ್ನೇ ಕೊಡುತ್ತಿರುವುದು ನನಗೆ ಬಹಳ ಸಂತೋಷ.
ನಿಮಗೆ ಇಷ್ಟವಾದುದಕ್ಕೆ ನಾನು ಸಂತೋಷ ಪಡುತ್ತೇನೆ...ಆದರೆ ಇದು ರಿಕರಿ ಇನ್‌ಸ್ಟೆಂಟ್
ರಿಕರಿ®
ಇನ್‌ಸ್ಟೆಂಟ್
RICORE
STORAGE JAR OFFER
RICORE
STRENGTH
A COFFEE CHICORY BLEND
ಬಹಳಷ್ಟು ಫಿಲ್ಟರ್ ಕಾಫಿ ಯಷ್ಟೇ ರುಚಿ ಯಾಗಿರುವುದರಿಂದ ವ್ಯತ್ಯಾಸವನ್ನು ಹೇಳುವುದು ಬಹಳ ಕಷ್ಟ
ತಯಾರಕರು ನೆಸ್‌ಕಾಫೆ—ಜಗತ್ತಿನಾದ್ಯಂತ ಕಾಫಿ ತಯಾರಿಕೆಯಲ್ಲಿ ನುರಿತವರು.
SAA/FSL/R/1162

ಚುನಾವಣೆಗಳು - ೧೯೮೦
ಒಂದು ವಿಶ್ಲೇಷಣೆ

— ಪ್ರಾ. ವೆಂ. ಆಚಾರ್ಯ







(ಕೃಪೆ: ಟೈಮ್ಸ್ ಆಫ್ ಇಂಡಿಯಾ ಮತ್ತು ಹಿಂದೂಸ್ತಾನ ಟೈಮ್ಸ್)

ವ್ಯಂಗ್ಯಚಿತ್ರಕಾರ ಆರ್. ಕೆ. ಲಕ್ಷ್ಮಣ ಮತ್ತು ವಿಜಯನ್
೧೯೮೦ರ ಇಂದಿರಾ ಬಿರುಗಾಳಿಯನ್ನಿಂತು ಕಂಡಿದ್ದಾರೆ

ಲೋಕಸಭಾ ಚುನಾವಣೆಗಳ ಫಲಿತಾಂಶ ಗಳ ಬಗ್ಗೆ ಭಾಷ್ಯಗಳು ಧಾರಾಳವಾಗಿ ಬರುತ್ತಿವೆ. ಫಲಿತಾಂಶಗಳಿಂದ ಗೆದ್ದವರನ್ನೊಳಗೊಂಡು ಎಲ್ಲ ಪಂಡಿತರಿಗೂ ಆಶ್ಚರ್ಯವಾಗಿದೆಯೆಂಬುದೊಂದು ನಿಸ್ಸಂದಿಗ್ಧ. ಸ್ವತಃ ಇಂದಿರಾ ಗಾಂಧಿಯವರೇ ಎರಡು ಕಡೆ ಚುನಾವಣೆಗೆ ನಿಂತದ್ದು ಅವರು ಈ ತರಹದ "ಪ್ರಚಂಡ" ವಿಜಯವನ್ನು ನಿರೀಕ್ಷಿಸಿರಲಿಲ್ಲವೆಂದು ತೋರಿಸುತ್ತದೆ. ಇತರ ಪಕ್ಷಗಳು ಇಂಥ ಪ್ರಚಂಡ ಸೋಲನ್ನು ನಿರೀಕ್ಷಿಸಿರಲಿಲ್ಲವೆಂಬುದೂ ಅಷ್ಟೇ ಸತ್ಯ. ಹೆಚ್ಚು ಕಡಿಮೆ ಎಲ್ಲ ಪಕ್ಷಗಳೂ ಯಾರಿಗೂ ಬಹುಮತ ಸಿಗಲಿಕ್ಕಿಲ್ಲವೆಂದು ಬಹಿರಂಗವಾಗಿಯಲ್ಲದಿದ್ದರೂ ಅಂತರಂಗವಾಗಿ ಹೇಳುತ್ತಿದ್ದವು.

ಅನಿರೀಕ್ಷಿತ ವಿಜಯವನ್ನು ಪಡೆದ ಮೇಲೆ ತಾವು ಅದನ್ನು ಎಂದೋ ನಿರೀಕ್ಷಿಸಿದ್ದಂತೆ ಇಂದಿರಾ ಗಾಂಧಿಯವರು ಕಾರ್ಯಪ್ರವೃತ್ತರಾಗಿದ್ದಾರೆ. ೧೯೭೭ ರಲ್ಲಿ ಇಷ್ಟೇ ಅನಿರೀಕ್ಷತ ವಿಜಯವನ್ನು ಸಾಧಿಸಿದ ಜನತಾ ಪಕ್ಷದವರು ತೋರಿಸಿದ ಗಲಿಬಿಲಿಯನ್ನು ಶ್ರೀಮತಿ ಗಾಂಧಿಯವರು ತೋರಿಸಲಿಲ್ಲ. ಅದರಲ್ಲಿ ಏನೂ ವಿಶೇಷವಿಲ್ಲ. ಅವರ ಕಾಂಗ್ರೆಸ್ (ಐ) ಪಕ್ಷ (ಕಾಂಗೈ) ಹಿಂದೆಂದಿಗಿಂತಲೂ ಇಂದು ಸಂಪೂರ್ಣವಾಗಿ ಅವರ ಸ್ವಂತ ಪಕ್ಷವಾಗಿದೆ. ೧೯೭೭ರ ಸೋಲಿನ ನಂತರವೂ ಅವರು ಪಕ್ಷವನ್ನು ಎರಡು ಸಲ ಒಡೆದು ತಾವು ತೆಗೆದುಕೊಂಡ ಹೋಳನ್ನು ಸಂಪೂರ್ಣ ತಮ್ಮ ಅಂಕೆಯಲ್ಲಿ ಇರುವ ಪಕ್ಷವಾಗಿ ಮಾಡಿಕೊಂಡಿದ್ದಾರೆ. ತಮ್ಮ ಅತ್ಯಂತ ಅವಘಡದ ಕ್ಷಣದಲ್ಲಿ ಕೂಡ ಅವರು ಪ್ರಭುತ್ವೇಚ್ಛೆ(will to power) ಯಿಂದ ವಿಚಲಿತರಾಗಲಿಲ್ಲ.

ಅದೃಷ್ಟದ ಕೈವಾಡ

ಎಣಿಸದೆ ಇದ್ದದ್ದು ಘಟಿಸಿದ ಮೇಲೆ ಪ್ರತಿಯೊಬ್ಬರೂ ಚುನಾವಣಾ ಫಲಿತಾಂಶಕ್ಕೆ ತಂತಮ್ಮ ಮೂಗಿನ ನೇರಕ್ಕೆ ಭಾಷ್ಯ ಮಾಡುತ್ತಿದ್ದಾರೆ. ಗೆದ್ದವರು, ಎಂದಿನಂತೆ, ಈ ಸಲ ಕೂಡ ಜನ ಎಚ್ಚೆತ್ತಿದ್ದಾರೆ ಎನ್ನುತ್ತಿದ್ದಾರೆ, ಬಿದ್ದವರು ಎಂದಿನಂತೆ ಜನತೆಯನ್ನು ತಪ್ಪು ದಾರಿ ಹಿಡಿಸಲಾಯಿತು—ಅಂದರೆ ಪರ್ಯಾಯವಾಗಿ ಜನಕ್ಕೆ ಬುದ್ಧಿಯಿಲ್ಲ—ಎನ್ನುತ್ತಿದ್ದಾರೆ. ೧೯೭೭ರಲ್ಲಿ ಹಾಗೆ ಹೇಳುತ್ತಿದ್ದವರು ಈಗ ಹೀಗೆ, ಆಗ ಹೀಗೆ ಹೇಳುತ್ತಿದ್ದವರು ಈಗ ಹಾಗೆ ಹೇಳಬೇಕಾಗಿದೆ ಎನ್ನುವುದಷ್ಟೇ ಅಂತರ. ಇದು ಪಕ್ಷಾಂತರಿಗಳಿಗೆ ಜನತೆ ಕಲಿಸಿದ ಪಾಠ, ಜನತಾ ದುರಾಡಳಿತದ ವಿರುದ್ಧ ಜನಮತದ ಪ್ರದರ್ಶನ, ಇಂದಿರಾ—ಅರ್ಥಾತ್ ನೆಹರೂ ಮನೆತನದಲ್ಲಿ ಜನರ ಏಕನಿಷ್ಠೆಯ ಪ್ರಕಟನೆ ಮತ್ತು ಅವರ ಕುಟುಂಬದವರ ಮೇಲೆ ಜನತಾ ಸರಕಾರ ಕೈಕೊಂಡ ಕ್ರಮಗಳೆಲ್ಲ ಸುಳ್ಳು ಎಂದು ಜನರಿತ್ತ ತೀರ್ಪು, ಇತ್ಯಾದಿ ಅರ್ಥಗಳನ್ನು ಈ ಫಲಿತಾಂಶಗಳಿಂದ ಹಿಂಡುವವರಿದ್ದಾರೆ.

ಇಡೀ ಸನ್ನಿವೇಶದ ಕೇಂದ್ರ ಸತ್ಯವೆಂದರೆ ಅದೃಷ್ಟದ ಕೈವಾಡ. ಈ ಸಂಧಿಯಲ್ಲಿ ಚುನಾವಣೆ ಯಾರಿಗೂ ಬೇಕಾಗಿರಲಿಲ್ಲ. ಕಾಂಗ್ರೆಸ್ಸಿನ ವೈ. ಬಿ. ಚವ್ಹಾಣರು ವಿರೋಧಿ ಪಕ್ಷದ ನೈಮಿತ್ತಿಕ ಆಚಾರ ಪದ್ಧತಿಯಂತೆ ಒಂದು ಅವಿಶ್ವಾಸ ನಿರ್ಣಯ ತಂದರು; ಅದು ಪಾಸಾದೀತೆಂಬ ನಿರೀಕ್ಷೆಯಿಂದ ಅಥವಾ ಆಗಬೇಕೆಂಬುದಕ್ಕಾಗಿ ಅಲ್ಲ. ಅದೇ ವೇಳೆಗೆ ರಾಜನಾರಾಯಣರ ಹುಚ್ಚು ಕುದುರೆಯೇರಿದ ಚರಣಸಿಂಗರು ಮುರಾರಜಿಯವರನ್ನು ತಳ್ಳಿ ತಾವು ಪ್ರಧಾನಿಯಾಗುವ ಹಂಬಲದಿಂದ ಆಳುವ ಪಕ್ಷವನ್ನು ದೂಡತೊಡಗಿದರು. ದೇಸಾಯಿಯವರು ಬಗ್ಗದ್ದರಿಂದ ಹುಚ್ಚು ಕುದುರೆ ಪಕ್ಷದ ಬೇಲಿ ಹಾರಿತು. ತಮಗೆ ಬಹುತವಿಲ್ಲವೆಂದು ಕಂಡುಕೊಂಡ ದೇಸಾಯರು ಈ ಗೊತ್ತುವಳಿ ಮತಕ್ಕೆ ಬೀಳುವ ಮುನ್ನವೇ ರಾಜೀನಾಮೆಯಿತ್ತರು. ಅವಿಶ್ವಾಸ ತಂದವರಿಗೆ ಸರಕಾರ ರಚಿಸುವ ತಾಕತ್ತು ಇಲ್ಲವೆಂದಾದ ಮೇಲೆ, ಬಹಳ ದಿನಗಳಿಂದ ತಾವು ರಬ್ಬರ್ ಸ್ಟ್ಯಾಂಪ್ ರಾಷ್ಟ್ರಪತಿಯಾಗಿರುವುದಿಲ್ಲವೆಂದು ಹೇಳುತ್ತಿದ್ದ ಸಂಜೀವರೆಡ್ಡಿಯವರು ತಾವು ರಬ್ಬರ್ ಸ್ಟ್ಯಾಂಪ್ ಅಲ್ಲವೆಂದು ನಿಜವಾಗಿ ತೋರಿಸುವ ಹವ್ಯಾಸದಲ್ಲಿ ಕೆಲ ಸೂತ್ರಗಳನ್ನು ಅಲ್ಲಾಡಿಸಿ ಚರಣಸಿಂಗರನ್ನು ಪಟ್ಟಕ್ಕೆ ತಂದರು. ರಾಜನಾರಾಯಣರೂ ಕಾಂಗೈಯೂ ಪರಸ್ಪರ ಕೊರಳು ಕೊಯ್ಯುವ ಆಟವಾಡಿದ್ದರಲ್ಲಿ ಕಾಂಗೈಯೇ ಗೆದ್ದುದರಿಂದ ಚರಣಸಿಂಗರು ಲೋಕಸಭೆಯನ್ನೆದುರಿಸಲಾರದೆ, ಸೋಲೊಪ್ಪಿದರು.

ಹೀಗೆ ೧೯೭೭ರಲ್ಲಿ ಮಹೋತ್ಸಾಹದಿಂದ ತಲೆಯೆತ್ತಿದ್ದ ಜನತಾ ಪಕ್ಷ ೧೯೭೯ರಲ್ಲಿ ಒಡೆದು ಗ

ಬಿಡುತ್ತಿದ್ದರೆ ಕಾಂಗ್ರೆ ಪಕ್ಷ ಅದಕ್ಕಿಂತ ಸುಸ್ಥಿತಿ ಯಲ್ಲಿರಲಿಲ್ಲ. ೧೯೭೭ರ ಸೋಲಿನಿಂದ ಇಂದಿರಾ ನಿರ್ವಿಣ್ಣರಾಗಿದ್ದಾಗ ಅವರ ಬದಿ ನಿಂತು ಕಾಂಗ್ರೆ ಯನ್ನು ಕಟ್ಟಲು ನೆರವಾದ ದೇವರಾಜ ಅರಸರು ಇಂದಿರಾ ಮರ್ಜಿ ಸರಿಬೀಳದೆ ಅವರಿಂದ ಬೇರ್ಪ ಟ್ಟದ್ದರಿಂದ ಕಾಂಗ್ರೆಯೂ ಗೊಂದಲದಲ್ಲಿತ್ತು. ದೇವ ರಾಜ ಅರಸರು ಬೇರೆ ಒಲೆ ಹೂಡಲು ನಿರ್ಧ ರಿಸಿದಾಗ, ಅಥವಾ ಇಂದಿರಾ ಗಾಂಧಿ ಅವರನ್ನು ಹೊರತಳ್ಳಲು ನಿರ್ಧರಿಸಿದಾಗ ಇಬ್ಬರೂ ಇನ್ನೊಂ– ದು ಚುನಾವಣೆ ಇಷ್ಟು ಬೇಗ ಬಂದೀತೆಂದು ತರ್ಕಿಸಿದವರಲ್ಲ. ಚುನಾವಣೆ ಇನ್ನು ಎರಡು– ಮೂರು ವರ್ಷ ದೂರವಿದ್ದದ್ದರಿಂದ ಅಷ್ಟರೊ– ಳಗೆ ಇಂದಿರಾ "ಮುಖ"ದ ಬಲವಿಲ್ಲದೆ ತಾವೇ ಚುನಾವಣೆ ಎದುರಿಸುವ ತಾಕತ್ತು ಸಂಪಾದಿಸ ಬಹುದೆಂಬ ಲೆಕ್ಕ ದೇವರಾಜರದು. ಇಂದಿರಾ ಮಟ್ಟಿಗೆ, ತಮ್ಮನ್ನು ಧಿಕ್ಕರಿಸುವಷ್ಟು ಬೆಳೆ– ಯುವ ಮೊದಲೆ ದೇವರಾಜರನ್ನು ಹೊರತಳ್ಳು ವುದು ಅನಿವಾರ್ಯವಾಗಿತ್ತು.

ಹೀಗೆ ಯಾರೂ ಚುನಾವಣೆ ಎದುರಿಸುವ ಆಲೋಚನೆಯಲ್ಲಿಲ್ಲದಿದ್ದಾಗ ರಬ್ಬರ್ ಸ್ಟ್ಯಾಂಪ್ ಅನಿಸಿಕೊಂಡಿದ್ದ ರಾಷ್ಟ್ರಪತಿಗಳು ಏನು ಕಾರಣದಿಂ ದಲೋ ಚರಣಸಿಂಗರ ಸಲಹೆ ಒಪ್ಪಿ ಚುನಾ– ವಣೆಯನ್ನು ಆಜ್ಞಾಪಿಸಿದರು.

ಇಂದಿರಾ—ಕಾಂಗ್ರೆಸ್

ಚುನಾವಣೆಗಳು ಮುಗಿದು, ಎಲ್ಲರಿಗೂ ಅನಿ ರೀಕ್ಷಿತವಾಗಿ, ಇಂದಿರಾ ಗಾಂಧಿಯವರನ್ನು ಜನರು ಪುನಃ ಕರೆದುಕೊಂಡು ಬಂದು ಗದ್ದಿಗೆಗೇರಿಸಿದ ಈ ಸಂದರ್ಭದಲ್ಲಿ ಮತಗಳ ಒಟ್ಟು ಲೆಕ್ಕಾಚಾರ ಮಾಡಿದ ಇಂದಿರಾ ವಿರೋಧಿಗಳು ತಾವು ನಿಜ ವಾಗಿ ಬಹಳ ಸೋತಿಲ್ಲ, ಇಂದಿರಾ ಬಹಳ ಗೆದ್ದಿಲ್ಲ ಎಂದು ಸಮಾಧಾನ ಪಟ್ಟಿಕೊಳ್ಳಲು ಯತ್ನಿಸು ತ್ತಿದ್ದಾರೆ. ಇಂದಿಗೂ ದಕ್ಷಿಣದಲ್ಲಿ ಇಂದಿರಮ್ಮ ನವರಿಗಿರುವ ಜನಪ್ರಿಯತೆ ಉತ್ತರದಲ್ಲಿಲ್ಲ ಎಂದು ಅವರು ಹೇಳುತ್ತಾರೆ. ಉದಾಹರಣೆಗೆ ಉತ್ತರ ಪ್ರದೇಶದಲ್ಲಿ–ಇಂದಿರಾ ಅವರ ಸ್ವಂತ ರಾಜ್ಯದಲ್ಲಿ–ಅವರಿಗೆ ಸೇಕಡಾ ೩೮ ಮತಗಳು ಬಿದ್ದಿದ್ದರೆ ಚರಣಸಿಂಗರ ಲೋಕದಳ ಮತ್ತು ಚಂದ್ರ ಶೇಖರರ ಜನತಾ ಪಕ್ಷ ಸೇರಿ ಸೇಕಡಾ ೫೧ ಮತ ಗಳಿಸಿದವು; ರಾಜಸ್ಥಾನದಲ್ಲಿ ಕೂಡ ಇವೆರಡು ಪಕ್ಷಗಳ ಒಟ್ಟು ಮತಗಳು ಕಾಂಗ್ರೆಗೆ ಬಿದ್ದವು ಗಳಿಗಿಂತ ಸೇಕಡಾ ಒಂದರಷ್ಟು ಹೆಚ್ಚಿಗೆ ಇದ್ದವು. ಒಂದು ವೇಳೆ ಇವೆರಡೂ ಒಟ್ಟಾಗಿಯೇ ಇದ್ದಿದ್ದರೆ ಖಂಡಿತ ಇಂದಿರಾ ಅವರಿಗೆ ಬಹುಮತ ಸಿಗು ತ್ತಿರಲಿಲ್ಲ. ಒಪ್ಪತಕ್ಕ ಮಾತು.

ಅದೂ ಅಲ್ಲದೆ ಉತ್ತರದ ಹಿಂದೀವಲಯದ ಲ್ಲೆಲ್ಲ – ಜನಸಂಘದ (ಅಂದರೆ ಈಗಿನ ಜನತಾ) ಗಂಡು ಮೆಟ್ಟಾಗಿದ್ದ ಮಧ್ಯಪ್ರದೇಶವೂ ಸೇರಿ ದಂತೆ – ಜನತಾ ಪಕ್ಷ ಲೋಕದಳ ಸೇರಿ ೧೯೭೭ ಕ್ಕಿಂತ ತುಂಬಾ ಕಡಿಮೆ ಸೇಕಡಾ ಮತಗಳನ್ನು ಪಡೆದಿದೆ. ಇದನ್ನು ಮುಚ್ಚಿ ಪ್ರಯೋಜನವಿಲ್ಲ. ಅವರು ಕಳೆದುಕೊಂಡದ್ದರಲ್ಲಿ ಹೆಚ್ಚಿನಂಶ ಇಂದಿರಾ ಕಾಂಗ್ರೆಸ್ಸಿಗೆ ಸೇರಿತೆಂಬುದೂ ಸ್ಪಷ್ಟವೇ ಇದೆ. ದಕ್ಷಿಣದಲ್ಲಂತೂ ಕಾಂಗ್ರೆ ತನ್ನ ಶಕ್ತಿಯನ್ನು ಮೊದ ಲಿಗಿಂತಲೂ ಬಹಳ ಬೆಳೆಸಿಕೊಂಡಿದೆ. ತಮಿಳು ನಾಡಿನಲ್ಲಿ ಇಂದಿರಾ ನಾಮಬಲದಿಂದ ದ್ರಾಮುಕ (ಕರುಣಾನಿಧಿ) ಪಕ್ಷ ಅಣ್ಣಾ ದ್ರಾಮುಕವನ್ನು ನೆಲಹಿಡಿಸಿತು. (ತಾವೇ ವಿಚಾರಣಾ ಆಯೋಗ ನೇಮಿಸಿ ಅವ್ಯಾಪಾರಗಳ ಆರೋಪಕ್ಕೆ ಒಳಪಡಿ ಸಿದ್ದ ಕರುಣಾನಿಧಿಯವರೊಡನೆ ಇಂದಿರಾ ಒಪ್ಪಂದ ಮಾಡಿಕೊಂಡದ್ದು ಹೇಗೆ ಎಂಬ ಪ್ರಶ್ನೆ ಕೇಳಬೇಡಿ)

ನಾವೆಷ್ಟೇ ಅನಿಷ್ಟವೆಂದೆಣಿಸಿದರೂ ಭಾರತದ ಬಹುಸಂಖ್ಯಾಕ ಜನತೆಯ ಬೆಂಬಲವನ್ನು ಶ್ರೀಮತಿ ಗಾಂಧಿ ಪಡೆದಿದ್ದಾರೆಂಬುದರಲ್ಲಿ ಯಾವ ವಿವಾ ದಕ್ಕೂ ಆಸ್ಪದವಿಲ್ಲ. ಮತ್ತು ಈ ಬೆಂಬಲ ಕೇವಲ ಅವರೊಬ್ಬರ ಮುಖ ನೋಡಿಯೇ ದೊರೆತದ್ದು– ಅವರ ಪಕ್ಷದ ಯಾವ ವ್ಯಕ್ತಿಗೂ ಅವರ ಹೊರ ತಾಗಿ ಸ್ವತಂತ್ರ ಅಸ್ತಿತ್ವವಿಲ್ಲ ಎನ್ನುವುದೂ ಸ್ಥಿರ ಪಟ್ಟ ಹಾಗಾಗಿದೆ. ಅಷ್ಟೇ ಅಲ್ಲ, ಕಾಂಗ್ರೆಸ್ ಎಂಬ ಹೆಸರಿನ ಅಡಿಯಲ್ಲಿರುವ ಯಾವ ವ್ಯಕ್ತಿಯೂ ಇಂದಿರಾ ಗಾಂಧಿ ಹೆಸರಿನ ಸಹಾಯವಿಲ್ಲದೆ ಜನ ಬೆಂಬಲ ಸಂಪಾದಿಸಲಾರ ಎಂದೂ ಖಚಿತ ವಾಯಿತು. ದೇವರಾಜರು ಇದನ್ನೇ ಹೇಳಿದ್ದಾರೆ.

ಇದೊಂದೇ ಅನಿರೀಕ್ಷಿತವಲ್ಲ. ಚುನಾವಣೆ ಕಾವು ಬರುತ್ತಿದ್ದಂತೆ ಚರಣಸಿಂಗರ ಲೋಕದಳಕ್ಕೆ ಏನೂ ಬಲವಿಲ್ಲ, ನಿಜವಾದ ಹೋರಾಟ ಇರು

ವುದು ಜನತಾ ಮತ್ತು ಕಾಂಗ್ರೆ ನಡುವೆ ಎಂಬುದು ಆಯಾ ಪಕ್ಷಗಳ ಹೇಳಿಕೆಯಾಗಿದ್ದುದು ಮಾತ್ರವಲ್ಲ, ದೇವರಾಜ-ಚವ್ಹಾಣ ಕಾಂಗ್ರೆಸ್ ಕೂಡ ಅದೇ ತೀರ್ಮಾನಕ್ಕೆ ಬಂದು ಲೋಕದಳದೊಡನೆ ತಾವು ಸೇರಿದ್ದು ತಪ್ಪಾಯಿತೆಂದು ಬಾಯಿಬಿಟ್ಟು ಹೇಳತೊಡಗಿತ್ತು. ಆದರೆ ಚುನಾವಣೆ ಪರಿಣಾಮ ಹೊರಬಿದ್ದಾಗ ಹಿಂದೀ ಭಾಷಾ ವಲಯದಲ್ಲಿ ಇಂದಿರಾ ಕಾಂಗ್ರೆಸ್ಸು ವಿಜಯಿಯಾಗಿತ್ತು. ಜನತಾಕ್ಕಿಂತ ಚರಣ ಪಕ್ಷ ಮತ್ತು ಅರಸು ಕಾಂಗ್ರೆಸ್ಸು ಹೆಚ್ಚು ಯಶಸ್ವಿಯಾಗಿದ್ದವು. ಪಂಜಾಬಿನಲ್ಲಿ ಅಕಾಲಿದಳ ಮಣ್ಣು ಮುಕ್ಕಿ ಕಾಂಗ್ರೆ ಮೇಲೆ ಬಂದಿತ್ತು. ಜನತಾ ಪಕ್ಷಕ್ಕೆ ದಿಲ್ಲಿ ಕೂಡ ಕಳೆದುಹೋಗಿತ್ತು. ಜನತಾ ತನ್ನ ಭಾವಿ ಪ್ರಧಾನಮಂತ್ರಿಯೆಂದು ಘೋಷಿಸಿದ್ದ ಜಗಜೀವನರಾಮರ ಗಂಡುಮೆಟ್ಟಾದ ಬಿಹಾರದಲ್ಲಿಯೇ ಜನತಾ ಪಕ್ಷ ತೀರ ಕಡಿಮೆ ಸ್ಥಾನ ಪಡೆಯಿತು.

ಇದೆಲ್ಲದರ ಅರ್ಥವೇನು?

ಜನ ಎಚ್ಚತ್ತಿದ್ದಾರೆ—ಅನ್ನುವ ಭಾಷ್ಯವನ್ನು ನೋಡುವ. ಎಚ್ಚತ್ತಿದ್ದಾರೆ ಎಂದರೇನು? ತಮ್ಮನ್ನಾಳುವವರನ್ನು ಬದಲಿಸುವ ಧೈರ್ಯ ತೋರಿಸಿದ್ದಾರೆ ಎಂದು ಮಾತ್ರ ಆದರೆ ಈ ಭಾಷ್ಯಕ್ಕೆ ಸೈಗೊಟ್ಟಬಹುದು. ಆದರೆ ಪ್ರಜಾತಂತ್ರಕ್ಕೆ, ವ್ಯಕ್ತಿಸ್ವಾತಂತ್ರ್ಯಕ್ಕೆ ಒದಗಿದ್ದ ಗಂಡಾಂತರವನ್ನು ಅರ್ಥಮಾಡಿಕೊಂಡು ವರ್ತಿಸಿದ್ದಾರೆ, ಎಂಬುದು "ಎಚ್ಚರ"ದ ಅರ್ಥವಾಗಿದ್ದರೆ ಅವರ ಆಯ್ಕೆಯನ್ನು ಎಚ್ಚರದ ಕೃತಿ ಎನ್ನಲು ಬರುವುದಿಲ್ಲ. ಇಂದಿರಾ ಗಾಂಧಿಯವರು ಮಾತ್ರವಲ್ಲದೆ ತುರ್ತಿನ ಕಾಲದಲ್ಲಿ ಜನರ ಸ್ವಾತಂತ್ರ್ಯಹರಣದಲ್ಲಿ ಪ್ರಧಾನ ಪಾತ್ರ ವಹಿಸಿದ್ದ ಇಡೀ ಗುಂಪನ್ನೆ ಜನ ಆರಿಸಿ ತಂದಿದ್ದಾರೆ. ಇದಕ್ಕೆ ಒಂದೇ ಅರ್ಥ ಮಾಡಲು ಸಾಧ್ಯ. ಪ್ರಜಾತಂತ್ರದ ಮೌಲ್ಯಗಳಾದ ವ್ಯಕ್ತಿಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಮೊದಲಾದ ತಾತ್ವಿಕ ಅಂಶಗಳಿಗಾಗಿ ವಿದ್ಯಾವಂತ ಬುದ್ಧಿವಾದಿ ಅಲ್ಪಸಂಖ್ಯಾಕರು ತಲೆ ಕೆಡಿಸಿಕೊಂಡ ಹಾಗೆ ಜನಸಾಮಾನ್ಯರು ಕೆಡಿಸಿಕೊಂಡಿಲ್ಲ. ೧೯೭೭ರಲ್ಲಿ ಅವರು ಇಂದಿರಾ ಗಾಂಧಿಯವರನ್ನು ಸೋಲಿಸಿದಾಗಲೂ ಜನರು ಈ ತಾತ್ವಿಕ ಅಂಶಗಳ ಹನನಕ್ಕೆ ಕೆರಳಿ ಹಾಗೆ ಮಾಡಿರಲಿಲ್ಲ; ತುರ್ತು ಪರಿಸ್ಥಿತಿಯಲ್ಲಿ ನಡೆದ ನಸ್‌ಬಂದಿ, ಕೊಳಚೆ ನಿರ್ಮೂಲನ ಮೊದಲಾದವುಗಳಲ್ಲಿ ಆದ ಬಲಾತ್ಕಾರಗಳಿಂದ ಅವರ "ಪೌರುಷಕ್ಕೆ" ಧಕ್ಕೆ ತಟ್ಟಿದ್ದರಿಂದ ಕೆರಳಿದ್ದರಷ್ಟೇ. ವ್ಯಕ್ತಿ ವಾಕ್ ಸ್ವಾತಂತ್ರ್ಯಗಳ ತಾತ್ವಿಕ ಮೌಲ್ಯಗಳನ್ನು ನಾಶ ಮಾಡಿದ್ದರಿಂದಲೇ ಈ "ಅತಿರೇಕ"ಗಳು ಸಾಧ್ಯವಾದವೆಂಬ ಬೀಜ ಮಾತು ಜನರ ಪ್ರತೀತಿಗೆ ಬಂದಿಲ್ಲವೆಂದೇ ಹೇಳಬೇಕು. ಇಲ್ಲಿದೆ ಒಂದು ಗಂಡಾಂತರ.

ಇನ್ನೊಂದು ರೀತಿಯಿಂದಲೂ "ಎಚ್ಚರ"ದ ಭಾಷ್ಯವನ್ನು ಒಪ್ಪಲಾಗುವುದಿಲ್ಲ. ಇಡೀ ದೇಶದಲ್ಲಿ ಬಡ ಜನರ ಹಿತಕ್ಕಾಗಿ ಅತಿ ದಿಟ್ಟ ಕಾರ್ಯಕ್ರಮಗಳನ್ನು ಕೈಕೊಂಡ ದೇವರಾಜ ಅರಸರನ್ನು ಜನರು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಇಂದಿರಾ ಅಂಕಿತದಲ್ಲಿದ್ದ ಯಾವುದೇ ಬೇರೆ ರಾಜ್ಯದಲ್ಲಿ ಇಷ್ಟು ತೀವ್ರಗಾಮಿ ಕ್ರಮಗಳನ್ನು ಕೈಕೊಂಡಿರಲಿಲ್ಲ. ಇದಕ್ಕೆ ಇಂದಿರಾ ಅವರು ಒಪ್ಪಿಗೆ ಕೊಟ್ಟರೇ ಹೊರತು ಅದರ ಪ್ರಚೋದಕರಾಗಲಿ ಯೋಜಕರಾಗಲಿ ಆಗಿರಲಿಲ್ಲ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಲು ದೇವರಾಜ ಅರಸರು ಮಾಡಿದ ಯತ್ನವೆಲ್ಲ ನೀರಿನಲ್ಲಿ ಹೋಮವಾಯಿತು. ಇಂದಿರಾ ಗಾಂಧಿಯವರಿಗೆ ಮೊನ್ನೆಮೊನ್ನೆಯ ವರೆಗೆ ಇದರ ಎಲ್ಲಾ ಶ್ರೇಯಸ್ಸನ್ನು ಅರಸರು ಕೊಡುತ್ತಾ ಬಂದು ಈಗಾರು ತಿಂಗಳಿಂದ ಮಾತ್ರ ಈ ಕೆಲಸ ತಮ್ಮದೇ ಎನ್ನುತ್ತಿರುವುದು ಜನಕ್ಕೆ ಮನವರಿಕೆಯಾಗಲಿಲ್ಲ ಎನ್ನುವುದು ಅಷ್ಟು ಸರಿಯಾಗದು. "ಎಚ್ಚತ್ತಿ"ದ್ದರೆ ಅವರಿಗೆ ಇದು ತಿಳಿಯಬಹುದಿತ್ತು.

ಅಪಾಯಕಾರಿ ತತ್ವ

ವಸ್ತುಸ್ಥಿತಿಯೆಂದರೆ ಜನರು ಜನತಾ ಪಕ್ಷದ ವಿಷಯದಲ್ಲಿ ರೋಸಿ ಹೋಗಿದ್ದರು. ಅದನ್ನು ಅಧಿಕಾರಕ್ಕೆ ತಂದಾಗ ಜನ ಇಟ್ಟುಕೊಂಡಿದ್ದ ಅತಿ ನಿರೀಕ್ಷೆ ಮೂರು ವರ್ಷಕ್ಕಿಂತಲೂ ಕಡಿಮೆ ಅವಧಿಯಲ್ಲಿ ಅತಿ ನಿರಾಶೆಯಲ್ಲಿ ಪರ್ಯವಸಾನ ಹೊಂದಿತ್ತು. ವಿರೋಧಾಭಾಸವೆಂದರೆ, ಅದರ ಸಾಧನೆಗಳು ಅಷ್ಟು ಕೀಳಾಗಿರಲಿಲ್ಲ. ಬೆಲೆಗಳು ಸುಮಾರಾಗಿ ಸ್ಥಿರವಾಗಿದ್ದವು. ಅದು ಜನರ ಸ್ವಾತ

ತ್ರ್ಯಗಳನ್ನು ತಿರುಗಿ ದೊರಕಿಸಿ ಕೊಟ್ಟಿತ್ತು. ಉತ್ಪಾದನೆ ಪುನರುಜ್ಜೀವನ ಹೊಂದತೊಡಗಿತ್ತು. ಆದರೆ ಇದೆಲ್ಲವನ್ನು ನುಂಗಿ ನೀರು ಕುಡಿಯು ವಂತೆ ಅದರ ನಾಯಕಮಣಿಗಳು ವರ್ತಿಸಿದರು. ಅದರ ತ್ರಿಮೂರ್ತಿಗಳ ವೈಯಕ್ತಿಕ ಅಧಿಕಾರ ದಾಹ ಲಂಗುಲಗಾಮಿಲ್ಲದೆ ಕುಣಿದಾಡುವ ಕುದುರೆ ಯಾಯಿತು. 'ಇಂದಿರಾ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನು ಯಾರಿಗಾದರೂ ಕೊಡಬೇಕಾ ಗಿದ್ದರೆ ರಾಜನಾರಾಯಣರಿಗೆ ಅದು ಸಲ್ಲಬೇಕಾ ಗಿದೆ. ಅವರ ಬಫೂನ್‌ಗಿರಿಯ ವರ್ತನೆ ಇಡೀ ಪಕ್ಷವನ್ನು ಲೇವಡಿಯ ವಿಷಯವಾಗಿ ಮಾಡಿತು. ಮತ್ತು ಕೊನೆಯಲ್ಲಿ ಚರಣಸಿಂಗರ ಪಕ್ಷವಹಿಸಿ ಅವರು ನಡೆಸಿದ ತಂತ್ರಗಳು ಅವರನ್ನೂ ಇಡೀ ಜನತಾ ಪಕ್ಷವನ್ನೂ ಲೇವಡಿಯೊಡನೆ ತಿರಸ್ಕಾ ರಕ್ಕೂ ಪಾತ್ರರನ್ನಾಗಿ ಮಾಡಿತು. ಒಂದು ರಾಜ ಕೀಯ ಪಕ್ಷಕ್ಕೆ ತಿರಸ್ಕಾರದಷ್ಟು ಮಾರಕವಾದ ವಿಪತ್ತು ಬೇರೆ ಇರಲಾರದು.

ಶ್ರೀಮತಿ ಗಾಂಧಿ ಮತ್ತು ಅವರ ಬಳಗದವರ ಮೇಲೆ ಜನತಾ ಸರಕಾರ ಹೂಡಿದ ನ್ಯಾಯಾಲಯ ಪ್ರಕರಣಗಳು, ನೇಮಿಸಿದ ಆಯೋಗದ ತೀರ್ಮಾ ನಗಳು ಎಲ್ಲ ಸುಳ್ಳೆಂದು ಜನತೆ ಚುನಾವಣೆಯ ಪರಿಣಾಮಗಳ ಮೂಲಕ ತೀರ್ಪುಕೊಟ್ಟಂತಾಗಿದೆ ಯೆಂದು ಒಂದು ಪ್ರಮುಖ ಇಂಗ್ಲಿಷ್ ಪತ್ರಿಕೆ ಬರೆದಿದೆ. ಕಾನೂನು ಪ್ರಕರಣಗಳಲ್ಲಿ ಜನತೆ ಯನ್ನು ವರಿಷ್ಠ ನ್ಯಾಯಾಲಯವಾಗಿ ಮಾಡುವ ಈ ವಿಚಾರ ಅತ್ಯಂತ ಅಪಾಯಕಾರಿ ತತ್ವ ಎನ್ನದೆ ವಿಧಿಯಿಲ್ಲ. ಆದರೂ ಈ ಪ್ರಕರಣಗಳನ್ನು ದಾಖ ಲು ಮಾಡಿದ್ದು, ಆಯೋಗ ನೇಮಿಸಿದ್ದು ಜನತಾ ಸರಕಾರದ ಜಾಣ ಕ್ರಮವಾಗಿರಲಿಲ್ಲವೆಂದೇ ತೋರುತ್ತದೆ. ಪ್ರಕರಣಗಳಲ್ಲಿ ಅಡಕವಾದ ಆರೋ- ಪಗಳ ಕೇಂದ್ರ ವಿಷಯಕ್ಕೆ ಬರುವುದಕ್ಕೆ ಆಸ್ಪದ ಕೊಡದೆ ಕಾನೂನು ಮುದ್ದೆಗಳ ವಿಷಯದಲ್ಲೇ ಇಂದಿರಾ ಗಾಂಧಿಯವರೂ ಅವರ ಅನುಯಾ ಯಿಗಳು ಹೂಡಿದ ವಿಲಂಬಿತ ಹೋರಾಟವೂ ದಿಕ್ಕಾರಯುಕ್ತ ದಿಟ್ಟತನದ ನಿಲುಮೆಗಳೂ ಅವರ ಸಾಹಸದ ಬಗ್ಗೆ ಜನರಲ್ಲಿ ಒಂದು ವಿಧದ ಮೆಚ್ಚಿಕೆಯನ್ನೂ ಅವರ ಉಪಾಯಗಳ ಮುಂದೆ ಸರಕಾರದ ಅಸಹಾಯಕತೆಯನ್ನೂ ನಿರ್ವೀರ್ಯತೆಯ ನ್ನೂ ಕಂಡು ಅದರ ಬಗ್ಗೆ ಹೆಚ್ಚಿನ ತಿರಸ್ಕಾರ ವನ್ನು ಹುಟ್ಟಿಸಿದವು. ಇಂದಿರಾ ಗಾಂಧಿಯವರಿಗೆ ಕಡೆಗೆ ಇದರಿಂದ ಲಾಭವೇ ಆಯಿತು. ಯಾಕಂ ದರೆ ಮತ್ತೇನಲ್ಲದಿದ್ದರೂ ಈ ವಿಚಾರಣೆಗಳಿಂದ ನಿರಂತರವಾಗಿ ಅವರ ಹೆಸರು ಜನರ ಮುಂದೆ ಹಾಜರಿರುವ ಹಾಗಾಗಿ ಅವರಿಗೆ ಪುಕ್ಕಟೆ ಪ್ರಚಾರ ದೊರಕಿಸಿಕೊಟ್ಟಿತು. ಪ್ರಭಾವಶಾಲಿ ಅಧಿಕಾರ ಭ್ರಷ್ಟ ರಾಜಕಾರಣಿಗಳನ್ನು ಅವರ ತಪ್ಪುಗಳಿ ಗಾಗಿ ದಂಡಿಸಲು ಅನುಭವಶಾಲಿ ದೇಶಗಳು ಯಾಕೆ ಯತ್ನಿಸುವುದಿಲ್ಲವೆಂದು ಈ ಉದಾಹರಣೆ ಯಿಂದ ನಮಗೆ ತಿಳಿಯುತ್ತದೆ. ರಶಿಯನ್ ಕ್ರಾಂತಿಯ ನಂತರ ಲೆನಿನ್ನರು ಹಿಂದಣ ಅನೇಕ ರಾಜಕಾರಣಿಗಳನ್ನು ಬುದ್ಧಿಪೂರ್ವಕವಾಗಿ ಓಡಿ ಹೋಗಲು ಬಿಟ್ಟರಂತೆ. ಬಹಳ ಜಾಣ ಮನುಷ್ಯ!

ಸರಳ ವ್ಯಾಖ್ಯಾನಕ್ಕೆ ನಿಲುಕದ್ದು

೧೯೭೯ರಲ್ಲಿ ಜನತಾ ಪಕ್ಷದಲ್ಲಿ ನಡೆದ ಅಸಹ್ಯ ಹುಟ್ಟಿಸುವ ಅಧಿಕಾರದ ಕಚ್ಚಾಟ, ಬ್ಯಾಂಕುಗ ಳಿಂದ ಹಿಡಿದು ಅನೇಕ ಉದ್ಯಮಗಳಲ್ಲಿ ನಡೆದ ಮುಷ್ಕರಗಳು, ವಿದ್ಯಾರ್ಥಿ ಗಲಭೆ, ಜಾತೀಯ ಘರ್ಷಣೆಗಳು, ಹರಿಜನ ಪೀಡನೆಯ ಪ್ರಸಂಗ ಗಳು ಇವೆಲ್ಲ ವಿದ್ಯಾವಂತ ಮತ್ತು ವರ್ತಕ ವರ್ಗ ಗಳಲ್ಲಿ ಕೂಡ ಇಂದಿರಾ ಬಗ್ಗೆ ಮರುವಿಚಾರಕ್ಕೆ ಪ್ರೇರಣೆ ಕೊಟ್ಟವೆಂದು ಖಾಸಗಿ ಚರ್ಚೆಗಳಿಂದ ಅನಿಸುತ್ತದೆ. ಒಂದು ರಾಜಕೀಯ ಪಕ್ಷದಲ್ಲಿ ಒಂದಕ್ಕಿಂತ ಹೆಚ್ಚು ಸಮಾನಿಕ ನಾಯಕರು ಇದ್ದರೆ ಅವರು ಪರಮಾಧಿಕಾರಕ್ಕೆ ಕಚ್ಚಾಡದೆ ಬಿಡುವುದಿಲ್ಲ ಎಂದು ಜನತಾ ಪಕ್ಷದ ಅವಸ್ಥೆ ತೋರಿಸಿದ್ದರಿಂದ ತನ್ನೊಡನೆ ಸ್ಪರ್ಧೆಗಿಳಿಯಬಹುದಾದವರನ್ನು ಪಕ್ಷ ದಿಂದ ಹೊರತಳ್ಳುವ ಇಲ್ಲವೇ ತೇಜೋವಧೆ ಗೊಳಪಡಿಸುವ ಮತ್ತು ಎಲ್ಲರನ್ನೂ ಪೂರ್ತಿ ತಮ್ಮ ವೈಯಕ್ತಿಕ ಅಂಕಿತಕ್ಕೊಳಪಡಿಸುವ ಇಂದಿರಾ ನೀತಿಯೇ ಸರಿಯೇನೋ ಎಂದು ಸಂಶಯ ಸಹಜವಾಗಿಯೇ ಅನೇಕರಿಗೆ ಬಂತು. ಕಾರಖಾನೆ ಕಚೇರಿಗಳಲ್ಲಿ ಯಾರ ಮಾತನ್ನೂ ಯಾರೂ ಕೇಳುವುದಿಲ್ಲ ಎಂಬ ಸ್ಥಿತಿಯಿಂದ ಎಷ್ಟೋ ಜವಾಬ್ದಾರಿ ಜನರು ಬೇಸತ್ತದ್ದನ್ನು ನಾನು ನೋಡಿದ್ದೇನೆ. ಹೀಗಾಗಿ ಇಂದಿರಾ ಗಾಂಧಿ

ಯವರು 'ಆಡಳಿತದ ಸ್ಥಿರತೆ'ಯ ಮಾತನ್ನು ಒತ್ತಿ ಹೇಳುತ್ತಿದ್ದುದು ಬಹಳ ಮಟ್ಟಿಗೆ ನಗರ ವಾಸಿ ಸುಶಿಕ್ಷಿತ ಮತದಾರರನ್ನು ಆಕರ್ಷಿಸಿರ ಬೇಕು. ಇಲ್ಲದಿದ್ದರೆ ದಿಲ್ಲಿ ಮೊದಲಾದ ಪಟ್ಟಣ ಗಳಲ್ಲಿ ಮೊದಲು ಇಂದಿರಾ ವಿರೋಧಿಗಳಿಗಿದ್ದ ಬೆಂಬಲ ಈ ಸಲ ಉಳಿಯದೆ ಹೋದದ್ದು ಅರ್ಥ ವಾಗುವುದಿಲ್ಲ. ಮುಂಬಯಿಯೊಂದೇ ಜನತಾ ಪಕ್ಷದೊಡನೆ ಉಳಿದ ಪಟ್ಟಣ. ಅಲ್ಲಿ ಕೂಡ ಬಹುಮತದ ಪ್ರಮಾಣ ಇಳಿದಿತ್ತು.

ಆದರೂ ಕೊನೆಯಲ್ಲಿ ಮತದಾರರ ಒಲವನ್ನು ನಿರ್ಧರಿಸಿದ ಪ್ರೇರಣೆಗಳು ಇಂಥ ಸರಳ ವ್ಯಾಖ್ಯಾನಕ್ಕೆ ನಿಲುಕುವ ಹಾಗೆ ಕಾಣುವುದಿಲ್ಲ. ಅವು ಭಾರತದ ಸಾಮಾಜಿಕ ವಿನ್ಯಾಸದ ಜಟಿಲ ಸಂಬಂಧ ಗಳಿಂದ ಪ್ರಭಾವಿತವಾಗಿವೆ. ಹಿಂದೂ–ಮುಸ್ಲಿಂ ಪ್ರಶ್ನೆಯನ್ನೇ ನೋಡುವಾ. ಮುಸ್ಲಿ–ಮರು ಸ್ವಾತಂತ್ರ್ಯಾನಂತರದಲ್ಲಿ ನೆಹರೂ ಕುಟುಂಬದ ಮೇಲೆ ಭರವಸೆಯಿಟ್ಟುಕೊಂಡು ಬಂದಿದ್ದರು. ೧೯೭೭ರ ರೊಚ್ಚಿನ ಕಾಲದಲ್ಲಿ ಅದೂ ಉತ್ತರದಲ್ಲಿ ಮಾತ್ರ ಅವರು ತಿರುಗಿ ದರು. ೧೯೭೭ರ ನಂತರ ಜನತಾ ಪಕ್ಷದ ಜನ ಸಂಘದ ಗುಂಪನ್ನು ಮತ್ತು ಆರ್. ಎಸ್. ಎಸ್. ಸಂಸ್ಥೆಯನ್ನು ಅದೇ ಪಕ್ಷದ ಇತರ ಗುಂಪುಗಳೇ ಜಾತೀಯತೆಯ ಆರೋಪಕ್ಕೆ ಹಗಲಿರುಳೂ ಗುರಿ ಪಡಿಸುತ್ತಿದ್ದಾಗ ಮುಸ್ಲಿಮರು ಸಹಜವಾಗಿಯೆ ಮತ್ತೆ ತಮ್ಮ ಹಳೆಯ ಭರವಸೆಯತ್ತ ಮುಖ ತಿರುಗಿಸಿದರು. ಜನತಾ ಸದಸ್ಯರೊಬ್ಬರು ತಂದ ಮತಾಂತರ ನಿರೋಧಕ ವಿಧೇಯಕ ಜನತಾ ಪಕ್ಷದ ಇತರ ಗುಂಪುಗಳ ವಿರೋಧದಿಂದ ಕಾನೂನಾಗದೇ ಹೋದರೂ ಮತಾಂತರವನ್ನು ಜನ್ಮಸಿದ್ಧ ಹಕ್ಕೆಂದು (ಸದ್ಯಕ್ಕೆ ಅದು ಅವರಿಗೆ ಅನುಕೂಲವಾಗಿರುವುದರಿಂದ) ಭಾವಿಸುವ ಕ್ರೈ-ಸ್ತರು ಜನತಾ ಪಕ್ಷಕ್ಕೆ ವಿಮುಖರಾದರು. ಜನತಾ ಪಕ್ಷವನ್ನು ಒಡೆಯಲು ಕಾರಣರಾದ ಲೋಕದಳ ಸಮಾಜವಾದಿ ಗುಂಪುಗಳು ಅಲ್ಪಸಂಖ್ಯಾಕರನ್ನು ತಮ್ಮ ಜನಸಂಘ ವಿರೋಧಿ ನಿಲುಮೆಯಿಂದ ತಮ್ಮತ್ತ ಒಲಿಸಿಕೊಳ್ಳುತ್ತೇವೆಂದು ಆಗ ಭಾವಿಸಿರ ಬಹುದು. ಆದದ್ದು ಬೇರೆಯೇ. ಲಾಭ ಖಂಡಿತ ಇಂದಿರಾ ಗಾಂಧಿಯವರದಾಯಿತು.

ಜಾತಿಗಳ ಪಾತ್ರ

ಹಿಂದೂ ಸಮಾಜದ ಒಳಗಿನ ಎಳೆದಾಟ ಗಳೂ ಉತ್ತರದಲ್ಲಿ ಮತ್ತು ದಕ್ಷಿಣದ ಕೆಲವೆಡೆ–ಖಂಡಿತವಾಗಿ ಕರ್ನಾಟಕದಲ್ಲಿ– ಪ್ರಬಲ ಕೆಲಸ ಮಾಡಿದವು. ಪ್ರಬಲ ಜಾಟ್ ಜಾತಿ ಚರಣ ಸಿಂಗರನ್ನು ಬೆಂಬಲಿಸಿತೆಂಬುದು ಖಂಡಿತ. ಅವ ರೊಡನೆ ಪ್ರಬಲ ರೈತ ಜಾತಿಗಳು ಕೆಲವು ಸೇರಿರ ಬಹುದು. ಹರಿಜನನೊಬ್ಬನನ್ನು (ಜಗಜೀವನ ರಾಮ) ಪ್ರಧಾನಮಂತ್ರಿ ಮಾಡುವೆವೆಂಬುದಾಗಿ ಜನತಾ ಪಕ್ಷ ಪ್ರಾರಂಭದಲ್ಲೇ ಸಾರಿ, ಸೇಕಡಾ ೧೪ ರಷ್ಟಿರುವ ಹರಿಜನರನ್ನು ಸೆಳೆದುಕೊಳ್ಳಬಹು ದೆಂದೆಣಿಸಿತ್ತು. ಆದರೆ "ಚಮ್ಮಾರ"ನೊಬ್ಬನನ್ನು ಪ್ರಧಾನಮಂತ್ರಿ ಮಾಡುವ ಈ ಧ್ಯೇಯ ಯಾವ ಮೇಲ್ಜಾತಿಗೂ ಇಷ್ಟವಾಗಲಿಲ್ಲ. ಸಾಲ ದ್ದಕ್ಕೆ ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಜನತಾ ಎನಿಸಿಕೊಂಡ ಸರಕಾರಗಳು ಹಿಂದೂ ಸಮಾಜದ ಹಿಂದುಳಿದ ವರ್ಗಗಳಿಗೆ ನೌಕರಿಗಳಲ್ಲಿ ಹೆಚ್ಚು ಸ್ಥಳ ಕಾದಿಡುವ ನೀತಿಯನ್ನು ವಹಿಸಿ ಬಲಿಷ್ಠ ಮೇಲ್ಜಾತಿಗಳನ್ನು ಎದುರು ಹಾಕಿಕೊಂ ಡವು. "ಚಮ್ಮಾರ"ನನ್ನು ಪ್ರಧಾನಮಂತ್ರಿ ಮಾಡುವುದಕ್ಕಿಂತ ಬ್ರಾಹ್ಮಣಿ ಇಂದಿರಾರವರಿಂದ ಆಳಿಸಿಕೊಳ್ಳುವುದು ಮೇಲೆಂದು ಇವರೆಲ್ಲ ಭಾವಿ ಸಿದರೆಂದು ಉತ್ತರದಿಂದ ಬಂದ ವರದಿಗಳು ಸೂಚಿಸುತ್ತವೆ. ಕರ್ನಾಟಕದಲ್ಲಿ ಬೇರೆಯೇ ಆಯಿತು. ಹಿಂದುಳಿದ ವರ್ಗಗಳಿಗೆ ನೌಕರಿಗಳಲ್ಲಿ ಪ್ರಾಧಾನ್ಯ ಕೊಡುವ ಹಾವನೂರು ವರದಿ ಪ್ರಬಲ ಲಿಂಗಾಯತ ಮತ್ತು ಒಕ್ಕಲಿಗ ಜಾತಿ ಗಳನ್ನು ದೇವರಾಜ ಅರಸರಿಗೆ ಬದ್ಧ ವಿರೋಧಿ ಗಳಾಗಿ ಮಾಡಿತು. ಧಾರ್ಮಿಕ ಅಲ್ಪಸಂಖ್ಯಾ ಕರೊಡನೆ ಅವರೂ ಇಂದಿರಾ ತಮಗೆ ಅನುಕೂಲ ಮಾಡಬಹುದೆಂದು ಅತ್ತ ತಿರುಗಿರಬಹುದು.

ಚುನಾವಣೆಯ ಪರಿಣಾಮಗಳಲ್ಲಿ ತುಂಬ ಅನಿ ಷ್ಟವಾಗಿರುವುದು ಈ ಜಾತೀಯ ಭಾವನೆಗಳ ಉಲ್ಬಣವೆಂದು ನನಗೆ ತೋರುತ್ತದೆ. ರಾಜಕಾರ ಣಿಗಳು ತತ್ಕಾಲದ ತಮ್ಮ ಅಧಿಕಾರಕ್ಕಾಗಿ ಅವುಗಳನ್ನು ಕೆರಳಿಸುತ್ತಾರೆ. ಆಮೇಲೆ ಅದು ಅವರ ಅಂಕೆಯಲ್ಲಿಯೂ ನಿಲ್ಲುವುದಿಲ್ಲ.

ಇಡೀ ಆಟದಲ್ಲಿ ಅತಿ ಹೆಚ್ಚು ಪೆಟ್ಟು ಬಿದ್ದದ್ದು ಹಿಂದಿನ ಜನಸಂಘ ಗುಂಪಿಗೆ. ಜನತಾ ಪಕ್ಷದಲ್ಲಿ ಸೇರಿರದಿದ್ದರೆ ಅವರು ಇಷ್ಟು ಕಠಿನ ಸ್ಥಿತಿಗೆ ಗುರಿಯಾಗುತ್ತಿರಲಿಲ್ಲ. ಅವರಿಗೆ ಗಟ್ಟಿ ಮುಟ್ಟು ಹಿಂದೂ ಮಧ್ಯಮ ವರ್ಗಗಳ ಬೆಂಬಲವಾದರೂ ಉಳಿಯುತ್ತಿತ್ತು. ಜನತಾ ಪಕ್ಷದ ಕಚ್ಚಾಟದಲ್ಲಿ ಎಲ್ಲ ಗುಂಪುಗಳಿಗಿಂತ ಹೆಚ್ಚಿನ ಮಟ್ಟದ ಘನತೆಯಿಂದ ವರ್ತಿಸಿದ ಈ ಗುಂಪಿಗೆ ಬಿದ್ದ ಪೆಟ್ಟಿಗೆ ಬಹಳ ಮಟ್ಟಿಗೆ ಅದು ಅನರ್ಹವಾಗಿತ್ತು. ಈ ಗುಂಪಿನ ಅನೇಕ ಸಕ್ರಿಯ ಕಾರ್ಯಕರ್ತರಿಗೆ ಜನತಾ ಪಕ್ಷದಲ್ಲಿ ಒಳ ಜಗಳಗಳು ಪ್ರಾರಂಭವಾದಂದಿನಿಂದ ತುಂಬಾ ವ್ಯಥೆಯಲ್ಲದೆ ಕಣ್ಣು ಕಟ್ಟಿದಂತೆಯೂ ಆಗಿತ್ತು. ಶಿಸ್ತಿನಲ್ಲಿ ತರಬೇತಾದ ಅವರಿಗೆ ಈ ಶಿಸ್ತುಗೇಡಿ ಆವರಣದಲ್ಲಿ ತಮ್ಮನ್ನು ಸಂಬಾಳಿಸಿಕೊಳ್ಳುವುದೇ ಕಷ್ಟವಾಗಿತ್ತು. ಅವರಲ್ಲಿ ಅನೇಕರು ಈ ಚುನಾವಣೆಯಲ್ಲಿ ತಾವು ಯಾವ ಪಾತ್ರವನ್ನೂ ವಹಿಸುವುದಿಲ್ಲವೆಂದು ನನ್ನ ಮುಂದೆ ಹೇಳಿದ್ದರು. ಜನತಾ ಪಕ್ಷದ ಸೋಲಿನ ಕಾರಣಗಳಲ್ಲಿ ಇದೂ ಸೇರಿರಬಹುದು.

ಏನು ಮಾಡಬಹುದು ?

ಆದರೆ ಪಶ್ಚಿಮ ಬಂಗಾಲದಿಂದ ಬೇರೊಂದು ತಥ್ಯ ನಮಗೆ ಕೈಸನ್ನೆ ಮಾಡುತ್ತಿದೆ. ಅಲ್ಲಿ ಮಾರ್ಕ್ಸಿಸ್ಟ್ ಮತ್ತು ಅವರ ಸ್ನೇಹಿತರನ್ನು ಕದಲಿಸಲು ಕಾಂಗ್ರೆಸಿಗೆ ಸಾಧ್ಯವಾಗಲಿಲ್ಲ. ಗಟ್ಟಿಯಾದ ನಿಷ್ಠೆ, ತತ್ವಗಳ ಅಭ್ಯಾಸ ಮತ್ತು ಮನವರಿಕೆ, ಅದರಿಂದ ಪ್ರೇರಿತವಾಗಿ ದಿನದಿನ ಜನತೆಯ ಸುಖದುಃಖಗಳಲ್ಲಿ ಬೆರೆತು ದುಡಿಯುವುದು ಮತ್ತು ಕೆಲ ವೇಳೆ ಮುಂಗೈ ಕಸುವಿನ ಪ್ರಯೋಗ ಇವು ಒಂದು ಪಕ್ಷದಲ್ಲಿ ಸೇರಿದ್ದರೆ ಅದರ ಬುಡ ಅಲ್ಲಾಡಿಸುವುದು ಸುಲಭವಲ್ಲ. ಕಾಂಗ್ರೆಸ್ಸನ್ನು ಗಳನ್ನೊಳಗೊಂಡು ಬೇರೆ ಯಾವ ಪಕ್ಷವೂ (ಸ್ವಲ್ಪ ಮಟ್ಟಿಗೆ ಆರ್. ಎಸ್. ಎಸ್. ಹೊರತು) ಈ ಸ್ವರೂಪವನ್ನು ಹೊಂದಿಲ್ಲ. ಅವು ಕೇವಲ ಹಿಕ್ಮತ್ತುಗಳನ್ನು ಆಶ್ರಯಿಸಿ ಬದುಕುತ್ತಿವೆ. ಅದೇ ಅವುಗಳ ಸಂಕಟ.

ಇಂದಿರಾ ಗಾಂಧಿಯವರು ಕೇವಲ ಸ್ವಂತ ಪ್ರಭಾವದಿಂದ ಗೆದ್ದಿದ್ದಾರೆ; ಹಣ, ರಾಜಕೀಯ ಪಗಡೆ ತಂತ್ರ ಇವೆಲ್ಲ ಉಪಕರಣಗಳು ಮಾತ್ರ. ಇದು "ಚರಿಸ್ಮಾ"ದ ವಿಜಯ. ಅದೃಷ್ಟ ಅದಕ್ಕೆ ಅಸ್ತು ಎಂದಿದೆ. ಇತಿಹಾಸದಲ್ಲಿ ನೆಪೋಲಿಯನ್ನನ ಪುನರಾಗಮನದ ನಂತರ ಇಂಥ ಪುನರಾಗಮನದ ಉದಾಹರಣೆ ಬಹುಶಃ ಇಲ್ಲ.

ಗೆದ್ದಿದ್ದಾರಾಯಿತು. ಅವರು ಮುಂದೇನು ಮಾಡಬಹುದು? ಪುನಃ ತುರ್ತು ಪರಿಸ್ಥಿತಿ ತರಬಹುದೆ? ಇಲ್ಲವೆಂದು ಅವರು ಹೇಳಿದ್ದಾರೆ; ತುರ್ತು ಪರಿಸ್ಥಿತಿಯಲ್ಲಿ ಕೆಟ್ಟ ಹೆಸರು ಗಳಿಸಿದವರನ್ನು ಸಂಪುಟದಲ್ಲಿ ಸದ್ಯಕ್ಕಂತೂ ಸೇರಿಸಿಕೊಂಡಿಲ್ಲ. ಆದರೆ ಭವಿಷ್ಯದಲ್ಲಿ ಏನಾದೀತೋ ಹೇಳುವುದು ಕಷ್ಟ. ಅದು ಅವರ ಅಧಿಕಾರಕ್ಕೆ ಎದುರಾಗುವ ಆಹ್ವಾನವನ್ನು ಅವಲಂಬಿಸಿದೆ. ಹಿಂದೆ ಅವರು ಉಗ್ರ ರೂಪದಲ್ಲಿ ತೋರಿಸಿದ ಪ್ರತಿ ಉದಾಹರಣೆಯಲ್ಲಿಯೂ ಅವರು ತಮ್ಮ ಪಕ್ಷದೊಳಗೆ ತಮಗೆ ಎದುರಾದ ಆಹ್ವಾನಕ್ಕೆ ಪ್ರತಿಕ್ರಿಯೆ ತೋರಿಸಿದ್ದಾಗಿದೆ. ತುರ್ತು ಪರಿಸ್ಥಿತಿ ಜಾರಿ ಕೂಡ ವಿಪಕ್ಷಗಳ ಆಹ್ವಾನಕ್ಕಿಂತಲೂ ತಮ್ಮ ಪಕ್ಷದೊಳಗಿನ ವಿರೋಧವನ್ನು ಎದುರಿಸಲು ಕೈಕೊಂಡ ಉಪಾಯವಾಗಿತ್ತು. ಈ ಸಲ ಅವರ ಪಕ್ಷದಲ್ಲಿ ಅವರ ಕೇವಲ ಅಂಕಿತದಲ್ಲಿದ್ದವರಷ್ಟೇ ಉಳಿದಿದ್ದಾರೆ. ವಿಪಕ್ಷಗಳು ತಮ್ಮ ಗಾಯಗಳನ್ನು ನೆಕ್ಕುತ್ತ ಇನ್ನೂ ಕೆಲ ಕಾಲ ಅವರನ್ನು ಆಹ್ವಾನಿಸಲಾರದೆ ಉಳಿಯುವವು. ಆದ್ದರಿಂದ ಸದ್ಯಕ್ಕೆ ಯಾವ ಅಘಟಿತವನ್ನೂ ನಿರೀಕ್ಷಿಸಬೇಕಿಲ್ಲ ಎನಿಸುತ್ತದೆ. ಆದರೆ ಅಧಿಕಾರವನ್ನು ಹಂಚಿಕೊಂಡು ಆಳುವುದು ಅವರಿಂದಾಗದು ಎಂಬ ತಥ್ಯವೊಂದಿದೆ.

★

"ಬ್ರಹ್ಮಚಾರಿಯ ವ್ಯಾಖ್ಯೆ ಏನು ?"
"ಅತಿ ಸುಖಪುರುಷ, ನಿಶ್ಚಿಂತ ಪುರುಷ."
"ನಿನಗ್ಹ್ಯಾಂಗೆ ಗೊತ್ತು?"
"ನನಗೆ ಗೊತ್ತಿಲ್ಲದ್ದೇನು, ನಮ್ಮಪ್ಪಗೆ ಗೊತ್ತು."

ಬಾಹ್ಯಜಗತ್ತಿಗೆ ಇನ್ನೂ ಅನಾಮಧೇಯನೇ ಆಗಿ ಉಳಿದಿರುವ ವ್ಯಕ್ತಿಯೊಬ್ಬನ ಜೀವನದಲ್ಲಿಯ ಅಮೂಲ್ಯ ಕ್ಷಣಗಳನ್ನಿಲ್ಲಿ ಡಾ. ವಿಷ್ಣು ಶರ್ಮ ವನವಳ್ಳಿ ಯವರು ಸೆರೆಹಿಡಿದು ಆ ವ್ಯಕ್ತಿಯ ಮಾತಿನಲ್ಲೇ ನಿರೂಪಿಸಿದ್ದಾರೆ

ಆತನಿಗಾಗಿ ನಾನೀಗಲೂ ತಡಕಾಡುತ್ತಿದ್ದೇನೆ

ಗಂಗಪ್ಪ ಹೊಂಗಲ

ನಾನು ಹೇಳುತ್ತಿರುವುದು ೫೦ ವರ್ಷಗಳಷ್ಟು ಹಳೆಯ ಮಾತು. ೧೯೧೪ರಲ್ಲಿ ಹುಟ್ಟಿದ ನನ್ನನ್ನು ನಮ್ಮಪ್ಪ ಸಾಲೆಗೆ ಕಳಿಸಿದ್ದ. ಈಗ ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿರುವ ನಮ್ಮೂರು ದೊಡ್ಡವಾಡ ಆಗ ಸಾಂಗಲಿ ಸಂಸ್ಥಾನದಲ್ಲೊಂದು ಸಣ್ಣ ಹಳ್ಳಿ. ಆದರೆ ಆಗ ನನಗಿದ್ದ ಹೆಮ್ಮೆಯೆಂದರೆ ನಮ್ಮ ಮನೆತನದಲ್ಲೇ ಯಾರೂ ಕಲಿತಿರದಿದ್ದಷ್ಟು ಕಲಿತು ನಾನು ಭಾರಿ 'ವಿದ್ಯಾವಂತ' ಎನಿಸಿಕೊಂಡುಬಿಟ್ಟಿದ್ದೆ – ಕನ್ನಡ ಐದನೆಯ ಇಯತ್ತೆಯ ವರೆಗೆ ಓದಿ. ಸಾಲೆಗೆ ಹೋಗುವವರೆಗೂ ನಮ್ಮ ಕೇರಿಯಲ್ಲೇ ಆಡಿಕೊಂಡಿದ್ದ ನನಗೆ ಸಮಾಜದ ದೃಷ್ಟಿಯಲ್ಲಿ ನಮ್ಮದು ಕೀಳು ಕುಲವೆಂಬ ಅರಿವು ಅಷ್ಟಾಗಿ ಇರಲಿಲ್ಲ. ೧೯೨೧ರ ಸುಮಾರಿಗೆ ಸಾಲೆಯ ಕಟ್ಟೆ ಹತ್ತಿದೆ ನಾನು. ಮೊದಲ ದಿನವೇ ನನ್ನ ಮನಸ್ಸಿಗೆ ನೋವಾಗುವಂಥ ಘಟನೆ ನಡೆಯಿತು. ವರ್ಗದ ಇತರೆಲ್ಲ ಹುಡುಗರು ಒಳಗೆ ಕುಳಿತಿದ್ದರಾದರೆ ನನ್ನನ್ನು ಬಾಗಿಲ ಹೊರಗಡೆಯೆ ಕೂಡಿಸಿದರು. ಉಳಿದ ಹುಡುಗರಾರೂ ನನ್ನನ್ನು ಮುಟ್ಟಿಸಿಕೊಳ್ಳದೆ ದೂರ ದೂರವೇ ಇರುತ್ತಿದ್ದುದನ್ನು ಕಂಡ ನನಗೆ ಇದೆಲ್ಲ ಹೀಗೇಕೆಂದು ಅರ್ಥವಾಗಲಿಲ್ಲ. ಹೀಗೇಕೆಂದು ಮನೆಗೆ ಬಂದು ಅಪ್ಪನನ್ನು ಕೇಳಿದರೆ ಅವನಿಗೂ ಅದರಲ್ಲಿ ಅಸಹಜವಾದದ್ದೇನೂ ತೋರಲಿಲ್ಲ. ನಮ್ಮದು ಕೀಳು ಕುಲವೆಂದೂ ನಾವು ಇತರರನ್ನು ಮುಟ್ಟಕೂಡದೆಂದೂ ಹೇಳಿದನಲ್ಲದೆ ಉಳಿದವರು ಬಳಸುವ ನೀರಿನ ಬಾವಿಗಳನ್ನು ನಾವು ಮುಟ್ಟ

ವಂತಿಲ್ಲ, ದೇವಸ್ಥಾನಗಳಿಗೆ ನಾವು ಹೋಗುವಂತಿಲ್ಲವೆಂಬುದನ್ನೂ ಎತ್ತಿ ತೋರಿಸಿದನು. ಇದೇನೋ ತೀರ ಸ್ವಾಭಾವಿಕವೇನೋ ಎಂದುಕೊಂಡರೂ ಈ ವ್ಯವಸ್ಥೆ ಅನ್ಯಾಯದ್ದು; ಇದು ಬದಲಾಗಬೇಕು ಎನಿಸಿದ ಕ್ಷಣಗಳೂ ಇದ್ದವು. ಆದರೆ ಒಂದು ದಿನ ನಾನೇನೊ ತಪ್ಪು ಮಾಡಿದಾಗ ಗುರುಗಳು ಹೊಡೆಯಲು ಛಡಿ ಎತ್ತಿದವರು ಅದನ್ನು ಬೀಸಿ ನನ್ನೆಡೆಗೆ ಒಗೆದರು. ಇತರರನ್ನು ಹೊಡೆಯುವಾಗ ಛಡಿಯನ್ನು ಕೈಲಿ ಹಿಡಿದೇ ಹೊಡೆಯುತ್ತಿದ್ದರು. ಅವರ ಮನಸ್ಸಿನಲ್ಲಿರುವ ಅಂತರದ ಕಾವು ನನಗೆ ತಟ್ಟಿ ನಾನು ಕೋಲಿನಿಂದಲೂ ಮುಟ್ಟಲಾಗದಷ್ಟು ಕೀಳೆ ಎಂದೆನಿಸಿ ಒಂದು ಕ್ಷಣ ಕೆಡುಕೆನಿಸಿದರೂ ಮರುನಿಮಿಷವೇ ಮೈಯೆಲ್ಲ ಕೋಪದಿಂದ ಉರಿಯಿತು. ಆದರೇನು, ಈ ಜನಭರಿತ ಜಗತ್ತಿನಲ್ಲೂ ನಾನು ಏಕಾಕಿಯೇ ಎಂಬ ಅನುಭವ ನನಗಾಯಿತು. ಹೊಟ್ಟೆಯಲ್ಲಿಯ ಸಿಟ್ಟು ರಟ್ಟೆಯಲ್ಲಿಲ್ಲವೆನಿಸಿ ನನ್ನೊಳಗೇ ತಳಮಳಿಸಿದೆ. ಈ ಜನ ದನಗಳನ್ನೂ ಮುಟ್ಟಿ ಹೊಡೆಯುತ್ತಾರೆ, ಆದರೆ...?

ಈ ರಾಕ್ಷಸಾಕಾರದ ಪ್ರಶ್ನಾರ್ಥಕ ಚಿಹ್ನ ನನ್ನನ್ನು ಕೊರೆಯುತ್ತಿದ್ದಂತೆಯೇ ಒಂದು ದಿನ ನಮ್ಮ ಸಂಸ್ಥಾನದ ದಿವಾಣರು ಸಾಲೆಗೆ ಬಂದರು. ವರ್ಗದ ಹೊರ ಬಾಗಿಲಲ್ಲಿ ಕುಳಿತ ನನ್ನನ್ನು ನೋಡಿ, "ಈತ ಯಾರು? ಹೊರಗೇಕೆ ಕುಳಿತಿದ್ದಾನೆ?" ಎಂದು ಗುರುಗಳನ್ನು ಕೇಳಿದರು. ನಾನು ಅಸ್ಪೃಶ್ಯನಾದ್ದರಿಂದ ಹೀಗೆ ಮಾಡಲಾಗಿದೆಯೆಂದು ವಿನಮ್ರ ರೀತಿಯಲ್ಲಿ ವಿವರಿಸಿದರು ಗುರುಗಳು. ಅದನ್ನು ಕೇಳಿ ಸಿಟ್ಟಿಗೆದ್ದ ದಿವಾಣರು ಗುರುಗಳಿಗೆ ಚೆನ್ನಾಗಿ ಛೀಮಾರಿ ಹಾಕಿದರಲ್ಲದೆ ನನ್ನನ್ನು ವರ್ಗದೊಳಕ್ಕೆ ಕರೆದು ಉಳಿದೆಲ್ಲ ಹುಡುಗರ ಜೊತೆಯಲ್ಲೇ ಕೂಡಿಸಿದರು. ಆ ಕ್ಷಣಕ್ಕೆ ನನಗೊ ಸ್ವರ್ಗ ಮೂರೇ ಗೇಣು ಉಳಿದಂತೆ ಅನುಭವವಾಯಿತು. ಅಂದು ದಿವಾಣರಲ್ಲೇ ದೇವರನ್ನು ಕಂಡಂತೆ ನನಗನಿಸಿತು. ಆದರೆ ನಾನು ಏಕ್ ದಿನ್ ಕಾ ಸುಲ್ತಾನ್ ಮಾತ್ರನಾಗಿದ್ದೆನೆಂಬುದು ಅರಿವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ಮರುದಿನ ಸಾಲೆಗೆ ಬಂದಾಗ, ಒಮ್ಮೆ ಓಗ್ಗಿಸಿ ಕೈಬಿಟ್ಟ ರಬ್ಬರಿನಂತೆ ನಾನು ಯಥಾಸ್ಥಿತಿಗೆ ಮರಳಬೇಕಾಯಿತು. ಅಂದಿನಿಂದ ಮತ್ತೆ ಸಾಲೆಯಲ್ಲಿರುವಷ್ಟು ದಿನವೂ ನಾನು ನನಗಾಗಿ ಮೀಸಲು ಜಾಗವಾಗಿದ್ದ ಬಾಗಿಲ ಹೊರಗೇ ಕುಳಿತಿರಬೇಕಾಯಿತು.


*

ನಾನಿನ್ನೂ ಐದನೆಯ ವರ್ಗದಲ್ಲಿ ಕಲಿಯುತ್ತಿರುವಾಗಲೇ ನನ್ನ ಮದುವೆಯಾಯಿತು. ಆಗಲೇ ನಾನು ನನ್ನ ತಂದೆ ಭೀಮಪ್ಪನವರಿಗೆ ಮನೆತನದ ಉದ್ಯೋಗವಾಗಿದ್ದ ಹೊಲ್ಕಿ ಹೊಲೆಯುವುದರಲ್ಲಿ ಸಹಾಯ ಮಾಡುತ್ತಿದ್ದೆ. ನನ್ನ ವಿದ್ಯಾಭ್ಯಾಸ ಅಲ್ಲಿಗೆ ಮುಕ್ತಾಯವಾಯಿತು.

ದೇಶದ ಸ್ವಾತಂತ್ರ್ಯಕ್ಕಾಗಿ ಚಳವಳಿಯು ಎಲ್ಲೆಲ್ಲೂ ಹರಡುತ್ತಿದ್ದ ಕಾಲವದು. ನಮ್ಮಲ್ಲೂ ಕುರಡೂರು ರಾಮಣ್ಣನವರು ಹುಡುಗರ ಗುಂಪು ಕಟ್ಟಿಕೊಂಡು 'ಭಾರತಮಾತಾ ಕೀ ಜೈ', 'ಮಹಾತ್ಮಾ ಗಾಂಧೀಕಿ ಜೈ' ಎಂದು ಕೂಗುತ್ತ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದರು. ಅದರಿಂದಾಗಿ ನನ್ನಲ್ಲೂ ಆ ಬಗ್ಗೆ ಕುತೂಹಲ ಕುದುರಿತ್ತು. ನಮ್ಮೂರಿನ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಯಮೋಜಿ ನರಸಪ್ಪ ಮತ್ತು ವನಹಳ್ಳಿ ಮಹಾದೇವಪ್ಪನವರಿಂದ ಚಳವಳಿಯ ಬಗ್ಗೆ, ಗಾಂಧೀಜಿಯ ಬಗ್ಗೆ ಆಗೀಗ ಅಷ್ಟಿಷ್ಟು ಕೇಳುತ್ತಿದ್ದೆ. ಅದರಿಂದಾಗಿ ಜೀವನದಲ್ಲಿ ಒಮ್ಮೆಯಾದರೂ ಆ ಮಹಾತ್ಮನನ್ನು ನೋಡಬೇಕೆಂಬ ಆಸೆ ಮಾತ್ರ ಬಲವತ್ತರವಾಗುತ್ತಿತ್ತು.

ಅದು ಬಹುಶಃ ೧೯೩೪ರಲ್ಲಿರಬೇಕು. ಒಂದು ದಿನ ನಮ್ಮ ಓಣಿಯ ತಳವಾರ ಕರಿಯಪ್ಪನವರು ತಂದ ವಾರ್ತೆ ನಮ್ಮೆಲ್ಲರಲ್ಲಿ ಅಪೂರ್ವ ಉತ್ಸಾಹ ಮೂಡಿಸಿತು. ಗಾಂಧೀಜಿ ಬೈಲಹೊಂಗಲಕ್ಕೆ ಬರಲಿದ್ದಾರೆಂದು ಹೇಳಿದ ಅವರು ನಾವೆಲ್ಲ ಹುಡುಗರು ಅವರನ್ನು ನೋಡಲು ಹೋಗೋಣವೆಂದು ಸೂಚಿಸಿದರು. ಕೂಡಲೆ ಅದನ್ನೊಪ್ಪಿದೆವು. ಗಾಂಧೀಜಿ ಬರಲಿರುವ ದಿನ ಬೆಳಿಗ್ಗೆ ಬೆಳ್ಳಿ ಮೂಡುವ ಹೊತ್ತಿಗೆ ರೊಟ್ಟಿಯ ಗಂಟನ್ನು ಹೆಗಲಿಗೇರಿಸಿ ನಾವೆಲ್ಲ ನಮ್ಮೂರು ಬಿಟ್ಟು ಮೂರು ಹರದಾರಿ ದೂರದ ಬೈಲಹೊಂಗಲಕ್ಕೆ ಹೊರಟೆವು. ಎರಡು ಗಂಟೆ ನಡೆದ ನಂತರ ಮಲ

ಪ್ರಭೆಯ ದಂಡೆಗೆ ಬಂದೆವು. ಬೆಳಗಿನ ಹೊತ್ತು ಉಲ್ಲಾಸದಿಂದ ನದಿಯಲ್ಲಿ ಮನಸೋಕ್ತ ಮಿಂದು ಶುಭ್ರ ಖಾದಿ ಬಟ್ಟೆ ಧರಿಸಿದೆವು. ನಾನು ಆಗಲೆ ಕೆಲ ವರ್ಷಗಳಿಂದ ರಾಟಿಯಿಂದ ನೂಲುತ್ತಿದ್ದೆನಲ್ಲದೆ ಖಾದಿಯನ್ನು ಧರಿಸಲಾರಂಭಿಸಿದ್ದೆ. ಊಟದ ಶಾಸ್ತ್ರ ಮುಗಿಸಿ ಹೊಂಗಲದೆಡೆ ಮತ್ತೆ ಹೆಜ್ಜೆ ಹಾಕಿದೆವು. ಈಗಿನಂತೆ ಹಳ್ಳಿ ಹಳ್ಳಿಗೆ ಬಸ್ಸಿನ ಸೌಕರ್ಯವಿಲ್ಲದಿದ್ದ ಆ ಕಾಲದಲ್ಲಿ ಕಾಲುಗಳೇ ನಮ್ಮ ವಾಹನ. ಮುಂದೆ ಮುಂದೆ ಹೋದಂತೆ ಜನ ಗುಂಪುಗುಂಪಾಗಿ ನಮ್ಮಂತೇ ಹೊಂಗಲಕ್ಕೆ ನಡೆದಿದ್ದರು. ಎಲ್ಲರ ಬಾಯಲ್ಲೂ ಆ ಮಹಾತ್ಮನ ಬಗ್ಗೆಯೇ ಮಾತುಗಳು. ಮತ್ತೆರಡು ಗಂಟೆ ನಡೆದ ಬಳಿಕ ಹೊಂಗಲ ತಲುಪಿದೆವು. ಆದರೆ ನಾಲ್ಕು ತಾಸು ನಡೆದಿದ್ದರೂ ಶ್ರಮದ ಅನುಭವ ಮಾತ್ರ ಎಷ್ಟೂ ಅನಿಸುತ್ತಿರಲಿಲ್ಲ. ಹೊಂಗಲದಲ್ಲಿ ಜನರ ಉತ್ಸಾಹಕ್ಕೆ ಮಹಾಪೂರವೇ ಬಂದಂತೆ ತೋರುತ್ತಿತ್ತು. ಪೇಟೆಯ ರಸ್ತೆಗಳ ತುಂಬೆಲ್ಲ ಒಂದು ಇರುವೆಗೂ ಸ್ಥಳವಿಲ್ಲದಂತೆ ಜನಸಾಗರವೇ ಕಾಣುತ್ತಿತ್ತು. ಹಳೆಯ ಕಾಟನ್ ಮಾರ್ಕೆಟ್ ಹತ್ತಿರದ ಬಯಲಲ್ಲಿ ಸಭೆ ನಡೆಯಲಿತ್ತು. ಅದಕ್ಕೂ ಮುಂಚೆ ಹೊಂಗಲದ ಪ್ರಾಚೀನ ದೇವಾಲಯದ ಕರಗುಡಿಯಲ್ಲಿ ಹರಿಜನರನ್ನು ಪ್ರವೇಶ ಮಾಡಿಸಲಿದ್ದಾರೆ ಗಾಂಧೀಜಿ ಎಂದು ಸಾರಲಾಗಿತ್ತು. ಆಯುಷ್ಯದಲ್ಲೇ ಅದುವರೆಗೆ ದೇವರ ಗುಡಿಯನ್ನು ಎಂದೂ ಪ್ರವೇಶ ಮಾಡಿರದಿದ್ದ ನನಗಂತೂ ಅದೇನೋ ಅದ್ಭುತ ಘಟನೆಯಾಗಿಯೇ ಕಂಡಿತು. ಉಚ್ಚ ವರ್ಗದವರೇ ಹೆಚ್ಚಾಗಿರುವ ಈ ಸಮಾಜವನ್ನು ಎದುರುಹಾಕಿಕೊಂಡು ನಮ್ಮನ್ನು ಗುಡಿಯೊಳಗೆ ಕರೆದೊಯ್ಯುವೆನೆನ್ನುವ ಈ ಮನುಷ್ಯ ನಿಜಕ್ಕೂ ಮಹಾತ್ಮನೆ ಆಗಿರಬೇಕೆಂದೆನಿಸಿತು ನನಗೆ. ಅದೇ ವಿಚಾರದ ಗುಂಗಿನಲ್ಲಿ ನಡೆದಿದ್ದಾಗ ಯಾರೋ ನನ್ನನ್ನು ತಡೆದಂತಾಗಿ ಮುಖವೆತ್ತಿ ನೋಡಿದೆ. ಆ ಕಾಲದಲ್ಲಿ ಬೈಲಹೊಂಗಲದ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರೆನಿಸಿದ್ದ ಮೆಟಗುಡ್ಡ ಅಣ್ಣಪ್ಪನವರು ಮತ್ತು ಕಾಮತ ಶಂಕರರಾಯರು ಎದುರು ನಿಂತಿದ್ದರು. ಅವರ ಮುಖ ಯಾವುದೋ ಚಿಂತೆ



ಯಿಂದ ಗಂಭೀರವಾಗಿತ್ತು. ಅದೇಕೆಂಬುದನ್ನು ಅವರು ಆಗ ನನಗೆ ಹೇಳಲಿಲ್ಲವಾದರೂ ನಂತರ ನನಗೆ ಗೊತ್ತಾಯಿತು. ಹರಿಜನರ ಮಂದಿರ ಪ್ರವೇಶದ ವಿಧಾನವ ಮಾಡಲು ಇವರೆಲ್ಲರೂ ಒಪ್ಪಿಕೊಂಡಿದ್ದರಾದರೂ ಅದಾಗಬೇಕಾಗಿದ್ದ ಬೆಳಗಿನ ವರೆಗೂ ಒಬ್ಬ ಹರಿಜನನೂ ಅದಕ್ಕೆ ಸಿದ್ಧನಾಗಿರಲಿಲ್ಲ. ಯಾರನ್ನು ಮನವೊಲಿಸಲು ಯತ್ನಿಸಿದರೂ ಅವರು ಸಫಲರಾಗಿರಲಿಲ್ಲ. ನನ್ನನ್ನು ಕಂಡೊಡನೆಯೇ ಅಣ್ಣಪ್ಪನವರಲ್ಲಿ ಆಸೆಯ ಮಿಂಚು ಮೂಡಿರಬೇಕು. ಅವರು ತಟ್ಟನೆ ನನ್ನ ಹೆಗಲ ಮೇಲೆ ಕೈಯಿಟ್ಟು ಕೇಳಿಬಿಟ್ಟರು,

"ಗಂಗಪ್ಪ ನೀ ಹೋಕ್ಕೀಯೇನು ಗುಡ್ಯಾಗ?" ಎಂದು.

ಕ್ಷಣಾರ್ಧ ಏನು ಉತ್ತರಿಸಬೇಕೊ ನನಗೆ ತಿಳಿಯದಾಯಿತು. ನಾನು ಗುಡಿಯಲ್ಲಿ ಹೊಕ್ಕರೆ ದೇವರೇನು ಮಾಡುವನೋ ಎಂಬ ಭಯಕ್ಕಿಂತ ನಮ್ಮ ಜನಕ್ಕೆ ಅದು ಹಿಡಿಸುವದೇ ಎಂಬ ಶಂಕೆ ನನ್ನನ್ನು ಕಾಡುತ್ತಿತ್ತು. ಆದರೆ ಹಿರಿಯರ ಮಾತನ್ನು ನಿರಾಕರಿಸಲಾಗದೆ, 'ಹೂನ್ರಿ' ಎಂದುತ್ತರಿಸಿದೆ.

ಅವರಿಬ್ಬರೂ ಸಂತೋಷಾತಿರೇಕದಿಂದ ನನ್ನನ್ನು ಕೂಡಲೆ ಗಾಂಧೀಜಿಯವರ ಬಳಿ ಕರೆದೊಯ್ದರು. ನಾನು ಜನ್ಮದಲ್ಲಿ ಒಮ್ಮೆಯಾದರೂ ಕಾಣಬೇಕೆಂದು ಹಾತೊರೆಯುತ್ತಿದ್ದ ಆ ಮಹಾತ್ಮನ ಇಷ್ಟೊಂದು ಸಮೀಪ ನಾನು ನಿಂತಿದ್ದೆ. ಥಟ್ಟನೆ ಭಕ್ತಿಯಿಂದ ಅಡ್ಡಬಿದ್ದೆ. ಅವರು ನನ್ನನ್ನು ಹಿಡಿದೆಬ್ಬಿಸಿ ನಸುನಗುತ್ತಲೆ ನನ್ನ ಹೆಸರು, ಊರು, ವೃತ್ತಿ ಎಲ್ಲವನ್ನು ವಿಚಾರಿಸಿದರು, ಹಿಂದಿಯಲ್ಲಿ. ನಾನು ಕನ್ನಡದಲ್ಲಿ ಉತ್ತರವಿತ್ತೆ. ಶುಭ್ರ ಖಾದಿಯ ಒಂದು ಲಂಡ ಪಂಜಿಯನ್ನು ಉಟ್ಟಿದ್ದ ಅವರು ಅಂಥದೇ ಇನ್ನೊಂದನ್ನು ಹೊತ್ತಿದ್ದರು. ಈಗವರು ನನ್ನನ್ನು ತಮ್ಮ ಬಳಿಯೇ ಕೂಡಿಸಿಕೊಂಡರು. ನಾನು ಕರಗಿ ನೀರಾದೆ.

ಅನಂತರ ನಾವೆಲ್ಲ ಕರಗುಡಿಗೆ ನಡೆದೆವು. ಗಾಂಧೀಜಿಯ ಬಳಿಯಲ್ಲೇ ನಡೆಯುತ್ತಿದ್ದ ನನಗದೇನೋ ಹೆಮ್ಮೆ, ಅದೇನೊ ಭಯ, ಕಾತರ, ಒಂದು ವಿಚಿತ್ರ ಸಂಮಿಶ್ರ ಭಾವ – ಅದೇನೆಂದು ಇಂದಿಗೂ ಸರಿಯಾಗಿ ವ್ಯಕ್ತಪಡಿಸಲುಬಾರದು. ಅವರೇ ನನ್ನ ಕೈಹಿಡಿದು ಗುಡಿಯೊಳಕ್ಕೆ ನಡೆದರು. ಶತಶತಮಾನಗಳಿಂದ ಯಾವುದರಿಂದ ನಾವು ವಂಚಿತರಾಗಿದ್ದೆವೊ ಅದನ್ನೂ ಈ ಮಹಾತ್ಮನಿಗ ಸಾಧ್ಯವಾಗಿಸಿ ತೋರುತ್ತಿದ್ದಾನೆ. ಮರುಕ್ಷಣವೇ ಗರ್ಭಗುಡಿಯ ಹೊಸ್ತಿಲ ಬಳಿ ಬಂದಾಗ ನಾನು ಹೊರಳಿ ನೋಡಿದೆ. ಸಾವಿರಾರು ಕಣ್ಣುಗಳು ಗಾಂಭೀರ್ಯದಿಂದ ನನ್ನನ್ನೇ ನೋಡುತ್ತಿಯೆನಿಸಿತು. ನನ್ನ ಬೆನ್ನ ಹಿಂದೆ ಇಷ್ಟೆಲ್ಲ ಜನಬೆಂಬಲವಿದೆ, ಮಹಾತ್ಮನಿದ್ದಾನೆಂಬ ಅರಿವಿನಿಂದ ನನ್ನ ಉತ್ಸಾಹ ಇಮ್ಮಡಿಸಿತು. ಗಾಂಧೀಜಿಯವರೊಂದಿಗೆ ನಾನೂ ಗರ್ಭಗುಡಿಯನ್ನು ಪ್ರವೇಶಿಸಿದೆ. ಅನಂತರ ಎಲ್ಲವೂ ಆ ಮಹಾತ್ಮನ ಆದೇಶದಂತೆಯೇ ನಡೆಯಿತು. ಅಲ್ಲಿ ಸಿದ್ಧವಾಗಿದ್ದ ನದೀನೀರಿನಿಂದ ಈಶ್ವರನನ್ನು ತೊಳೆದು ಹೂ ಪತ್ರಿ ಏರಿಸಿದೆ. ವಿಭೂತಿ ಹಚ್ಚಿದೆ. ನೈವೇದ್ಯ ತೋರಿಸಿ ನಮಸ್ಕಾರ ಮಾಡಿ ನನ್ನ ಪಾತ್ರ ಮುಗಿಯಿತೆಂಬಂತೆ ಬದಿಗೆ ಸರಿಯಲಿದ್ದ ನನ್ನನ್ನು ಬಾಪು ಹಾಗೇ ಬಿಡಲಿಲ್ಲ. ಪ್ರಸಾದವನ್ನು ನಾನೇ ಹಂಚಬೇಕೆಂದು ಹೇಳಿದರಲ್ಲದೆ ಮೊದಲು ಪ್ರಸಾದವನ್ನು ನನ್ನ ಕೈಯಿಂದ ತಾವೇ ಸ್ವೀಕರಿಸಿದರು. ಅನಂತರ ಉಳಿದವರು ತಾವೇ ಮುಂದೆ ಬಂದು ಶಿಸ್ತಿನಿಂದ ಪ್ರಸಾದ ಸ್ವೀಕರಿಸಿದರು. ಎಲ್ಲರಿಗೂ ಕೊಟ್ಟಾದ ನಂತರ ನನಗೆ ಒಂದಿನಿತು ಕೂಡ ಪ್ರಸಾದ ಉಳಿದಿರಲಿಲ್ಲ. ಆದರೆ ನನ್ನ ಪಾಲಿಗೆ ಉಳಿದದ್ದು ಅಲ್ಲಿದ್ದ ಮತ್ತಾರಿಗೂ ಸಿಕ್ಕಿರಲಿಕ್ಕಿಲ್ಲ. ಅಷ್ಟು ದಿನ ಸಮಾಜದಲ್ಲಿ ಹೆಚ್ಚಿನವರೆಂದುಕೊಳ್ಳುವ ಎಲ್ಲರೂ ದೂರ ದೂರ ಇರಿಸಿದಂತಹ ಈ ಅನಾಮಧೇಯನನ್ನು ಮಹಾತ್ಮನು ಸಾರ್ವಜನಿಕವಾಗಿಯೇ ಎತ್ತಿ ಹಿಡಿದಿದ್ದ! ಆ ಧನ್ಯತೆಯ ಭಾವ ಮತ್ತಾರಿಗಿದೆ?!

*

ಅಂದು ಮಹಾತ್ಮನ ಸನ್ನಿಧಾನದಲ್ಲಿ ದೊರೆತ ದೀಕ್ಷೆ ನನ್ನ ಮಟ್ಟಿಗೆ ಅರ್ಥಪೂರ್ಣವಾದುದಾಗಿತ್ತು. ನಾನು ಸ್ವಾತಂತ್ರ್ಯಾಂದೋಲನದಲ್ಲೂ ಗಾಂಧೀಪ್ರಣೀತ ವಿಧಾಯಕ ಚಟುವಟಿಕೆಗಳಲ್ಲೂ ಹೆಚ್ಚೆಚ್ಚಾಗಿ ಭಾಗವಹಿಸತೊಡಗಿದೆ.

ಮುಂದೆ ಮೂರು ವರ್ಷಗಳ ನಂತರ ೧೯೩೭ರಲ್ಲಿ ಗಾಂಧೀಜಿ ಹುದಲಿಗೆ ಬರಲಿದ್ದಾರೆಂದು ತಿಳಿಯಿತು. ನಮ್ಮೂರಿನಿಂದ ೧೫ ಹರದಾರಿಗಳಿಗಿಂತ ದೂರವಿರುವ ಹುದಲಿಗೆ ದೊಡ್ಡವಾಡದ ಕಾರ್ಯಕರ್ತರು ನನ್ನನ್ನು ಕರೆದುಕೊಂಡು ಹೋದರು. ಅಲ್ಲಿಗೂ ನಾವೆಲ್ಲ ನಡೆದುಕೊಂಡೇ ಹೋದೆವು.

ಕುಮರೀ ಆಶ್ರಮದಲ್ಲಿದ್ದ ಮೂರು ದಿನ ವೈಯಕ್ತಿಕವಾಗಿ ನನ್ನ ಮಟ್ಟಿಗಂತೂ ಶಿಸ್ತು, ಸಂಯಮಗಳಲ್ಲಿ ಒಂದು ಬಗೆಯ ಶಿಕ್ಷಣವೇ ಆಗಿತ್ತು. ಸಮಾಜದಲ್ಲಿರುವ ಮೇಲು–ಕೀಳು ಎಂಬ ತಾರತಮ್ಯ ಭಾವನೆಯನ್ನೇ ಮೈಗೂಡಿಸಿಕೊಂಡು ಬೆಳೆದಿದ್ದ ನನಗೆ ಸಮತೆ ಸಮಾನ

ಧರ್ಮಗಳು ತಾವೇ ತಾವಾಗಿದ್ದ ಇಲ್ಲಿಯ ವಾತಾವರಣ ಹಿತವೆನಿಸಿತು. ಸಹಜೀವನ ಸಹಭೋಜನ ಎಷ್ಟೊಂದು ಸಹಜವೆನಿಸುವಂತಿತ್ತು. ಆ ಮಹಾತ್ಮನೊಂದಿಗೆ ಕುಳಿತು ಊಟ ಮಾಡುವಾಗ ನನಗೆಷ್ಟೂ ಸಂಕೋಚವೆನಿಸಲಿಲ್ಲ. ಮೂರು ಗುಂಡುಕಲ್ಲುಗಳನ್ನಿಟ್ಟು ಒಲೆ ಹೊತ್ತಿಸಿ ಕಸ್ತೂರಬಾ ಅಡಿಗೆ ಮಾಡುತ್ತಿರುವ ದೃಶ್ಯ ಇನ್ನೂ ಕಣ್ಣ ಮುಂದೆ ಕಟ್ಟಿದಂತೆಯೇ ಇದೆ. ಗಾಂಧೀಜಿಯ ಹತ್ತಿರ ಗಿಡದ ಬುಡದಲ್ಲಿ ಕುಳಿತುಕೊಂಡು ಅಲ್ಲಿಯ ಚಟುವಟಿಕೆಗಳನ್ನು ನೋಡುತ್ತಿದ್ದೆ; ಪ್ರಾರ್ಥನಾಸಭೆಯಲ್ಲಿ ಭಾಗವಹಿಸುತ್ತಿದ್ದೆ. ಆ ಕಾಲದಲ್ಲಿ ಘುದಲಿಗೆ ಬಂದಿದ್ದ ರಾಷ್ಟ್ರೀಯ ಧುರೀಣರನ್ನೆಲ್ಲ ಕಂಡೆ. ಭಾಷೆಯ ತೊಡಕು ಇತ್ತಾದರೂ ಅದೇನೋ ಒಂದು ಬಗೆಯ ಅನಿರ್ವಚನೀಯ ಆನಂದವೆನಿಸುತ್ತಿತ್ತು.

*

೧೯೪೮ರ ಪ್ರಾರಂಭದಲ್ಲೇ ಆ ಸಂಜೆ ಕಾಳ್ಗಿಚ್ಚಿನಂತೆ ಹಬ್ಬಿದ ಆ ವಾರ್ತೆ ಕಿವಿಗೆ ಬಿದ್ದಾಗ ನನ್ನನ್ನು ನಡುಗಿಸಿಬಿಟ್ಟಿತು. ನಮ್ಮ ಚಮ್ಮಾರ ಸಾಲೆಯಲ್ಲಿ ಕುಳಿತು ನಾನು ಗಳಗಳನೆ ಅತ್ತುಬಿಟ್ಟೆ. ಹಿಂದೆಂದೂ ನನ್ನಲ್ಲಿ ಬಾರದಿದ್ದಂಥ ಏನೇನೋ ಭಾವನೆಗಳು ನನ್ನನ್ನು ಅಂದು ಮುತ್ತಿರಬೇಕು. ಆ ಮಹಾತ್ಮನ ಸಾನ್ನಿಧ್ಯದಲ್ಲಿ ನಾನು ಹಿಂದೆಂದೂ ಕಂಡಿರದಂಥ ಮನಶ್ಶಾಂತಿಯನ್ನೂ ಆನಂದವನ್ನೂ ಅನುಭವಿಸಿದಂಥ ನನಗೀಗ ಎಲ್ಲೆಲ್ಲೂ ಬರಿದೋ ಬರಿದು, ತೆರವೋ ತೆರವಾಗಿ ತೋರತೊಡಗಿತು ಈ ಅಜಾತಶತ್ರುವಿಗೂ ಒಬ್ಬ ಶತ್ರು ಹುಟ್ಟಿಕೊಂಡನೆಂದು ನಂಬುವುದೂ ಕಠಿಣವಾಗಿತ್ತು. ನನಗೆ. ಮಾರನೆಯ ವರ್ಷವೇ ನಮ್ಮೂರಿನಿಂದ ರಾಜಘಾಟಿಗೆ ಹೋಗಿ ಸಮಾಧಿಯ ಮೇಲೆ ಪುಷ್ಪಗುಚ್ಛವನ್ನಿಟ್ಟು ಶ್ರದ್ಧಾಂಜಲಿಯನ್ನರ್ಪಿಸಿದೆ. ಆ ಸಮಾಧಿಯೆದುರು ನಾನು ನನ್ನೊಳಗೇ ನೋಡುತ್ತ ನಿಂತಾಗ ನನಗೆ ಮತ್ತೆ ಅದೇ ಅನಿರ್ವಚನೀಯ ಶಾಂತಿಯ, ಆನಂದದ ಕ್ಷಣಗಳನ್ನು ಅನುಭವಿಸಿದಂತಾಯಿತು. ಆ ಮಹಾತ್ಮನ ಭೌತಿಕ ಶರೀರ ಕಣ್ಮರೆಯಾಗಿದ್ದರೂ ಅವರ ಆತ್ಮ ರಾಷ್ಟ್ರದ ರಾಜಧಾನಿಯಲ್ಲಿ ಯಮುನೆಯ ದಂಡೆಯ ಮೇಲೆ ಸದಾ ಜಾಗ್ರತವಾಗಿದ್ದು ಈ ನವ ಸ್ವತಂತ್ರ ರಾಷ್ಟ್ರದ ಆಗುಹೋಗುಗಳ ಮೇಲೆ ಕಣ್ಣಿಟ್ಟುಕೊಂಡ ನಿಂತಿದೆಯೆನಿಸಿತು ನನಗೆ.

ಇದೀಗ ನಾನು ವಾನಪ್ರಸ್ಥಾಶ್ರಮಿ. ಆಯುಷ್ಯದ ೭೫ ವರ್ಷಗಳನ್ನು ಮುಗಿಸಿ ಗಾಂಧೀಜಿಯ ಕನಸಿನ ರಾಜ್ಯ ಚೂರುಚೂರಾಗಿ ಆ ಚೂರುಗಳು ಗಾಳಿ ಬೀಸಿದತ್ತ ಹಾರಿಹೋಗುತ್ತಿರುವುದಕ್ಕೆ ಮೂಕಸಾಕ್ಷಿಯಾಗಿ ನಿಂತಿದ್ದೇನೆ. ಬಾಪು ತೋರಿದ್ದೆಂದು ನನಗೆ ಮನವರಿಕೆಯಾದ ದಾರಿಯಲ್ಲಿ ಮುನ್ನಡೆದಿದ್ದೇನೆ. ನನ್ನ ನಾಲ್ಕೂ ಮಕ್ಕಳು ಸುಶಿಕ್ಷಿತರು. ಒಬ್ಬ ಮಗನಿಗೆ 'ಗಾಂಧಿ' ಎಂದೇ ಹೆಸರಿಟ್ಟು ತೃಪ್ತಿಪಟ್ಟುಕೊಂಡಿದ್ದೇನೆ. ಗಂಡುಮಕ್ಕಳಿಬ್ಬರೂ ಒಳ್ಳೆಯ ಹುದ್ದೆಗಳಲ್ಲಿದ್ದಾರೆ. ಹೆಣ್ಣುಮಕ್ಕಳು ದಾಯಿಯ ಶಿಕ್ಷಣ ಪಡೆದು ಕೈತುಂಬ ಗಳಿಸುತ್ತಿದ್ದಾರೆ.

ಹರಿಜನ–ಗಿರಿಜನರ ಉದ್ಧಾರದ ಹೆಸರಿನಲ್ಲಿ ಇಂದಿನ ಸರಕಾರಗಳು ಏನೇನೋ ಮಾಡುತ್ತಿವೆ. ಆದರೆ ಅಲ್ಲೆಲ್ಲೂ ಅಧಿಕಾರದಲ್ಲಿದ್ದವರು ಕೈಯೆತ್ತಿಕೊಡುವುದನ್ನು ಈ 'ದೀನ'ರು ಕೃತಜ್ಞತೆಯಿಂದ ಸ್ವೀಕರಿಸಬೇಕು. ಆದರೆ ಬಾಪು ಅಂದು ನನಗೆ ತೋರಿದ ಆತ್ಮೀಯತೆ, ಆ ಸಹಜ ಸಮಾನಭಾವವನ್ನು ಇಂದು ನನ್ನ ಬಂಧುಗಳಿಗೆ ಯಾರು ತೋರಬೇಕು? ಬಾಪು ಹೋದರು; ಅವರೊಂದಿಗೆಯೇ ನಮ್ಮ ಭವಿತವ್ಯದ ಆಸೆಯೂ ಕಮರಿ ಹೋಗಲಿಲ್ಲವಷ್ಟೆ? ✡

ಆ ಹೆಂಗಸಿನ ಅಂತ್ಯಯಾತ್ರೆಗೆ ಹಾಜರಿದ್ದವರು ಇಬ್ಬರು ಮಾತ್ರ. ಒಬ್ಬ ಆಕೆಯ ಗಂಡ. ಇನ್ನೊಬ್ಬ ಆಕೆಯ ಬಾಯ್‌ಫ್ರೆಂಡ್ ಎಂದು ಹೇಳಿಕೊಂಬಾತ. ಹೆಂಡತಿಯ ಸಾವು ಗಂಡನಿಗೆ ಎಷ್ಟರ ಮಟ್ಟಿಗೆ ದುಃಖವುಂಟು ಮಾಡಿತ್ತೋ ಗೊತ್ತಿಲ್ಲ; ಆತ ಮೌನದಿಂದಿದ್ದ. ಆದರೆ ಇನ್ನೊಬ್ಬ ಮಾತ್ರ ಬಲು ದುಃಖಿತನಾಗಿದ್ದ, ಚೀರಾಡುತ್ತಿದ್ದ.

ಕೊನೆಗೆ ಗಂಡನನ್ನು ಸಂತೈಸುತ್ತ, "ಆಗಬಾರದ್ದಾಗಿ ಹೋಯಿತು. ಮತ್ತೊಂದು ಮದುವೆ ಮಾಡಿಕೊಳ್ಳಿ" ಎನ್ನುತ್ತ ಅಲ್ಲಿಂದ ಹೋಗಿಬಿಟ್ಟ.

ಇದುವೇ ಜೀವ ಇದು ಜೀವನ

ಈಗ ಎಲ್ಲೆಲ್ಲೂ ರಾಮೋತ್ಸವದ ಸಂಗೀತ ಕಛೇರಿಗಳು ನಡೆಯುತ್ತಿರುವಂತೆ ಕೆಲವು ವರ್ಷಗಳ ಹಿಂದೆ ಸಂಭವಿಸಿದ ಘಟನೆಯೊಂದು ನನ್ನ ಮನಸ್ಸಿಗೆ ಬರುತ್ತಿದೆ. ಅಂದು ಪ್ರಖ್ಯಾತ ಗಾಯಕರೊಬ್ಬರ ಗಾಯನ ಏರ್ಪಾಡಾಗಿತ್ತು. ಚಪ್ಪರದ ಎಲ್ಲೆಡೆ ಕಿಕ್ಕಿರಿದ ಜನಸಂದಣಿ; ಸ್ವಲ್ಪ ಜಾಗವೂ ಖಾಲಿ ಬಿಡದಂತೆ ಜನಗಳನ್ನು ಒತ್ತೊತ್ತಾಗಿ ಕುಳ್ಳಿರಿಸಿದ್ದರು. ಬೇಸಿಗೆಯ ಧಗೆ ಬೇರೆ. ಆದರೂ ಸಂಗೀತ ಕೇಳುವ ಹಂಬಲದಿಂದ ರಸಿಕವೃಂದ ತಮ್ಮ ಬಾಯಿಗೆ ಬೀಗ ಹಾಕಿ ಕಿವಿಯನ್ನು ಅಗಲ ಮಾಡಿಕೊಂಡು ತವಕದಿಂದ ಕುಳಿತಿದ್ದರು. ಒಂದೆರಡು ಹಾಡುಗಳು ಮುಗಿದವು. ಮತ್ತೂ ಒಂದಿಷ್ಟು ಜನರು ಬಂದಿದ್ದರಿಂದ ಜನಗಳ ಒತ್ತಡ ಮತ್ತಷ್ಟು ಹೆಚ್ಚಾಯಿತು. ಈ ಉಸಿರುಗಟ್ಟಿಸುವ ಪರಿಣಾಮವಾಗಿಯೇ ವೃದ್ಧೆಯೋರ್ವಳಿಗೆ ತಲೆ ತಿರುಗಿದಂತಾಗಿ ಪ್ರಜ್ಞಾಹೀನಳಾಗಿ ಕೆಳಗುರುಳಿದಳು. ಅಕ್ಕಪಕ್ಕದ ಜನರ ಪಿಸುಮಾತುಗಳು ಒಬ್ಬರಿಂದೊಬ್ಬರಿಗೆ ಹರಡಿ ಇಡೀ ಚಪ್ಪರವೇ ಗುಜು ಗುಜು ಶಬ್ದದಿಂದ ತುಂಬಿ ಹೋಯಿತು. ಸ್ವಾಭಾವಿಕವಾಗಿ ಗಾಯಕರು ಹಾಡುವದನ್ನು ನಿಲ್ಲಿಸಬೇಕಾಯಿತು. ಸರಿ, ಒಬ್ಬೊಬ್ಬರೂ ತಮತಮಗೆ ತೋಚಿದಂತೆ ಪ್ರತಿಕ್ರಿಯೆ ವ್ಯಕ್ತಪಡಿಸತೊಡಗಿದರು. ಕೆಲವರಿಗೆ ವೃದ್ಧೆಯ ಬಗ್ಗೆ ಅನುಕಂಪ, ಅಲ್ಲದೆ ಅಂತಹ ಮುದುಕಿಯನ್ನು ಏಕಾಂಕಿಯಾಗಿ ಕಳುಹಿಸಿದ ಅವರ ಮನೆಯವರ ಬಗ್ಗೆ ಸಿಟ್ಟು, ಇನ್ನು ಇತರರಿಗೆ ತಾವು ಅನುಭವಿಸುತ್ತಿದ್ದ ಗಾಯನದ ರಸಾಸ್ವಾದನೆಗೆ ಧಕ್ಕೆ ಬಂದಿತಲ್ಲ ಎಂದು ಬೇಸರ ಹಾಗೂ ಕೋಪ. ಕೆಲವರಂತೂ ಕಾರ್ಯಕರ್ತರನ್ನು ದೂಷಿಸತೊಡಗಿದರು. ಈ ಗೊಂದಲದಲ್ಲಿ ಆ ಮುದುಕಿ ಹೇಗಿದ್ದಾಳೆಂದು ಅವಳಿಂದ ದೂರದಲ್ಲಿ ಕುಳಿತಿದ್ದ ನಮಗೆ ಅಷ್ಟಾಗಿ ಕಾಣಲಿಲ್ಲ. ಅಷ್ಟರಲ್ಲಿ ತರುಣನೊಬ್ಬ ಆ ಜಾಗದೆಡೆಗೆ ಧಾವಿಸುತ್ತಿರುವುದು ಕಂಡಿತು. ಸುತ್ತಲಿದ್ದ ಜನಗಳನ್ನು ಬದಿಗೆ ಸರಿಸಿ ಆತ ಮುದುಕಿಯ ಬಳಿ ಹೋದ. ಅವನು ಹೇಳಿದ್ದರಿಂದ ಇರಬೇಕು, ಮುದುಕಿಯ ಬಳಿ ಇದ್ದ ಜನರೆಲ್ಲ ಹಿಂದೆ ಸರಿದು ಅವಳಿಗೆ ಗಾಳಿ ಬರುವಂತೆ ಅನುಕೂಲ ಮಾಡಿದರು. ಇದರಿಂದಾಗಿ ನಮಗೂ ಅಲ್ಲಿ ನಡೆಯುತ್ತಿರುವ ವಿದ್ಯಮಾನ ನೋಡಲು ಅವಕಾಶವಾಯಿತು. ಅವರು ವೃದ್ಧೆಯನ್ನು ಪರೀಕ್ಷಿಸುತ್ತಿದ್ದ ರೀತಿ, ನಡೆಸುತ್ತಿದ್ದ ಉಪಚಾರ ನೋಡಿದರೆ ಅವರೊಬ್ಬ ಪರಿಣತ ವೈದ್ಯರು ಎಂಬುದು ಸ್ಪಷ್ಟವಾಗುವಂತಿತ್ತು. ಕೆಲವು ನಿಮಿಷಗಳಾದ ಮೇಲೆ ವೃದ್ಧೆಯು ಚೇತರಿಸಿಕೊಂಡು ಕುಳಿತುಕೊಳ್ಳುವಂತಾಯಿತು. ಕಾರ್ಯಕರ್ತರ ಸಹಾಯದಿಂದ ಆಕೆಯನ್ನು ಆಚೆಗೆ ಕರೆದುಕೊಂಡು ಹೋಗಿ ಅವಳ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಲಾಯಿತು. ಕರ್ತವ್ಯ ಮುಗಿಸಿ ಮುಗುಳ್ನಗೆಯೊಡನೆ ತಮ್ಮ ಸ್ಥಾನಕ್ಕೆ ಹಿಂತಿರುಗುತ್ತಿದ್ದ ಆ ತರುಣ ವೈದ್ಯರನ್ನು ಮುಂದಿನ ಸ್ಥಾನದಲ್ಲೇ ಕೂಡಬೇಕೆಂದು ಎಲ್ಲರೂ ಒತ್ತಾಯಿಸಿದರು. ಬಂದ ಅಡ್ಡಿ ನಿವಾರಣೆಯಾದೊಡನೆಯೇ ಸಂಗೀತ ಆರಂಭವಾಯಿತು. ಶ್ರುತಿಯನ್ನು ಪರೀಕ್ಷಿಸಿಕೊಂಡ ಗಾಯಕರು ಮುಂದಿನ ಸಾಲಿನಲ್ಲಿದ್ದ ತರುಣ ವೈದ್ಯರ ಕಡೆ ಕೈ ತೋರಿಸುತ್ತಾ,

"ಎಂದುರೋ ಮಹಾನುಭಾವುಲು" ಎಂಬ ತ್ಯಾಗರಾಜರ ಕೃತಿಯನ್ನು ಹಾಡಿದಾಗ ಶ್ರೋತೃಗಳು ಮೆಚ್ಚುಗೆಯ ಕರತಾಡನ ಮಾಡಿದರು.

—ವಿ. ಆರ್. ಫಣೀಂದ್ರಸಿಂಹ

ಲೋಕಸಭೆಯ ಅಧ್ಯಕ್ಷರಾಗಿದ್ದ ಕೆ. ಎಸ್. ಹೆಗಡೆಯವರನ್ನು ಸನ್ಮಾನಿಸಲು ದಿಲ್ಲಿಯ ಕರ್ನಾಟಕ ಭವನದಲ್ಲಿ ಏರ್ಪಡಿಸಿದ್ದ ಸಮಾರಂಭ. ಅಧ್ಯಕ್ಷ ಸ್ಥಾನ ವಹಿಸಿದ್ದ ಟಿ. ಎ. ಪೈಯವರು ಹೇಳಿದ ಸ್ವಾರಸ್ಯಕರ ಪ್ರಸಂಗ:

ಇಂದಿರಾ ಗಾಂಧಿಯವರ ಸರಕಾರದಲ್ಲಿ ಸಚಿವರಾಗಿ ಅವರು ಸೇರಿಕೊಳ್ಳುವಾಗ ಅವರಿಗೆ ಬಹು ಮೊದಲು ಲಭಿಸಿದ್ದ ಪದ್ಮ ಭೂಷಣ ಪ್ರಶಸ್ತಿ ಪತ್ರವನ್ನು ಎಲ್ಲಿಯೋ ಕಳೆದುಕೊಂಡಿದ್ದರು. ಅನಂತರ ಪ್ರಶಸ್ತಿ ಇದ್ದರೇನು, ಬಿಟ್ಟರೇನು ಎಂದು ಆ ಕುರಿತು ನಿರ್ಲಿಪ್ತರಾಗಿಯೇ ಇದ್ದರಂತೆ. ಆದರೆ ಅವರ ಮಿತ್ರರನೇಕರ ಒತ್ತಾಸೆಯಿಂದ ಪ್ರಶಸ್ತಿ ಪತ್ರದ ಯಥಾನಕಲು ಪ್ರತಿಗಾಗಿ ಭಾರತದ ಮಾನ್ಯ ರಾಷ್ಟ್ರಪತಿಯವರಿಗೆ ಬರೆದುಕೊಂಡರಂತೆ. ಪತ್ರ ಬರೆದ ಮೂರು ತಿಂಗಳಲ್ಲೇ (!) 'ಯಥಾ ನಕಲು ಪದ್ಮ ಭೂಷಣ ಪ್ರಶಸ್ತಿ ಪತ್ರಕ್ಕಾಗಿ ರೂಪಾಯಿ ಐವತ್ತನ್ನು ಪಾವತಿಸುವುದು' ಎಂಬ ಒಕ್ಕಣೆಯ ಪತ್ರ ಅವರಿಗೆ ಬಂದಿತಂತೆ. ತನ್ನ ಪ್ರಶಸ್ತಿಯ 'ಬೆಲೆ' ಕೇಳಿ ತಮಗೇ ಮರುಕ ಬಂದಿತೆಂದು ಹೇಳುತ್ತಾ ಪೈಯವರು ಸಭಿಕರ ನಗೆಯಲ್ಲಿ ಪಾಲಗೊಂಡರು.

'ಪ್ರಶಸ್ತಿಗಳಾಗಲಿ ಸ್ಮಾರಕಗಳಾಗಲಿ ಶಾಶ್ವತವಾಗಿ ಉಳಿಯುವವೆಂಬ ಬಗ್ಗೆ ನನಗೆ ಸಂಶಯವಿದೆ– ಕಾಲ ಇಲ್ಲವೆ ನಮ್ಮ ಮುಂದಿನ ಜನಾಂಗ ನಾವು ಕಡೆದಿಟ್ಟ ಸ್ಮಾರಕಗಳನ್ನೂ ಕೆತ್ತಿಸಿಟ್ಟ ಮೂರ್ತಿಗಳನ್ನೂ ಕೆಡವಬಹುದು. ಆದರೆ ಸಂಸ್ಕೃತಿ, ನಿಷ್ಕಲಂಕ ಸೇವೆಯಿಂದ ಜನತೆಯ ಹೃದಯದಲ್ಲಿ ಗಳಿಸಿಕೊಂಡ ಸ್ಥಾನವನ್ನು ಯಾರಾದರೂ ಕಸಿದುಕೊಳ್ಳುವುದು ಸಾಧ್ಯವೆ?' ಎಂದವರು ತಮ್ಮ ಮಾತು ಮುಗಿಸಿದರು.

—ಬಿ. ಮಂಜುನಾಥ ಕಾಮತ

ರಾತ್ರಿ ಸುಮಾರು ೪-೨೦ ಆಗಿದ್ದಿರಬೇಕು. ಹಾಸಿಗೆಯಲ್ಲಿ ಮಲಗಿದ್ದ ನನಗೆ ತೊಟ್ಟಿಲಿನಲ್ಲಿ ಮಲಗಿಸಿ ತೂಗಿದಂತಾಗಿ ಎಚ್ಚರವಾಯಿತು. ಅಗಲೇ ಮನೆಯ ಹೊರಗೆ ಜನರ ಗದ್ದಲ ಕೇಳಿಬಂತು. ಭೂಮಿಯು ಅದುರುತ್ತಿದೆ, ಕಂಪಿಸುತ್ತಿದೆ ಎಂಬುದರ ಅರಿವು ನನಗಾಯಿತು. ಭಯಾಕ್ರಾಂತನಾಗಿ ನಾನು ನನಗರಿವಿಲ್ಲದಂತೆಯೆ ಉಟ್ಟ ಬಟ್ಟೆಯಲ್ಲಿಯೇ ಬೀದಿಗೆ ಇಳಿದಿದ್ದೆ. ಇಷ್ಟು ಹೊತ್ತಿಗೆ ಎಚ್ಚೆತ್ತ ತಂದೆಯವರು ನನ್ನ ಹೆಸರು ಹಿಡಿದು ಕೂಗಿದರು. ಒಳಗೆ ಹೋದಾಗ ನನ್ನ ಮನ ಕಂಪಿಸಿತು. ಭೂಮಿಯ ಕಂಪನ ಆಗಲೇ ನಿಂತುಬಿಟ್ಟಿತ್ತು. ಹೊರಕ್ಕೆ ಓಡಿದಾಗ ಮನೆಯಲ್ಲಿ ಮಲಗಿದ್ದ ತಾಯ್ತಂದೆಯರ, ಅಕ್ಕತಮ್ಮಂದಿರ ಯೋಚನೆ ನನಗೆ ಬರಲಿಲ್ಲ. ಎಂತಹ ಕೃತಘ್ನ ನಾನು ಎಂದುಕೊಂಡೆ.


ತಾಯ್ತಂದೆಯರ ಪ್ರೀತಿ ಎಂಬ ಬಾವಿಗೆ ಆಳವೆಷ್ಟು? ಎದ್ದು ಕೂಗಿದ ತಕ್ಷಣ ನನ್ನನ್ನು ತಂದೆಯವರು ಒಂದು ಕಡೆ, ಎದ್ದ ತಕ್ಷಣ ಅವರನ್ನು ನೆನೆಯದೇ ಮನೆ ಬಿಟ್ಟ ನಾನು ಇನ್ನೊಂದು ಕಡೆ. ಎಚ್ಚರ, ಅನುಭವಗಳು ಒಂದೇ ಆದರೂ ಮನಸ್ಸಿನ ಪ್ರತಿಕ್ರಿಯೆಗಳಲ್ಲಿ ಎಷ್ಟು ವ್ಯತ್ಯಾಸ ನಮ್ಮಿಬ್ಬರಿಗೂ ಎಂಬುದು ನನ್ನ ಗಮನಕ್ಕೆ ಬಂದಾಗ ನನ್ನ ಬಗೆಗೇ ನನಗೆ ಮುಜುಗರವಾಗದಿರಲಿಲ್ಲ.

—ದಾಮೋದರ ಕೃಷ್ಣ ಪೋತುವಾಲ

****

ಈತ ಓರ್ವ
ಎಲ್ ವಿ ಟಿ ಗ್ಲೂಕೋಸ್ ಬಿಸ್ಕತ್ ಪ್ರೇಮಿ

ಕಳೆದು ಹೋದ ಶಕ್ತಿಯನ್ನು ಮತ್ತೆ ಗಳಿಸಲು ಒಂದು ಚೂರು
ಎಲ್ ವಿಟಿ ಬಿಸ್ಕತ್ತು ಸಾಕು. ಅದು ಅತ್ಯಂತ ರುಚಿಕರ.



ಅದು ತನಗೆ ಅಗಾಧ
ಶಕ್ತಿ ಕೊಡುತ್ತದೆಂದು ಆತ ಹೇಳುತ್ತಾನೆ.

ಎಲ್ ವಿ ಟಿ ಪ್ರಾಡಕ್ಟ್ಸ

ಪಿ.ಬಿ. ನಂ. 26 ಹುಬ್ಬಳ್ಳಿ-580021

LVT. 3-79 K.A

ಕಣ್ಮರೆಯಾಗುತ್ತಿರುವ ಕೈಗಾರಿಕೆ

ಪ್ರಾಚೀನ ಕಲೆ 'ಕಸೂತಿ'


ಚಿತ್ರ ಮತ್ತು ಲೇಖನ : **ಎನ್. ಸಿ. ದೇಸಾಯಿ**

ಕಸೂತಿ ಎಂದರೆ ಮರೆಯದು ಕೇಳಿ! ಉತ್ತರ ಕರ್ನಾಟಕದಲ್ಲಿಯ ವಿಶಿಷ್ಟ ರೀತಿಯಲ್ಲಿ, ಅದರಲ್ಲೂ 'ಇಳಕಲ್' ಸೀರೆಗಳ ಮೇಲೆ ಹಾಕಿದ 'ಟೆಂಕಿ' ಕಸೂತಿಗೆ ಶ್ರೇಷ್ಠ ಉದಾಹರಣೆ. ಬರಿ ಸೀರೆಗಳ ಮೇಲಲ್ಲ ಕುಪ್ಪಸ, ಮಕ್ಕಳ ಅಂಗಿ (ಪರಕಾರ) ಕುಂಚಿಗೆ (ಕುಲಾಯಿ) ಹಾಗೂ ಮನೆಯಲ್ಲಿಯ ಅಲಂಕಾರಿಕ ವಸ್ತುಗಳ ಮೇಲೂ ಇದನ್ನು ಕಾಣುತ್ತೇವೆ.

ಈ ಕಲೆಗೆ ಒಂದು ಇತಿಹಾಸವಿದೆ. ಗುಪ್ತ ಸಾಮ್ರಾಜ್ಯದ ಅವನತಿಯಾದ ನಂತರ ಭಾರತವು ೬ನೇ ಶತಮಾನದಿಂದ ೧೦ನೆಯ ಶತಮಾನದ ಕಾಲದಲ್ಲಿ ಮತ್ತೊಂದು ಸುವರ್ಣಯುಗವನ್ನು ಕಂಡಿತು. ಪೈಠಣದ ಸಾತವಾಹನರು, ಬದಾಮಿಯ ಚಾಲುಕ್ಯರು, ಮಾನ್ಯಖೇಡದ ರಾಷ್ಟ್ರಕೂಟರು ಕಂಚಿಯ ಪಲ್ಲವರು, ಪಾಂಡ್ಯರು, ಚೋಳರು, ಅಲ್ಲದೆ ಇನ್ನು ಕೆಲ ಚಿಕ್ಕ ಪುಟ್ಟ ರಾಜರು, ನರ್ಮದೆಯ ದಕ್ಷಿಣದಲ್ಲಿ ಆಳಿದರು. ಇವರಲ್ಲಿ ಒಳಜಗಳ, ಯುದ್ಧಗಳು ನಡೆಯುತ್ತಿದ್ದರೂ ಧಾರ್ಮಿಕ ಪ್ರವೃತ್ತಿ, ಕಲಾಪ್ರೇಮಗಳು ಮಾತ್ರ ಸಮನಾಗಿದ್ದುವು.

ಅದು ಬೌದ್ಧಧರ್ಮದ ಅವನತಿಯ ಕಾಲ. ಈ ರಾಜಮಹಾರಾಜರುಗಳೆಲ್ಲ ಹಿಂದೂಧರ್ಮದ ಏಳಿಗೆಗೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರು. ಅನೇಕ ದೇವಾಲಯಗಳು, ಗುಹೆಗಳು ಅಸ್ತಿತ್ವಕ್ಕೆ ಬಂದವು. ಇವೆಲ್ಲ ಇಂದಿಗೂ ಅವರ ಕಲಾಪ್ರೇಮದ ದ್ಯೋತಕಗಳಾಗಿ ನಿಂತಿವೆ. ಶಿಲ್ಪ ಕಲೆಯಷ್ಟೇ ಅಲ್ಲ. ಉಳಿದ ಕಲೆಗಳಿಗೂ ಅವರು ಪ್ರೋತ್ಸಾಹವಿತ್ತರು.

ಪುರುಷಸ್ತೋಮ, ಹೀಗೆ ಕಲೆಯ ನಿರ್ಮಾಣದಲ್ಲಿ, ಬೇಸಾಯದಲ್ಲಿ, ಇನ್ನು ಕೆಲವರು ಈ ಯುದ್ಧಗಳಲ್ಲಿ ತೊಡಗಿದಾಗ, ಸ್ತ್ರೀಸಮೂಹ ತನ್ನ ವೇಳೆಯ ಉಪಯೋಗವನ್ನು ಈ ಕಸೂತಿಯ ಕಲೆಯೆಡೆಗೆ ಹರಿಸಿರುವದೂ ಸಹಜವೆ ಎಂದು ಊಹಿಸಬಹುದು. ಇನ್ನೊಂದು ಗಮನಾರ್ಹ ವಿಷಯವೆಂದರೆ, ಪುರುಷರಿಂದ ನಿರ್ಮಾಣವಾಗುತ್ತಿದ್ದ ಶಿಲ್ಪದ ಛಾಯೆಯೂ ಈ ಕಸೂತಿಯಲ್ಲಿ ಕಾಣಬರುವುದು. ಮಂದಿರಗಳಲ್ಲಿ, ರಥಗಳ ಮೇಲೆ ನಿರ್ಮಾಣವಾಗುತ್ತಿದ್ದ ನಕ್ಷೆಗಳೇ ಕಸೂತಿಯಂ



↑ ಇಳಕಲ್ಲ ಸೀರೆಯ ವೈಶಿಷ್ಟ್ಯ, ವಿವಿಧ ನಮೂನೆಯ ಕಸೂತಿ ವಿನ್ಯಾಸಗಳು







ಕಣ್ಣಲ್ಲಿ ಕಣ್ಣಿಟ್ಟು ಹಣೆಯಬೇಕು

ವಿಷಯಗಳಾಗಿರುವದನ್ನೂ ಸೂಕ್ಷ್ಮವಾಗಿ ಅವಲೋಕಿಸಬಹುದು.

ಗೋಪುರ, ರಥ, ಪಲ್ಲಕ್ಕಿ, ದೀಪಸ್ತಂಭ, ವೃಂದಾವನ, ಹಸರಣೆ, ಅಲ್ಲದೇ ಹುಲಿ, ಸಿಂಹ, ಆನೆ, ಜಿಂಕೆ, ಬಸವ ಮುಂತಾದ ಪಶುಗಳೂ ನವಿಲು, ಗಿಳಿ ಮುಂತಾದ ಪಕ್ಷಿಗಳೂ ಹೂವು, ಗಿಡಬಳ್ಳಿಗಳೂ ಕಸೂತಿ ಹಣಿಕೆಯ ವಸ್ತುಗಳಾದವು.

ಈ ಕಸೂತಿ ಕಲೆ ಹೆಚ್ಚಾಗಿ ಲಿಂಗಾಯತ ಬಾಂಧವರ ಕುಟುಂಬಗಳಲ್ಲಿಯೇ ನೆಲೆಸಿ ಬೆಳೆದು ಬಂದಿದೆ ಎಂಬುದು ಮಹತ್ವದ ವಿಷಯ. ಇಷ್ಟೇ ಅಲ್ಲ, ಮದುವೆಯಾದ ಮಗಳಿಗೆ, ಪೂರ್ಣ ಕಸೂತಿಯಿಂದ ಸಿದ್ಧವಾದ ಒಂದು ಸೀರೆಯನ್ನು ಕೊಡಲೇಬೇಕೆಂಬ ಕಟ್ಟಳೆಯೂ ಇವರಲ್ಲಿತ್ತು. ಕಾಲಕ್ರಮೇಣ ಈ ಕಟ್ಟಳೆ ಸಡಿಲಾಯಿತೆಂಬುದು ವಿಷಾದನೀಯ. ಈಗಲೂ ಶಾಸ್ತ್ರಕ್ಕೆಂದು ಮದುವೆಯ ಯಾವುದಾದರೂ ಒಂದು ಸೀರೆಯ ಮೇಲೆ ಒಂದೈದು ಚುಕ್ಕಿ ಕಸೂತಿಯ ನಕ್ಷೆಯನ್ನು ಹಾಕಿ ಕೊಡುವ ಪರಿಪಾಠವಿದೆಯಂತೆ.

ತಾಂತ್ರಿಕ ದೃಷ್ಟಿಯಿಂದ ಈ ಕಲೆಯ ಕಡೆಗೆ ಕಣ್ಣು ಹೊರಳಿಸಿದಾಗ, ಮುಖ್ಯವಾಗಿ ನಾಲ್ಕು ಹಣೆಯುವ ರೀತಿಗಳನ್ನು ಗುರುತಿಸುತ್ತೇವೆ. "ಗಂಟು, ಮುರಗಿ, ನೇಯಿಗಿ, ಮತ್ತು ಮೆಂತಿ" ಈ ನಾಲ್ಕು ಮುಖ್ಯ ರೀತಿ, ಇದನ್ನು ಹಣೆಯುವ ಪದ್ಧತಿಯೂ ಅತ್ಯಂತ ಸೂಕ್ಷ್ಮವಾದುದು. ಬಟ್ಟೆಯ ನೇಯ್ಗೆ ನೂಲುಗಳನ್ನು ಎಣಿಸಿ ಹಣೆಯಬೇಕು. ಇದು ತೀರ ತೊಂದರೆಯ ಕೆಲಸ.

ಇನ್ನು ನಕ್ಷೆಗಳನ್ನು ಸುಲಭವಾಗಿ ಗುರುತಿಸಲು ಅಥವಾ ಹಣೆಯಲು ಆದೇಶ ನೀಡಲು ಅಂಚು, ಬುಟ್ಟಿ ಮತ್ತು ದೊಡ್ಡ ನಕ್ಷೆ (designs)ಗಳಿಗೆ ವಿವಿಧ ರೀತಿಯ ಹೆಸರುಗಳಿಂದ ಕರೆದಿದ್ದಾರೆ.

ಅಂಚುಗಳು :

ಮುರಗಿ ಪಟ್ಟಿ, ಪಡವಲ ಹೂವಿನ ಪಟ್ಟಿ, ಗುಂಡಾಳ ಪಟ್ಟಿ, ತೆಂಗಿನ ಪಟ್ಟಿ, ಕಾಯಿ ಪಟ್ಟಿ, ಶಂಕ ಮುರಗಿ ಪಟ್ಟಿ, ವಂಕಿ ಪಟ್ಟಿ ಮುಂತಾದ ಅನೇಕ ಹೆಸರುಗಳು ಅಂಚಿಗೆ ಇವೆ.

ಮಧ್ಯೆ ಹಣೆಯುವ ನಕ್ಷೆಗಳು :

ರಥ, ಹಕ್ಕಿಕಾಲ ಗೋಪುರ, ಪಡವಲ ಹೂವಿನ ಗೋಪುರ, ಗುಡ್ಡೋಳಿ, ಕಮಲ, ಪಣಜಿ, ಶಂಕು ಮುರಗಿಕಮಲ, ಆಳಿಂಗನ ಮಡುವು, ರಾಜಗೊಂಡ ಗಿಡ, ಮುರಗಿ, ಕಮಲ, ಹೀಗೆ ಅನೇಕ ಪ್ರಕಾರದ ನಕ್ಷೆಗಳಿವೆ. ಇದೇ ರೀತಿ ಬುಟ್ಟಾಗಳಿಗೂ (ಸೀರೆಯ ಮಧ್ಯ ಹಣೆಯುವ ಚುಕ್ಕಿ) ವಿವಿಧ ಹೆಸರುಗಳುಂಟು.

ಇವಲ್ಲದೆ ತೊಟ್ಟಿಲು, ಸಮಯಿ, ಹೂವಿನ ಕುಂಡಲ ಮುಂತಾದ ಅನೇಕ ಗೃಹೋಪಯೋಗಿ ವಸ್ತುಗಳೂ ಕಸೂತಿಯ ನಕ್ಷೆಗಳಾಗಿ ಪರಿಣಮಿಸಿವೆ.

ಹಿಂದೀ ಭಾಷೆಯಲ್ಲಿ ಹೆಣಿಕೆಯ ಕೆಲಸಕ್ಕೆ 'ಕಸೀದಾ' ಎಂದು ಹೇಳುವದುಂಟು. ಕನ್ನಡದ 'ಕಸೂತಿ'ಯಿಂದಲೇ ಈ ಶಬ್ದ ಅಲ್ಲಿಗೆ ಹೋಯಿತೋ ಏನೋ. ಹೆಣೆಯುವ ರೀತಿ ಮತ್ತು ಅವುಗಳ ಹೆಸರುಗಳಲ್ಲಿಯೂ ಭಿನ್ನತೆಯನ್ನು ಕಾಣುತ್ತೇವೆ. ಉತ್ತರ ಪ್ರದೇಶದಲ್ಲಿ ಹೆಣಿಕೆಯ ಕಲೆಗೆ 'ಚಿಕ್ಕಾಂತರಿ' ಎಂದರೆ, ಬಂಗಾಲಿಗಳು 'ಕಾಂಥಾ' ಎಂದು ಕರೆಯುತ್ತಾರೆ. ಪಂಜಾಬಿಗಳು 'ಫುಲಕರಿ' ಎನ್ನುತ್ತಾರೆ. ಕಚ್ಛ ರಾಜಸ್ಥಾನಗಳಲ್ಲಿ 'ಚಿಕನ ಮತ್ತು ಅಭಲಾ' ಎಂದು ಕರೆಯಲ್ಪಡುತ್ತದೆ ಈ ಕಲೆ.

ಕಾಶ್ಮೀರಿ ಹೆಣಿಕೆಯ ಉಣ್ಣೆಯ ಶಾಲುಗಳು ಭಾರತದಲ್ಲಷ್ಟೇ ಅಲ್ಲ, ವಿದೇಶಗಳಲ್ಲಿಯೂ ಪ್ರಸಿದ್ಧಿ ಹೊಂದಿವೆ. ಹೀಗಾಗಿ ಅಲ್ಲಿಯ ಕೆಲ ಜನರಿಗೆ ಹೆಣಿಕೆ ಒಂದು ಉದ್ಯೋಗವಾಗಿದೆ. ಆದರೆ, ಕರ್ನಾಟಕದ 'ಕಸೂತಿ' ಕೇವಲ ಗೃಹಕೌಶಲ್ಯದ ವಸ್ತುವಾಗಿಯೇ ಉಳಿಯಿತು. ಇದಕ್ಕೇನು ಕಾರಣ?

ಬಹುಶಃ 'ಹುತ್ತಿನ ಚೀಲ'ವನ್ನು ತುಂಬಿಸುವದೇ ಒಂದು ದೊಡ್ಡ ಭಾರವಾಗತೊಡಗಿದಾಗಿನಿಂದ ಮಾನವನ ಬಿಡುವಿನ ವೇಳೆಯಲ್ಲಿ ಅದಕ್ಕೆಂದೇ ಹೆಚ್ಚು ವಿನಿಯೋಗವಾಗತೊಡಗಿ ಕಲೆ, ಕೌಶಲದೆಡೆ ಲಕ್ಷ್ಯ ಕಡಿಮೆಯಾಗಿದ್ದಿರಬೇಕು. ಆ ಕಾರಣವಾಗಿಯೇ 'ಕಸೂತಿ' ಕಲೆ ಮೇಲೂ ಕಾರ್ಮೋಡ ಹರಿದು ಬಂದಿರಬೇಕು. ಮುಕ್ಕಾಲು ಶತಮಾನ ಗಳಷ್ಟು ಹಿಂದೆಯಷ್ಟೇ ಊರ್ಜಿತಾವಸ್ಥೆಯಲ್ಲಿದ್ದ 'ಕಸೂತಿ' ಈಗ ಅಂಥದೊಂದು ಕಲೆ ಇತ್ತು ಎಂಬ ನೆನಪು ಮಾತ್ರವಾಗಿ ಉಳಿದಿದೆ.

•

ಅಳಿಯುತ್ತಿದ್ದ ಈ ಕಲೆಯನ್ನು ಉಳಿಸಲು ಪ್ರಯತ್ನಿಸಿದ ಹಲವರಲ್ಲಿ ಪ್ರಮುಖರೆಂದರೆ ಧಾರವಾಡದ ಜನತಾ ಶಿಕ್ಷಣ ಸಮಿತಿಯ ದಿ. ಹುಕ್ಕೇರಿ ರಾಮರಾಯರು. ಕಾಲೇಜು ಶಿಕ್ಷಣದೊಂದಿಗೇ ಹೀಗೆ ಕ್ಷೀಣವಾಗುತ್ತಿರುವ ಕುಶಲ ಕಲೆಗಳು ಬದುಕಬೇಕು ಬೆಳೆಯಬೇಕು ಎಂಬ ಉದ್ದೇಶದಿಂದ, ಕುಶಲ ಕೈಗಾರಿಕೆಯ ಭಾಗವೊಂದನ್ನು ಇಲ್ಲಿ ಪ್ರಾರಂಭಿಸಿದರು. ಪ್ರೋತ್ಸಾಹವಿಲ್ಲದೇ ಮೂಲೆಗುಂಪಾಗಿದ್ದ ಕಸೂತಿಯ ಹೆಣಿಕೆಯ ಪ್ರವೀಣರನ್ನು ಕರೆ ತಂದು ಕೆಲಸ ಕೊಟ್ಟರು. ತರಬೇತಿ ಪಡೆಯುವವರಿಗೆ ಮಾಸಾಶನ ಕೊಟ್ಟು (ವರ್ಷಕ್ಕೆ ಆರು ಜನಕ್ಕೆ ಮಾತ್ರ) ಈ ಕಸೂತಿಯ ಶಿಕ್ಷಣವನ್ನು 'ವಿದ್ಯಾಗಿರಿ'ಯ ಜನತಾ ಕಾಲೇಜಿನಲ್ಲೀಗ ನೀಡಲಾಗುತ್ತಿದೆ ಎಂಬುದು ಸಂತೋಷದ ಸಂಗತಿ.

ಕಾಶ್ಮೀರದ ಹೆಣಿಕೆಯಂತೆ ಈ 'ಕಸೂತಿ' ಒಂದು ಉದ್ಯೋಗವಾಗಿ, ಹಣ ಗಳಿಸುವ ಸಾಧನವಾಗಿ ಮಾತ್ರ ಹಿಂದೆ ಯಾವ ಕಾಲಕ್ಕೂ ಪರಿಣಮಿಸಿಲ್ಲ. ಅದಕ್ಕೆ ಕಾರಣವೂ ಇದೆ. ಈ ಕಲೆ ಅತಿ ಶ್ರಮದ್ದು. ಸಾಕಷ್ಟು ವೇಳೆ ಹಿಡಿಯುವಂಥದ್ದೂ ಆಗಿರುವುದರಿಂದ ಇದು ಕೇವಲ ಗೃಹಕಲೆಯಾಗಿಯೇ ಉಳಿದು ಬೆಳೆದುಬಂತು.

ಆದರೆ ಹಳ್ಳಿಯಿಂದ ಈಗ ಪಟ್ಟಣಕ್ಕೆ ತರಬೇತಿ ಕೇಂದ್ರಕ್ಕೆ ಬಂದಾಗಿನಿಂದ. ಇದಕ್ಕೆ ಬೇಡಿಕೆ ಹೆಚ್ಚಾಗಿದೆ. ಮುಂಬಯಿಯ ಶ್ರೀಮಂತ ಜನರಿಂದ ಬೇಡಿಕೆ ಬರುತ್ತಿದೆ. ಬರಿ ಸೀರೆ ಹಾಗು ಮಹಿಳೆಯರ ವಸ್ತ್ರಗಳಿಗಾಗಿ ಮೀಸಲಾಗಿದ್ದ ಈ ಕಸೂತಿಯ ಕ್ಷೇತ್ರ ವಿಸ್ತಾರವಾಗಿದೆ. ಗುರುಶರ್ಟ್, ಬುಶ್‌ಶರ್ಟ್, ಜುಬ್ಬಾ ಹಾಗು ಮಕ್ಕಳ ಪೋಷಾ

ಶುಗಳ ಮೇಲೆ ಕಸೂತಿ ಕಾಣಿಸಿಕೊಳ್ಳುತ್ತಿದೆ. ವಿದೇಶಗಳಿಗೆ ಈ 'ಕಸೂತಿ ವಸ್ತುಗಳ' ನಿರ್ಯಾತವೂ ಪ್ರಾರಂಭವಾಗಿವೆ ಎಂಬುದು ಸಂತಸದ ಸಂಗತಿ. ಆದರೆ ಈ ಕಲೆಗೆ ಪ್ರಚಾರ ಕಡಿಮೆ. ಇದಕ್ಕೆ ಸಂಬಂಧಿಸಿದ ಸರಕಾರಿ ಇಲಾಖೆಯವರು ಈ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಿದಲ್ಲಿ ಪರದೇಶಗಳಲ್ಲಿ ಇದಕ್ಕೆ ಬೇಡಿಕೆ ಹೆಚ್ಚಾಗಿ ಹಳ್ಳಿಯ ಜನಕ್ಕೆ ಉದರಂಭರಣಕ್ಕೊಂದು ಮಾರ್ಗವಾಗುವಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನೊಂದು ಮಹತ್ವದ ವಿಷಯ. ಈ



ಕರಿ ಸೀರೆಯ ಮೇಲೆ ಬಿಳಿ ಕಸೂತಿ. ಚಿತ್ತಾಕರ್ಷಕ ಚಿತ್ರಗಳು. ಹೊಸ ಹುಟ್ಟೂ ಚನ್ನ

ಕಸೂತಿಯ ಹೆಣಿಕೆಯನ್ನು ಯಾಂತ್ರೀಕರಿಸುವ ಸಾಧ್ಯತೆ ಇಲ್ಲವೇ ಇಲ್ಲ. ಹೀಗಾಗಿ ಇದು ಕರಕುಶಲ ಕಲೆಯಾಗಿಯೇ ಉಳಿದು ಬೆಳೆಯಬೇಕು, ಇದು ಅತ್ಯಂತ ಸೂಕ್ಷ್ಮ ಕಲೆ. ಸಮಯವೂ ಸಾಕಷ್ಟು ಬೇಕು. ಒಂದು ಸೀರೆಯನ್ನು ಕಸೂತಿಯಿಂದ ತುಂಬಿಸುವಾಗ ಕನಿಷ್ಠ ಪಕ್ಷ ಮೂರು ತಿಂಗಳು ತಗಲುವುದಂತೆ. ಪ್ರತಿದಿನ ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ಬಿಡದೆ ಕೆಲಸ ಮಾಡಲು ಸಾಧ್ಯವಾಗಲಾರದು ಎಂದು ಈ ಕಲೆಯ ತಜ್ಞರ ಅಭಿಪ್ರಾಯ. ಸದ್ಯಕ್ಕೆ ಒಂದು ಸೀರೆ ಹೆಣೆಯಲು ೧೫೦ ರೂಪಾಯಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದೇನೂ ಅಷ್ಟು ಲಾಭದಾಯಕವಾದುದಲ್ಲ.

ಹಿಂದೆ, ಅರಮನೆಯ ರಾಣೀವಾಸಗಳಿಂದ, ಜಹಗೀರದಾರ್, ದೇಸಾಯಿ, ದೇಶಪಾಂಡೆ ಮನೆತನಗಳಿಂದ ಕಸೂತಿಗೆ ಪ್ರೋತ್ಸಾಹ ಸಿಗುತ್ತಿತ್ತು. ಈಗ ಅಂಥ ಆಧಾರ, ಆಶ್ರಯ ತಪ್ಪಿಹೋಗಿದೆ. ಸಂಸ್ಥೆಗಳು ಈಗ ಆ ಕಾರ್ಯಕ್ಕೆ ಕೈಹಾಕಿವೆ. ಹುಬ್ಬಳ್ಳಿಯ ಸಮಾಜ ಸೇವಿಕೆ, ಕರ್ನಾಟಕ ವಿಧಾನ ಸಭೆಯ ಉಪಾಧ್ಯಕ್ಷೆ ಶ್ರೀಮತಿ ಸುಮತಿ ಮಡಿಮನ್ ಇದಕ್ಕಾಗಿ ಶ್ರಮಿಸುತ್ತಿದ್ದಾರೆ. ಶ್ರೀಮತಿ ಇಂದಿರಾ ಜೋಶಿ ಎಂಬುವರು 'ಕರ್ನಾಟಕದ ಕಸೂತಿ' ಎಂಬ ಚಿಕ್ಕ ಹೊತ್ತಿಗೆಯೊಂದನ್ನು ಹಿಂದಿ ಮತ್ತು ಇಂಗ್ಲೀಷ್‌ಗಳಲ್ಲಿ ಬರೆದಿದ್ದಾರೆ. ಮುಂಬಯಿಯ ಪಾಪ್ಯುಲರ್ ಪ್ರಕಾಶನದವರು ಇದರ ಪ್ರಕಾಶಕರು. ಕಸೂತಿಯ ಬಗೆಗಿನ ಕೆಲ ಪ್ರಾಥಮಿಕ ತಾಂತ್ರಿಕ ವಿಷಯಗಳನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ನಾಲ್ಕು ದಶಕಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂಥದೊಂದು ಪುಸ್ತಕ ಕನ್ನಡದಲ್ಲಿ ಪ್ರಕಟವಾಗಿತ್ತು ಎಂದು ಹೇಳುತ್ತಾರೆ. ಆದರೆ ಅದು ಈಗ ಅಲಭ್ಯ.

ಕೇವಲ ಸಂಸ್ಥೆಗಳು ಅಥವಾ ವ್ಯಕ್ತಿಗಳು ಈ ಕಲೆಯ ಉಳಿವಿಗೆ ಶ್ರಮಿಸಿದರೆ ಸಾಲದು. ಸರಕಾರವೂ ಮುಂದೆ ಬರಬೇಕು. ವಿಶ್ವವಿದ್ಯಾಲಯಗಳು, ಸರಕಾರದ ಕರಕುಶಲವಸ್ತು ಇಲಾಖೆ ಈ ಕಲೆಗೆ ಸಂಬಂಧಿಸಿದ ಸಾಹಿತ್ಯವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರೆ ಕಲಾಪ್ರೇಮಿಗಳಿಗೆ, ಕಲಾವಿದರಿಗೆ ಒಂದು ಉಪಕಾರವಾಗುತ್ತದೆ. ✡




ಪ್ರಸಿದ್ಧ ಸೂಫಿ ಸಂತ ಶೇಖ್ ಫರೀದ್ ಒಮ್ಮೆ ಅಡವಿಯ ಮಾರ್ಗವಾಗಿ ಎಲ್ಲೋ ಹೊರಟಿದ್ದರು. ದಾರಿ ಕಠಿಣತಮವಾಗಿತ್ತು. ನಡೆದು ನಡೆದು ದಣಿವಾಯಿತು. ಬಾಯಾರಿಕೆ ಬಳಲಿಸತೊಡಗಿತು. ನೀರು ಕುಡಿದು ದಾಹವನ್ನಿಂಗಿಸಿಕೊಳ್ಳಬೇಕೆಂದರು. ನೀರಿನ ನೆಲೆ ಹುಡುಕುತ್ತ ಸಾಗಿದ್ದಂತೆ ಬಾವಿ ಕಂಡಿತು. ಆದರೆ ನೀರು ಆಳಕ್ಕಿತ್ತು. ಅದನ್ನೆತ್ತಲು ಹಗ್ಗ ಬಿಂದಿಗೆ ಬೇಕು. ಅಡವಿಯಲ್ಲಿ ಅವೆಲ್ಲಿ ಬರಬೇಕು?

ಅಷ್ಟರಲ್ಲೇ ಜಿಂಕೆಗಳ ಹಿಂಡೊಂದು ಓಡುತ್ತ ಬಾವಿಯ ಬಳಿ ಬಂತು. ಕೂಡಲೇ ಬಾವಿಯೊಳಗಿನ ನೀರು ಮೇಲೆ ಉಕ್ಕಿತು. ಜಿಂಕೆಗಳು ನೀರು ಕುಡಿದು ತೃಪ್ತಿಯಿಂದ ನೆಗೆಯುತ್ತ ಹೊರಟವು. ಶೇಖ್ ಫರೀದರಿಗೆ ಆಶ್ಚರ್ಯವಾಯಿತು. ನೀರಿಳಿಯುವುದರೊಳಗಾಗಿ ಒಂದು ಬೊಗಸೆ ಕುಡಿಯಬೇಕೆಂದು ಬಾವಿಯ ಬಳಿ ಬಂದರು. ಆದರೆ ಅಷ್ಟರಲ್ಲೇ ನೀರು ಕೆಳ ಸರಿಯಿತು. "ಓ ದೇವಾ, ಪ್ರಾಣಿಗಳಿಗೆ ನೀರು ಕೊಟ್ಟೆ. ನಿನ್ನ ಈ ಗುಲಾಮನಿಗೇಕೆ ಹೀಗೆ?" ಎಂದರು ಪರಿತಾಪದಿಂದ.

"ಜಿಂಕೆಗಳು ನನ್ನೊಬ್ಬನನ್ನೇ ನಂಬಿ ನೀರು ಕುಡಿಯಲು ಬಂದವು. ಅವುಗಳು ನನ್ನ ಸಹಾಯ ಕೋರಿದವು. ನೀನು ಹಗ್ಗ ಬಿಂದಿಗೆ ಹುಡುಕಿದೆ. ಅದಕ್ಕೇ ನಾನು ಬರಲಿಲ್ಲ" ಎಲ್ಲಿಂದಲೋ ಧ್ವನಿ ಕೇಳಿಸಿತು.

ಫರೀದ್ ನಾಚಿ ನೀರಾದ.


KBK

ದೀನದೇವತೆಗೆ ನಮೋನ್ನಮೋ

ವೃಷಭೇಂದ್ರಯ್ಯ

"ಶ್ರೀ[illegible] ಚೀಫ್ ಸೆಕ್ರೆಟರಿ [illegible] ಕೊರ್ಸ್ತ್ ಚಾಯಿ."

ಅತ [illegible] ಕಡೆಗೆ ನೋಡಿದ, ಹೀಗೆ ಕೇಳಿದ ಆ ಬಿಳಿ ಸೀರೆಯ ವೃದ್ಧೆಯನ್ನು. [illegible] ಕೆಂಪಗಾಗಿಸಿ,

"[illegible]" ಎಂದ.

[illegible]

ನೊಬೆಲ್ ಪಾರಿತೋಷಕ ವಿಜೇತೆ... ನಿಮ್ಮನ್ನು ಭೇಟಿಯಾಗಲು" ಬಂದಿದ್ದೇನೆ ಎಂದು [illegible] ತೋರಿಸುತ್ತಿದ್ದರು. ಆದರೆ ಮದರ್ ತೆರೆಸಾ ಹಾಗೆ ಮಾಡಲಿಲ್ಲ, ಅದೇ ತಾನೆ ಪಾರಿತೋಷಕ ಬಂದ ಸುದ್ದಿ ಗೊತ್ತಿದ್ದರೂ.

ಈ ಘಟನೆ ನಡೆದ ಸಂಜೆ ಕಲಕತ್ತೆಯ [illegible] ಈಗ [illegible] ಮದರ್ ತೆರೆಸಾಗೆ [illegible] ನೊಬೆಲ್ ಶಾಂತಿ ಪಾರಿತೋಷಕ [illegible]

ಅಹಂಕಾರವನ್ನು [illegible] ನೊಬೆಲ್ ಪಾರಿತೋಷಕ [illegible]

ಗಾಗಿ ದುಡಿಯುವ ಪ್ರಾಣಿಯು ಅನುಕಂಪದ ಈ ತಾಯಿಯ ಆರ್ದ್ರತೆಯನ್ನು ಅಳೆಯುವವರಾರು? [illegible]

"ಜಗತ್ತಿನಲ್ಲಿಯ ಈ [illegible] ನೋವು ಕೋಲಾಹಲತನಕ್ಕೆ ಕಾರಣ ನಮಗೆ ಪ್ರೀತಿಯ ಅರ್ಥ ಗೊತ್ತಿರದೇ ಇದ್ದದ್ದು. ಅಂತೆಯೇ ಇಷ್ಟೆಲ್ಲ ಅನಾಹುತ. ಪ್ರೀತಿ ಪ್ರತಿ ವ್ಯಕ್ತಿಯಲ್ಲಿ ಓತಪ್ರೋತವಾಗಿ ಹರಿಯತೊಡಗಿದರೆ ಎಲ್ಲಿಯ ಅಶಾಂತಿ, ಎಲ್ಲಿಯ ಯುದ್ಧ? ಶಾಂತಿಗಾಗಿ ಸಮರ ಹೂಡುವುದರ ಅರ್ಥ ಏನು? ಪ್ರೀತಿಯೊಂದಿದ್ದರೆ ಈ ಬಾಂಬುಗಳು, ಈ ತುಪಾಕಿಗಳಾದರೂ ಏಕೆ ಬೇಕು?" ಮದರ್ ತೆರೆಸಾ ನಂಬಿಕೆ ಇದು.

ಸಮುದ್ರೋತ್ತಕ್ಕೆ ಸಾವಿರಾರು ಅಡೆತಡೆಗಳು. ಅವೆಲ್ಲವನ್ನೂ ಯಾವ ಭಾವುಕತೆಗೂ ಒಳಗಾಗದೇ ಎದುರಿಸಿದ್ದು, ಎದುರಿಸುತ್ತಿರುವುದು ಈ ತಾಯಿಯ ಹೆಗ್ಗಳಿಕೆ. [illegible] ನಗರವಲ್ಲಿ ತೆರೆಸಾ ಕಾಲಿಟ್ಟಾಗಿನಿಂದಲೂ ಇಂಥ ಅಡ್ಡಿ ಆತಂಕಗಳೆದುರಾಗುತ್ತಲಿವೆ. ಆದರೆ ಈಕೆಯ ಅವಶ್ಯಕತೆ ಕಲಕತ್ತೆಗೆ [illegible]

ದೇವರು ಧರ್ಮವೆಂದರೆ ಕಿಡಿಕಾರುವ ಅಲ್ಬಾನಿಯದ ಮೂಲ ಮನೆತನ ತೆರೆಸಾಳದು. ಹುಟ್ಟಿದ್ದು [illegible] ಯುಗೋಸ್ಲಾವಿಯದಲ್ಲಿ. ಈ ಎಪ್ಪತ್ತು [illegible] ಜೀವನವಿಡಿ ಸ್ವಂತಕ್ಕೆ ಕೆಲಸ ಮಾಡಿದ್ದು [illegible] ಭಾರತದ [illegible] ಪೀಡಿತರ, ನಿರ್ಗತಿಕರ, ಜೀವನ ಬಿಸಿಲಿನಿಂದ ಬಳಲಿದ ಮಕ್ಕಳ ಸೌಭಾಗ್ಯ. "ಏಸುವಿನ ಸಾಕಾರರಾದ ಇವರ ಸೇವೆ ಮಾಡುವ ಅವಕಾಶ ದೊರೆಯುತ್ತಿರುವುದು ನನ್ನ ಸೌಭಾಗ್ಯ" ಎಂದಾಕೆ ನಂಬಿದ್ದಾರೆ

ಜಗತ್ತಿನಾದ್ಯಂತ ತನ್ನ ಚಟುವಟಿಕೆಗಳನ್ನು ವಿಸ್ತರಿಸುವ ಸಲುವಾಗಿ 'ಮಿಶನರೀಸ್ ಆಫ್ ಚ್ಯಾರಿಟಿ' [illegible] ಈ ಮಾತೆ. ತನ್ನ 'ಸಿಸ್ಟರ್'ಗಳೊಂದಿಗೆ ಸೇವೆಗೆ ತೊಡಗಿರುವ ತೆರೆಸಾ ಹೆಂಗಸರು ಕೆಲಸ ಮಾಡಲಾರದಂಥ ಪ್ರದೇಶಗಳಲ್ಲಿ ಕೂಡ ಈ ಕಾರ್ಯ ನಡೆಯಲು 'ಬ್ರದರ್'ಗಳನ್ನು ನಿಯಮಿಸಿದ್ದಾರೆ.

"ನಿನ್ನ ಬಳಿ ಎರಡು ರೊಟ್ಟಿಗಳಿದ್ದರೆ
ಒಂದನ್ನು ದಾನಮಾಡು,
[illegible]
[illegible]
ಬಂದುದರಲ್ಲಿ ಕಡಲೆ ಪುರಿ ಕೊಳ್ಳು.
ಹೊಟ್ಟೆ ತುಂಬಿಸಿಕೊಳ್ಳು"

ಎಂಬ ಮಾತಿನಲ್ಲಿ ನಂಬಿಕೆ ಇಟ್ಟ ತೆರೆಸಾ ಬಳಿಗೆ ದೀನ ದಲಿತರು ರೋಗಿಗಳ ನಿತ್ಯ ಪ್ರವಾಹ ಹರಿಯುತ್ತಿರುವಂತೆಯೇ ಸಹಾಯಧನದ ಹೊಳೆಯೂ ಹರಿಯುತ್ತದೆ.

ತೆರೆಸಾ ಸೇವೆಯ ಪದ್ಧತಿ ಎಂಥೆಂಥದು [illegible] ರವ ಪದಕ ಪಡೆದು ಉತ್ತೀರ್ಣರಾದ [illegible] ಸಾವಿರಗಟ್ಟಲೇ ಗಳಿಸುವ ಅವಕಾಶಗಳನ್ನು ಕೈಬಿಟ್ಟು, ಸಾವಿರಾರು ಜನರನ್ನು ಉಳಿಸಲು ತೆರೆಸಾರ [illegible]

[illegible] ಕಾಳಿಮಂದಿರ [illegible] ಪ್ರಾರಂಭಿಸಿದ [illegible] ಊರು ಎಚ್ಚೆತ್ತುಕೊಳ್ಳುವ ಮುನ್ನ [illegible] ಒಬ್ಬ ಕಾಲರಾ [illegible] ತೆರೆಸಾ [illegible] ಪ್ರಾರಂಭಿಸಿದರು. ವಾರದ ನಂತರ ಆತ ಸ್ವಲ್ಪ ಚೇತರಿಸಿಕೊಂಡ. ತಾಯಿಯ ಪಾದಗಳಿಗೆರಗಿ. "ತಾಯಿ, ಮೂವತ್ತು ವರ್ಷ ಕಾಳಿಯ ಪೂಜೆ ಮಾಡಿದೆ. ಇಂದು ನನ್ನೆದುರು ದೇವಿ ನಿಂತಿದ್ದಾಳೆ" ಎಂದು ಆನಂದಾಶ್ರುಗಳನ್ನು ಸುರಿಸಿದನಂತೆ. ಅಂದಿನಿಂದಲೇ ತೆರೆಸಾಳಿಗೆ ವಿರೋಧಗಳು ಎದುರಾಗಿವೆ. 'ಕ್ರಿಶ್ಚಿಯನ್ ಧರ್ಮಪ್ರಸಾರಕ್ಕೆ ಈ ಸೋಗು ಹಾಕಿದ್ದಾಳೆ' ಎಂದು ಆಪಾದಿಸಿ ಹಲ

[illegible] ಅವರನ್ನು [illegible] [illegible] [illegible] ವಾಡಿದ ವರದಿ ಪ್ರಕಟವಾಗಿದೆ. " There rest thy feet where live the poorest, and lowest, and lost " ಟ್ಯಾಗೋರ್ ನುಡಿಯಿದು ತೆರೆಸಾ ಅಂಥಲ್ಲೆಲ್ಲ ದೀನರ ಜಾತಿ ಮತ ಪಂಥ ಮೇಲು ಕೀಳಿನ ಗೊಂದಲವಿಲ್ಲದೆ ಸೇವೆ ಸಲ್ಲಿಸುತ್ತಾರೆ.

[illegible] [illegible] ಪ್ರೀತಿ ನೀಡಿ ಪಡೆಯುವುದು ಮುಖ್ಯ ಎಂದು ನಂಬಿರುವ ತೆರೆಸಾ ರಾಜಕೀಯದಲ್ಲಾಗಲಿ ಇತರ ಚಟುವಟಿಕೆಗಳಲ್ಲಾಗಲಿ ಲಕ್ಷ್ಯವಿಲ್ಲ. ಸಾಯುತ್ತಿರುವವರನ್ನು ಕೊನೆ ಗಳಿಗೆಯವರೆಗೆ ಸಮಾಧಾನದಿಂದಿಡುವುದರತ್ತ ಅವರ ಲಕ್ಷ್ಯ.

ಬಂದ ಬಹುಮಾನದ ಹಣವನ್ನು ಹಸಿದವರ ಹೊಟ್ಟೆ ತುಂಬಲು, ಸಾಯುವವರನ್ನು ಉಪಚರಿಸಲು ವಿನಿಯೋಗಿಸುವ ಉದ್ದೇಶ ಈ ಮಹಾತಾಯಿಯದು.

ಆ ದೀನದೇವತೆಗೆ ನಮೋನ್ನಮೋ.

ಸಲಹೆಯಿಂದ ಸಂಪತ್ತು!

ಕೆಲಸಗಾರರ ಸಲಹೆಗಳಿಗೆ ಪುರಸ್ಕಾರ ನೀಡುವ ರೂಢಿ ವಿದೇಶಗಳಲ್ಲಿದೆ. ಅವರ ಸಲಹೆಯಿಂದ ಲಾಭ ಪಡೆದ ಮಾಲೀಕರು ಸಂತೋಷದಿಂದ ಅವರಿಗೆ ಹಣವನ್ನು ಕೊಡುತ್ತಿದ್ದಾರೆ. ಈಗೀಗ ಎಷ್ಟೋ ಜನರು ಸಲಹೆಗಳನ್ನು ಮಾರಿ ಶ್ರೀಮಂತರಾಗುತ್ತಿದ್ದಾರೆ. ಅಮೇರಿಕದ ಕೈಗಾರಿಕಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಜಿಬ್ಬ ವೆಲ್ಡರ್, ವೆಲ್ಡಿಂಗ್ ಮಾಡುವಾಗ ಟ್ಯಾಂಕುಗಳಲ್ಲಿ ಗ್ಯಾಸ್ ಮುಗಿದು ಹೋದಾಗ ಮತ್ತೆ ಬೇರೆ ಟ್ಯಾಂಕು ತರುವುದರಿಂದ ಸಮಯ ಹಾಳಾಗುವುದೆಂದೂ ಅದಕ್ಕೆ ಬದಲಾಗಿ ಕಾರಖಾನೆಯ ಹೊರಗೆ ದೊಡ್ಡ ಟ್ಯಾಂಕನ್ನು ಸ್ಥಾಪಿಸಿ ನಳಿಗೆಗಳನ್ನು ಜೋಡಿಸಿದರೆ ಅನುಕೂಲವೆಂದೂ ಸಲಹೆ ಕೊಟ್ಟ. ಕಾರ್ಖಾನೆಯ ಆಡಳಿತ ವರ್ಗಕ್ಕೆ ಅವನ ಸಲಹೆಯಿಂದ ಎಷ್ಟೋ ಡಾಲರುಗಳು ಉಳಿತಾಯವಾದವು. ಅವನಿಗೂ ಒಂದು ಸಾವಿರ ಡಾಲರ್ ದೊರಕಿತು. ಇದೇ ರೀತಿ ಜನರಲ್ ಮೋಟರ್ ಸಂಸ್ಥೆಯ ಕಾರಕೂನನೊಬ್ಬ ಮೋಟಾರುಗಳ ಒಂದು ಭಾಗವನ್ನು ತಯಾರಿಸುವ ಸುಲಭ ಮಾರ್ಗವನ್ನು ತೋರಿಸಿಕೊಟ್ಟ. ಅವನಿಗೆ ಐದು ಸಾವಿರ ಡಾಲರುಗಳನ್ನು ಕೊಡಲಾಯಿತು. ಹರ್ಬರ್ಟ್ ಓವೆನ್ಸ್ ಎಂಬವನು ಅಮೇರಿಕದ ಐ. ಬಿ. ಎಮ್. ಕಂಪನಿಗೆ ಕೊಟ್ಟ ಸಲಹೆಯಿಂದ ಇಪ್ಪತ್ತೈದು ಡಾಲರ್ ಸಿಕ್ಕಿತು. ಮತ್ತೊಂದು ಸಲಹೆಗೆ ಮತ್ತೆ ಇಪ್ಪತ್ತೈದು ಡಾಲರು; ಮೂರನೆಯ ಬಾರಿ ಮೂವತ್ತೈದು ಡಾಲರು, ನಾಲ್ಕನೆಯ ಸಲಹೆಗೆ ಇಪ್ಪತ್ತೈದು ಸಾವಿರ ಡಾಲರುಗಳು ಸಿಕ್ಕಿದವು.

ಈ ದೊಡ್ಡ ಮೊತ್ತ ಪಡೆದದ್ದು ಎಲೆಕ್ಟ್ರಾನಿಕ್ ಕಂಪ್ಯೂಟರಿನಲ್ಲಿ ಆಗುತ್ತಿದ್ದ ತೊಂದರೆಗಳನ್ನು ತಪ್ಪಿಸಲು ಕೊಟ್ಟದ್ದ ಸರಳವಾದ ಸಲಹೆಗೆ! ಇದೇ ಕಂಪನಿಯು ಒಬ್ಬನು [illegible] ಕಂಪ್ಯೂಟರಿಗೆ ಸಂಬಂಧಿಸಿದಂತೆ ಕೊಟ್ಟ ಸಲಹೆಗೆ ಕೂಡ ಕಂಪನಿ ಐವತ್ತಾರು ಸಾವಿರ ಡಾಲರುಗಳನ್ನು ಕೊಟ್ಟಿತು.

– (ಸಂ) ಆನಂದ ದಂಡಾಪೂರ

ಇದನ್ನು ಬರೆಯಲು
ನಮ್ಮ ಜೀವಮಾನವಾಗಲಿ,
ವಿಶ್ವದ ಜಾಗವಾಗಲಿ ಸಾಕಾಗದು !

ನೀವೆಷ್ಟು ದೊಡ್ಡ ಸಂಖ್ಯೆಯನ್ನು ಊಹಿಸಬಲ್ಲಿರಾ?

ಬಿ. ಜಿ. ರಾಮಚಂದ್ರ

ಯಾವುದೋ ಆಸ್ತಿ ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುತ್ತದೆನ್ನುವ ವಿಚಾರವಿರಲಿ ಅಥವಾ ನಮ್ಮ ರಾಷ್ಟ್ರೀಯ ಆದಾಯವು ಶತಕೋಟಿಗಳ ಸಂಖ್ಯೆಯಲ್ಲಿದೆಯೆಂಬ ವಿಚಾರವಿರಲಿ, ಸಾಮಾನ್ಯ ಮನುಷ್ಯನ ಎದುರು ಸಾಕಷ್ಟು ದೊಡ್ಡ ಸಂಖ್ಯೆಯನ್ನು ಪ್ರಸ್ತಾಪಿಸತೊಡಗಿದರೆ ಆತ ಗಲಿಬಿಲಿಗೊಂಡಾನು. ಒಂದು ದಶಲಕ್ಷವೆಂದರೇನು; ಒಂದು ಶತಕೋಟಿ ಎಂದರೇನು ಎಂಬುದರ ಖಚಿತ ಅಂದಾಜು ಉಂಟಾಗುವುದು ಬಹು ಕಡಿಮೆ ಮಂದಿಯ ಮನಸ್ಸಿನಲ್ಲಿ. ಐತಿಹಾಸಿಕವಾಗಿ ಪ್ರಥಮ ಬಾರಿಗೆ ಇಟಲಿಯಲ್ಲಿ ಕ್ರಿ.ಶ. ೧೫೦೦ರಲ್ಲಿ ದಶಲಕ್ಷವೆಂಬ ಪದವನ್ನು ಬಳಸಿದುದಿನಿಂದ ಈ ವಾಕ್ಯವನ್ನು ಬರೆಯುವವರೆಗೆ ೨೪೯,೩೩೨,೧೨೦ ನಿಮಿಷಗಳು ಗತಿಸಿವೆ.

ಜಲದ ಬೆಲೆ

ಈ ನಿಮಿಷಗಳ ವಿಚಾರಕ್ಕಿಂತ ಇನ್ನೂ ಬೃಹತ್ ಸಂಖ್ಯೆಗಳನ್ನು ನೋಡೋಣ. ಸಮುದ್ರಗಳ ನೀರು ಎಷ್ಟು ಬೆಲೆ ಬಾಳಬಹುದೆಂಬ ಕಲ್ಪನೆ ನಿಮಗಿದೆಯೆ? ಸಮುದ್ರದಿಂದ ೫೦೦ಕ್ಕೂ ಹೆಚ್ಚು ವಸ್ತುಗಳನ್ನು ಉತ್ಪಾದಿಸುವ ದಿ ಡೊ ಕೆಮಿಕಲ್ ಕಂಪೆನಿಯ ಒಂದು ಅಂದಾಜಿನ ಪ್ರಕಾರ, ಒಂದು ಘನ ಮೈಲು ಸಮುದ್ರದ ನೀರಿನಲ್ಲಿ ಹದಿನೇಳೂವರೆ ಕೋಟಿ ಕರಗಿದ ರಾಸಾಯನಿಕಗಳಿದ್ದು ಅವುಗಳ ಬೆಲೆ ೫ ಬಿಲಿಯ (೫ ಶತ ಕೋಟಿ) ಡಾಲರುಗಳಷ್ಟಾಗುತ್ತದೆ! ಸಾಗರದ ಪ್ರತಿ ಘನ ಮೈಲು ನೀರಿನಲ್ಲಿ ೯.೩ ಕೋಟಿ ಡಾಲರುಗಳಷ್ಟು ಮೌಲ್ಯದ ಬೆಳ್ಳಿಯನ್ನು ಪಡೆದಿದೆ! ಪ್ರತಿ ಘನ ಮೈಲು ಸಾಗರಜಲ ೭ ಟನ್ ಯುರೇನಿಯಂ ಮತ್ತು ಇತರ ಕರಗಿದ ರಾಸಾಯನಿಕಗಳನ್ನು ಪಡೆದಿದೆ. ಆದ್ದರಿಂದ ಸಾಗರಗಳ ಒಟ್ಟು ಬೆಲೆ ಸುಮಾರು ೧ ಕ್ವಿಂಟಿಲಿಯನ್ ೫೦೦ ಕ್ವಾಡ್ರಿಲಿಯನ್ ಡಾಲರುಗಳಷ್ಟೆಂದು ಅಂದಾಜು ಮಾಡಲಾಗಿದೆ.

ಆದರೆ ಒಂದು ಕ್ವಿಂಟಿಲಿಯನ್ ಅಥವಾ ಕ್ವಾಡ್ರಿಲಿಯನ್ ಎಂದರೆ ಎಷ್ಟು? ಕೆಳಗಿನ ಕೋಷ್ಟಕವನ್ನು ಪರಿಶೀಲಿಸಿ:
೧೦ಲಕ್ಷ = ೧ ಮಿಲಿಯನ್ (ದಶಲಕ್ಷ): ೧೦೦೦ ಮಿಲಿಯನ್ = ೧ ಬಿಲಿಯನ್ (ಶತಕೋಟಿ) ೧೦೦೦ಬಿಲಿಯನ್ = ೧ ಟ್ರಿಲಿಯನ್ (ಲಕ್ಷಕೋಟಿ) ೧೦೦೦ಟ್ರಿಲಿಯನ್ = ೧ ಕ್ವಾಡ್ರಿಲಿಯನ್ (ಕೋಟಿ ಕೋಟಿ): ೧೦೦೦ ಕ್ವಾಡ್ರಿಲಿಯನ್ = ೧ ಕ್ವಿಂಟಿಲಿಯನ್ (ಸಹಸ್ರಕೋಟಿ ಕೋಟಿ).

ಒಂದು ಡಾಲರಿಗೆ ಸುಮಾರು ರೂ. ೭.೩೦ರಂತೆ ಒಂದೂವರೆ ಕ್ವಿಂಟಿಲಿಯನ್ ಡಾಲರುಗಳ ಸಾಗರಗಳ ಬೆಲೆ ರೂಪಾಯಿಯಲ್ಲಿ ಎಷ್ಟಾಗುತ್ತದೆ ಎಂಬುದನ್ನು ನೀವೇ ಕಂಡುಹಿಡಿಯಿರಿ!

ಗೂಗಲ್

ಕ್ವಿಂಟಿಲಿಯನ್‌ಗಿಂತ ದೊಡ್ಡ ಸಂಖ್ಯೆಯಿಲ್ಲವೆಂಬ ಭ್ರಮೆ ಬೇಡ. 'ಗೂಗಲ್' ಎಂಬ

ಅತ್ಯಂತ ಸಾರಸ್ಯವಾದ ಸಂಖ್ಯಾ ಚಮತ್ಕಾರವನ್ನು ನೋಡೋಣ. ಖ್ಯಾತ ಗಣಿತಜ್ಞ ದಿವಂಗತ ಡಾ. ಎಡ್ವರ್ಡ್ ಕಸ್ನರ್‌ನ ಕೇವಲ ೯ ವರ್ಷದ ಅಣ್ಣನ ಮಗನಿಂದ ಗೂಗಲ್ ಜನಿಸಿತು. ಗೂಗಲ್ ಒಂದು ಬೃಹತ್ ಸಂಖ್ಯೆ. ೧ ಗೂಗಲ್ $=$ ೧೦^{೧೦೦}. ನಿತ್ಯ ಬಳಕೆಯ ಮಾತಿನಲ್ಲಿ ಹೇಳುವುದಾದರೆ ೧ರ ನಂತರ ೧೦೦ ಸೊನ್ನೆಗಳಾಗುತ್ತವೆ. ವಿಶ್ವದಲ್ಲಿರುವ ಎಲ್ಲಾ ಎಲೆಕ್ಟ್ರಾನುಗಳ ಸಂಖ್ಯೆಗಿಂತ ಒಂದು ಗೂಗಲ್ ದೊಡ್ಡದು. ಸರ್ ಆರ್ಥರ್ ಎಡ್ಡಿಂಗ್‌ಟನ್‌ರವರ ಪ್ರಕಾರ ಸುಮಾರು ೧೦^{೭೯} ಅಂದರೆ ೧ರ ನಂತರ ೭೯ ಸೊನ್ನೆ, ಸಂಖ್ಯೆಯಷ್ಟು ಎಲೆಕ್ಟ್ರಾನುಗಳಿವೆ. ನಿಖರವಾಗಿ ಹೇಳುವುದಾದರೆ ಪ್ರಪಂಚದಲ್ಲಿ ೧೫,೭೪೭,೭೨೪,೧೩೬,೨೭೫,೦೦೨. ೫೭೭,೬೦೫,೬೫೩,೯೬೧.೧೮೧,೫೫೫,೪೬೮,೦೪೪,೭೧೭,೯೧೪,೫೨೭,೧೧೬,೭೦೯,೩೬೬,೨೩೧,೪೨೫,೦೭೬,೧೮೫,೬೩೧,೦೩೧,೨೯೬ ಪ್ರೋಟಾನುಗಳೂ ಮತ್ತು ಅಷ್ಟೇ ಸಂಖ್ಯೆಯ ಎಲೆಕ್ಟ್ರಾನುಗಳೂ ಇವೆಯೆಂದು ಡಾ. ಎಡ್ಡಿಂಗ್‌ಟನ್‌ರ ನಂಬಿಕೆ.

ಡಾ. ಕಸ್ನರ್‌ನ ಅಣ್ಣನ ಮಗ ಗೂಗಲನ್ನು ಊಹಿಸುವುದರಷ್ಟರಲ್ಲೇ ತೃಪ್ತನಾಗಲಿಲ್ಲ. ಆತ ರೂಪಿಸಿದ ಇನ್ನೊಂದು ಸಂಖ್ಯೆಗೆ ಹೊಸ ಹೆಸರೇ ಬೇಕಾಯಿತು! ಅದನ್ನಾತ 'ಗೂಗೋಲ್‌ಪ್ಲೆಕ್ಸ್' ಎಂದು ಕರೆದ. ಅದರ ಮೂಲ ವಿವರಣೆ "ಒಂದನ್ನು ಬರೆದು ಅನಂತರ ನಿಮಗೆ ಬಳಲಿಕೆಯಾಗುವವರೆಗೆ ಸೊನ್ನೆಗಳನ್ನು ಬರೆಯುತ್ತಾ ಹೋಗುವುದು" ಎಂದಿತ್ತು!

ಗೂಗೋಲ್‌ಪ್ಲೆಕ್ಸ್

ಆದರೆ ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ಕಾಲದಲ್ಲಿ ಬಳಲಿಕೆ ತೋರಿಸಬಹುದು. ಆದ್ದರಿಂದ ನಿಖರತೆಗಾಗಿ ಒಂದು ಗೂಗೋಲ್‌ಪ್ಲೆಕ್ಸ್ ಅನ್ನು ಹೀಗೆ ನಿರ್ದೇಶಿಸಲಾಯಿತು. ಒಂದು ಗೂಗಲನ್ನು ಅಷ್ಟರಿಂದಲೇ ಮತ್ತೆ ಗುಣಿಸಿದರೆ ಗುಣಲಬ್ಧದಲ್ಲಿ ಒಂದರ ನಂತರ ಕೇವಲ ೨೦೦ ಸೊನ್ನೆಗಳು ಬರುತ್ತವಾದರೆ ಒಂದು ಗೂಗೋಲ್‌ಪ್ಲೆಕ್ಸ್; ಎಂದರೆ ಒಂದರ ನಂತರ ಒಂದು ಗೂಗಲ್‌ನಷ್ಟು ಸೊನ್ನೆಗಳು! ಇದನ್ನು ಡಾ. ಕಸ್ನರ್ ಸುಲಭವಾಗಿ ನಮಗೆ ಹೀಗೆ ಅರ್ಥಮಾಡಿಸುತ್ತಾರೆ. "ನೀವು ಭೂಮಿಯಿಂದ ಹೊರಟು ಪ್ರತಿ ಅಂಗುಲಕ್ಕೆ ಒಂದರಂತೆ ಒಂದು ಸೊನ್ನೆಯನ್ನು (ಆಕಾಶದಲ್ಲಿ) ಬರೆಯುತ್ತಾ ಎಲ್ಲಾ ಆಕಾಶಗಂಗೆಗಳನ್ನೂ ದಾಟಿ ದಾಟಿ ಅತ್ಯಂತ ದೂರದ ತಾರೆಗೂ ತಲುಪಬಹುದು. ಆದರೂ ಈ ಸಂಖ್ಯೆಯನ್ನು ಬರೆದು ಮುಗಿಸಲು ಜಾಗ ಸಾಲುವುದಿಲ್ಲವೆಂದಾಗ ನಿಮಗೆ ಈ ದೊಡ್ಡ ಆದರೆ ಸೀಮಿತವಾದ ಸಂಖ್ಯೆಯ ಗಾತ್ರದ ಬಗ್ಗೆ ಯಾವುದೋ ಒಂದು ಕಲ್ಪನೆ ಬಂದೀತು." ಈ ನಡುವೆ ಊಟ ನಿದ್ರೆಗೆ ನಿಮಗೆ ಸಮಯ ಸಿಕ್ಕೀತು ಎಂದೇನೂ ಅಂದುಕೊಳ್ಳಬೇಡಿ!

ಬೇರೆ ಬೇರೆ ಜನಾಂಗದವರು ಬೇರೆ ಬೇರೆ ಸಂಖ್ಯೆಗಳನ್ನು ಬಹು ದೊಡ್ಡ ಸಂಖ್ಯೆಗಳೆಂದು ಪರಿಗಣಿಸುತ್ತಾರೆ. ಆಫ್ರಿಕದ ಹೊಟೆಂಟೋಟ್ ಜನಾಂಗದವರು ೩ಕ್ಕಿಂತ ದೊಡ್ಡದಾದ್ದನ್ನೆಲ್ಲ ಬೃಹತ್ ಸಂಖ್ಯೆಯೆಂದು ಪರಿಗಣಿಸುತ್ತಾರೆ. ಗ್ರೀಕರಿಗೆ ಬಹು ದೊಡ್ಡ ಸಂಖ್ಯೆ ಎನಿಸಿದ್ದುದು ನಮ್ಮ ಆಧುನಿಕ ಚಿಂತನೆಗೆ ಹೋಲಿಸಿದಾಗ ಬಹು ದೊಡ್ಡ ಸಂಖ್ಯೆಯೇನೂ ಅಲ್ಲ. ಅವರ ವರ್ಣಲಿಪಿಗಳೇ ಅಂಕೆಗಳನ್ನೂ ಸೂಚಿಸುವ ಕೆಲಸವನ್ನು ಮಾಡಬೇಕಾಗಿತ್ತು. ಈ ವ್ಯವಸ್ಥೆಯು ಸಣ್ಣ ಸಂಖ್ಯೆಗಳನ್ನು ಸೂಚಿಸುವಲ್ಲಿ ಸುಲಭವಾದರೂ ಸಹ ಅದರ ದೊಡ್ಡ ಕ್ಲೇಶವೆಂದರೆ ಸೊನ್ನೆಯ ಬಳಕೆಯೇ ಇಲ್ಲದಿರುವುದು. ಶೂನ್ಯವಿಲ್ಲದಿದ್ದರೆ ದೊಡ್ಡ ಸಂಖ್ಯೆಗಳಿಗೂ ಅಸ್ತಿತ್ವವಿಲ್ಲ. ಭಾರತೀಯರು ತಾವು ಶೂನ್ಯದ ಜನಕರೆಂದು ಸಂತಸಪಡಬಹುದು. ಭಾರತೀಯರ ಶೂನ್ಯದ ಸಂಶೋಧನೆ ಅರೇಬಿಯದ ಮೂಲಕ ಪಶ್ಚಿಮದ ನಗರಿಕರಿಗೆ ಪ್ರಯಾಣ ಮಾಡಿತು. ಅಲ್ಲಿನವರೆಗೆ ಗ್ರೀಕರು ತಾವು ದೊಡ್ಡದೆಂದುಕೊಂಡ ಸಂಖ್ಯೆಯಾದ ಹತ್ತು ಸಾವಿರಕ್ಕೇ 'ಮಿರಿಯಡ್' ಎಂದು ಹೆಸರಿಟ್ಟು ಸಂಖ್ಯಾಮಿತಿಯನ್ನು ಹಾಕಿಕೊಂಡಿದ್ದರು.

ಆರ್ಕಿಮಿಡಿಸನ ಸಾಹಸ

ಆವರೆ ಚಿಕ್ಕ ಅಂಕೆಗಳ ಯೋಗದಿಂದ ಬಹು ನಿರಂತರ ಸಹ ಅನಂತವೆನ್ನುವ ದೊಡ್ಡ ಸಂಖ್ಯೆಗಳು ಬರೆಯಬಹುದು. ಅದರಿಂದ ಜಗತ್ತಿ ತುಂಬಿರುವಷ್ಟು ಮರಳು ಗಣಿಸಿ ಅತಿ ದೊಡ್ಡ ಸಂಖ್ಯೆಯನ್ನು ರಚಿಸಲು ಬಹು ಪ್ರಯತ್ನ ಪಟ್ಟನು ಆರ್ಕಿಮಿಡಿಸ್. ಅವನ ಈ ಪುಸ್ತಕವನ್ನು ತುಂಬಲು ಅತಿ ಸಣ್ಣ ಮರಳ ಕಣಗಳು ಎಷ್ಟು ಬೇಕಾಗುತ್ತವೆ ಎಂಬುದನ್ನು ಕಂಡು ಹಿಡಿಯುವ ಯತ್ನ ಅದರಲ್ಲಿದೆ.

ಆರ್ಕಿಮಿಡಿಸ್ ರಚಿಸಿದ ಅತಿ ದೊಡ್ಡ ಸಂಖ್ಯೆಯೆಂದರೆ

'One myriad - myriad units of the myricad - myriadth order of the myriad - myriadth period'

ಜನರಲ್ ಫುಡ್ ಕಾರ್ಪೋರೇಶನ್ನಿನ ಜಾನ್ ಸ್ಟ್ರೋಕ್‌ಸ್ಟರ್ ಈ ಸಂಖ್ಯೆಯನ್ನು ಸರಳ ರೂಪಕ್ಕೆ ಇಳಿಸಿದ್ದಾರೆ. ಅವರ ಪ್ರಕಾರ ಆರ್ಕಿಮಿಡಿಸನ ಈ ಸಂಖ್ಯೆ ಸಂ ಸಮನಾ ಒಂದರ ನಂತರ ೮೦ ಕ್ವಾಡ್ರಿಲಿಯನ್ ಸೊನ್ನೆ ಗಳನ್ನು ಬರೆದರೆ ಸಿಗುವ ಬೆಲೆ.

ಗ್ರೀಕರಿಗೆ ಬಹು ಮಿರಿಯಡ್ಡೇ ದೊಡ್ಡ ಸಂಖ್ಯೆಯಾಗಿದ್ದರೆ ರೋಮನ್ನರು ಸಾವಿರವನ್ನು ಮೀರಲಿಲ್ಲ. ಆಗಲೇ ದ ಪ್ರಾಚ್ಯ ದೇಶಗಳಲ್ಲಿ ೧೮ ಸ್ಥಾನಗಳ ಕ್ವಿಂಟಿಲಿಯನ್ ಗಳ ಅಂಕೆ. ಅವರೆ ಭಾರತದಲ್ಲಿ ಏಕ. ದಶ. ಶತ ಸಹಸ್ರದಿಂದಾರಂಭಿಸಿ ಹದಿನೆಂಟು ಸ್ಥಾನಗಳವರೆಗೆ ಬೇರೆ ಬೇರೆ ಹೆಸರಿಡಲಾಗಿತ್ತು. ಏಕ, ದಶ. ಶತ, ಸಹಸ್ರ, ಅಯುತ. ಲಕ್ಷ. ಪ್ರಯುತ. ಕೋಟಿ. ಅರ್ಬುದ. ಅಬ್ಜ, ಖರ್ವ. ನಿಖರ್ವ. ಮಹಾಸರೋಜ. ಶಂಕು. ಸರಿತಾಪತಿ. ಅಂತ್ಯ, ಮಧ್ಯ, ಮತ್ತು ಪರಾರ್ಧ. ಕೆಲವು ಬೌದ್ಧ ಗ್ರಂಥಗಳು ಐವತ್ತು ಮೂರು ಸ್ಥಾನಗಳವರೆಗೂ ಹೋಗಿವೆ. ✡

ಗುಡ್ಡವೊಂದರ ಮೇಲೆ ಒಬ್ಬ ನಿಂತು ಸುತ್ತಲೂ ನೋಡತೊಡಗಿದ್ದ. ದೂರದಲ್ಲಿ ಈ ಕಡೆಗೇ ಹೆಜ್ಜೆ ಹಾಕುತ್ತಿದ್ದ ಮೂವರಿಗೆ ಅವನು ಕಾಣಿಸಿದ. ಕೂಡಲೇ ಆತನ ಬಗ್ಗೆಯೇ ಮಾತಾಡತೊಡಗಿದರು.

ಒಬ್ಬ ಹೇಳಿದ, "ಬಹುಶಃ ಆತನ ಎಮ್ಮೆಯೋ ಆಕಳೋ ಕಳೆದುಹೋರಬೇಕು."

ಎರಡನೆಯವ, "ಇಲ್ಲಿಲ್ಲ ಬಹುಶಃ ಆತ ತನ್ನ ಗೆಳೆಯನ ದಾರಿಯನ್ನು ಕಾಯುತ್ತಿರಬಹುದು," ಎಂದ.

ಮೂರನೆಯವ ನಕ್ಕು, "ನನ್ನ ಅಭಿಪ್ರಾಯದಲ್ಲಿ ಆತ ಶುದ್ಧ ಹವೆ ಸೇವಿಸಲು ಆಷ್ಟೆತ್ತರದಲ್ಲಿ ನಿಂತಿರಬೇಕು," ಅಂದಾಗ ಉಳಿದಿಬ್ಬರು ಸುಮ್ಮನಾದರು. ಅವರು ಇಷ್ಟು ಮಾತಾಡಿಕೊಳ್ಳುತ್ತಿರುವಾಗಲೇ ಅವರಿಗರಿವಾಗದಂತೆ ಗುಡ್ಡದ ಮೇಲಿನ ಆತನನ್ನು ಸಮೀಪಿಸಿಬಿಟ್ಟಿದ್ದರು, ಆಗ ಮೊದಲನೆಯವ, "ಸ್ವಾಮಿ, ನೀವು ಅಲ್ಲಿ ನಿಂತದ್ದು ನಿಮ್ಮ ಕಳೆದುಹೋದ ಎಮ್ಮೆ ಆಕಳವನ್ನು ಹುಡುಕಲು ಅಲ್ಲವೆ?" ಎಂದು ಕೇಳಿಯೇಬಿಟ್ಟ.

"ಇಲ್ಲವಲ್ಲ" ಗುಡ್ಡದ ಮೇಲೆನಿಂತವ ಹೇಳಿದ.

"ಹಾಗಾದರೆ, ನೀವು ನಿಮ್ಮ ಗೆಳೆಯನಿಗಾಗಿ ದಾರಿ ಕಾಯುತ್ತ ನಿಂತಿದ್ದಿರಬೇಕಲ್ಲವೇ!" ಎರಡನೆಯವ ಕೇಳಿದ.

"ಇಲ್ಲವಲ್ಲ," ಮತ್ತೆ ಮೊದಲಿನಂತಲೇ ಉತ್ತರಿಸಿದ.

"ಇಲ್ಲದಿದ್ದರೆ ಶುದ್ಧ ಹವೆಯ ಸೇವನೆಗಾಗಿ ಇರಬೇಕು, ಅಲ್ಲವೇ?" ಎಂದು ಮೂರನೆಯವ ಹೆಮ್ಮೆಯಿಂದ ಕೇಳಿದ.

"ಇಲ್ಲ...ಇಲ್ಲ...ಇಲ್ಲ..."

"ಹಾಗಾದರೆ ನಿಂತಿದ್ದೇಕೆ ಅಲ್ಲಿ?" ಮೂವರೂ ಕೇಳಿದರು.

ಆತ ಕೆಂಗಣ್ಣಿಂದ ನೋಡಿ ನಕ್ಕು ಅನುತ್ತ 'ಹುಚ್ಚರು' ಎನ್ನುತ್ತ ಓಡಿಹೋದಾಗ 'ನಿಜ ಇರಬೇಕು' ಎಂದುಕೊಂಡರು ಈ ಮೂವರು.

ಪದಾರ್ಥ ಚಿಂತಾಮಣಿ

— ೧೩ —

ಭಾಷೆಯಿಂದ ಭಾಷೆಗೆ ಜಿಗಿಯುವುದು ಶಬ್ದಗಳ ಒಂದು ಸ್ವಭಾವ. ಆದರೆ ಹೀಗೆ ವಲಸೆ ಬಂದ ಪದಗಳು ಹೊಸ ಭಾಷೆಯಲ್ಲಿ ಮೂಲ ಭಾಷೆಯ ಅರ್ಥವನ್ನೇ ಕೊಡುತ್ತವೆ ಎಂದಿಲ್ಲ. ಸಂಸ್ಕೃತದ **ಅವಸರ** ಶಬ್ದಕ್ಕೆ ಈಗ ಕನ್ನಡದಲ್ಲಿ ಗಡಿಬಿಡಿ, **ತ್ವರೆ** ಎಂಬರ್ಥ ಸಾಮಾನ್ಯವಾಗಿದೆ. ಆದರೆ ಸಂಸ್ಕೃತದಲ್ಲಿ ಅದಕ್ಕಿರುವುದು **ಸಂದರ್ಭ, ಅವಕಾಶ, ವೇಳೆ** ಎಂಬರ್ಥ. ಕನ್ನಡದಲ್ಲಿ ಅದಕ್ಕೆ ಸುಮಾರು ವಿರುದ್ಧ ಎನ್ನಬಹುದಾದ ಅರ್ಥ ಹೇಗೆ ಬಂತು? ಎಂದು ಬಂತು? ಬಹುಶಃ ೧೭ ನೇ ಶತಮಾನದಲ್ಲಿ ಮೊಟ್ಟ ಮೊದಲಾಗಿ ಈ ಶಬ್ದಕ್ಕೆ ಈ ಅರ್ಥ ಬಂದಂತೆ ತೋರುತ್ತದೆ. ಅರಮನೆಯ ಸೇವಕ ವರ್ಗದಲ್ಲಿ ಪ್ರಭುವಿನ ಅಪ್ಪಣೆಯೇನಾಗುತ್ತದೆಂದು ಕಾಯುತ್ತ ಇದ್ದು, ಅಪ್ಪಣೆಯಾದೊಡನೆ ಕಾರ್ಯಕ್ಕೆ ಚಾಲನೆ ಕೊಡುವ **ಅವಸರದವನು** ಎಂಬ ಸೇವಕನೊಬ್ಬ ಇದ್ದ. ಅಲ್ಲಿ ಮೂಲತಃ ಅವಸರ ಎಂದರೆ ತಕ್ಕ **ವೇಳೆ**ಯೆಂದೇ ಅರ್ಥ ಇದ್ದಿರಬಹುದಾದರೂ ಅಪ್ಪಣೆಯನ್ನು ತತ್‌ಕ್ಷಣ ಪಾಲಿಸುವುದು ಸೇವಕನ ಕೆಲಸವಾದ್ದರಿಂದ **ಅವಸರದವನ** ಕೆಲಸಕ್ಕೆ ತ್ವರೆ ಎಂಬರ್ಥ ಮೆಲ್ಲಗೆ ಬಂದಿರಬೇಕು. ಉಡುಪಿಯ ಕೃಷ್ಣದೇವಾಲಯದಲ್ಲಿನ ನಾನಾವಿಧ ಪೂಜೆಗಳಲ್ಲಿ **ಅವಸರ** ಪೂಜೆಯೊಂದು. ಇದು ಎರಡು ಮುಖ್ಯ ಪೂಜೆಗಳ **ನಡುವೆ** ಜರಗುವ ಚಿಕ್ಕ ಪೂಜೆ: ಸ್ವಾಭಾವಿಕವಾಗಿ ಇದು ಬಹಳ ಬೇಗನೆ ಮುಗಿದು ಹೋಗುತ್ತದೆ. **ಅವಸರ** ಶಬ್ದಕ್ಕೆ ಸಂಸ್ಕೃತದಲ್ಲಿಲ್ಲದ ಅರ್ಥ ಕನ್ನಡದಲ್ಲಿ ಹೇಗೆ ಬಂದಿರಬಹುದೆಂಬುದಕ್ಕೆ ಇದೂ ಒಂದು ದಿಗ್ದರ್ಶನವಾಗುತ್ತದೆ. ಕೃಷ್ಣನ ಪೂಜಾ ಸಂಪ್ರದಾಯಗಳು ೧೬-೧೭ ನೇ ಶತಮಾನಗಳ ಸಂಧಿಯಲ್ಲಿ ರೂಪಿಸಲ್ಪಟ್ಟವುಗಳು.

ಟೀಕೆ, ಎಂದರೆ ಈಗ **ಆಕ್ಷೇಪಣೆ, ನಿಂದೆ** ಎಂಬರ್ಥ ಸಾಮಾನ್ಯವಾಗಿ ಕನ್ನಡದಲ್ಲಿ ಗಟ್ಟಿಯಾಗಿ ನಿಂತಿದೆ. ಅದರಿಂದ **ಟೀಕಿಸು** ಎಂಬ ಕ್ರಿಯಾಪದವೂ ರೂಪುಗೊಂಡಿದೆ. ಇದಕ್ಕಾದರೂ ಸಂಸ್ಕೃತದಲ್ಲಿರುವ **ಅರ್ಥ, ವ್ಯಾಖ್ಯಾನ, ಅರ್ಥವಿವರಣೆ,** ಎಂಬುದೇ ಹೊರತು **ಆಕ್ಷೇಪ,** ಎಂದಲ್ಲ. ಪ್ರಾಚೀನ ಕವಿಗಳೂ ಅರ್ಥವಿವರಣೆಯೆಂಬರ್ಥದಲ್ಲಿಯೇ **ಟೀಕು,** ಎಂಬ ಪದಪ್ರಯೋಗ ಮಾಡಿದ್ದಾರೆ. ಈ ಶತಮಾನದಲ್ಲಿ ಟೀಕೆಗೆ ಅರ್ಥವಿವರಣೆ ಎಂಬರ್ಥದ ಜೊತೆಗೆ ಗುಣದೋಷವಿಮರ್ಶೆ ಎಂಬರ್ಥವೂ ಒಂದಾಗಿ ಅದರಿಂದ ಬರೀ **ದೋಷವಿಮರ್ಶೆ** ಎಂಬೊಂದೇ ಅರ್ಥ ನೆಲೆಯಾಯಿತು. ಮರಾಠಿ ಪ್ರಭಾವದಿಂದ ಉತ್ತರಕರ್ನಾಟಕದ ಮೂಲಕ ಇದು ಬಳಕೆಗೆ ಬಂತು.

ಮಂಡರಿನ್ (Mandarin) ಎಂಬೊಂದು ಶಬ್ದ ಇಂಗ್ಲೀಷಿನಲ್ಲಿ ಸ್ವಲ್ಪ ತಿರಸ್ಕಾರದಿಂದ ಹಿರಿಯ ಸರಕಾರಿ ನೌಕರ, ನೌಕರಶಾಹಿ, ದುಷ್ಟಪಂಡಿತ ಎಂಬರ್ಥದಲ್ಲಿ ಬಳಸುತ್ತದೆ. ಇದನ್ನು ಪೋರ್ಚುಗೀಸರು ಮಲಯ ಭಾಷೆಯಿಂದ ಯುರೋಪಿಗೆ ಆಮದು ಮಾಡಿದರು. ಮಲಯದಲ್ಲಿ ಈ ಶಬ್ದ ಚೀನದ ಹುದ್ದೆದಾರ, ನೌಕರಶಾಹಿ ಎಂಬ ಅರ್ಥ ಕೊಡುತ್ತದೆ. ಚೀನದ ನೌಕರಶಾಹಿಯನ್ನು ಪಂಡಿತವರ್ಗವೆಂದೇ ಅರಿಯುತ್ತಿದ್ದರು. ಆದರೆ ಈ ಶಬ್ದ ಚೀನದ್ದೂ ಅಲ್ಲ, ಮಲಯದ್ದೂ ಅಲ್ಲ. ಅದು ಸಂಸ್ಕೃತದಿಂದ ಮಲಯ ಭಾಷೆಗೆ ಇನ್ನೂ ಅನೇಕ ಶಬ್ದಗಳೊಡನೆ ಹೋದ **ಮಂತ್ರಿ** ಶಬ್ದದ ಅಪಭ್ರಂಶ. ಮಲಯದ ಬಹುಸಂಖ್ಯಾಕರು ಇಂದು ಇಸ್ಲಾಂ ಅನುಯಾಯಿಗಳಾದರೂ ಅವು ಕೆಲವೇ ಶತಮಾನಗಳ ಹಿಂದಿನವರೆಗೂ ಭಾರತದ ಪ್ರಬಲ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗಿತ್ತೆಂಬ ತಥ್ಯವನ್ನು ನೆನೆದುಕೊಳ್ಳಬೇಕು. — **ಪಾವೆಂ**

ಮಹಾಶಿವರಾತ್ರಿಯ ಮಹಾ ಶಿಕಾರಿ

ಡಿ. ಆರ್. ಕುಲಕರ್ಣಿ

ಸ್ವಾತಂತ್ರ್ಯ ಬಂದ ನಂತರದ ಎರಡನೆಯ ವರ್ಷ; ೧೯೪೯ರ ನವಂಬರ್ ತಿಂಗಳು. ಧಾರವಾಡದ ಸ್ಯಾಂಡಲ್‌ವುಡ್ ಡಿಪೋದ ಮೇಲ್ವಿಚಾರಣೆ ವಹಿಸಲ್ಪಟ್ಟು ನಾನು ಅಲ್ಲಿಗೆ ವರ್ಗಾಯಿಸಲ್ಪಟ್ಟೆ. ಶ್ರೀಗಂಧದ ಮರಗಳನ್ನು ತುಂಡು ಮಾಡುವುದು ಅಲ್ಲಿ ನಡೆಯುತ್ತಿದ್ದ ಕೆಲಸ. ಆ ಕೆಲಸ ಒಬ್ಬ ಕಂಟ್ರಾಕ್ಟರನಿಗೆ ಗುತ್ತಿಗೆ ನೀಡಲ್ಪಟ್ಟಿತ್ತು. ಆತನ ಕೈಕೆಳಗೆ ಇಪ್ಪತ್ತು ಜನ ಕೆಲಸಗಾರರಿದ್ದರು. ಶ್ರೀಗಂಧದ ಮರಗಳನ್ನು ಕಡಿದು. ಮೂರು ಮೂರು ಅಡಿಗಳ ತುಂಡುಗಳನ್ನಾಗಿ ಪರಿವರ್ತಿಸುವುದು ಹಾಗೂ ಪ್ರತಿ ತುಂಡಿನ ಭಾರ ಮತ್ತು ಆಕಾರಕ್ಕನುಗುಣವಾಗಿ ಹದಿನೆಂಟು ನಮೂನೆಗಳಿಗಾಗಿ ವರ್ಗೀಕರಿಸುವುದು ಕಂಟ್ರಾಕ್ಟರನೊಂದಿಗಿದ್ದ ಒಪ್ಪಂದ. ಈ ಕೆಲಸವನ್ನು ಬಹು ಜಾಗರೂಕತೆಯಿಂದ ಮತ್ತು ಜವಾಬ್ದಾರಿಯುತವಾಗಿ ನೋಡಿಕೊಂಡು ಹೋಗಬೇಕಾದ್ದು ಇಲಾಖೆಯುವನಾದ ನನ್ನ ಹೊಣೆಯಾಗಿತ್ತು.

ಕೆಲವೊಮ್ಮೆ ನನಗೆ ಧಾರವಾಡ ಬಿಟ್ಟು ಸುತ್ತಲಿನ ಪ್ರದೇಶಗಳಿಗೂ ಹೋಗಬೇಕಾಗುತ್ತಿತ್ತು–ಕಾಂಟ್ರಾಕ್ಟರ್ ಮ್ಹಾಪ್ಸೇಕರ್ ಅವರಕೂಡ–ಕೊಂಡ ಶ್ರೀಗಂಧದ ಮರಗಳನ್ನು ಗುರುತಿಸುವುದಲ್ಲದೇ ಒಟ್ಟು ಶ್ರೀಗಂಧದ ಮರಗಳ ಲೆಕ್ಕವನ್ನಿಡುವುದಕ್ಕಾಗಿ. ಆಗ ನನ್ನ ಬಳಿ ಒಂದು ೫-ಎಚ್.ಪಿ. ಮೋಟಾರ್ ಸೈಕಲ್ ಇತ್ತು ಈ ಮೋಟಾರ್ ಸೈಕಲ್ಲಿಗೆ ಇದ್ದ ಸೈಡ್‌ಕಾರಿನಲ್ಲಿ ನಾನು ಹಾಗೂ ಮ್ಹಾಪ್ಸೇಕರ ಧಾರವಾಡದ ಹೊರಪ್ರದೇಶಗಳಿಗೆ ಹೋಗುತ್ತಿದ್ದೆವು. ಮರಗಳಿಗೆ "ಆರ್" ಗುರುತು ಹಾಕಬೇಕಾಗುತ್ತಿತ್ತು. ಅದು ಸರಕಾರದ ಅಧಿಕೃತ ಮುದ್ರೆಯಾದ್ದರಿಂದ ಯಾವಾಗಲೂ ಬಲು ಜವಾಬ್ದಾರಿಯಿಂದ ಅದನ್ನು ಕಾಯಬೇಕಾಗುತ್ತಿತ್ತು.

ಒಮ್ಮೆ ನಾನು ಮ್ಹಾಪ್ಸೇಕರರೊಂದಿಗೆ ಬಣದೂರು ಫಾರೆಸ್ಟ್ ನಾಕಾಕ್ಕೆ ಹೊರಟಿದ್ದೆ. ಅಲ್ಲಿ ಮ್ಹಾಪ್ಸೇಕರ್ ಅವರ ೧೫ ಜನ ಕೂಲಿಗಳಿದ್ದರು. ಅವರೆಲ್ಲ ಅಲ್ಲಿಂದ ಇನಾಮು ಅರಣ್ಯವಾಗಿದ್ದ ಮುರಕಟ್ಟಿಗೆ ಹೋಗುವವರಿದ್ದರು. ಆ ಅರಣ್ಯದಲ್ಲಿದ್ದ ಮರಗಳಿಗೆ ಗುರುತು ಹಾಕಬೇಕಾಗಿತ್ತು. ಮುಂಜಾನೆ ೭ ಗಂಟೆಗೆ ಹೊರಟು ಬಣದೂರನ್ನು ಅರ್ಧ ಗಂಟೆಯೊಳಗಾಗಿ ತಲುಪಿ ಎಂಟು ಗಂಟೆಗೆ ಕೆಲಸ ಆರಂಭಿಸುವುದು ಪರಿಪಾಠವಾಗಿತ್ತು.

ಬಣದೂರು ಇನ್ನರ್ಧ ಮೈಲು ದೂರವಿದ್ದಾಗ ನಮಗೆ ಸತ್ತುಬಿದ್ದ ಎತ್ತು ಕಾಣಿಸಿತು. ಅದು ಆಗ ಆ ಪ್ರದೇಶದಲ್ಲಿ ಸಾಮಾನ್ಯವಾಗಿ ಹಬ್ಬಿದ್ದ ದನಗಳ ಕಾಲುಬೇನೆ, ಬಾಯ್ಬೇನೆಯಿಂದಾಗಿ ಸತ್ತಿತ್ತು. ಹಳಿಯಾಳದ ಸುತ್ತಮುತ್ತ ಹೀಗೆ ಅನೇಕ ದನಗಳು ಸತ್ತಿದ್ದವು. ಈ ಎತ್ತು ಅಲ್ಲಿ ಹೇರಳವಾಗಿದ್ದ ಹುಲಿ ಅಥವಾ ಚಿರತೆಯಿಂದೇನಾದರೂ ಕೊಲ್ಲಲ್ಪಟ್ಟಿದೆಯೋ ಎಂಬ ವಿಚಾರ ಬಂತು ನನಗೆ. ಆದರೆ ಅಂಥ ಚಿಹ್ನೆಗಳಾವೂ ಕಂಡುಬರಲಿಲ್ಲ. ಆ ಎತ್ತು ವಾರಸುದಾರರಿಲ್ಲದ್ದರಿಂದ ಹೀಗೆ ಸತ್ತು [illegible] ಖಂಡಿತ [illegible] ಮ್ಹಾಪ್ಸೇಕರರ



ಕೂಲಿಯಾಳುಗಳನ್ನು ಕರೆದು ಆ ಕಳೇವರವನ್ನು ಎತ್ತಿಕೊಂಡೊಯ್ದು ಚಿರತೆಯಿರಬಹುದಾದ ಸ್ಥಳದಲ್ಲಿ ಚರ್ಮ ಸುಲಿಯುವಂತೆ ಹೇಳಿದೆ. ಅಷ್ಟೇ ಅಲ್ಲ, ಚರ್ಮ ಸುಲಿದಾದ ಮೇಲೆ ಮೂರು ಕಾಲುದಾರಿಗಳು ಕೂಡುವಲ್ಲಿ ಈ ಸಿಗಿದ ಹೆಣವನ್ನು ಚೆಲ್ಲುವಂತೆಯೂ ಹೇಳಿದೆ. ಸುಲಿದ ಚರ್ಮವನ್ನು ಧಾರವಾಡಕ್ಕೆ ಒಯ್ದು ಮಾರಿಬಿಡಿ ಅಂದೆ. ಅವರು ಚರ್ಮವನ್ನು ೧೨ ರೂಪಾಯಿಗಳಿಗೆ ಮಾರಿ ಎರಡು ರೂಪಾಯಿಯ ಕಂಟ್ರಿ ಕುಡಿದು ಮಜಾ ಮಾಡಿದರು. ನಾನು ಶ್ರೀಗಂಧದ ಮರಗಳನ್ನು ಗುರುತಿಸುವ ಕೆಲಸವನ್ನು ಮಧ್ಯಾಹ್ನಕ್ಕೆ ಮೊದಲೇ ಮುಗಿಸಿದೆ. ಕೂಲಿಗಳನ್ನು ಕರೆದು ಬೇಟೆಗಾಗಿ ಮಂಚವೊಂದನ್ನು ಕಟ್ಟುವಂತೆ ಹೇಳಿದೆ. ಅಲ್ಲಿ ಅಷ್ಟು ಎತ್ತರವಾದ ಮರಗಳಿರಲಿಲ್ಲ. ಹೀಗಾಗಿ ಕೊನೆಗೆ ಇದ್ದುದರಲ್ಲಿಯೇ ನನಗೆ ಅನುಕೂಲವೆನಿಸಿದ ಭಾರಿ ಗಿಡವೊಂದನ್ನು ಆಯ್ದು ಮಂಚ ಕಟ್ಟಿಸಿದ ಮೇಲೆ ಧಾರವಾಡಕ್ಕೆ ಪ್ರಾಪ್ಲೇಕರರೊಟ್ಟಿಗೆ ಮರಳಿದೆ.

ಅಂದು ಮಹಾಶಿವರಾತ್ರಿ. ನಮಗೆ ಉಪವಾಸದ ದಿನ. ಸ್ನಾನ ಉಪಹಾರ ಮುಗಿಸಿ ಬಣದೂರಿಗೆ ಸಂಜೆ ಆರು ಗಂಟೆಯ ಹೊತ್ತಿಗೆ ಮೋಟಾರ್ ಸೈಕಲ್ಲನ್ನೇರಿ ಹೊರಟೆ. ಶಿಕಾರಿಗೆ ಅವಶ್ಯವಿದ್ದ ವಸ್ತುವನ್ನೂ ಸಜ್ಜು ಮಾಡಿದೆ. ನನ್ನ ಬಳಿ ಎಂದಿನಂತೆ ಒಂದು ೧೨ ಬೋರ್ ಡಬಲ್‌ಗನ್, ೫ ಶೆಲ್ಲಿನ ಬ್ಯಾಟರಿ, ಅರ್ಧ ಡಜನ್ ಕಾಟ್ರಿಜ್‌ಗಳು, ೪ ಸೆಲ್ ಕಾಟ್ರಿಜ್‌ಗಳು, ಹಾಗೂ ೨ ಬಕ್ ಶಾಟ್‌ಗಳನ್ನು ಇಟ್ಟುಕೊಂಡೆ. ಕೂಲಿಗಳು ನನಗಾಗಿ ಕಾಯುತ್ತಿದ್ದರು. ಹೊತ್ತುಗಳೆಯದೆ ಅವರನ್ನು ಕೂಡಿಕೊಂಡೆ. ಮುರಕಟ್ಟಿ ಜಂಗಲ್ಲಿನಲ್ಲಿದ್ದ ಆ ಮಂಚವನ್ನು ಸಮೀಪಿಸಿದೆ. ಚಿಕ್ಕ ಏಣಿಯೊಂದರ ಸಹಾಯದಿಂದ ಮಂಚವನ್ನೇರಿ ಕುಳಿತೆ. ನಂತರ ಕೂಲಿಯೊಬ್ಬ ಮೇಲೆ ಹೇಳಿದ ನನ್ನ ಸಾಮಾನುಗಳನ್ನು



ಕೊಟ್ಟ. ಮಂಚದ ಮೇಲೆ ಕುಳಿತು ನಾನು ಬಹಳ ಹೊತ್ತು ಕಾಯಬೇಕಾಯಿತು. ಅರಡಿ ಅಗಲದ ಆ ಮಂಚದ ಮೇಲೆ ನನ್ನ ಅನುಕೂಲಕ್ಕಾಗಿ ಕೂಲಿಗಳು ಗೋಣಿಚೀಲದಲ್ಲಿ ಒಣ ಹುಲ್ಲು ತುಂಬಿ ಮೆತ್ತಗೆ ಮಾಡಿದ್ದರು. ಚಿರತೆ ಯಾವಾಗ ಬರುತ್ತದೋ ಗೊತ್ತಿರಲಿಲ್ಲವಾದ್ದರಿಂದ ನಾನು ಇಡೀ ರಾತ್ರಿ ಅಲ್ಲಿ ಹಾಗೇ ಕೂಡಬೇಕಾದ ಪ್ರಸಂ-ಗವೂ ಇತ್ತು. ಯಾಕಂದರೆ ತಾನೇ ಕೊಂದ ಪ್ರಾಣಿಯಾಗಿದ್ದರೆ ಅದನ್ನು ತಿನ್ನಲು ಚಿರತೆ ಸಾಮಾನ್ಯವಾಗಿ ಬರುವ ಸಮಯವೆಂದರೆ ಸಂಜೆಯ ಏಳು ಗಂಟೆ.

ಸೊಳ್ಳೆಗಳು ಸಂಗೀತ ಹಾಡುತ್ತ ಮೈ ಅಡರುತ್ತಿದ್ದವು. ಕಚ್ಚಿ ರಕ್ತ ಹೀರುತ್ತಿದ್ದವು. ನಾನು ಬೇಟೆಗಾರನಾದರೇನಾಯಿತು? ಅವುಗಳಿಗೆ ಅದರ ಪರಿವೆಯೇ ಇಲ್ಲವಲ್ಲ. ಹಾಗೇ ಕುಳಿತಿರಬೇಕಾಯಿತು, ರಾತ್ರಿ ೮-೩೦ರ ವರೆಗೆ. ಆಗ ಮಂಗಗಳು ಯಾವು-

ದೋ ಹಿಂಸ್ರ ಪಶು ಬರುತ್ತಿರುವುದನ್ನು ತಮ್ಮ ಗಾಬರಿಯಿಂದ ವ್ಯಕ್ತಪಡಿಸಿದವು. ನಾನೀಗ ಬಲು ಜಾಗರೂಕನಾಗಿ ಕುಳಿತುಕೊಳ್ಳಬೇಕಾಯಿತು, ಮೈ ಎಲ್ಲ ಕಣ್ಣಾಗಿ. ಒಮ್ಮೆಲೆ ಕತ್ತಲಲ್ಲಿ ನಾಲ್ಕು ಹೊಳೆಯುವ ಗೋಲಿಗಳು ನಡೆದು ಬಂದಂತಾಯಿತು. ಅಬ್ಬಾ, ಒಂದಲ್ಲ ಎರಡು ಹಿಂಸ್ರಪಶುಗಳು! ನಾನು ಬ್ಯಾಟರಿ ಹಚ್ಚಿದೆ. ಎರಡು ಚಿರತೆಗಳು, ಒಂದು ಗಂಡು, ಒಂದು ಹೆಣ್ಣು. ಅತ್ತಿತ್ತ ನೋಡುತ್ತ ಬರುತ್ತಿದ್ದ ಗಂಡನ್ನು ಅನುಸರಿಸಿ ಹೆಣ್ಣು ಬರುತ್ತಿತ್ತು. ಆತ ಧೀರ. ಸ್ವಲ್ಪವೂ ಹಿಂಜರಿಯದೆ ನೇರವಾಗಿ ಎತ್ತಿನ ದೇಹಕ್ಕೆ ಬಾಯಿ ಹಾಕಿ ಮೂಳೆ ಕಡಿದು, ಮಾಂಸ ಕಿತ್ತು ತಿನ್ನತೊಡಗಿದ. ಒಂದೆರಡು ತುತ್ತು ಊಟಮಾಡಲಿಕ್ಕೆ ಬಿಟ್ಟೆ. ಬೆಳಕು ಬೀರಿದೆ. ಅರೆ, ದಂಪತಿಗಳ ಭೋಜನ ನಡೆದಿದೆ. ಕೂಡಲೇ ಗಂಡಿನ ಹೃದಯಕ್ಕೆ ಗುರಿಯಿಟ್ಟು ಕುದುರೆಯೊತ್ತಿದೆ. ಗುಂಡು ಒಮ್ಮೆ ಗರ್ಜಿಸಿ ನೆಗೆದು ಐವತ್ತು ಅಡಿ ದೂರದ ಕಂಟಿಯಲ್ಲಿ ಮರೆಯಾಯಿತು. ಹೆಣ್ಣು ದೂರ ಓಡಿ ಹೋಯಿತು.

ಗುಂಡು ಬಲವಾಗಿಯೇ ಬಡಿದಿತ್ತು. ಕಂಟಿಗಳಲ್ಲಿ ಮರೆಯಾಗಿ ೧೫ ನಿಮಿಷಗಳವರೆಗೆ ಗಂಡು ಗುರುಗುಡುತ್ತಲೇ ಇತ್ತು. ಮಂಚಕ್ಕೆ ದೂರಾಗಿದ್ದ ದಿನ್ನೆಯೊಂದರ ಮೇಲೆ ಕುಳಿತಿದ್ದ ಕೂಲಿಗಳು ಕೆಳಗೆ ಬರಬಹುದೇ ಎಂದು ನನ್ನನ್ನು ಕೂಗಿ ಕೇಳಿದರು. "ಚಿರತೆ ಇನ್ನೂ ಸತ್ತಿಲ್ಲ. ಬರಬೇಡಿ, ಸುಮ್ಮನೇ ತೊಂದರೆಗೊಳಗಾದೀರಿ," ಎಂದು ಕೂಗಿ ಹೇಳಿದೆ. ಅಷ್ಟೇ ಅಲ್ಲ, ಕ್ಯಾಂಪಿಗೆ ಹೋಗಿ ರಾತ್ರಿಯಿಡೀ ನಿದ್ದೆ ಮಾಡಿ ಎಂದೆ.

ಮಂಚವಂತೂ ಬಹಳ ಅನುಕೂಲಕರವಾಗಿತ್ತು ಎಂದೆನಸಲ್ಲವೆ? ಅಲ್ಲಿಯೇ ಮಲಗಿಬಿಡಲೇ ಅನಿಸಿತು; ಹಾಗೇ ಮಾಡಿದೆ.

ಮರುದಿನ ಮುಂಜಾನೆ ಕೂಲಿಗಳು ಬಂದರು. ಮಂಚದಿಂದ ನಾನಾಗಲೇ ಇಳಿದು ಮೃತ ಚಿರತೆಯನ್ನು ನೋಡುತ್ತಿದ್ದೆ. ಅವರು ಚಿರತೆಯ ಶವವನ್ನೆತ್ತಿ ನಾಕಾದವರೆಗೆ ತಂದು ನನ್ನ ಸೈಕಲ್ ಮೋಟಾರಿನ ಸೈಡ್‌ಕಾರಿನಲ್ಲಿ ಹಾಕಿದರು. ನಾನು ನನ್ನ ಬೇಟೆಯೊಂದಿಗೆ ಧಾರವಾಡಕ್ಕೆ ಮನೆಯತ್ತ ಧಾವಿಸಿದೆ. ಅಂದಿನ ಡಿ. ಎಸ್. ಪಿ. ಆಫೀಸಿನೆದು-ರಿದ್ದ ಮನೆಯನ್ನು ಸೇರಿದಾಗ ನನ್ನ ಮಿತ್ರ ನಾಡಕರ್ಣಿಯವರೂ ನನ್ನ ಮಕ್ಕಳೂ ಓಡಿಬಂದು ನನ್ನನ್ನು ಮುತ್ತಿದರು. ನಾಡಕರ್ಣಿಯವರು ನನ್ನ ಯಶಸ್ಸಿಗಾಗಿ ನನ್ನನ್ನು ಅಭಿನಂದಿಸಿದರೆ ಹುಡುಗರು ಕಂದು ಚಿಕ್ಕೆಗಳ ಈ ಭಯಂಕರ ಹಿಂಸ್ರಪಶುವನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದರು. ಆ ಕ್ಷಣಕ್ಕೆ ಮಾತ್ರ ನನ್ನ ಈ 'ಸಾಧನೆ'ಯ ಬಗ್ಗೆ ನನಗೆ ಹೆಮ್ಮೆಯೆನಿಸುವುದರ ಬದಲು ತಪ್ಪಿಸಿಕೊಂಡು ಓಡಿಹೋದ ಹೆಣ್ಣು ಚಿರತೆಯ ನೆನಪು ಬಂದು ನನ್ನನ್ನು ಕಾಡಿತು. ಅವರ ಪ್ರಿಯಕರರನ್ನು ನಾನು ವಿನಾಕಾರಣ ಕೊಂದುಬಿಟ್ಟೆನೆ ಎಂಬ ಶಂಕೆ ನನ್ನನ್ನು ಮುತ್ತಿತು. ✡

ಮೊದಲ ದಿನ ಶಾಲೆಗೆ ಹೋಗಿ ಬಂದ ಗುಂಡ ಸಂಜೆ ಅಪ್ಪ-ಅಮ್ಮನೊಂದಿಗೆ ಚಹ ಕುಡಿಯುತ್ತ, ಶಾಲೆಯಲ್ಲಿ ಶಿಕ್ಷಕರು ಹೇಳಿದ್ದ, "ದೇವರೂ ಎಲ್ಲೆಡೆಯೂ ಇದ್ದಾನೆ. ಹುಡುಕಿ. ಸಮೀಪ ತಂದುಕೊಳ್ಳಿ" ಎಂಬ ಮಾತನ್ನು ನೆನಪಿಸಿಕೊಂಡು, "ಅಮ್ಮಾ ದೇವರೂ ಎಲ್ಲ ಕಡೇನೂ ಇದ್ದಾನಾ?" ಕೇಳಿದ

"ಹೌದು ಮರಿ."

"ಈ ಮನೆಯಲ್ಲಿ?"


"ಇದ್ದಾನೆ."

"ಈ ಹಾಲಿನ ಕಪ್ಪಿನಲ್ಲಿ?"

"ಅಲ್ಲಿಯೂ."

"ಹಾಗಾದರೆ ಸಿಕ್ಕ; ಬಿಡುವುದಿಲ್ಲ" ಎಂದವನೇ ಕಪ್ಪಿನ ಬಾಯಿಯನ್ನು ಗಟ್ಟಿ-ಯಾ ಮುಚ್ಚಿದ ಗುಂಡ.

ಕಾಡಿಗೆಯಿಂದ ಅಲಂಕೃತವಾದ ನಿಮ್ಮ ಕಣ್ಣುಗಳು... ಸಾವಿರ ಕವನಗಳು!



[illegible]...ಅವು
ಮಾಧುರ್ಯವಿಲ್ಲದ ಬರಡು ಕವನಗಳಾಗವೆ?

ಕಣ್ಣುಗಳದ್ದೇನೂ ದೋಷವಿಲ್ಲ, ಅದು
ಕಾಡಿಗೆಯ ದೋಷ.

[illegible] ಡಿಲಕ್ಸ್ ಕಾಜಲ್.
[illegible]
ಸಲ ತಿಕ್ಕಿರಿ. ಆದರ ಬಿಸುಪಿನಿಂದ ಕಾಡಿಗೆ
[illegible]

ಶಿಂಗಾರ್
ಡಿಲಕ್ಸ್ ಕಾಜಲ್
(ಕಾಡಿಗೆ)

ಶಿಂಗಾರ್ ನಿಮ್ಮ ಕಣ್ಣುಗಳಲ್ಲಿ
ಸುಂದರ ಕವನಗಳನ್ನು ರಚಿಸುತ್ತದೆ.

everest/79/SH/117-kn

ಒಂದಿ ಕಥೆ

ತರ್ಕ

ಮೂಲ : ವಿ. ಕೆ. ಜೋಶಿ
ಕನ್ನಡಕ್ಕೆ : ' ಕೋಹಿ '

ಸಂಜೆ ೭-೩೦ರ ಸಮಯ. ಇನ್‌ಸ್ಪೆಕ್ಟರ್ ಶ್ರೀವಾಸ್ತವ ಅವರು ದಾದರ್ ಜಿಮಖಾನಾ ಕ್ಲಬ್ಬಿನ ಮುಂದಿನ ಹುಲ್ಲುಗಾವಲಿನಲ್ಲಿ ಆರಾಮ ಕುರ್ಚಿಯ ಮೇಲೆ ಕುಳಿತು ಆಕಾಶದೆಡೆ ನೋಡುತ್ತಾ ಸಿಗರೇಟಿನ ಹೊಗೆಯನ್ನು ಸುರುಳಿ ಸುರಳಿಯಾಗಿ ಬಿಡುತ್ತಿದ್ದರು. ಆಗ ತಾನೆ ಅವರು ಒಂದು ಕೊಲೆ ಮೊಕದ್ದಮೆಯ ವಿಚಾರಣೆ ನಡೆಯಿಸಿ ಬಂದಿದ್ದರು. ಕಳೆದ ಕೆಲವು ದಿನಗಳಿಂದ ಸ್ವಲ್ಪವೂ ಬಿಡುವು ಸಿಕ್ಕಿರಲಿಲ್ಲ. ಈಗ ಎರಡು ದಿನಗಳ ರಜೆ ದೊರೆತಿತ್ತು. ಆರಾಮವಾಗಿ ಕಾಲ ಕಳೆಯ ಬೇಕೆಂದಿನಿಸಿತ್ತು. ಇನ್ನೇನು ಸ್ವಲ್ಪ ಹೊತ್ತಿನಲ್ಲಿಯೇ ಅವರು ಮನೆಗೆ ಹೋಗಬೇಕು ಎನ್ನುವಷ್ಟರಲ್ಲಿ ಅವರ ಒಬ್ಬ ಮಿತ್ರರಾದ ಪ್ರೊಫೆಸರ್ ಶಾಲಿಗ್ರಾಮ ಅವರು ಅಲ್ಲಿಗೆ ಆಗಮಿಸಿದರು. ಎಂದಿನಂತೆಯೇ 'ಸನ್ ಹ್ಯಾಟ್' ಅವರ ಕೈಯಲ್ಲಿತ್ತು. ಇನ್‌ಸ್ಪೆಕ್ಟರ್ ಅವರ ಸಮೀಪವೇ ತಾವೂ ಒಂದು ಕುರ್ಚಿಯನ್ನೆಳೆದುಕೊಂಡು ಜೇಬಿನಿಂದ ಕರವಸ್ತ್ರ ತೆಗೆದು ಬೆವರು ಒರೆಸಿಕೊಳ್ಳುತ್ತಾ ಕುಳಿತುಕೊಂಡರು. ಅವರ ಕಡೆ ನೋಡುತ್ತಾ, ಇನ್‌ಸ್ಪೆಕ್ಟರ್ ಅವರು ಪ್ರಶ್ನಿಸಿದರು, "ಏನು ವಿಷಯ ಪ್ರೊಫೆಸರ್ ಸಾಹೇಬರೆ, ಈ ದಿನ ಮನೆಯಲ್ಲಿ ಏನೋ ರಾದ್ಧಾಂತವಾಗಿರಬೇಕು ಅಲ್ಲವೇ?"

ಇನ್‌ಸ್ಪೆಕ್ಟರರ ಈ ಪ್ರಶ್ನೆ ಕೇಳಿ ಪ್ರೊಫೆಸರರು ಆಶ್ಚರ್ಯ ವ್ಯಕ್ತಪಡಿಸುತ್ತಾ, "ಹೌದು. ಮನೆಯ ವಿಷಯ ಹಾಗೇಯೆ ನಡಿಯುತ್ತಾ ಇರುತ್ತದೆ. ಆದರೆ ನಮ್ಮ ಮನೆಯಲ್ಲಿ ನಡೆದ ವಿಷಯ ನಿಮಗೆ ಅದು ಹೇಗೆ ಗೊತ್ತಾಯಿತು?" ಎಂದು ಕೇಳಿದರು.

"ಪ್ರೊಫೆಸರ್ ಸಾಹೇಬರೆ ನಾವು ಪೋಲೀಸರು. ಯಾವಾಗಲೂ ತರ್ಕ ವಿತರ್ಕಗಳ ಆಟವೇ ನಮ್ಮದು. ಯಾವುದೇ ತರ್ಕವಿಲ್ಲದೆ ಅಪರಾಧಿಯನ್ನು ಹಿಡಿಯಲು ಸಾಧ್ಯವೇ?"

"ಒಳ್ಳೆಯದು, ನನ್ನ ವಿಷಯದಲ್ಲಿ ಅದೇನು ತರ್ಕ ಮಾಡಿರುವಿರಿ ಸ್ವಲ್ಪ ತಿಳಿಸುವಿರಾ?"

"ಸಾಮಾನ್ಯವಾದ ತರ್ಕ. ನೀವು ತೊಟ್ಟುಕೊಂಡಿರುವ ನಿಮ್ಮ ಬುಷ್‌ಷರ್ಟನ್ನು ನೋಡಿಕೊಳ್ಳಿ. ಬುಷ್‌ಷರ್ಟಿನ ಮೇಲಿನ ಒಂದು ಬಟನ್ ಕಿತ್ತುಹೋಗಿರುವುದು ಕಾಣುತ್ತದೆ. ಕೈಯಲ್ಲಿರುವ ಕರವಸ್ತ್ರ ಅಷ್ಟೇನೂ ಶುಭ್ರವಾಗಿಲ್ಲ. ನಾನು

ಶ್ರೀಮತಿ ಶಾಲಿಗ್ರಾಮರ ಪರಿಚಯಸ್ಥನೂ ಇದ್ದೇನೆ. ಆಕೆ ಖಂಡಿತವಾಗಿಯೂ ಈ ರೀತಿಯಾಗಿ ನೀವು ಮನೆಯಿಂದ ಹೊರಹೋಗಲು ಬಿಡುವುದಿಲ್ಲ. ಅಂತೆಯೇ ನೀವು ಆಕೆಗೆ ತಿಳಿಸದೆ ಸಿಟ್ಟಿನಿಂದ ಮನೆ ಬಿಟ್ಟು ಹೊರಬಂದಿರಬೇಕು ಅನಿಸುತ್ತದೆ."

"ನೀವು ಬಹಳೇ ಚುರುಕು ಬುದ್ಧಿಯುವರು ಎಂದು ಒಪ್ಪಿಕೊಳ್ಳುತ್ತೇನೆ ಇನ್‌ಸ್ಪೆಕ್ಟರ್, ನನ್ನ ಬಗ್ಗೆ ಮೇಲೆ ಹೇಳಿದ ಎಲ್ಲ ಮಾತೂ ನಿಜವೇ ಆದರೂ ನೀವು ಕತ್ತಲಿನಲ್ಲಿಯೇ ಬಾಣ ಬಿಟ್ಟದ್ದು ಅಕಸ್ಮಾತ್ ಗುರಿ ಮುಟ್ಟಿದೆ ಎಂದು ನನಗನ್ನಿಸುತ್ತದೆ."

"ಹಾಗೇನು? ಒಳ್ಳೆಯದು. ನೀವು ನನ್ನನ್ನು ಇನ್ನೊಮ್ಮೆ ಪರೀಕ್ಷಿಸಿರಿ?," ಇನ್‌ಸ್ಪೆಕ್ಟರ್ ಸವಾಲು ಹಾಕಿದರು. ಇಬ್ಬರೂ ಗಟ್ಟಿಯಾಗಿಯೇ ಮಾತನಾಡುತ್ತಿದ್ದುದರಿಂದ ಅವರ ಬಳಿ ಇನ್ನೂ ೫–೬ ಜನ ಉತ್ಸುಕತೆಯಿಂದ ಸೇರಿದರು.

"ಹಾಗಾದರೆ ಹಿಂದೆ ಸರಿಯಕೂಡದು ಇನ್‌ಸ್ಪೆಕ್ಟರ್." ಪ್ರೊಫೆಸರ್ ಅವರು ವಾದ ಮಾಡು ಅ ತಯಾರಾಗಿಯೇ ಬಂದ ಹಾಗಿತ್ತು. ಪ್ರೊಫೆಸರ್ ಹೇಳಿದರು; "ನೋಡಿ, ನಾನು ಒಂದು ವಾಕ್ಯ, ಹೇಳುತ್ತೇನೆ. ಅನಂತರ ನೀವು ಅದರ ಮೇಲೆ ತರ್ಕ ಮಾಡಿ."

"ಆಗಲಿ, ಸಾಧ್ಯವಾದಷ್ಟು ಪ್ರಯತ್ನಿಸುತ್ತೇನೆ. ಆದರೆ ಪ್ರೊಫೆಸರ್ ಸಾಹೇಬರೇ, ಒಂದು ಮಾತನ್ನು ನೆನಪಿನಲ್ಲಿಡಿ. ಪೋಲೀಸರ ತರ್ಕ ದೈನಂದಿನ ವ್ಯವಹಾರದ ಒರೆಗಲ್ಲಿನ ಮೇಲೆ ಯಾವಾಗಲೂ ಸತ್ಯವೇ ಆಗಿ ಹೊರಬರುತ್ತದೆ" ಆದರೆ ಪ್ರೊಫೆಸರು ಏನನ್ನೂ ಕೇಳಲು ತಯಾರಿರಲಿಲ್ಲ.

"ದೈನಂದಿನ ವ್ಯವಹಾರದ ವಾಕ್ಯವೇ ಇದೆ. ಲಕ್ಷಗೊಟ್ಟು ಕೇಳಿ– 'ಇಷ್ಟೊಂದು ಮಾತ್ರಕ್ಕೆ ಅಂಥಾ ವ್ಯಕ್ತಿ ರಾತ್ರಿ ಹೊತ್ತು ಸುಮಾರು ೮ ಕಿಲೋಮೀಟರಿನಷ್ಟು ಹಾದಿಯನ್ನು ಕಾಲ್ನಡಿಗೆಯಿಂದ ಬಂದ ಎಂದರೆ ಇದೊಂದು ಆಶ್ಚರ್ಯವೇ?"

ಇನ್‌ಸ್ಪೆಕ್ಟರ್ ಶ್ರೀವಾಸ್ತವ ಅವರು ಲಕ್ಷ್ಯಗೊಟ್ಟು ಕೇಳಿದರು. ಅವರು ಅದೇ ವಾಕ್ಯ



ವನ್ನೆ ಮತ್ತೊಮ್ಮೆ ಹೇಳಿದರು, "ಇಷ್ಟು ಮಾತ್ರಕ್ಕೆ ಅಂಥಾ ವ್ಯಕ್ತಿ ರಾತ್ರಿ ಸಮಯದಲ್ಲಿ ಸುಮಾರು ೮ ಕಿಲೋಮೀಟರ್‌ನಷ್ಟು ಹಾದಿಯನ್ನು ಕಾಲು ನಡಿಗೆಯಿಂದ ಬರಬೇಕಾದಲ್ಲಿ ಇದೊಂದು ಆಶ್ಚರ್ಯವೇ!"

ಸರಿ. ಪ್ರೊಫೆಸರ್ ಸಾಹೇಬರು ಆ ವಾಕ್ಯದ ಅರ್ಥಕ್ಕೆ "ಯಸ್. ಅಂದರು."

ಇನ್‌ಸ್ಪೆಕ್ಟರರು ಯೋಚಿಸತೊಡಗಿದರು. ಪ್ರೊಫೆಸರರು ಮುಖದ ಮೇಲೆ ವಿಜಯ ಲಾಸ್ಯ ಮಾಡತೊಡಗಿತು.

ಸ್ವಲ್ಪ ಸಮಯ ಯೋಚಿಸಿದ ಮೇಲೆ ಇನ್‌ಸ್ಪೆಕ್ಟರ್ ಅವರು ಕೇಳಿದರು,: "ನೋಡಿ ಪ್ರೊಫೆಸರ್ ಸಾಹೇಬರೇ ತಮ್ಮ ವಾಕ್ಯ ಪೂರ್ಣವಾಗಿ ಸಂದರ್ಭರಹಿತವಾಗಿದೆ. ಆದರೂ ನಾನು ನನ್ನಿಂದಾದಷ್ಟು ಪ್ರಯತ್ನ ಮಾಡುತ್ತೇನೆ. ಆದರೆ ಅದಕ್ಕಿಂತ ಮೊದಲು ನಾನು ಕೆಲವೊಂದು ಪ್ರಶ್ನೆಗಳನ್ನು ಹಾಕುತ್ತೇನೆ. ಏಕೆಂದರೆ ವಾಕ್ಯದ ಸಂದರ್ಭ ನನಗೆ ಮನದಟ್ಟಾಗಬೇಕು."

"ಆಗಲಿ," ಎಂದರು ಪ್ರೊಫೆಸರ್.

"ಈ ವಾಕ್ಯವನ್ನು ಬೇರೆ ಯಾರಾದರೂ ನಿಮಗೆ ಹೇಳಿದಲ್ಲಿ ಅದನ್ನು ನೆನಪಿಸಿಕೊಳ್ಳುವಂತಹ ವಿಷಯ ಏನೂ ಇಲ್ಲವಾದ್ದರಿಂದ ಈ ವಾಕ್ಯವನ್ನು ನೀವೇ ಇನ್ನೊಬ್ಬರಿಗೆ ಹೇಳಿರಬೇಕು," ಎಂದು ನನಗನ್ನಿಸುತ್ತದೆ."

"ನೀವು ಹೇಳಿದ್ದು ನಿಜ."

"ಈಗ ಈ ವಾಕ್ಯ ಯಾವುದೇ ಕಲ್ಪಿತ ವಾಕ್ಯವಲ್ಲ. ಈಗ ತಾನೆ ಘಟಿಸಿದ ಒಂದು ಘಟನೆಗೂ ಅದಕ್ಕೂ ಸಂಬಂಧವಿದೆ ಅಲ್ಲವೆ?"

"ಸರಿ."

"ಒಳ್ಳೆಯದು, ಈಗ ನೋಡಿ; ಯಾವ ವ್ಯಕ್ತಿ ೮ ಕಿಲೋಮೀಟರ್‌ನಷ್ಟು ಹಾದಿ ತುಳಿದು ನಿಮ್ಮ ಬಳಿ ಬಂದಿದ್ದಾನೋ ಆ ವ್ಯಕ್ತಿಗೆ ಕಾಲ್ನಡಿಗೆಯ ಅಭ್ಯಾಸವಿಲ್ಲ. ಆತ ಕಾರ್‌ನಲ್ಲಿ ಕುಳಿತೇ ತಿರುಗಾಡುವ ವ್ಯಕ್ತಿಯಾಗಿರಬೇಕು. ಅಲ್ಲವೆ?"

"ಇಂಥಾ ತರ್ಕ ಯಾರಾದರೂ ಮಾಡಬಹುದು"

"ಕಾಲ್ನಡಿಗೆಯ ಅಭ್ಯಾಸವಿಲ್ಲದಿದ್ದರೂ ಆತ ನಡೆಯುತ್ತಲೇ ಬಂದ. ಅಂದಮೇಲೆ ಆತನ ಬಳಿ ತನ್ನ ಸ್ವಂತದ ವಾಹನವಿರಲಿಕ್ಕಿಲ್ಲ. ಏರವಲು ವಾಹನ ಸಿಗುವ ಸಂಭವವೂ ಇದ್ದಿಲ್ಲ ಅಂತ ಕಾಣಿಸುತ್ತದೆ. ಸಮಯ ರಾತ್ರಿ ಹೊತ್ತು. ಅಂತರ ೮ ಕಿಲೋಮೀಟರ್. ಪ್ರೊಫೆಸರ್ ಸಾಹೇಬರ ಮನೆಯೊಂತೂ ಹಿಂದ್ ಕಾಲೊನಿಯಲ್ಲಿದೆ ಹಿಂದ್ ಕಾಲೋನಿಗೆ ೮ ಕಿಲೋಮೀಟರ್‌ನಷ್ಟು ದೂರದಲ್ಲಿರುವ ವ್ಯಕ್ತಿ. ಆತನಿಗೆ ಯಾವುದೇ ವಾಹನ ಸಿಗಲಿಲ್ಲ ಅಂದರೆ? ಹಾಂ. ಈಗ ನೆನಪಿಗೆ ಬಂತು. ನಿನ್ನೆ ರಾತ್ರಿ ಖಾರ್‌ನಲ್ಲಿ ಸ್ವಲ್ಪ ಗಡಿಬಿಡಿಯಾಗಿತ್ತು. ಆದ್ದರಿಂದ ಬಸ್, ಟ್ಯಾಕ್ಸಿ, ರೈಲು ಎಲ್ಲವೂ ಬಂದಾಗಿ ಸಂಪರ್ಕ ವ್ಯವಸ್ಥೆಯೇ ಮುರಿದು ಬಿದ್ದಿತ್ತು. ಅಂದಮೇಲೆ ಆ ವ್ಯಕ್ತಿ, ಪಶ್ಚಿಮ ಉಪನಗರ ಖಾರ್‌ನ ನಿವಾಸಿಯೇ ಆಗಿರಬೇಕು ಅಲ್ಲವೇ ಪ್ರೊಫೆಸರ್?"

ಪ್ರೊಫೆಸರರ ಮುಖದ ಮೇಲಿನ ಮಂದಹಾಸ ಮಾಯವಾಗತೊಡಗಿತು. ಆತ ಹೇಳಿದ, "ಇಲ್ಲಿಯ ತನಕ ತಾವು ತರ್ಕ ಮಾಡಿ ಹೇಳಿದ್ದು ಸರಿ."

ಇನ್‌ಸ್ಪೆಕ್ಟರ್ ಅವರು ತಮ್ಮ ವಾದಸರಣಿಯನ್ನು ಮುಂದುವರಿಸಿದರು. "ನಿಮ್ಮ ವಾಕ್ಯದಲ್ಲಿ 'ಇಷ್ಟು ಮಾತ್ರಕ್ಕೆ' ಎನ್ನುವ ಪದವಿದೆ. 'ಇಷ್ಟು ಮಾತ್ರಕ್ಕೆ' ಎನ್ನುವ ಅರ್ಥ ಯಾವುದೋ ಸಾಮಾನ್ಯ ವಿಷಯಕ್ಕಾಗಿ ಅಥವಾ ಯಾವುದೋ ಸಣ್ಣ ವಸ್ತುವಿಗಾಗಿ; ಆ ವಸ್ತು ಅವರದೇ ಆಗಿರಬೇಕು. ಆ ವಸ್ತು ಒಂದು ವೇಳೆ ಆ ಬೇರೇ ವ್ಯಕ್ತಿಯದೇ ಆಗಿದ್ದಲ್ಲಿ ಆ ವಸ್ತು ಹೇಗೆ ತಮ್ಮ ಹತ್ತಿರ ಬಂದಿತು? ಏನೋ ಮರೆತು ತಾವು ಆ ವಸ್ತುವನ್ನು ತಂದಿರಬೇಕು. ಪ್ರೊಫೆಸರುಗಳ ಮರಗುಳಿತನವಂತೂ ಲೋಕಪ್ರಸಿದ್ಧವೇ ಇದೆ. ಅದರಲ್ಲೂ ನೀವಂತೂ ಭಾರೀ ಮರಗುಳಿಗಳು. ತಾವು ಅಪ್ಪಿ ತಪ್ಪಿ ಆ ವ್ಯಕ್ತಿಯ ಯಾವುದೋ ಒಂದು ಸಣ್ಣ ವಸ್ತುವನ್ನು ಎತ್ತಿಕೊಂಡು ಬಂದಿರಬೇಕು. ಇಂಥ ವಸ್ತು ಬಹುಶಃ ಚಪ್ಪಲಿ, ಛತ್ರಿ, ಕೈಬೆತ್ತ ಅಥವಾ ಟೋಪಿ. ತಾವು ಹೆಚ್ಚಾಗಿ ಬೂಟು ಹಾಕಿಕೊಳ್ಳುತ್ತೀರಿ. ಕೈ ಬೆತ್ತದ ಉಪಯೋಗವಂತೂ ತಮಗೆ ಬೇಕಾಗಿಲ್ಲ. ಈಗ ಮಳೆಗಾಲ ಅಲ್ಲವಾದ್ದರಿಂದ ಅದು ಕೊಡೆಯಂತೂ ಅಲ್ಲವೇ ಅಲ್ಲ. ಉಳಿ

ನದ್ದೇನು? ಸನ್ ಹ್ಯಾಟ್ ಅಂತೂ ಯಾವಾಗಲೂ ನಿಮ್ಮ ಬಳಿಯೆ ಇರುತ್ತದೆ. ಆದ್ದರಿಂದ ಆ ವ್ಯಕ್ತಿಯು ಮತ್ತು ನಿಮ್ಮ ಹ್ಯಾಟ್ ಪರಸ್ಪರ ಅದಲುಬದಲಾಗಿರಬೇಕು ಮತ್ತು ಆತ ತನ್ನ ಹ್ಯಾಟ್‌ಗಾಗಿ ತಮ್ಮ ಬಳಿ ಬಂದಿರಬೇಕು" ಇನ್‌ಸ್ಪೆಕ್ಟರ್ ತಮ್ಮ ಮಾತಿನ ಮೋಡಿಯನ್ನು ನಿಲ್ಲಿಸಿದರು.

ಪ್ರೊಫೆಸರ್ ಶಾಲಿಗ್ರಾಮ್ ತಾವು ಕುಳಿತ ಕುರ್ಚಿಯ ಮೇಲೆಯೇ ಹಾರಿಬಿದ್ದರು. ಅವರು ಇನ್‌ಸ್ಪೆಕ್ಟರ್ ಶ್ರೀವಾಸ್ತವರ ಕೈಯನ್ನು ಅದುಮುತ್ತಾ ಹೇಳಿದರು. "ನಾನು ಸೋಲೊಪ್ಪಿಕೊಳ್ಳುತ್ತೇನೆ." ಇನ್‌ಸ್ಪೆಕ್ಟರ್ ಸುತ್ತಲೂ ನೆರೆದಿದ್ದ ಜನರನ್ನು ಸಂಬೋಧಿಸುತ್ತ ಪ್ರೊಫೆಸರರು ಹೇಳಿದರು. "ನೋಡಿ, ಇನ್‌ಸ್ಪೆಕ್ಟರ್ ಶ್ರೀವಾಸ್ತವ ಅವರು ಒಂದು ವಾಕ್ಯವನ್ನು ತಮ್ಮ ಪ್ರಚಂಡ ತರ್ಕದ ಒರೆಗಲ್ಲಿಗೆ ತಿಕ್ಕಿ ಹೇಳಿದ್ದನ್ನು ನಾನು ಪೂರ್ಣವಾಗಿ ವಿಶದೀಕರಿಸುತ್ತೇನೆ... ನಮ್ಮ ನೆರೆಯ ಫ್ಲ್ಯಾಟಿನಲ್ಲಿ ಮಿಸ್ಟರ್ ಶ್ಯಾಮಲಾಲ್ ಶರ್ಮಾ ಅವರಿರುತ್ತಾರೆ. ಅವರ ಆಪ್ತ ಮಿತ್ರನಂತೂ ನಾನಲ್ಲ. ಆದರೆ ಸಾಧಾರಣ ಪರಿಚಯ ಇದ್ದೇಯಿದೆ. ಮೊನ್ನೆಯ ದಿನ ಸಂಜೆ ಸುಮಾರಿಗೆ ಅವರು ನನ್ನ ಹತ್ತಿರಬಂದರು. 'ಪ್ರೊಫೆಸರ್ ಸಾಹೇಬರೇ, ನೀವು ಹಡಗನ್ನು ನೋಡಿರುವಿರೇನು?' ಎಂದರು. ನಾನು 'ಇಲ್ಲ' ಎಂದೆ ಅವರು ಹೇಳಿದರು; ನಮ್ಮ ಕಕ್ಕಂದಿರಾದ ಶ್ರೀ ದೇವಜಿಶರ್ಮಾ ಅವರು ಆಫ್ರಿಕದಿಂದ ನಾಳೆ ಬೊಂಬಾಯಿಗೆ ಬರುವವರಿದ್ದಾರೆ. ನಾನು ಅವರನ್ನು ಕರೆದು ತರಲು ಡೆಕ್ ಮೇಲೆ ಹೋಗುತ್ತೇನೆ. ಜಹಜಿನ ಬಳಿಹೋಗಲು ನನ್ನ ಹತ್ತಿರ ಪ್ರವೇಶಪತ್ರವೂ ಇದೆ. ನೀವೂ ನಡೆಯಿರಿ, ಇಬ್ಬರೂ ಕೂಡಿಕೊಂಡು ಹೋಗೋಣವಂತೆ' ಎಂದಾಗ ನಾನು ಸಂತೋಷದಿಂದ ಅವರ ಆಮಂತ್ರಣವನ್ನು ಸ್ವೀಕರಿಸಿದೆ. ಶ್ಯಾಮಲಾಲ್ ಶರ್ಮಾ ಅವರ ಜೊತೆ ನಾನು ಬಂದರಿಗೆ ಹೋದೆ. ಹಡಗು ಈಗ ತಾನೆ ಬಂದರಿನೊಳಗೆ ಪ್ರವೇಶಿಸಿತ್ತು. ಪ್ರವೇಶಪತ್ರವಿದ್ದ ಕಾರಣ ನಾವಿಬ್ಬರೂ ಡೆಕ್ ಮೇಲೆ ಹೋದೆವು. ಹಡಗು ಬಹಳೇ ದೊಡ್ಡದಾಗಿತ್ತು. ಯಾತ್ರಿಗಳ, ಹಮಾಲರ ಸಂಖ್ಯೆ ಹೆಚ್ಚಾಗಿತ್ತು. ನಾನು ಒಂದು ಕೈಯಲ್ಲಿ ನನ್ನ ಸನ್‌ಹ್ಯಾಟನ್ನು ಹಿಡಿದು ಕೊಂಡು ಆ ಜನದಟ್ಟಣೆಯ ಮಧ್ಯೆ ಹಾದಿಮಾಡಿಕೊಳ್ಳುತ್ತಾ ಶ್ಯಾಮಲಾಲ್‌ಶರ್ಮಾ ಅವರ ಕಡೆ ನಡೆದೆ. ಹಾಗೂ ಹೀಗೂ ಬಹಳೇ ಕಷ್ಟದಿಂದ ನಾವು ಶ್ರೀ ದೇವಜಿಶರ್ಮಾ ಅವರ ಕ್ಯಾಬಿನನ್ನು ತಲುಪಿದೆವು. ದೇವಜಿಶರ್ಮಾ ಅವರದು ಬಹು ದರ್ಪದ ವ್ಯಕ್ತಿತ್ವ ಉತ್ತಮ ಸೂಟ್ ಧರಿಸಿದ್ದರು. ಕೈಯಲ್ಲಿ ನನ್ನಂತಹುದೇ ಬಿಳಿ ಸನ್ ಹ್ಯಾಟ್ ಹಿಡಿದುಕೊಂಡಿದ್ದರು. ಶ್ಯಾಮಲಾಲ್ ಅವರು ನನ್ನ ಪರಿಚಯವನ್ನು ತಮ್ಮ ಕಕ್ಕನಿಗೆ ಮಾಡಿಕೊಟ್ಟರು. ನಾನು ಆ ಜನಸಂದಣಿಯಲ್ಲಿ ಅವರೊಂದಿಗೆ ಮಾತನಾಡುತ್ತಿದ್ದಾಗ ಯಾರೋ ನನಗೆ ಹಾಯ್ದರು. ಆಗ ನನ್ನ ಕೈಯಲ್ಲಿದ್ದ ನನ್ನ ಬಿಳಿ ಸನ್ ಹ್ಯಾಟ್ ಹಾರಿ ದೂರಬಿತ್ತು. ಕಕ್ಕನವರು ಕೂಡಲೇ ಆ ಹ್ಯಾಟ್‌ನ್ನು ನನಗೆ ತಂದು ಕೊಟ್ಟರು. ಅಲ್ಲಿಯೇ ಈ ಅವಾಂತರ ನಡೆದು ಹೋಯಿತು. ಗಡಿಬಿಡಿಯಲ್ಲಿ ಅವರು ತಮ್ಮ ಬಿಳಿ ಸನ್ ಹ್ಯಾಟ್‌ನ್ನು ನನಗೆ ಕೊಟ್ಟಿದ್ದರು. ಆ ಹೊತ್ತಿನಲ್ಲಿ ನಾನು ಕೂಡ ಅಷ್ಟಾಗಿ ನನ್ನ ಹ್ಯಾಟ್‌ನ್ನು ಗಮನಿಸಿರಲಿಲ್ಲ. ಆ ಹಡಗಿನಲ್ಲಿ ನನ್ನೊಬ್ಬ ವಿದ್ಯಾರ್ಥಿ ಅಸಿಸ್ಟಂಟ್ ಕ್ಯಾಪ್ಟನ್ ಆಗಿದ್ದ. ಆತ ನನ್ನನ್ನು ಗುರುತಿಸಿದ. 'ಸರ್, ನಿಮಗೆ ಹಡಗನ್ನು ತೋರಿಸಲೇ?' ಕೇಳಿದ. ನಾನು ಅವನೊಡನೆ ಹಡಗನ್ನು ನೋಡಲು ಹೊರಟು ಹೋದೆ. ಇಬ್ಬರೂ ಶರ್ಮಾ ಅವರು ಕಸ್ಟಮ್ಸ್ ಕಡೆ ಹೋದರು. ನಂತರ ಅವರಿಗೂ ನನಗೂ ಭೇಟಿಯೇ ಆಗಲಿಲ್ಲ. ಹಡಗನ್ನು ನೋಡಿದ ನಂತರ ನಾನು ಸೀದಾ ಮನೆಗೆ ಬಂದೆ. ಊಟ ಮಾಡಿ ಮಲಗಿಕೊಂಡೆ. ರಾತ್ರಿ ಹನ್ನೊಂದು ಗಂಟೆಯ ಸುಮಾರಿಗೆ ಶ್ರೀ ಶ್ಯಾಮಲಾಲ್‌ಶರ್ಮಾ ಅವರು ತಮ್ಮ ಕಕ್ಕನೊಡನೆ ನಮ್ಮ ಮನೆಗೆ ಬಂದರು. ಕಕ್ಕನವರು ತೊಂದರೆ ಕೊಡುತ್ತಿರುವುದಕ್ಕಾಗಿ ತಮ್ಮನ್ನು ಕ್ಷಮಿಸುವಂತೆ ಕೇಳಿಕೊಳ್ಳುತ್ತಾ, 'ಹಡಗಿನಲ್ಲಿ ಜನಸಂದಣಿಯಿಂದಾದ ಗದ್ದಲದಲ್ಲಿ ನಮ್ಮ ಹ್ಯಾಟುಗಳು ಬದಲಾದವು ಬಂದರಿನಿಂದ ನಾನು ದೀಪಕ್ ಹೋಟಲಿಗೆ

ಹೋದೆ. ಹೋಟಲಿನಲ್ಲಿ ಕುಳಿತಿರುವಾಗಲೇ ನಮ್ಮ ಹ್ಯಾಟ್‌ಗಳು ಅದಲೂ ಬದಲಾದದ್ದು ಗಮನಕ್ಕೆ ಬಂತು. ದೇವರ ದಯೆದಿಂದ ನಮ್ಮ ಅಣ್ಣನ ಮಗನಾದ ಶ್ಯಾಮಲಾಲ್‌ಶರ್ಮ ಇನ್ನೂ ನನ್ನ ಜೊತೆಯಲ್ಲಿಯೇ ಇದ್ದರು. ಆದ್ದರಿಂದ ನಮ್ಮ ವಾಸ್ತವ್ಯ ಕಂಡುಹಿಡಿಯುವುದು ಅಷ್ಟೇನೂ ಕಷ್ಟವಾಗಲಿಲ್ಲ. ಅವರೂ ಮಾರ್ಗದಲ್ಲಿ ಹೋಗಿ ಬರುವ ಯಾವುದೇ ವಾಹನ ಸಿಗುವ ಸಂಭವವೂ ಇರದ ಕಾರಣ ಇಷ್ಟು ದೂರವನ್ನು ಅತಿ ಪ್ರಯಾಸದಿಂದ ನಡೆದುಕೊಂಡೇ ಬರಬೇಕಾಯಿತು.

"ನಾನು ಅವರ ಹ್ಯಾಟ್‌ನ್ನು ಹಿಂದಿರುಗಿಸಿದೆ. ನನ್ನ ಹ್ಯಾಟನ್ನು ಅವರು ಜೊತೆಯಲ್ಲೇ ತಂದಿದ್ದರು. ತಮ್ಮ ಹ್ಯಾಟನ್ನು ಅವರು ತೆಗೆದುಕೊಂಡು ಹೋದ ನಂತರ ನಾನು ನನ್ನ ಪತ್ನಿಗೆ ಹೇಳಿದೆ, "ಇಷ್ಟು ಮಾತ್ರಕ್ಕೆ ಇಂಥ ವ್ಯಕ್ತಿ ರಾತ್ರಿ




"ಕನ್ನಡಕ ಇಲ್ಲದಿದ್ರೆ ಸರಿಯಾಗಿ ಓದೋಕಾಗಲ್ಲ ಅಂದೆಯಲ್ಲಪ್ಪಾ, ನಂಗೂ ಕೊಡಿಸು, ಸರಿಯಾಗಿ ಓದ್ಕೋತೀನಿ"

ಸಮಯದಲ್ಲಿ ಎಂಟು ಕಿಲೋಮೀಟರ್ ಕಾಲ್ನಡಿಗೆಯಿಂದ ಬಂದ ಎಂದರೆ ಆಶ್ಚರ್ಯ!" ಈ ಒಂದು ವಾಕ್ಯದ ಸೂತ್ರ ಹಿಡಿದು ಇನ್‌ಸ್ಪೆಕ್ಟರ್ ಶ್ರೀವಾಸ್ತವ ಅವರು ತಮ್ಮ ತರ್ಕದಿಂದ ಪೂರ್ಣವಾಗಿ ನಡೆದದ್ದನ್ನೇ ಹೇಳಿದರು. ಇದು ಆಶ್ಚರ್ಯವಲ್ಲವೆ? ಆದರೆ ಇನ್‌ಸ್ಪೆಕ್ಟರ್ ಶ್ರೀವಾಸ್ತವ ಅವರು ಏನೋ ಯೋಚಿಸುತ್ತಿದ್ದರು.

"ಕ್ಷಮಿಸಿರಿ, ನಾನು ಐದು ನಿಮಿಟಿನಲ್ಲಿ ಬರುತ್ತೇನೆ" ಎನ್ನುತ್ತಾ ಇನ್‌ಸ್ಪೆಕ್ಟರ್ ಅವರು ಜಿಮ್‌ಖಾನಾದ ಟೆಲಿಫೋನ್ ರೂಮಿಗೆ ತೆರಳಿ ಪೋಲೀಸ್ ಠಾಣೆಯ ಸಂಪರ್ಕ ಪಡೆದು ಹವಲ್ದಾರ್ ಜಾಧವ ಅವರೊಡನೆ ಏನನ್ನೋ ಮಾತನಾಡಿದರು. ನಂತರ ಮಿತ್ರಮಂಡಳಿ ಕುಳಿತಲ್ಲಿಗೆ ಬಂದು ಎಲ್ಲರನ್ನೂ ಉದ್ದೇಶಿಸಿ, "ಪೋಲೀಸರ ತರ್ಕದ ದೃಷ್ಟಿ ಯಾವಾಗಲೂ ವಸ್ತುಸ್ಥಿತಿಯ ಕಡೆಗೇ ಇರುತ್ತದೆ. ಈಗ ಈ ಪರೀಕ್ಷೆಯಲ್ಲಿ ನಾನು ಎಷ್ಟು ಅಂಕಗಳಿಸುತ್ತೇನೋ ನೋಡಬೇಕಾಗಿದೆ. ತಾವೆಲ್ಲ ಸ್ವಲ್ಪ ಸಮಯದವರೆಗೆ ಹೀಗೆಯೇ ಕುಳಿತಲ್ಲಿ ಎಲ್ಲರಿಗೂ ನಿಜಪರಿಸ್ಥಿತಿ ಗೊತ್ತಾಗಬಹುದು."

ಎಲ್ಲರೂ ಅತ್ಯಧಿಕ ಉತ್ಕಂಠಿತರಾಗಿ ವೇಳೆ ಕಳೆಯತೊಡಗಿದರು. ಸುಮಾರು ಅರ್ಧಘಂಟೆ ಕಳೆದಿರಬೇಕು. ನಂತರ ಜಿಮ್‌ಖಾನಾದ ಹೆಬ್ಬಾಗಿಲಿನಲ್ಲಿ ಒಂದು ಮೋಟಾರ್ ನಿಲ್ಲುವ ಶಬ್ದ ಕೇಳಿಸಿತು. ಅದೊಂದು ಪೋಲೀಸ್ ಡಿಪಾರ್ಟ್‌ಮೆಂಟಿನ ಜೀಪು. ಹವಾಲ್ದಾರ್ ಜಾಧವ ಅವರು ಜೀಪಿನಿಂದಿಳಿದರು. ಅವರ ಕೈಯಲ್ಲಿ ಒಂದು ಬಿಳಿಯ ಸನ್‌ಹ್ಯಾಟ್ ಇತ್ತು. ಅವರ ಜೊತೆ ಇನ್ನೊಂದು ವ್ಯಕ್ತಿ ಮೋಟಾರಿನಿಂದ ಇಳಿಯಿತು. ಆತ ದೇವಜಿಶರ್ಮ–ಶ್ಯಾಮಲಾಲ್ ಅವರ ಕಕ್ಕ ಜಾಧವ್ ಅವರು ಇನ್‌ಸ್ಪೆಕ್ಟರ್ ಅವರಿಗೆ ಒಂದು ಭರ್ಜರಿ ಸೆಲ್ಯೂಟ್ ಹೊಡೆದು, "ಸಾಹೇಬರೇ, ತಮ್ಮ ಆಜ್ಞೆಯ ಪ್ರಕಾರ ನಾನು ಬಾರ್‌ಗೆ ಹೋಗಿ ಅಲ್ಲಿನ ದೀಪಕ್ ಹೋಟೆಲ್‌ನಲ್ಲಿ ಇಳಿದುಕೊಂಡಿದ್ದ ದೇವಜಿಶರ್ಮ ಅವರನ್ನು ಕರೆ ತಂದಿದ್ದೇನೆ. ಮತ್ತು ತಮ್ಮ ಸೂಚನೆಯಂತೆ ಈ ಬಿಳಿ ಸನ್ ಹ್ಯಾಟನ್ನು ಕೂಡ ನನ್ನ ವಶದಲ್ಲಿ ತೆಗೆದುಕೊಂಡಿದ್ದೇನೆ," ಎಂದ.

ದೇವಜಿಶರ್ಮ ಅವರು ಸಿಟ್ಟಿನಿಂದ ಕೆಂಡಾ ಮಂಡಲವಾಗಿ, "ಇದೇನು ಹುಡುಗಾಟ"ಎಂದು ಗರ್ಜಿಸಿದರು. ಇನ್ಸ್‌ಪೆಕ್ಟರ್ ಆ ಸನ್ ಹ್ಯಾಟ್‌ನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಪರೀಕ್ಷಿಸಿ ನಂತರ ಶಾಂತವಾಗಿಯೆ, "ಶರ್ಮಾಜಿ, ಸ್ವಲ್ಪ ಸಮಾಧಾನ ತೆಗೆದುಕೊಳ್ಳಿ, ಎಲ್ಲ ವಿಷಯ ಸ್ಪಷ್ಟ ವಾಗಬೇಕಾಗಿದೆ. ತಾವು ನಿಶ್ಚಿಂತರಾಗಿರಿ ಎಂದರು. ನಂತರ ಪ್ರೊಫೆಸರ್ ಶಾಲಿಗ್ರಾಮಡೆರೆ ನೋಡುತ್ತಾ, "ನಿಮ್ಮ ವಾಕ್ಯದಲ್ಲಿಯ 'ಇಷ್ಟು ಮಾತ್ರಕ್ಕೆ' ಎನ್ನುವ ಶಬ್ದದ ಬಗ್ಗೆ ನಾನು ಯಾವ ತರ್ಕವನ್ನೂ ಮಾಡುವುದಿಲ್ಲ. ಆ ಶಬ್ದ 'ಇಷ್ಟು ಮಾತ್ರಕ್ಕೆ' ಯಾವುದಕ್ಕಾಗಿ ಇಷ್ಟೊಂದು ದರ್ಪದ ವ್ಯಕ್ತಿ ಶ್ರೀಮಂತ ದೇವಜಿಶರ್ಮ ರಾತ್ರಿ ಸಮಯದಲ್ಲಿ ಎಂಟು ಕಿಲೋಮೀಟರ್ ಹಾದಿಯನ್ನು ತುಳಿಯುತ್ತಾ ನಿಮ್ಮ ಬಳಿ ಬಂದರೋ ಆ ಮಾತು, ನಿಮಗೆ 'ಇಷ್ಟಕ್ಕೇನೆ' ಎನ್ನಿಸಿರಬೇಕು. ಆದರೆ ಆ ಮಾತು :ಇಷ್ಟೆ ಇಲ್ಲ' ಎಂದು ನನಗನ್ನಿಸುತ್ತದೆ. ಇದೊಂದು ಸರಳವಾದ ತರ್ಕ. ಬಂಧುಗಳೇ, ನೀವುಗಳು ಪ್ರೊಫೆಸರರಿಂದ ನಿಜವಾಗಿ ನಡೆದ ಘಟನೆಯನ್ನು ಕೇಳಿರುವಿರಿ. ಶ್ಯಾಮಲಾಲ್‌ಶರ್ಮ ಅವರು ಪ್ರೊಫೆಸರ್ ನೆರೆಮನೆಯವರು. ಈ ಒಂದು ಮಾತಿನಿಂದ ಈ ಈರ್ವರ ಟೋಪಿಗಳು ಸಂಯೋಗವಶಾತ್ ಬದಲಾಗಿಲ್ಲವೆಂದು ನಾನು ಮನಗಂಡೆ, ಇದೊಂದು ಮೊದಲೇ ಯೋಚಿಸಿದ್ದೆ. ತಂತ್ರ ಏಕೆಂದರೆ ಶರ್ಮ ಅವರ ಹೆಸರು ಪೋಲೀಸರ ಬ್ಲಾಕ್ ಲಿಸ್ಟಿ ನಲ್ಲಿದೆ. ಈಗ ನನ್ನ ತರ್ಕದ ನಿಜವಾದ ಪರೀಕ್ಷೆ ಈ ಹ್ಯಾಟಿನಲ್ಲಿದೆ. ಪರೀಕ್ಷೆ ಪಾಸಾಗುವೆನೆಂಬ ಭರವಸೆಯೂ ಇದೆ. ಏಕೆಂದರೆ ಶ್ಯಾಮಲಾಲ್ ಅವರ ಕಳ್ಳಸಾಗಾಣಿಕೆಯ ಕೇಂದ್ರ ಕಲಕತ್ತಾ. ಆದ್ದರಿಂದ ಬೊಂಬಾಯಿಯಲ್ಲಿ ಈ ಹ್ಯಾಟಿಗೆ ಏನೊ ತೊಂದರೆಯಾಗಿದೆಂಬುದು ನನ್ನ ತರ್ಕ. ಈಗ ನನ್ನ ಪುರಾವೆಯನ್ನು ಪರಿಶೀಲಿಸೋಣ, ಎಂದು ತಮ್ಮ ಮಾತನ್ನು ನಿಲ್ಲಿಸಿ, ಇನ್‌ಸ್ಪೆಕ್ಟರ್ ಶ್ರೀವಾಸ್ತವ ಅವರು ಜೇಬಿನಿಂದ ಚಾಕು ತೆಗೆದು ಹ್ಯಾಟ್‌ನ ಮೇಲ್ಭಾಗವನ್ನು ಕೈಗೆತ್ತಿಕೊಂಡು ಚೀಲವನ್ನು ಕೊಯ್ದಾಗ ಆ "ಇಷ್ಟೇನೇ" ಅನ್ನು ನೋಡಿ ಮಿತ್ರ ಮಂಡಳಿ ಅವಾಕ್ಕಾಯಿತು. ಇನ್‌ಸ್ಪೆಕ್ಟರ್ ಅವರು ಮುಂದಿದ್ದ ಟೀಪಾಯ್ ಒಂದರ ಮೇಲೆ ಚೀಲವನ್ನು ಖಾಲಿಮಾಡಿದಾಗ ನೂರಾರು ಸಣ್ಣ ದೊಡ್ಡ ವಜ್ರಗಳು ವಿದ್ಯುದ್ದೀಪದ ಬೆಳಕಿನಲ್ಲಿ ಝಗಝಗಿಸಿದವು. ✡



ಕಟ್ಟಾ ಬ್ರಹ್ಮಚಾರಿ ಅತ. ಮದುವೆಯಾಗೋದೇ ಇಲ್ಲ ಎಂದು ಗೆಳೆಯರು ನಂಬಿಬಿಟ್ಟಿದ್ದರು. ಆದರೆ ಅಮ್ಮನ ಒತ್ತಾಯಕ್ಕೆ ಒಪ್ಪಿ ಗಂಟುಹಾಕಿಕೊಂಡ. ಕೆಲ ದಿನಗಳ ಮೇಲೆ ಒಬ್ಬ ಗೆಳೆಯ ಭೇಟಿಯಾಗಿ, "ಏನಯ್ಯಾ ಹೇಗಿದೆ ಸಂಸಾರ?" ಎಂದು ಕೇಳಿದ.

"ಎಲ್ಲಾ ಚೆನ್ನಾಗಿದೆಯಯ್ಯಾ, ಒಂದನ್ನು ಬಿಟ್ಟು" "ಎನ್ನಬೇಕೇ ಎಕ್ಸ್ ಬ್ರಹ್ಮಚಾರಿ!"

"ಏನಯ್ಯಾ?" ಗೆಳೆಯನಿಗೆ ಕುತೂಹಲ.

"ಅಂದ್ರೆ, ನಾನು ಎಲ್ಲಿ ಹೋದಾಗ್ಲೆಲ್ಲಾ ಅವ್ಳೂ ಬರತಾಳೆ" ಅಂದು ಬಿಟ್ಟ ಭೂಪ.

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ

೧. **ಪತಿಪ್ರೀತಿ**
(ಅ) ಸರಸ-ವಿರಸ (ಆ) ಹಣದ ಮೆರವಣಿಗೆ (ಇ) ಜೋತಾಡುವುದು (ಈ) ಹಿಂದೆಮುಂದೆ

೨. **ವಿಗಡಿಸು**
(ಅ) ಗಡಿಪಾರು ಮಾಡು (ಆ) ಧಿಕ್ಕರಿಸು (ಇ) ಅಭಿವೃದ್ಧಿ ಹೊಂದು (ಈ) ಹೇಸಿಕೊಳ್ಳು

೩. **ಬೈಸಿಕೆ**
(ಅ) ಸಂಜೆಹೊತ್ತು (ಆ) ಕುಳಿತುಕೊಳ್ಳುವಿಕೆ (ಇ) ನಿಂದೆ (ಈ) ಆಸೆ

೪. **ಅಗ್ರವರ್ತಿ**
(ಅ) ತಿರುಕ (ಆ) ಮುಂದೆ ಇರುವವ (ಇ) ಅವಮಾನ (ಈ) ಪುರೋಹಿತ

೫. **ಅಕ್ಷರಶತ್ರು**
(ಅ) ದೈವ ದ್ರೋಹಿ (ಆ) ಶಾಶ್ವತ (ಇ) ಅವಿದ್ಯಾವಂತ (ಈ) ದುಷ್ಟ ಸಾಹಿತಿ

೬. **ಬೊಗಳೆ**
(ಅ) ಹಣದ ಚೀಲ (ಆ) ಬೈಗಳು (ಇ) ಪೊಳ್ಳು ಮಾತು (ಈ) ಹೆಣ್ಣಾಡು

೭. **ಬಿಗಡಾಯಿಸು**
(ಅ) ಕೆಟ್ಟುಹೋಗು (ಆ) ಕೋಪಗೊಳ್ಳು (ಇ) ಕುತಂತ್ರ ಮಾಡು (ಈ) ಕುರೂಪವಾಗು

೮. **ಬಿಕರಿ**
(ಅ) ಹಾಸ್ಯ (ಆ) ಮಾರಾಟ (ಇ) ಆಕಳಿಕೆ (ಈ) ನಿರುದ್ಯೋಗ

೯. **ಕಲರವ**
(ಅ) ಬಣ್ಣದ ಮಾತು (ಆ) ಕಲ್ಲೊಡೆಯುವಿಕೆ (ಇ) ಮಧುರವಾದ ಸ್ವರ (ಈ) ಕರ್ಕಶ

೧೦. **ಕಾಮ್ಯಾರ್ಥ**
(ಅ) ಬಯಸಿದ ಸಂಗತಿ (ಆ) ಮದುವೆಯ ಆಸೆ (ಇ) ಹುಚ್ಚು ಬಯಕೆ (ಈ) ವಿಜಯ

೧೧. **ನಗಣ್ಯ**
(ಅ) ನಗದು ಹಣ (ಆ) ಪರ್ವತಾರೋಹಣ (ಇ) ಹಡಗಿನಲ್ಲಿ ಹೇರಿದ ಸರಕು (ಈ) ಗಮನಕ್ಕೆ ತೆಗೆದುಕೊಳ್ಳದಿರುವುದು

೧೨. **ಹಲ್ಲೆ**
(ಅ) ಅಲುಗಾಟ (ಆ) ಗಡಿ (ಇ) ಅಪವ್ಯಯ (ಈ) ಆಕ್ರಮಣ

‘ಶಬ್ದ ಭಾಂಡಾರ’ದ ಸರಿಯಾದ ಅರ್ಥಗಳು

೧. **ಏತಿಪ್ರೇತಿ** (ಅ) ಸರಸ–ವಿರಸ, ಅನು–ಕೂಲ–ವಿರೋಧ. ಉದಾ:— ಏತಿಪ್ರೇತಿ ಬದುಕಿನಲ್ಲಿ ಇದ್ದದ್ದೇ. [ಸಂ. ಏತಿ = ಬರುತ್ತದೆ + ಪ್ರೇತಿ = ಹೋಗುತ್ತದೆ?]

೨. **ಏಗಡಿಸು** (ಈ) ಹೇಸಿಕೊಳ್ಳು, ಓಕರಿಕೆ ಬರುವಂತಾಗು, ಅಸಹ್ಯವಾಗು. ಉದಾ:– ಕೆಟ್ಟದ್ದಕ್ಕೆ ಮನ ಏಗಡಿಸುತ್ತದೆ. [ತೆಲುಗು, ಏಗಡು = ಓಕರಿಕೆ]

೩. **ಬೈಸಿಕೆ** (ಅ) ಕುಳಿತುಕೊಳ್ಳುವಿಕೆ; ಕುಳಿತ ಭಂಗಿ; ಕುಳಿತು ಏಳುವವರೆಗಿನ ಅವಧಿ. ಉದಾ:—ಒಂದೇ ಬೈಸಿಕೆಯಲ್ಲಿ ಮಧ್ಯ–ಸ್ಥರು ಇತ್ಯರ್ಥ ಮಾಡಿದರು. [ಮರಾಠಿ, ಹಿಂದಿ, ಬೈಸ್ = ಕುಳಿತುಕೋ]

೪. **ಅಗ್ರವರ್ತಿ** (ಅ) ಮುಂದಿರುವವ, ಮುಂದಾಳು; ಮುಂದೆ ಇರುವಂಥಾ. ಉದಾ:— ಮೆರವಣಿಗೆಯಲ್ಲಿ ಅಗ್ರ–ವರ್ತಿಯಾಗಿದ್ದ. [ಸಂ. ಅಗ್ರ = ಮುಂದೆ + ವರ್ತಿ = ಇರುವಂಥಾ]

೫. **ಅಕ್ಷರಶತ್ರು** (ಇ) ಅವಿದ್ಯಾವಂತ, ಓದುಬರಹ ಇಲ್ಲದವ; ವಿದ್ಯೆಯನ್ನು ದ್ವೇಷಿಸುವಾತ. ಉದಾ:— ಇದು ಅಕ್ಷರ ಶತ್ರುಗಳ ರಾಜ್ಯ. [ಸಂ. ಅಕ್ಷರ = ಬರಹ + ಶತ್ರು]

೬. **ಬೊಗಳೆ** (ಇ) ಪೊಳ್ಳು ಮಾತು; ವ್ಯರ್ಥವಾದ ಆಡಂಬರದ ಮಾತು; ಸೊಳ್ಳು ಪೌರುಷ. ಉದಾ:— ಅವನು ಬೊಗಳೆ ಮಾತಾಡುತ್ತಾನೆ. [[illegible], ಬೊಕ್ಕ, ವೊಕ್ಕ, ಪೋಕಳ = ಟೊಳ್ಳು]

೭. **ಬಿಗಡಾಯಿಸು** (ಅ) ಕೆಟ್ಟುಹೋಗು, ಕಠಿನವಾಗು, ಹದಗೆಡು. ಉದಾ:— ಅವನ ಸ್ಥಿತಿ ಬಿಗಡಾಯಿಸಿತು. [ಹಿಂದಿ, ಬಿಗಡ್‌ನಾ = ಕೆಡು]

೮. **ಬಿಕರಿ** (ಅ) ಮಾರಾಟ, ವಿಕ್ರಯ. ಉದಾ:— ನನ್ನ ಪ್ರೀತಿ ಬಿಕರಿಗಿಲ್ಲ. [ಹಿಂದಿ]

೯. **ಕಲರವ** (ಇ) ಮಧುರವಾದ ಸ್ವರ, ಮಧುರಧ್ವನಿ. ಇಂಪಾದ ಕೂಗು. ಉದಾ:— ಹಕ್ಕಿಗಳ ಕಲರವ. [ಸಂ.]

೧೦. **ಕಾಮ್ಯಾರ್ಥ** (ಅ) ಬಯಸಿದ ಸಂಗತಿ, ಇಷ್ಟಾರ್ಥ, ಬಯಕೆ. ಉದಾ:— ಕಾಮ್ಯಾರ್ಥವನ್ನು ದೇವರು ಕರುಣಿಸಿದ. [ಸಂ. ಕಾಮ್ಯ = ಬಯಸತಕ್ಕದ್ದು + ಅರ್ಥ = ಉದ್ದೇಶ]

೧೧. **ನಗಣ್ಯ** (ಈ) ಗಮನಕ್ಕೆ ತೆಗೆದು–ಕೊಳ್ಳದಿರುವುದು, ಲೆಕ್ಕಿಸದಿರುವುದು, ಅಲಕ್ಷ್ಯ; ಅತ್ಯಲ್ಪ. ಉದಾ:— ಉಪ–ದೇಶವನ್ನು ನಗಣ್ಯ ಮಾಡಿದ; ತಪ್ಪು ನಗಣ್ಯವಾಗಿದೆ. [ಸಂ. ನ = ಅಲ್ಲ + ಗಣ್ಯ = ಲೆಕ್ಕಿಸತಕ್ಕ]

೧೨. **ಹಲ್ಲೆ** (ಈ) ಆಕ್ರಮಣ; ದಾಳಿ; ಮುತ್ತಿಗೆ. ಉದಾ:—ಪೋಲೀಸರ ಮೇಲೆ ಹಲ್ಲೆ ಮಾಡಿದರು. [ಹಿಂದಿ—ಹಲ್ಲಾ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ, ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.


೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ



M K. Publicity

ಕಣ್ಮರೆಯಾದ ಈ ಕನ್ನಡ ಕವಿಯನ್ನು ನಾಡು ಔದಾಸೀನ್ಯದಿಂದಲೇ ಕಳೆದುಕೊಂಡಿತು

ಶ್ರೀಧರ ಖಾನೋಳಕರ



ಗೋ. ವೆ. ಚುಳಕಿ

"ಬಹು ರತ್ನಾನಿ ವಸುಂಧರಾ" ಎಂದು ಬಲ್ಲವರು ಹೇಳುವ ಮಾತೊಂದಿದೆ. ಹಲವಾರು ರತ್ನಗಳಿರಬಹುದು. ಆದರೆ ಅವುಗಳನ್ನು ವಸುಂಧರೆಯ ಗರ್ಭದಿಂದ ಹೊರತೆಗೆದು, ಗಾಡಕ್ಕೆ ಹಚ್ಚಿ, ತೇಜಃಪುಂಜಗಳನ್ನಾಗಿ ಮಾಡಿ ಬೆಳಗಿಸಬೇಕಾಗುವದು. ನಂತರವೇ ಅವು ಅನರ್ಘ್ಯ ರತ್ನಗಳೆಂದು ಹೆಸರುವಾಸಿಯಾಗುವವು. ಇಲ್ಲದಿದ್ದರೆ ಅವು ಹೇಳಹೆಸರಿಲ್ಲದೆ ಅನಾಮಧೇಯವಾಗಿ ಬಾಳಬೇಕಾಗುವದು. ಬಾಳಿದ್ದೂ ಕೂಡ ಯಾರ ಮನಸ್ಸಿನಲ್ಲೂ ಉಳಿಯದೇ ಹೋಗುತ್ತದೆ. ಜನಮನದಲ್ಲಿ ಸ್ಥಾನ ಪಡೆಯಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಸಾಧ್ಯವಾದವರು ಪಡೆದುಕೊಂಡು ಬಂದವರೆನ್ನಬಹುದು, ಮಿಕ್ಕವರು ಪಡೆದವರಲ್ಲ ಎಂದು ಹೇಳುವುದೇ ಬೇಡ.

ಕರ್ನಾಟಕದ ಸಮುತ್ತಂತರದಲ್ಲಿ ನವೋದಯದ ಕಾಲದಲ್ಲಿ ಸಾರಸ್ವತಕ್ಷೇತ್ರದಲ್ಲಿ ಅನೇಕರು ರಾರಾಜಿಸಿದರು. ಹಾಗೆ ಬೆಳಗಿದವರ ಮಾಲಿಕೆಯಲ್ಲಿ ಶ್ರೀಧರ ಶಿವರಾಮ ಖಾನೋಳಕರ ಅವರ ಹೆಸರನ್ನು ಸೇರಿಸಲು ಯಾವ ತಪ್ಪೂ ಕಾಣಿಸು. ಖಾನೋಳಕರ ಅವರು ಸ್ಫೂರ್ತಿ ಪುರುಷರು, ಆನಂದತುಂದಿಲರಾಗಿ ಕುಣಿದಾಡುವಂಥವರು. ಅವರ ರಸಾನುಭವದ ಗ್ರಾಹ್ಯತೆಯನ್ನು ಶಬ್ದಗಳಿಂದ ಹೇಳಲಿಕ್ಕೆ ಬರದಂತಿತ್ತು. ಅದು ಭಾವಾನುವೇದ್ಯವೇ ಆಗಿತ್ತೆಂದು ಅವರ ನಿಕಟವರ್ತಿಗಳು ಹೇಳುವಂಥ ಮಾತುಗಳಿವೆ. ಆದರೆ ಈ ವಿಷಯ ಅದೆಷ್ಟು ಜನರಿಗೆ ಗೊತ್ತುಂಟು? ಅದೇ ಅವರ ದೈವಗೇಡಿತನ; ನಮ್ಮ ನಾಡಿನ ದೌರ್ಭಾಗ್ಯ. ನುಡಿದಾಯಿಯ ಕೃಪೆಯಿದ್ದರೂ ಅನುಗ್ರಹವಿದ್ದರೂ ಪ್ರಸಿದ್ಧಿಯ ಚುಂಗು ಅವರನ್ನು ತಾಕಲೇ ಇಲ್ಲ. ಖಾನೋಳಕರರು ಕುಡಾಳ ದೇಸಕರ ಎಂಬ ಬ್ರಾಹ್ಮಣ ಒಳಪಂಗಡದವರು. ಇವರು ಗೋವೆ ಬಿಟ್ಟು ಅಲ್ಲಲ್ಲಿ ನೆಲೆಸಿದರು.

ಈ ತೆರದ ಖಾನೋಳಕರ ಅವರು ಧಾರವಾಡದವರೇ. ಅವರ ತಂದೆ ಶಿವರಾಮಪಂತರು ಮುದವೀಡು ಕೃಷ್ಣರಾಯರು, ಸರೇಗಲ್ಲ ಬಂಡೆಪ್ಪನವರು, ಬೇವೂರ ಭೀಮರಾಯರು ಇವರೇ ಮೊದಲಾದವರ ಸಮಕಾಲೀನರು; ಕೂಡಿ ಕೆಲಸ ಮಾಡಿದವರು. ಆಗಿನ ಅವರ ಕಾರ್ಯಕ್ಷೇತ್ರ

ಗೂನೀಯವಾಗಿತ್ತೆಂದು ಹೇಳಬಹುದು. ಅದು ೧೯೦೭–೮ರ ಕಾಲಖಂಡ. ಲೋಕಮಾನ್ಯರು ಪ್ರಭಾವ ಬೀರಿದ ಕಾಲ. ಆಗ ಉಜ್ವಲ ದೇಶ–ಭಕ್ತರು ಅಲ್ಲಲ್ಲಿ ಕ್ರಾಂತಿಕಾರೀ ಸಂಘಟನೆಗಳನ್ನು ಏರ್ಪಡಿಸಿದ್ದರು. ಅದರ ಶಾಖೆಯೊಂದು ಕರ್ನಾಟಕದ ಧಾರವಾಡದಲ್ಲಿತ್ತು. ಅದರ ಸೂತ್ರಗಳೆಲ್ಲ ಈ ಗುಂಪಿನವರ ಕೈಯಲ್ಲಿತ್ತು.

ಹೀಗಾಗಿ ಧಾರವಾಡದಲ್ಲಿ ನೆಲೆಸಬೇಕಾದ ಪ್ರಸಂಗವಿದ್ದ ಶಿವರಾಮ ಖಾನೋಳಕರರ ಮಗ ಶ್ರೀಧರ ಜನಿಸಿದ್ದು ೧೯೦೬ರಲ್ಲಿ. ಅವರ ಬಾಲ್ಯ ಧಾರವಾಡದಲ್ಲಿಯೇ ಕಳೆಯಿತು. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವು ಇಲ್ಲಿಯೇ ಸಾಗಿತು. ಇವರಿಗೆ ದ. ರಾ. ಬೇಂದ್ರೆಯವರು ಬಾಲ ಮಿತ್ರರು, ಲಂಗೋಟಿ ಗೆಳೆಯರು. ಅವರಿಬ್ಬರ ಬಾಲ–ಅಭ್ಯಾಸಗಳೂ ಒಂದೇ ತೆರನಾಗಿ–ದ್ದವು; ಸಹಪಾಠಿಗಳೂ ಆಗಿದ್ದರು. ಆದರೆ ಶಿಕ್ಷಣಾಂತ್ಯದಲ್ಲಿ ಖಾನೋಳಕರರು ಪದವಿಗೆ ಎರವಾದರು. ಅದಕ್ಕೆ ಜ್ವಲಂತ ದೇಶಾಭಿಮಾನವೂ ಒಂದು ಪ್ರಮುಖ ಕಾರಣವಾಗಿದ್ದರೆ ಆಶ್ಚರ್ಯಪಡುವ ಕಾರಣವಿಲ್ಲ.

ಮಹಾತ್ಮಾ ಗಾಂಧಿಯವರ ಅಸಹಕಾರ ಆಂದೋಲನದಲ್ಲಿ ವಿದ್ಯಾರ್ಥಿಗಳು ಶಾಲೆ ಬಿಟ್ಟಾಗ, ರಾಷ್ಟ್ರೀಯ ಶಾಲೆಗಳಿದ್ದವು. ಧಾರವಾಡದಲ್ಲಿಯೂ ಒಂದು ಇದ್ದಿತು. ಅಲ್ಲಿ ಖಾನೋಳಕರರು ದೇಶಾಭಿಮಾನ ಪ್ರೇರಿತರಾಗಿ ಶಿಕ್ಷಕನ ಕೆಲಸ ಕೈಕೊಂಡರು. ಬಾಲಮಿತ್ರರಾದ ದ. ರಾ. ಬೇಂದ್ರೆಯವರೂ ಅಲ್ಲಿ ಶಿಕ್ಷಕರಾಗಿದ್ದರು. ಇಬ್ಬರೂ ಶಿಷ್ಯವಾತ್ಸಲ್ಯವುಳ್ಳವರೇ. ವಿದ್ಯಾರ್ಥಿಗಳ ಮನಸ್ಸನ್ನು ಸೂರೆಗೊಂಡರು. ನವನವೀನ ವಿಚಾರಗಳನ್ನು ಅವರ ತಲೆಯಲ್ಲಿ ಹೊಗಿಸಿದರು. ತಮ್ಮ ಸಾಹಿತ್ಯ ಕೃತಿ ಓದಿ ಹೇಳಿ, ರಚನೆ ಮಾಡುವ ಪ್ರೇರಣೆಯನ್ನುಂಟುಮಾಡಿದರು. ನಾನವರ ವಿದ್ಯಾರ್ಥಿಯೂ ಆಗಿದ್ದೆ.

ಆ ಕಾಲಕ್ಕೆ ಪ್ರಚಾರಕ್ಕೆ ಅತ್ಯವಶ್ಯವೆನಿಸುತ್ತಿದ್ದ ಪ್ರಭಾತ ಫೇರಿಯ ಸಲುವಾಗಿ ಅನೇಕಾನೇಕ ಹಾಡುಗಳನ್ನು ಖಾನೋಳಕರರು ರಚಿಸಿಕೊಟ್ಟರು. ಅಂಥವುಗಳಲ್ಲಿ–

"ಏಳಿರಿ ಏಳಿರಿ ಬಲು ಬೇಗ
ಬೆಳಗಾಯಿತು ಏಳಿರಿ ಬೇಗ
ಏಳಿರಿ ತೊರೆಯುತ ನಿಮ ಭೋಗ
ನಿಮ್ಮ ಯೋಗದ ಹರಿ ಬಂದಿಹನೀಗ"

ಎಂಬುದೂ ಒಂದು ಹಾಡು. ಇದನ್ನು ಬೆಟಗೇರಿ ಕೃಷ್ಣಶರ್ಮರು ರಾಣೆಬೆನ್ನೂರಿನಲ್ಲಿ ಜರುಗಿದ ರಾಜಕೀಯ ಪರಿಷತ್ತಿನಲ್ಲಿ ತಾವು ಮೊಟ್ಟಮೊದಲು ಕೇಳಿದ್ದೇವೆಂದು ನನ್ನ ನೆನಪಿಗೆ ತಂದು ಕೊಟ್ಟರು. 'ನಾಡಿನ ಹಾಡುಗಳು' ಎಂಬ ಚಿಕ್ಕ ಕವನ ಸಂಗ್ರಹವೂ 'ನೌಕಾಕ್ರೀಡನ'ವೆಂಬ ಸುಂದರವಾದ ಗೇಯ ಗಾಥೆಯೂ ಆಗಲೆ ಇವರ ಕೃತಿಗಳಾಗಿ ಪ್ರಕಟಗೊಂಡು ಜನಮನದ ನಾಲಗೆಯ ಮೇಲೆ ನಲಿದಾಡುತ್ತಿದ್ದವು. "ಮುತ್ತಿನಂತಹ ಜೋಳ, ಹವಳದಂತಹ ಗೋದಿ ಬೆಳೆಯ ಕರು ನಾಡು ನಮ್ಮ ನಾಡು" ಎಂದು ಶ್ರೀಧರ ಖಾನೋಳಕರರು ತಮ್ಮ ಜನ್ಮಭೂಮಿಯ ಹೆಗ್ಗಳಿಕೆಯನ್ನು ಹಾಡಿದ್ದುಂಟು. ಅಲ್ಲದೆ 'ದೇಶೀ ದುಮ ದುಮೆ' ಎಂಬ ರಾಷ್ಟ್ರೀಯ ಚಳುವಳಿಯ ಬೆಂಕಿಯನ್ನು ಕಾರುವಂಥ ಲಾವಣಿಯನ್ನು ರಚಿಸಿದರು. ಈ 'ದೇಶೀ ದುಮದುಮೆ,' ಬೆಟಗೇರಿಯವರ 'ಅಸಹಕಾರ ಚಳುವಳಿ ಮತ್ತು ದೇಶೀಯ ಲಾವಣಿ' ಎಂಬವುಗಳನ್ನು ಸಂಪಾದಿಸಿ ದಿವಾಕರ ರಂಗರಾಯರು ಪ್ರಕಟಿಸಿದರು. ರಾ. ಶ್ರೀ ಹುಕ್ಕೇರಿಕರ ಅವರು ಪ್ರಸಿದ್ಧಿಗೊಳಿಸಿದರು. ಅದು ರಾಜ–ದ್ರೋಹವೆಂದು ಆಗಿನ ಆಂಗ್ಲ ಸರಕಾರ ನಿರ್ಧರಿಸಿ, ದಿವಾಕರ, ಹುಕ್ಕೇರಿಕರರಿಗೆ ಮೂರು ವರ್ಷಗಳ ಸಶ್ರಮ ಶಿಕ್ಷೆ ವಿಧಿಸಿತು. ಅವರು ಭೋಗಿಸಿದರು. ಆದರೆ 'ದುಮದುಮೆ' ರಚಿಸಿದ ಖಾನೋಳಕರ ಅವರ ಹೆಸರನ್ನು ಅವರು ಹೇಳಲೇ ಇಲ್ಲ. ಹೇಳಿದ್ದರೆ ಅವರು ಪಾರಾಗಿ, ಇವರಿಗೆ ಶಿಕ್ಷೆ ಅನುಭವಿಸುವ ಪ್ರಸಂಗ ಬರುತ್ತಿತ್ತೊ, ಏನೋ, ಯಾರು ಬಲ್ಲರು!

ಖಾನೋಳಕರ ಅವರಲ್ಲಿ ಕಾವ್ಯ ರಚಿಸುವ ಗುಣ ನೈಜವಾಗಿತ್ತು. ಆದರೆ ಬರೆದಿದ್ದು ಬಹಳ, ಪ್ರಕಟಗೊಂಡದ್ದು ತೀರ ಕಡಿಮೆ. ಬಾಳಿನ ಬಗ್ಗೆ ತಾವು ಕಂಡುಕೊಂಡ ಸಿದ್ಧಾಂತಗಳನ್ನು 'ಸಾರಾಸಾರ ವಿಚಾರ' ಎಂಬ ಶೀರ್ಷಿಕೆಯಲ್ಲಿ ದೀರ್ಘ

ಕವನಮಾಲಿಕೆ ರಚಿಸಿದರು. ಅದು ಬೆಟಗೇರಿಯವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ಜಯಂತಿ' ಮಾಸಪತ್ರಿಕೆಯಲ್ಲಿ ಬೆಳಕು ಕಂಡಿತು; ಜನಪ್ರಿಯತೆಯನ್ನು ಕಂಡುಕೊಂಡಿತು. ಬೆಟಗೇರಿಯವರೂ ರಾಷ್ಟ್ರೀಯ ಶಾಲೆಯಲ್ಲಿ ಖಾನೋಳಕರರೊಂದಿಗೆ ಎರಡು ವರ್ಷ ಸಹ ಶಿಕ್ಷಕರಾಗಿ ಕೆಲಸ ಮಾಡಿದ್ದುಂಟು. ಖಾನೋಳಕರರ ಕೆಲ ಬಿಡಿಗವನಗಳ ಸಂಗ್ರಹ 'ಹೂಗೆಂಪು' ಎಂಬುದು ಮಾತ್ರ ಪ್ರಕಟಗೊಂಡಿತು. ಜನಮನ ಆಕರ್ಷಿಸಿದ 'ನೌಕಾಕ್ರೀಡನ' 'ನಾಡಿನ ಹಾಡು,' 'ದೇಶೀ ದುಮುದುಮೆ'ಗಳು ಇಂದು ಯಾರಿಗೂ ಕಣ್ಣಿಗೆ ಬೀಳದೆ ಹೋಗಿರುವವು. ಅವರೇ ಅಜ್ಞಾತರಾಗಿ ಹೋಗಿರುವಾಗ ಅವರ ಕೃತಿ ಮರೆಯಾಗುವುದು ಹನ್ನೊಂದನೆಯ ವಿಚಿತ್ರವೇನಲ್ಲ.

ರಾಷ್ಟ್ರೀಯ ಕಾವೂ ಆರಿತು. ಶಾಲೆಯೂ ಮುಚ್ಚಿತು. ಖಾನೋಳಕರರ ಜೀವನ ಹೋರಾಟ ಆರಂಭವಾಯಿತು. ತಮ್ಮ ತಾಯ್ನಾಡಿನಲ್ಲಿ ಜೀವ ತೆಗೆಯಲು ಅವಕಾಶ ಒದಗಲಿಲ್ಲ. ಅವರ ತಂದೆ ಶಿವರಾಮಪಂತರು ಪುಣೆಯ ಹತ್ತಿರದ ಯರವಡೆಯ ಸೆರೆಮನೆಯಲ್ಲಿಯ ಮುದ್ರಣಾಲಯದಲ್ಲಿ ಹೇಗೋ ಒಂದು ಕೆಲಸ ಹಿಡಿದಿದ್ದರು. ಅವರ ತರುವಾಯ ೧೯೨೫ರಲ್ಲಿ ಅದ್ಹೇಗೋ ಮಗ ಶ್ರೀಧರನಿಗೆ ಆ ಕೆಲಸ ದೊರಕಿತು. ಅಲ್ಲಿಗೆ ಹೋದರು. ಅದು ಮಹಾರಾಷ್ಟ್ರ. ಕನ್ನಡಿಗರ ಸಂಪರ್ಕವೂ ಇಲ್ಲದಾಯಿತು. ಆದರೂ ಶ್ರೀಧರರು ಕನ್ನಡ ನುಡಿಯ ಸೇವೆ ನಿಲ್ಲಿಸಲಿಲ್ಲ; ಕರ್ನಾಟಕ ಮರೆಯಲಿಲ್ಲ. ಬರೆಯುವ ಕಾಯಕ ಬಿಡದೇ ಬರೆವೇ ಬರೆಯುತ್ತಿದ್ದರು. ಆ ಬರೆಹಕ್ಕೆ ಪ್ರಕಟನೆಯೂ ದೊರೆತಿತು. ಆದರೆ ಅವರ ಕೃತಿಗಳ ಸಮಗ್ರ ಸಂಪುಟ ಬಂದೀತೆಂಬ ಆಸೆಯೇ ಉಳಿಯಲಿಲ್ಲ.

ಖಾನೋಳಕರರ ಕೌಟುಂಬಿಕ ಜೀವನದಲ್ಲಿ ಅನೇಕ ಅನುವು-ಆಪತ್ತುಗಳು ತಲೆದೋರಿದವು. ಕುಟುಂಬೀಯರಲ್ಲಿ ಕೆಲವರ ಆರೋಗ್ಯ ಸರಿ ಇರಲಿಲ್ಲ. ಅವರ ಯೋಗಕ್ಷೇಮಕ್ಕಾಗಿ ಖಾನೋಳಕರರೇ ಟೊಂಕ ಕಟ್ಟಬೇಕಾಯಿತು. ವೃದ್ಧಾಪ್ಯದಿಂದ ಬಳಲುವ ಅಜ್ಜಿಯೊಬ್ಬಳಿದ್ದಳು. ಅದಳಾ ಪರಾಧೀನೆ. ಆಕೆಯ ಶೂಶ್ರೂಷೆಗೂ ಅವರೇ ಗಮನ ಹರಿಸಬೇಕಾಯಿತು. ದುಂಡುದುಂಡಾದ ಮೈಕಟ್ಟಿನ, ತುಂಬುಗಲ್ಲದ, ಸದಾ ಕೆಲೆಯುತ್ತಿರುವ ಅವರು ಹಣ್ಣು ಹಣ್ಣಾದರು. ಇಷ್ಟಾದ ತರುವಾಯ ಅವರು ತಮ್ಮ ಕೊನೆಗಾಲವನ್ನು ಸೊಲ್ಲಾಪುರದಲ್ಲಿದ್ದ ತಮ್ಮ ಮಗಳ ಆಶ್ರಯದಲ್ಲಿ ಕಳೆಯಬೇಕಾಯಿತು. ಅವರ ಕಣ್ಣುಗಳೂ ಕಾಣಿಸದಾದವು. ಯಾರೂ ಅವರ ನೆರವಿಗೆ ಬರಲಿಲ್ಲ. ಕನ್ನಡಿಗರಾರೂ ವಿಚಾರಿಸಲಿಲ್ಲ. ಇಂಥ ಒಬ್ಬ ಅವಿಸ್ಮರಣೀಯ ಅಜ್ಞಾತ ವ್ಯುತ್ಪನ್ನಮತಿಯಾದ ಖಾನೋಳಕರರು ತಮ್ಮ ಜೀವನಯಾತ್ರೆ ಮುಗಿಸಿದರು. ಪಡೆದು ಬಾರದಿದ್ದವರ ಜೀವನದ ಗೋಳು ಅನುಭವಿಸಿಯೇ ತೀರಬೇಕಾಗುವದು.

ನಿರ್ಮಲಾಂತಃಕರಣದ ಹಸುಗೂಸಿನ ಮುಗ್ಧ ಭಾವನೆಯನ್ನು ಕೊನೆಯ ವರೆಗೂ ಜಾಗೃತ-ವಿರಿಸಿಕೊಂಡುಬಂದಂಥ ಖಾನೋಳಕರ ಶ್ರೀಧರ ಅವರಿಗೆ ನನ್ನ ನಮೋ ನಮನಗಳು.

ಫೆಬ್ರುವರಿ-1980

✡



ಮಾಲವೀಯರು ಸ್ವರ್ಗಸ್ಥರಾಗುವುದಕ್ಕೆ ಕೆಲ ದಿನ ಮೊದಲು ತಮ್ಮ ಮಿತ್ರರಾದ ಜ್ಯೋತಿಭೂಷಣ ಗುಪ್ತರೊಂದಿಗೆ ಮಾತಾಡುತ್ತ, "ಒಂದು ಮಾತು ನೆನಪಿಡು. ನಾನು ಪ್ರಜ್ಞಾಶೂನ್ಯನಾದರೆ ಕಾಶಿಗೆ ಒಯ್ಯುವ ಏರ್ಪಾಡು ಮಾಡಲು ಹಾತೊರೆಯಬೇಡ. ಇಲ್ಲಿಯೇ ಸಾಯಗೊಡು. ಕಾಶಿಯಲ್ಲಿ ಸತ್ತರೆ ಪುಣ್ಯಪ್ರಾಪ್ತಿಯಾಗಿಬಿಡುತ್ತದೆ. ಆದರೆ ನಾನು ಮತ್ತೆ ಇಲ್ಲಿಯೇ ಜನ್ಮವೆತ್ತಿ ಬಂದು ಅಪೂರ್ಣ ಕೆಲಸ (ವಿಶ್ವವಿದ್ಯಾಲಯ ಮೊದಲಾದವು) ಗಳನ್ನು ಪೂರ್ಣಮಾಡಬೇಕಾಗಿದೆ," ಎಂದರಂತೆ.

ಜರ್ಮನಿಯ ನೂರೆಂಬರ್ಗ್‌ನಲ್ಲಿ ೧೯೦೦ರಲ್ಲಿ ಜನಿಸಿದ ಹರ್ಮನ್ ಕೆಸ್ಟೆನ್, ಬಹುಮುಖ ಸ್ವರೂಪವುಳ್ಳ ಸಾಹಿತ್ಯದ ಸೃಷ್ಟಿಕರ್ತ. ಅನೇಕ ಐತಿಹಾಸಿಕ ಕಾದಂಬರಿಗಳ ಬರಹಗಾರ. ಸದ್ಯ ಅಮೇರಿಕದ ನಾಗರಿಕನಾಗಿದ್ದು, ಯಾವಾಗಲೂ ಜಗತ್ಸಂಚಾರ ಮಾಡುತ್ತಲೇ ಇರುತ್ತಾನೆ.

ಜೀವನದ ಸಂದಿಗ್ಧ ಸಮಯಗಳಲ್ಲಿ ಮಾನವನ ಅಂತರಾತ್ಮದಲ್ಲಿ ಅಧರ್ಮವು ಹೆಡೆಯೆತ್ತಿದಾಗ, ಆತ ಸಂಪೂರ್ಣ ಸ್ವಾರ್ಥಿಯಾಗಿ, ಆತ್ಮನಿಷ್ಠೆಯಿಲ್ಲದೆ ಹೇಗೆ ಅವಿವೇಕಿಯಾಗಿ ವರ್ತಿಸುತ್ತಾನೆಂಬುದನ್ನು ಪ್ರಸ್ತುತ ಕಥೆಯಲ್ಲಿ ನಿರೂಪಿಸಲಾಗಿದೆ. ಹಿನ್ನೆಲೆಯಲ್ಲಿ ದ್ವಿತೀಯ ಮಹಾಯುದ್ಧದ ಘೋರಕಾಲ, ಜರ್ಮನಿಯಲ್ಲಿ ಹಿಟ್ಲರನು ಪ್ರತಿಯೊಬ್ಬ ಯಹೂದ್ಯನನ್ನೂ ನಿರ್ನಾಮ ಮಾಡಬೇಕೆಂದು ಹಟ ತೊಟ್ಟ ಭೀಕರ ದಿನಗಳು. ಇಂಥ ವೇಳೆಯಲ್ಲಿ ದೇಶಪ್ರೇಮದಿಂದ ಓತಪ್ರೋತನಾದ ಯಹೂದ್ಯನೊಬ್ಬ ತನ್ನ ಕ್ರೈಸ್ತಮತೀಯ ಮಿತ್ರನ ಮನೆಯಲ್ಲಿ ಸೇರಿಕೊಂಡು, ಆ ಕುಟುಂಬದವರು ತನಗೆ ನೀಡಿದ ಸಹಾಯ, ಮಾಡಿದ ತ್ಯಾಗಕ್ಕೆ ಪ್ರತಿಫಲವಾಗಿ ಆತ ಅವರಿಗೆ ವಿಧಿಸಿದ ಮನೋವ್ಯಥೆ, ಹೃದಯಯಾತನೆಯನ್ನು ಚಿತ್ರಿಸುವ ಕುತೂಹಲಕಾರಿ ಕಥೆಯಿದು.

ಕೋಣೆಯಲ್ಲೊಬ್ಬ ಗೆಳೆಯ

ಅನುವಾದ: **ಶ್ರೀಮತಿ ಗೀತಾ ಮೋಹನ ಮುರಲಿ**

ಆಂಟನ್ ಲೋಹೆರ್ ತನ್ನ ಕೋಣೆಯಲ್ಲಿ ಕುಳಿತುಕೊಂಡು ತನ್ನ ಜೀವನದ ಬಗ್ಗೆ ಯೋಚಿಸುತ್ತಿದ್ದ. ಗೋಡೆಯ ಮೇಲಿರುವ ಹಳೆಯ ಗಡಿಯಾರವನ್ನು ಆಗಾಗ್ಗೆ ವೀಕ್ಷಿಸುತ್ತ, ಮಾವರಿಯ ಮ್ಯೂನಿಕ್‌ನಲ್ಲಿ ತಾನು ಇರಬೇಕಾದ ಈ ಕೊನೆಯ ದಿನ ಎಷ್ಟು ಶಾಂತವಾಗಿ ಸುರಿದುಹೋಗುತ್ತಿದೆ ಯೆಂದು ಗಮನಿಸಿದ. ಇನ್ನು ಬಹು ಬೇಗನೇ ಆತ ಬರ್ಲಿನ್ನಿಗೆ ಹೊರಡುವ ಸಮಯ ಬರಲಿದೆ. ಹಿಂದಿನ ದಿನವೇ ಆತ ಫ್ಲೋಮ್ ಕುಟುಂಬ ದವರಿಗೆಲ್ಲ ವಿದಾಯ ಹೇಳಿ ಮುಗಿಸಿದ್ದ. ಅವರ ಬಿಡಾರದ ಕೋಣೆಯಲ್ಲಿಯೇ ಒಂಟಿಯಾಗಿ ಬಾಡಿಗೆ ಕೊಟ್ಟು ವಾಸಿಸುತ್ತಿದ್ದ. ಆದರೆ ಏಕೋ ಏನೋ ಈಗ ಅದೇ ಕೋಣೆಯಲ್ಲಿ ತಾನು ಅತಿಥಿಯೆಂಬು ವಂತೆ ಭಾಸವಾಗಹತ್ತಿತ್ತು.

ಫ್ಲೋಮ್ ಕುಟುಂಬದವರು ಆತನನ್ನು ಬಹುವಾಗಿ ಪ್ರೀತಿಸುತ್ತಿದ್ದರು. ನಿನ್ನೆ ಅವನನ್ನು ಹಾರ್ದಿಕವಾಗಿ ಬೀಳ್ಕೊಟ್ಟ ನಂತರ ಮತ್ತೆ ಆತ ತಿರುಗಿ ಬಂದಾಗ ಅವರಿಗೆ ಆಶ್ಚರ್ಯವೇ ಆಶ್ಚರ್ಯ. ಆತನನ್ನು ಅವರು ರಾತ್ರಿಯೂಟಕ್ಕೆ ಆಮಂತ್ರಿಸಿದ್ದರು. ಮತ್ತೊಂದು ರಾತ್ರಿ ವಾಸಿಸಲು ಕೋಣೆಯ ಬಾಗಿಲು ತೆರೆದುಕೊಟ್ಟಿದ್ದರು.

ಕೋಣೆಯಲ್ಲಿದ್ದ ಹಳೆಯ ಕಿರುಗುಟ್ಟುವ ಕೆಂಪು

ಬಣ್ಣದ ಸೋಫಾದ ಮೇಲೆ ಕುಳಿತು ಲೊಫೆರ್ ಯಾವುದೋ ಹಾಡನ್ನು ಗುಣುಗುಣಿಸತೊಡಗಿದ.

ಯಾರೋ ಬಾಗಿಲು ತಟ್ಟಿದರೆಂದು ಲೊಫೆರ್ ಎದ್ದು ಹೋಗಿ ಬಾಗಿಲು ತೆರೆದ. ಹೊರಗಡೆ ಫ್ಲೋಮ್ ಕುಟುಂಬದವರೆಲ್ಲ ನಿಂತುಕೊಂಡಿದ್ದರು. ಫ್ಲೋಮ್ ಕೆಂಪು ದ್ರಾಕ್ಷಾರಸದ ಶೀಷೆಯನ್ನು ಹಿಡಿದುಕೊಂಡಿದ್ದ; ಅವನ ಹೆಂಡತಿಯ ಕೈಯಲ್ಲಿ ತಿಂಡಿಯ ಹರಿವಾಣವಿತ್ತು; ಅವರ ಮೂವರೂ ಚೆಲುವೆಯರಾದ ಹೆಣ್ಣುಮಕ್ಕಳು ಮುಗುಳುನಗೆ ಬೀರುತ್ತಾ ಊಟದ ತಟ್ಟೆ, ಬಟ್ಟಲುಗಳನ್ನು ಹೊತ್ತು ನಿಂತಿದ್ದರು.

"ಈಗ ಇನ್ನೊಂದು ಬೀಳ್ಕೊಡುವ ಸಮಾರಂಭ. ಆದರೆ ಇದರರ್ಥ ನೀನು ಇಲ್ಲಿಂದ ಹೊರಟೇ ಹೋಗಬೇಕೆಂದು ನಾವು ಇಚ್ಛಿಸುತ್ತೇವೆ ಎಂದು ಮಾತ್ರ ಭಾವಿಸಬೇಡ," ಹೆರ್ ಫ್ಲೋಮ್ ಲೊಫೆರ್‌ನಿಗೆ ಭರವಸೆ ನೀಡಿದ. ಲೋಫೆರ್ ಮತ್ತೆ ಆ ಹಳೆಯ ಸೋಫಾದ ಮೇಲೆ ಕುಳಿತ. ಇಪ್ಪತ್ತರಿಂದ ಇಪ್ಪತ್ತೈದು ವಯಸ್ಸಿನ ಆಕರ್ಷಕ, ಉಲ್ಲಾಸಮಯ ಹುಡುಗಿಯರು ಆತನ ಎರಡೂ ಪಕ್ಕಗಳಲ್ಲಿ ಆಸೀನರಾದರು.

ಅವನ ಎದುರು ಫ್ಲೋಮ್ ದಂಪತಿಗಳು ಕುಳಿತಿದ್ದರು. ಇನ್ನೂ ಲಾವಣ್ಯವತಿಯಾದ, ಶ್ರೀಮತಿ ಫ್ಲೋಮ್ ತನ್ನ ಮಕ್ಕಳು ಮುಂದಿನ ತಿಂಗಳೆಲ್ಲಾ ಉಪವಾಸವಿರಬೇಕಾಗುವದೇನೋ ಎಂಬಂತೆ, ಅವರಿಗೆ ತಿಂಡಿಗಳನ್ನೆಲ್ಲಾ ಒತ್ತಾಯದಿಂದ ತಿನ್ನಿಸಿದಳು. ಆರ್ಥರ್ ಫ್ಲೋಮ್ ವಿಷಾದದ ನಗುನಗುತ್ತ ಎಲ್ಲರ ಬಟ್ಟಲಲ್ಲಿಯೂ ದ್ರಾಕ್ಷಾರಸವನ್ನು ಧಾರಾಳವಾಗಿ



ಸುರುವಿದ. "ಪ್ರಿಯ ಲೊಫೆರ್, ನೀನು ನಮ್ಮನ್ನು ಬಿಟ್ಟು ಹೋಗಬೇಕಾದುದುದಕ್ಕೆ ವಿಷಾದಿಸುತ್ತೇವೆ. ನಿನಗಿಂತ ಉತ್ತಮ ಮಿತ್ರ ನಮಗಿನ್ನು ಯಾರೂ ಇಲ್ಲ" ಎಂದು ನುಡಿದ.

ಈ ಪ್ರಶಂಸೆಯಿಂದ ಲೊಫೆರ್‌ನ ಅಸಮಾಧಾನ ಮತ್ತಿಷ್ಟು ಹೆಚ್ಚಿತು. ಆತ ಹೇಳುವುದು ನಿಜವೇ ಆಗಿದ್ದರೆ ತಾನೂ ಈ ಮನುಷ್ಯನ ದುಃಖದಲ್ಲಿ ಸಹಭಾಗಿಯಾಗಬಹುದಾಗಿತ್ತು. ಆದರೆ ಲೊಫೆರ್ ಶ್ರೇಷ್ಠ ನ್ಯಾಯಾಧೀಶನಾದ ಫ್ಲೋಮ್‌ನ

ಮಿತ್ರನೇ ಆಗಿರಲಿಲ್ಲ. ಈ ನ್ಯಾಯಾಧೀಶನ ಮೇಲೆ ತನ್ನ ತೀರ್ಪನ್ನು ಇದಕ್ಕೆ ಬಹಳ ಮುಂಚಿತವಾಗಿಯೇ ಬರೆದುಬಿಟ್ಟಿದ್ದ!

ಆರ್ಥರ್ ಫ್ಲೋಮ್‌ನದು ಭಾರೀ ವ್ಯಕ್ತಿತ್ವ. ಅವನ ವರ್ತನೆಯಲ್ಲಿ ಗಾಂಭೀರ್ಯವೂ ಮಾತಿನಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕನಂತೆ ಸ್ಪಷ್ಟೋಚ್ಚಾರವೂ ಕಂಡುಬರುತ್ತಿತ್ತು. ಆತನಿಗೆ ಕೇವಲ ಸಲವತ್ತೇಳರ ಪ್ರಾಯವಿದ್ದರೂ ತಲೆಗೂದಲು ಸಂಪೂರ್ಣ ಬೆಳ್ಳಗಾಗಿತ್ತು. ಸೆರೆಗುಡುಕರಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುವ ಕೆಂಪು ಕಪೋಲ, ಬೇಟೆಗಾರನ ತೀಕ್ಷ್ಣ ಕಣ್ಣುಗಳು. ಪಶ್ಚಿಮ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶನ ಪದವಿಗೇರಿದ್ದರೂ ಯುದ್ಧದ ಅನಂತರ ೧೯೩೩ರಲ್ಲಿ ರಾಷ್ಟ್ರೀಯ ಸಮಾಜವಾದೀ ಪಕ್ಷವನ್ನು ಸೇರಿಕೊಂಡಿದ್ದರಿಂದ ಜಿಲ್ಲಾ ನ್ಯಾಯಾಧೀಶನ ದರ್ಜೆಗೆ ಇಳಿಯಬೇಕಾಗಿತ್ತು. ಸದ್ಯ, ನ್ಯಾಯಾಲಯದಲ್ಲಿ ನಡೆಯಲಿರುವ ತನ್ನ ವಿಚಾರಣೆಯನ್ನು ಆತುರದಿಂದ ಎದುರು ನೋಡುತ್ತಿದ್ದ. ಅಲ್ಲಿ ತನ್ನ ಕೃತ್ಯಗಳನ್ನು ಮನದುಂಬುವಂತೆ ಸಮರ್ಥಿಸಬಹುದೆಂದು ಭಾವಿಸಿದ್ದ.

ಮದ್ಯದ ಬಟ್ಟಲುಗಳನ್ನು ಮತ್ತೊಮ್ಮೆ ತುಂಬಿಟ್ಟು, ತಾನೂ ಒಂದು ಗುಟುಕು ದ್ರಾಕ್ಷಾರಸವನ್ನು ಸವಿಯುತ್ತಿದ್ದಂತೆ, ಫ್ಲೋಮ್ ತನ್ನ ಬಟ್ಟಲನ್ನು ಕೆಳಗಿಟ್ಟು, "ಲೊಫೆರ್, ನಿನ್ನ ಮುಂದೆ ನಾನು ನನ್ನ ನಿಲುವನ್ನು ಸಮರ್ಥಿಸಿಕೊಳ್ಳಲೇ ಬೇಕು. ನಿನ್ನದು ತುಂಬಾ ವಿಶಾಲ ಹೃದಯ. ನೀನು ನನ್ನನ್ನು ತಪ್ಪು ತಿಳಿಯುವದಿಲ್ಲವೆಂಬ ವಿಶ್ವಾಸ ನನಗೆ ಖಂಡಿತವಾಗಿಯೂ ಉಂಟು. ಇಲ್ಲವಾದರೆ ಯುದ್ಧಾನಂತರ ನೀನು ನಮ್ಮ ಮನೆಯಲ್ಲಿ ವಾಸಮಾಡುತ್ತಿರಲಿಲ್ಲ. ನೀನು ಇಲ್ಲಿಗೆ ಬಂದಾಗಿನಿಂದ ನಾನು ನಿನಗೆ ನನ್ನ ಕಥೆ ಹೇಳಬೇಕೆಂದಿದ್ದೇನೆ. ಆದರೆ ಧೈರ್ಯವಾಗಿಲ್ಲ. ನಾನು ನಿನಗೆ ಹೇಳಬೇಕಾದ ಸಂಗತಿಯನ್ನು ನೀನು ಕೇಳಿದ ನಂತರ, ನನ್ನ ಮತ್ತು ನನ್ನ ಕುಟುಂಬದವರನ್ನು ಗೌರವಿಸುವಿಯೋ ಅಥವಾ ಉಪೇಕ್ಷಿಸುವಿಯೊ ನಾನರಿಯೆ. ಆದರೆ ಈ ಕಥೆಯನ್ನು ನಾನು ಹೇಳದಿದ್ದರೆ ಹೀಗೆಯೆ ವೇದನೆಯನ್ನು ಸಹಿಸುತ್ತಾ ಹೋಗಬೇಕು. ಕಥೆ ಹೇಳಿದ ನಂತರ ನಾನು ಅಧಮನೋ ಅಥವಾ ಒಂದು ವಿಧದಲ್ಲಿ ಕೊಲೆಗಾರನೊ ಅಥವಾ ನ್ಯಾಯಾಧೀಶನಾಗಿ ಮುಂದುವರಿಯಲು ನನಗೆ ನೈತಿಕ ಅಧಿಕಾರವಿಯೋ ಎಂಬುದನ್ನು ಬಹುಶಃ ನಿನಗೆ ನಿರ್ಣಯಿಸಲಿಕ್ಕಾಗಬಹುದು. ಆದರೆ ಲೊಫೆರ್, ನಾನು ಸುಳ್ಳು ಹೇಳುತ್ತಿದ್ದೇನೆಂದು ಮಾತ್ರ ಭಾವಿಸಬೇಡ."

"ಖಂಡಿತವಾಗಿಯೂ ಆತ ಹೇಳಲಿರುವುದು, ಸುಳ್ಳಲ್ಲ", ಲೊಫೆರನ ಬದಲು ಫ್ಲೋಮ್‌ನ ಹೆಂಡತಿ ನುಡಿದಳು, "ಲೊಫೆರ್‌ನ ಅಭಿಪ್ರಾಯಗಳು ಹೇಗಿವೆ ಎಂಬುದು ನಿನಗಿಂತ ಹೆಚ್ಚು ನನಗೆ ಚೆನ್ನಾಗಿ ಗೊತ್ತು. ಅವನ ವಿಚಾರಗಳೂ ನನ್ನಂತೆಯೇ–ಅಲ್ಲವೇ ಹೆರ್ ಲೋಫೆರ್?" ಎಂದು ಅವನಿಗೆ ಮತ್ತೆ ತಿಂಡಿಗಳನ್ನು ನೀಡಿದಳು. ಮನದಲ್ಲಿನ ಗೊಂದಲವನ್ನು ಮರೆಮಾಚಲು ಲೊಫೆರ್ ಮತ್ತೆ ತಿನ್ನತೊಡಗಿದ.

ಶ್ರೀಮತಿ ಫ್ಲೋಮ್ ತನ್ನ ಮೂವರೂ ಹೆಣ್ಣುಮಕ್ಕಳನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದಳು. ಅವಳು ಅವರನ್ನು ಎಷ್ಟು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದಳೋ ಅಷ್ಟೇ ಆತ್ಮೀಯತೆಯಿಂದ ತನ್ನ ಪತಿಯನ್ನೂ ಬಾಡಿಗೆದಾರನನೂ ನೋಡಿಕೊಳ್ಳುತ್ತಿದ್ದಳು.

ಆ ಹಳೆಯ ಕಥೆಯನ್ನು ತಾನು ಮತ್ತು ತಮ್ಮ ಮಕ್ಕಳು ಎಂದೂ ಚರ್ಚಿಸಬಾರದೆಂದು ಅವಳ ಪತಿಯ ಕಟ್ಟಪ್ಪಣೆಯಾಗಿತ್ತು. ಅಂತಹುದರಲ್ಲಿ ಈಗ ಆತನೇ ಅದನ್ನು ಹೇಳಿಬಿಡುತ್ತಾನೆಂದು ತಿಳಿದು, ಅವನಿಗೆ 'ಬೇಡ'ವೆಂದು ಸಂಜ್ಞೆ ಮಾಡುತ್ತ, ಆಕೆ, "ಆ ವಿಷಯ ಎತ್ತಬೇಡ, ಆರ್ಥರ್, ನಿನಗೆ ಗೊತ್ತಿದೆಯಲ್ಲವೇ..."ಅಂದಳು.

ಆದರೆ ಆರ್ಥರ್ ತಡೆಯಲಿಲ್ಲ. "ಏನೆಂದರೂ, ಸೀಗ್‌ಫ್ರೀಡ್‌ನನ್ನು ನಿನ್ನ ಕೋಣೆಯಲ್ಲಿ ಅಡಗಿಸಿಟ್ಟುಕೊಂಡಿದ್ದು ನಿನ್ನದೇ ತಪ್ಪು", ಎನ್ನುತ್ತ, ಲೊಫೆರ್‌ನತ್ತ ತಿರುಗಿ, ತನ್ನ ಕಥೆ ಪ್ರಾರಂಭಿಸಿದ.

*

ಶಾಲೆಯಲ್ಲಿರುವಾಗ, ನನಗೆ ಸೀಗ್‌ಫ್ರೀಡ್, ರೋಸೆನ್ ಎಂಬ ಹೆಸರಿನ ಗೆಳೆಯನೊಬ್ಬನಿದ್ದ ಮುಂದೆ ಆತ ಕಾಸೆಲ್‌ಗೆ ಹೋಗಿ, ಅಲ್ಲಿ ನಗರದ

ಚಿತ್ರಶಾಲೆಯ ಮುಖ್ಯಾಧಿಕಾರಿಯಾವ. ಅತೀ ತೆಳ್ಳಗಿನ, ಬೋಳು ತಲೆಯ, ವಿಕ್ಷಿಪ್ತ ಮನುಷ್ಯ. ಹದಿನಾರನೇ ಶತಮಾನದ ಚಿತ್ರಕಾರ ಆಲ್ಟ್ ಡೊರ್ಫರನ ಬಗ್ಗೆ ಪಾಂಡಿತ್ಯಪೂರ್ಣವಾದ ಗ್ರಂಥವನ್ನು ಪ್ರಕಟಿಸಿದ್ದ.

ಜನೆವರಿ ೧೯೩೯ರ ಒಂದು ಸಂಜೆ ಆತ ನಮ್ಮ ಮನೆಯಲ್ಲಿ ಅನಿರೀಕ್ಷಿತವಾಗಿ ಪ್ರತ್ಯಕ್ಷನಾದ. ಆತನನ್ನು ನೋಡಿದವರು ಯಾರೂ ನಿರ್ಗತಿಕನಾಗಿ ಅತ್ಯಂತ ದೀನಾವಸ್ಥೆಯಲ್ಲಿರುವುದನ್ನು ಗುರುತಿಸಬಹುದಿತ್ತು. ಅವನನ್ನು ನೌಕರಿಯಿಂದ ಕಿತ್ತು ಹಾಕಿದ ವಾರ್ತೆಯನ್ನು ವೃತ್ತಪತ್ರಿಕೆಯಲ್ಲಿ ಎಂದೋ ಓದಿದ್ದೆ. ಪ್ಯಾರಿಸ್ಸಿನಲ್ಲಿಯ ಜರ್ಮನ್ ರಾಯಭಾರಿ ಕಚೇರಿಯಲ್ಲಿ ಅಧಿಕಾರಿಯಾಗಿದ್ದ ಪೆರ್ ಫಾನ್ ರಾಥ್‌ನ ಕೊಲೆನಿಮಿತ್ತವಾಗಿ ನವಂಬರ್ ೧೯೩೮ರಲ್ಲಿ ತನ್ನನ್ನು ಸ್ವಂತ ಕೋಣೆಯಲ್ಲಿ ಕೈದುಮಾಡಿ ಯಾತನಾ ಶಿಬಿರಕ್ಕೆ ರವಾನಿಸಲಾಗಿತ್ತೆಂದು ರೊಸೆನ್ ನನಗೆ ವಿವರಿಸಿದ. ಯಾವನೋ ಯಹೂದ್ಯ ಪೆರ್ ಫಾನ್‌ರಾಥ್‌ರನ್ನು ಕೊಂದುಹಾಕಿದ್ದ. ಯಾರ ಯಾವದೋ ತಪ್ಪಿಗೆ ಯಾರಯಾರಿಗೋ ಶಿಕ್ಷೆ! ನಾಜಿ ಜರ್ಮನಿಯ ಪರಿಯೆ ಇದು.

"ಯಾತನಾಶಿಬಿರದ ಬಗ್ಗೆ ಅವನಿಗೆ ಏನೂ ಹೇಳಲು ಇಷ್ಟವಿರಲಿಲ್ಲ. ಬಹಳವಾಗಿ ಕೇಳಿದಾಗ ಹೇಳಿದರೆ ಮರಣ ದಂಡನೆ ವಿಧಿಸುತ್ತೇವೆಂದು ಎಚ್ಚರಿಕೆ ಕೊಡಲಾಗಿದೆಂದೂ ಮಾತ್ರ ಹೇಳಿದ. ಅವನನ್ನು ಚಿತ್ರಹಿಂಸೆಗೀಡು ಮಾಡಿದ್ದರೆಂದು ಅನಂತರ ತಿಳಿದುಬಂತು. ಜರ್ಮನಿಯನ್ನು ಶಾಶ್ವತವಾಗಿ ಬಿಟ್ಟು, ಪೆರುವಿಗೆ ಹೋಗಿ ನೆಲೆಸುತ್ತೇನೆಂದು ಪ್ರಮಾಣ ಮಾಡಿದಾಗಲೇ ಆತನನ್ನು ಬಿಡುಗಡೆ ಮಾಡಿದ್ದರಂತೆ. ಪೆರುವಿನ ರಾಯಭಾರಿ ಕಚೇರಿಯಿಂದ ಅವನ ಪತ್ನಿ ಆತನಿಗಾಗಿ ವೀಸಾವನ್ನು ಪಡೆದಿದ್ದಳು. ಅವಳು ಕ್ರೈಸ್ತಮತೀಯಳು. ಅನಂತರ ಅವಳು ವಿಚಾರ ಬದಲಿಸಿ ಅವನಿಂದ ವಿವಾಹವಿಚ್ಛೇದನ ಪಡೆದುಕೊಂಡಿದ್ದಳು.

ರೊಸೆನ್ ಬರ್ಲಿನ್ನಿನಲ್ಲಿ ತನ್ನ ವಿಸಾ ತೆಗೆದುಕೊಂಡು, ಕಾಸೆಲ್‌ನಲ್ಲಿ ತಾನು ವಲಸೆ ಹೋಗುವ ಕರಾರುಪತ್ರಗಳನ್ನೂ ಪ್ರಯಾಣದ ತಿಕೀಟುಗಳನ್ನೂ ಪಡೆದುಕೊಂಡಿದ್ದ. ಅನಂತರ ಹ್ಯಾಂಬರ್ಗಿನಲ್ಲಿ ಹಡಗವನ್ನೇರುವ ಬದಲು ಮ್ಯುನಿಕ್‌ನಲ್ಲಿ ನಮ್ಮ ಕಡೆಗೆ ಬಂದಿದ್ದ. ಜರ್ಮನಿಯನ್ನು ಬಿಟ್ಟು ಹೋಗಲು ತನಗೆ ಸಾಧ್ಯವೇ ಇಲ್ಲವೆಂದು ನನಗೆ ಹೇಳಿದ. ಇಪ್ಪತ್ತು ತಲೆಮಾರುಗಳಿಂದ ಅಲ್ಲಿಯೆ ಜೀವಿಸುತ್ತಾ ಬಂದ ಕುಟುಂಬ. ತನ್ನ ಪೂರ್ವಜರ ಹಾಗೆಯೆ ತಾನೂ ಇಲ್ಲಿಯೇ ಮಣ್ಣಾಗಬೇಕೆಂದು ಅವನ ಬಯಕೆ.

'ಸರಿ, ನಾನೇನು ಮಾಡಬೇಕೆನ್ನುತ್ತೀ?' ಎಂದು ಕೇಳಿದೆ.

'ನೀನು, ನಾಜಿ ಪಕ್ಷದ ಸದಸ್ಯನಂತೂ ಅಲ್ಲವಲ್ಲ,' ಎಂದು ಅರ್ಥವತ್ತಾಗಿ ಅಂದ.

'ಆದರೆ ನಾನು ಉದ್ಯೋಗಸ್ಥ. ನನ್ನ ಕುಟುಂಬ ಕ್ಷೇಮದ ಬಗ್ಗೆ ವಿಚಾರ ಮಾಡಬೇಕು. ಮೇಲಾಗಿ ನಾನೊಬ್ಬ ಜರ್ಮನ್.'

'ನಾನೂ ಅಷ್ಟೆ. ಈಗ ನಾನು ಏನು ಮಾಡಬೇಕೆಂಬ ಬಗ್ಗೆ ಸಲಹೆ ಕೊಡಬೇಕು,' ಎಂದ.

'ಆಗಲಿ ಯೋಚನೆ ಮಾಡಿ ಏನಾದರೂ ದಾರಿ ಹುಡುಕಲು ಪ್ರಯತ್ನಿಸುತ್ತೇನೆ.'

'ಸರಿ, ಹಾಗಾದರೆ ನಾನು ನಾಳೆ ಸಾಯಂಕಾಲ ಮತ್ತೆ ಬರುವೆ.'

'ರಾತ್ರಿಯೆಲ್ಲ ಎಲ್ಲಿರುವಿ?'

ಏನೂ ಗೊತ್ತಿಲ್ಲವೆಂಬುವಂತೆ ಭುಜ ಹಾರಿಸಿದ.

'ಬೆಲ್ಲಾ ಏನಂತಾಳೆ ಕೇಳೋಣ' ಎಂದು ಸೂಚಿಸಿದೆ.

ಸಮಸ್ಯೆ ಎಂಥದೇ ಇರಲಿ ಅದನ್ನು ಗ್ರಹಿಸುವ ಚಾತುರ್ಯ ನನ್ನ ಹೆಂಡತಿಗೆ. ಆಕೆ ಒಮ್ಮೆಲೇ ಕೇಳಿದಳು: 'ನೀನು ಕೊಲೆಪ್ರಕರಣದಲ್ಲಿ ಭಾಗವಹಿಸಿದ್ದೀಯಾ?'

'ಯಾವ ಕೊಲೆ?' ರೊಸೆನ್ ಹಾಗು ನಾನು ಒಟ್ಟಿಗೇ ಕೇಳಿದೆವು,

'ಪ್ಯಾರಿಸ್ಸಿನಲ್ಲಿಯ ರಾಯಭಾರೀ ಕಚೇರಿಯ ಅಧಿಕಾರಿಯ ಕೊಲೆ.'

'ಸುತಾರಾಂ ಇಲ್ಲ' ಇಬ್ಬರೂ ಅವಳಿಗೆ ಭರವಸೆ ಕೊಟ್ಟೆವು. 'ಹಾಗಾದರೆ... ನೀನು ನಿರಪರಾಧಿ, ನಮ್ಮ ಹಿರಿಯ ಮಗಳು ಮಾರಿಯಾನ್‌ಳ ಕೋಣೆಯಲ್ಲಿ ನೀನು ಮಲಗಿಕೊಳ್ಳಬಹುದು,' ಎಂದಾಕೆ ಹೇಳಿದಳು.

'ಸಾಧ್ಯವಿಲ್ಲ' ರೊಸೆನ್ ಹೇಳಿದ.

'ಇದರ ಪರಿಣಾಮವೇನಾಗಬಹುದೆಂದು ನಿನಗೆ ಗೊತ್ತೆ?' ನಾನು ಗಾಬರಿಯಲ್ಲಿ ಕೇಳಿದೆ.

ಆದರೆ ಆಕೆ, 'ದೇವರಿಗಿಂತ ನಾವು ಮಾನವರಿಗೇ ಭಯಪಡಬೇಕೆ? ರೊಸೆನ್ ನಿನ್ನ ಹಳೆಯ ಮಿತ್ರ. ಆತ ನಿರಪರಾಧಿಯೆಂದು ಇದೀಗ ನೀನೇ ಹೇಳಲಿಲ್ಲವೇ? ಅವನು ಹೊರಗೆ ಮಳೆಯಲ್ಲೆ ಮಲಗಿಳ್ಳಬೇಕೇ ?'

ಕಟ್ಟಕಡೆಗೆ ರೊಸೆನ್ ನಮ್ಮ ಹಿರಿಯ ಮಗಳು ಮಾರಿಯಾನಳ ಮಂಚದ ಮೇಲೆ ಮಲಗಿದ. ಮಾರಿಯಾನ್ ತನ್ನ ತಂಗಿ ಈಡಿತ್‌ಳೊಡನೆ ಆಕೆಯ ಕೋಣೆಯಲ್ಲಿ ಮಲಗಿದಳು.

ನಾವು ಎದುರಿಸುತ್ತಿರುವ ಆಪತ್ತಿನ ಅರಿವು ನಮಗೆ ಇದ್ದೇ ಇತ್ತು. ೧೯೩೯ರಲ್ಲಿ ಮ್ಯುನಿಕ್ ನಗರದಲ್ಲಿ ಕ್ರೈಸ್ತಮತೀಯರ ಮನೆಯಲ್ಲಿ ಯೆಹೂದ್ಯನೊಬ್ಬನನ್ನು ಸೇರಿಸಿಕೊಳ್ಳುವುದು, ಒಂದು ದೊಡ್ಡ ಸಾಹಸವೇ ಆಗಿತ್ತು.

ಮರುದಿನ ಬೆಳಿಗ್ಗೆ ಜರ್ಮನಿಯನ್ನು ಬಿಟ್ಟು ಹೋಗುವಂತೆ ಆತನ ಮನವೊಲಿಸಬೇಕೆಂದು ನಿರ್ಧರಿಸಿದೆ. ಹ್ಯಾಂಬರ್ಗಿನಲ್ಲಿ ಗೆಸ್ಟಪೋ ಪಡೆಯವರು ಅಸಂಖ್ಯಾತ ಯೆಹೂದ್ಯರನ್ನು ಕೈದುಮಾಡಿ ಯಾತನಾಶಿಬಿರಗಳಿಗೆ ರವಾನಿಸಿದ್ದಾರೆಂಬ ಸಂಗತಿಯನ್ನು ಅದೇ ದಿನ ವೃತ್ತಪತ್ರಿಕೆಯಲ್ಲಿ ಓದಿದ್ದೆವು. ಇದು ನಮ್ಮ ದುಗುಡವನ್ನು ಇನ್ನೂ ಹೆಚ್ಚಿಸಿತ್ತು.

ಮರುದಿನ ಬೆಳಿಗ್ಗೆ ರೊಸೆನ್ ಸ್ವಲ್ಪ ಸುಧಾರಿಸಿದಂತೆ ಕಾಣಿಸುತ್ತಿದ್ದ. 'ಇಂದು ಸಂಜೆ ನಿಮ್ಮ ಮನೆ ಬಿಟ್ಟು ಹೋಗುವೆ. ಈ ರಾತ್ರಿ ಬೇರೊಂದು ಸ್ಥಳದಲ್ಲಿ ಇರುವೆ.'

'ಎಲ್ಲಿಗೆ ಹೋಗುವಿ?' ನನ್ನ ಪತ್ನಿ ಕೇಳಿದಳು.

ಆತ ಹೋಗಿಬಿಡಬೇಕೆಂಬುದು ನನ್ನಾಸೆ. ಆದರೆ ನನ್ನ ಪತ್ನಿಯ ಇಚ್ಛೆಯೋ ತದ್ವಿರುದ್ಧ. 'ಈ ಅತಿರೇಕಗಳು ಇನ್ನೇನು ಬಹಳ ದಿನ ನಡೆಯುವುದಿಲ್ಲ. ನಿರಪರಾಧಿಗಳನ್ನು ಶಿಕ್ಷಿಸುವುದನ್ನು ಜರ್ಮನ್ ನಾಗರಿಕರು ಸಹಿಸುವದಿಲ್ಲ,' ಆಕೆ ಸಮಾಧಾನ ಹೇಳಿದಳು.

ಹೀಗಾಗಿ ರೊಸೆನ್ ನಮ್ಮ ಮನೆಯಲ್ಲಿಯೇ ಉಳಿದುಕೊಂಡ. ಪ್ರತಿದಿನವೂ ಮಾರನೆಯ ದಿನ ಮನೆ ಬಿಟ್ಟು ಹೋಗುವೆನೆಂದು ರೊಸೆನ್ ಹೇಳುತ್ತಿದ್ದ. 'ನಿನಗೆ ಮಡದಿ, ಮಕ್ಕಳಿರುವರು' ಅಂತ ನನಗೆ ತಿಳಿ ಹೇಳುತ್ತಿದ್ದ. 'ನನ್ನೊಬ್ಬನ್ನನ್ನು ಕೊಂದುಬಿಟ್ಟರೆ ಪರವಾಗಿಲ್ಲ. ಆದರೆ ನಿಮ್ಮೆಲ್ಲರ ಗತಿಯೇನು?' ಎಂದು ಮರುಗಿದ್ದ.

ಆ ವಿಷಯದ ಬಗ್ಗೆ ಮಾತನಾಡಕೂಡದೆಂದು ತಾಕೀತು ಮಾಡಿ ಆತ ತನ್ನ ಕೋಣೆಯಲ್ಲಿಯೇ ಇರಬೇಕೆಂದು ಮಾಡಿದೆವು. 'ರಾತ್ರಿಯಷ್ಟೇ ನೀನು ಹೊರಗಡೆ ಹೋಗಬಹುದು. ಕೋಣೆಯಲ್ಲಿ ಎಂದೂ ದೀಪವನ್ನು ಬೆಳಗಿಸಬಾರದು' ಎಂಬ ನಿರ್ಬಂಧವನ್ನು ವಿಧಿಸಿದೆವು. ಆತನಿಗಾಗಿ ನಾವು ರೇಶನ್ ಕಾರ್ಡು ಮಾಡಿಸಲಿಲ್ಲ. ಕಳ್ಳಪೇಟೆಯಲ್ಲಿ ಆತನಿಗೇನಾದರೂ ಆಹಾರ ಕೊಳ್ಳೋಣವೆಂದರೆ ಅವನ ಹತ್ತಿರ ಒಂದು ಕಿಲುಬು ಕಾಸೂ ಇರಲಿಲ್ಲ. ಗೆಸ್ಟಪೋ ಸಿಕ್ಕಿಬಿದ್ದರೆ ಅವನನ್ನು ಕೊಂದುಬಿಡುತ್ತಿದ್ದರೆಂಬುದರಲ್ಲಿ ಸಂದೇಹವೇ ಇರಲಿಲ್ಲ.

ಸೀಗ್‌ಫ್ರೀಡ್ ರೊಸೆನ್ ಒಳ್ಳೇ ಮನುಷ್ಯ; ಅಪ್ರತಿಮ ಜರ್ಮನ್ ದೇಶಭಕ್ತ. ಇಷ್ಟರಲ್ಲಿ ಅವನ ಮೊದಲಿನ ಹೆಂಡತಿ ಸೈನ್ಯಾಧಿಕಾರಿಯೊಬ್ಬನನ್ನು ವಿವಾಹವಾಗಿದ್ದಳು. ತನ್ನ ಅಭಿಪ್ರಾಯದಲ್ಲಿ, ಮರಣಕ್ಕಿಂತ ದೇಶಾಂತರ ಭೀಕರವಾದದ್ದೆಂದು ಆತ ನಮಗೆ ಮೇಲಿಂದ ಮೇಲೆ ಹೇಳುತ್ತಿದ್ದ. ನನ್ನ ಪತ್ನಿ, ಮಕ್ಕಳು ಅವನನ್ನು ಬಹಳೇ ಮೆಚ್ಚಿಕೊಂಡರು. ನಾನು ಮಾತ್ರ, ಅವನು ಬಾಸೆಲ್ ಇಲ್ಲವೆ ಝೂರಿಕ್ಕಿಗೆ ಏಕೆ ತೆರಳಬಾರದೆಂದು ಅನೇಕ ಸಲ ಯೋಚಿಸುತ್ತಿದ್ದೆ.

ಆತ ಹೊರಗಡೆ ಎಲ್ಲಿಯೂ ಹೋಗಲಿಕ್ಕಾಗದೆ, ಯಾವಾಗಲೂ ಒಳಗೆ ಇರುತ್ತಿದ್ದುದರಿಂದ ಮುಕ್ಕಲು ಸ್ವಭಾವದವನಾಗಿಬಿಟ್ಟಿದ್ದ. ಗ್ರುನೇವೊಲ್ಟ್ ಎಂಬ ಚಿತ್ರಕಾರನ ಬಗ್ಗೆ ಒಂದು ಪುಸ್ತಕ ಬರೆದು, ತನ್ನ ಹಸ್ತಪ್ರತಿಯನ್ನು ನನ್ನ ಮಕ್ಕಳಿಗೆಲ್ಲ ಓದಿಹೇಳುತ್ತಿದ್ದ. ಅದು ಸರಕಾರದ ಗಮನಕ್ಕೆ ಬಂದರೆ ನಾವೂ ತೊಂದರೆಗೊಳಗಾಗುತ್ತೇವೆಂಬ ಭಯದಿಂದ ಅದನ್ನು ಸುಟ್ಟು ಹಾಕಿದೆವು.

ಪಕ್ಷದ ಸದಸ್ಯನಾಗಿದ್ದರೆ ನನ್ನಲ್ಲಿ ಸಂದೇಹಾಸ್ಪದವೇನೂ ಇರಲಾರದೆಂದು ಸರಕಾರದವರು

ದವರು ಭಾವಿಸುತ್ತಾರೆ. ಹೀಗಾಗಿ ನಾನು ನನ್ನ ಸ್ನೇಹಿತನನ್ನು ಸಂರಕ್ಷಿಸಬಹುದು ಎಂದು ಯೋಚಿಸಿ ಸೀಗ್‌ಫ್ರೀಡ್ ನಮ್ಮ ಮನೆಯಲ್ಲಿ ತಳ-ವೂರಿದ ಒಂದು ತಿಂಗಳ ನಂತರ, ನಾಜಿ ಪಕ್ಷವನ್ನು ಸೇರಿಕೊಂಡೆ. ನನ್ನ ಮನಸ್ಸನ್ನು ಬದಲಾಯಿಸಲು ಸೀಗ್‌ಫ್ರೀಡ್‌ನಿಗೂ ಸಾಧ್ಯ-ವಾಗಲಿಲ್ಲ.

ಯುದ್ಧ ಆರಂಭವಾದೊಡನೆ ನಾವು ಚಿಂತೆ ಗೀಡಾದೆವು. ಒಮ್ಮೆ ಬಾಂಬುದಾಳಿಯೊದಾಗ, ಬೆಂಕಿಯಿಂದ ಒದಗಬಹುದಾದ ಅಪಾಯಗಳನ್ನು ಪರಿಶೀಲಿಸಲು ಕಾವಲುಗಾರ ಒಳಗೆ ಬಂದುಬಿಟ್ಟ. ನನ್ನ ಪತ್ನಿ ಸೀಗ್‌ಫ್ರೀಡ್‌ನನ್ನು ಮಲಗುವ ಕೊಠಡಿಯ ಹಿಂದುಗಡೆಯಿರುವ ತನ್ನ ಕೋಣೆ ಯೊಳಗೆ ಬಟ್ಟೆಗಳಲ್ಲಿ ಅಡಗಿಸಿಟ್ಟಳು. ಅದೊಂದು ಕಿಟಕಿಗಳೂ ಇಲ್ಲದ ಚಿಕ್ಕ ಕತ್ತಲ ಕೋಣೆ. ಒಂದು ಗುಪ್ತ ಗೂಡಿನಂತೆಯೇ ಇತ್ತು. ಅದು ಕಾವಲುಗಾರನ ಗಮನಕ್ಕೆ ಬಾರದಿದ್ದುದು ನಮ್ಮ ಅದೃಷ್ಟವೆಂದೇ ಹೇಳಬೇಕು.

ಅದೇ ಸಂಜೆ ಸೀಗ್‌ಫ್ರೀಡನು ಸ್ವಿಟ್ಜರ್ಲಂಡಿಗೆ ತೆರಳುವದೇ ಒಳ್ಳೆಯದೆಂದು ಸೂಚಿಸಿದೆ. ಕೂಡಲೇ ಅದಕ್ಕೆ ಪ್ರತ್ಯುತ್ತರವಾಗಿ ಅವನು, 'ಅಲ್ಲಿ ಹೋಗುವುದಕ್ಕಿಂತ ಇಲ್ಲಿ ಸಾಯುವುದೇ ಒಳ್ಳೆ-ಯದು; ನನಗೆ ವಿಷ ಕೊಟ್ಟು ಬಿಡು' ಎಂದ.

ಆ ದಿನವೇ ಹಿಟ್ಲರ್ ಪ್ಯಾರಿಸ್ಸಿನ ಮೇಲೆ ಆಕ್ರಮಣವೆಸಗಿದ್ದ. ಸೀಗ್‌ಫ್ರೀಡ್ ಹಾಗು ನಾನು ಜಗಳವಾಡಿ, ಕೊನೆಯಲ್ಲಿ ಕೈ ಕೈ ಹತ್ತುವ ಪ್ರಸಂಗವೂ ಬಂದಿತು. ಆದರೆ ಬಡಿದಾಟ ಮುಗಿದ ಕೂಡಲೇ ನಮ್ಮ ಪರವಶತೆಯನ್ನು ನೆನೆದು ನಾವಿಬ್ಬರೂ ಕಣ್ಣೀರು ಸುರಿಸಹತ್ತಿ ದೆವು.

■

ನಮ್ಮ ಮಕ್ಕಳ ಅನೇಕ ಸ್ನೇಹಿತ-ಸ್ನೇಹಿತೆ ಯರು ಮನೆಗೆ ಬಂದು ಹೋಗುತ್ತಿದ್ದರು. ಹೀಗಾಗಿ ಸೀಗ್‌ಫ್ರೀಡ್‌ನ ಕೋಣೆಯ ಬಾಗಿಲಿಗೆ ಸದಾ ಬೀಗ ಹಾಕಿರುವುದು ಅನಿವಾರ್ಯವೇ ಆಗಿತ್ತು. ಅಕಸ್ಮಾತ್ ಒಂದು ಸಲ ನಾವು ಪೇಚಿನಲ್ಲಿ ಸಿಕ್ಕಿಕೊಂಡೆವು; ವಿಶ್ವವಿದ್ಯಾಲಯದಲ್ಲಿ ಕಲೆಯನ್ನು ಅಭ್ಯಸಿಸುವ ನಮ್ಮ ಪರಿಚಯದ ಯುವಕನೊಬ್ಬ ನಮ್ಮ ಮೂವರೂ ಮಕ್ಕಳಲ್ಲಿ ಅನುರಕ್ತನಾಗಿ, ತನ್ನ ಹಳೆಯ ಸಾಂಪ್ರದಾಯಿಕ ಪದ್ಧತಿಯಲ್ಲಿ ಪ್ರತಿಯೊಬ್ಬಳ ಮುಂದೆಯೂ ಮದುವೆಯ ಪ್ರಸ್ತಾಪ ಮಾಡಿದ್ದ.

ಕೊನೆಯವಳಿಂದ ಪ್ರಾರಂಭಮಾಡಿದಾಗ, ಗುಸ್ತಿ—ನನ್ನ ಮೂರನೆಯ ಮಗಳು—ತನಗೆ ಗಟ್ಟಿ ಮುಟ್ಟಾದ ಹೃದಯವುಳ್ಳ ಪತಿ ಬೇಕು. ನೀನೋ ಹೃದಯರೋಗದಿಂದ ಬಳಲುತ್ತಿರುವವ ಅಂದು ಬಿಟ್ಟಳು. ಅನಂತರ ಈಡಿತ್‌ಳನ್ನು ಕೇಳಿದ; ಆದರೆ ಅವಳೂ ನಿರಾಕರಿಸಿದಳು. ಆ ಬಳಿಕ ಮಾರಿಯನ್ ಳನ್ನು ವಿಚಾರಿಸಿದ. ಅವಳು ಆತನನ್ನು ಪ್ರೀತಿಸುತ್ತಿದ್ದರೂ, ಮನಸ್ಸಿನಲ್ಲಿ, ಈ ಬಗ್ಗೆ ನಿರ್ಧಾರ ಮಾಡಿರಲಿಲ್ಲ.

ಒಂದು ರಾತ್ರಿ ಆ ವಿದ್ಯಾರ್ಥಿ ಊಟಕ್ಕೆ ಬಂದಾಗ, ತಾನು ಆಲ್ಟ್ ಡೊರ್ಫರ್ ಎಂಬ ಚಿತ್ರಕಾರನ ವಿಷಯವಾಗಿ ವಿಶ್ವವಿದ್ಯಾಲಯಕ್ಕೆ ಸಂಶೋಧನಾ ಪ್ರಬಂಧವನ್ನು ಸಾದರಪಡಿಸಲಿರುವುದಾಗಿಯೂ ಅದರಲ್ಲಿ ಸೀಗ್‌ಫ್ರೀಡ್ ರೊಸೆನ್ ಎಂಬ ಯಹೂದ್ಯ ಕಲಾತಜ್ಞನ ವಿಚಾರಗಳನ್ನು ಖಂಡಿ ಸುವುದಾಗಿಯೂ ಹೇಳಿದ. ಸೀಗ್‌ಫ್ರೀಡ್ ನಮ್ಮಲ್ಲೆ ಇದ್ದ ಸುಳಿವು ಆತನಿಗೆ ದೊರೆತಿತ್ತೋ ಏನೋ. ನಮ್ಮತ್ತ ವಕ್ರ ನೋಟ ಬೀರಿ ನಮಗೆ ಅವನ ಪರಿಚಯವಿರುವದೆ? ಎಂದು ಪ್ರಶ್ನಿಸಿದ.

ನನ್ನ ಎದೆ ಜೋರಾಗಿ ಬಡಿದುಕೊಂಡಿತು. ಬೆಲ್ಲಾ ವಿವರ್ಣಳಾದಳು; ಉಳಿದ ಮಕ್ಕಳು ವಿಷಯವನ್ನು ಬದಲಾಯಿಸಲು ಪ್ರಯತ್ನಿಸಿದರು. ಆದರೆ ಆತ ಪುನಃ ಪುನಃ ಆಲ್ಟ್ ಡೋರ್ಫರ್ ಹಾಗೂ ಸಿಗ್‌ಫ್ರೀಡ್ ರೊಸೆನ್ನನ ವಿಷಯವನ್ನೇ ಪ್ರಸ್ತಾಪಿಸಹತ್ತಿದ. 'ಆ ಪುಸ್ತಕವನ್ನು ನಾನು ದ್ವೇಷಿಸುತ್ತೇನೆ. ಅದರ ಲೇಖಕನನ್ನು ಖಂಡಿಸುತ್ತೇನೆ. ...ನಿಜವಾಗಿಯೂ ನೀವು ಆ ಗ್ರಂಥವನ್ನು ನೋಡಿ ಲ್ಲವೇ?' ಎಂದು ಅಣಕಿಸುವ ಧ್ವನಿಯಲ್ಲಿ ಕೇಳಿದ.

'ಇಲ್ಲ,' ಮೆಲುನುಡಿಯಲ್ಲಿ ನಾನೆಂದೆ, 'ಆಲ್ಟ್ ಡೊರ್ಫರ್ ಒಬ್ಬ ಶ್ರೇಷ್ಠ ಚಿತ್ರಕಾರ, ಅಲ್ಲವೇ?'

ಆ ಕಲಾವಿದ್ಯಾರ್ಥಿ ಸುಮ್ಮನೆ ಎದ್ದು, ನಮ್ಮ ಪುಸ್ತಕ ಪೀಠದ ಹತ್ತಿರ ಹೋಗಿ, ಒಂದು

ಪುಸ್ತಕವನ್ನು ಹೊರತೆಗೆದ. ಅವನ ಕೈಯಲ್ಲಿ-ರುವುದು ರೊಸೆನ್ನನ ಪುಸ್ತಕವೇ ಎಂದು ತಿಳಿದಾಗ, ನಾವೆಲ್ಲ ಭಯಾಕ್ರಾಂತರಾದೆವು. ೧೯೩೦ ರಲ್ಲಿ ರೊಸೆನ್ ನನಗೆ ಕೊಡುಗೆಯಾಗಿ ಕಳಿಸಿದ ಆ ಪುಸ್ತಕದಲ್ಲಿ 'ನನ್ನ ಪ್ರಿಯ ಗೆಳೆಯ, ಆರ್ಥರ್ ಫ್ಲೋಮ್‌ನಿಗೆ–' ಎಂದು ಬರೆದು ಹಸ್ತಾಕ್ಷರ ಹಾಕಿದ್ದ.

ಮೇಜಿನ ಮೇಲೆ ಆ ಪುಸ್ತಕವನ್ನಿಟ್ಟು, ಆ ಯುವಕ ಅನ್ಯಮನಸ್ಕನಾಗಿರುವಂತೆ, 'ಕ್ಷಮಿಸಿ' ಎಂದು ಹೇಳಿ ಕೋಣೆ ಬಿಟ್ಟು ಹೊರಗೆ ಹೋದ. ಶೌಚಗೃಹಕ್ಕೆ ಹೋಗುತ್ತಿದ್ದಾನೆಂದು ನಾವೆಲ್ಲ ಭಾವಿಸಿದೆವು.

'ಮಾರಿಯನ್, ಮದುವೆಯ ಪ್ರಸ್ತಾಪವನ್ನು ನಿರಾಕರಿಸಿದೆಯಾ?' ನನ್ನ ಪತ್ನಿ ಕೇಳಿದಳು. 'ಹೌದು, ಆದರೆ ಆತ ಇನ್ನೂ ಮೂರು ದಿನ ವಿಚಾರ ಮಾಡಬೇಕೆಂದು ಹೇಳಿದ. ಸದ್ಯದ ಪರಿಸ್ಥಿತಿಯನ್ನು ನೋಡಿ ನಾನು 'ಹಾಗೇ ಆಗಲಿ' ಎಂದು ಕೊನೆಯಲ್ಲಿ ಹೇಳಿದೆ.

'ಹಾಗಾದರೆ ನಮಗಿನ್ನೂ ಮೂರೂ ದಿನಗಳ ಅವಕಾಶವಿದೆ' ನುಡಿದಳು ನನ್ನ ಪತ್ನಿ. ಅಷ್ಟರಲ್ಲಿ, ಹೊರಗಡೆ ಒಂದು ಕೋಣೆಯ ಬಾಗಿಲು ಗುದ್ದುವ ಶಬ್ದ, ಅದರೊಟ್ಟಿಗೇ 'ಕೂಡಲೇ ಬಾಗಿಲು ತೆರೆ–ಇಲ್ಲವಾದರೆ ಬೆಂಕಿ ಇಡುತ್ತೇನೆ !' ಎಂಬ ಗಟ್ಟಿಯಾದ ಕೂಗು ಕೇಳಿಬಂತು.

ನಾವೆಲ್ಲ ಹಜಾರದೊಳಗೆ ಓಡಿ ಹೋದೆವು. ಅಲ್ಲಿ ಆ ವಿದ್ಯಾರ್ಥಿ ಬೀಗ ಹಾಕಿದ ಕೋಣೆಯೆದುರು ನಿಂತು, ಬಾಗಿಲನ್ನು ಮುಷ್ಟಿಯಿಂದ ಗುದ್ದುತ್ತ ಬೊಬ್ಬೆ ಹಾಕುತ್ತಿದ್ದ. ನಾವು ಅವನ ಹತ್ತಿರ ಹೋಗಿ, ಉಪಾಯವಾಗಿ ಅವನನ್ನು ದೂರ ಕರೆದುಕೊಂಡು ಹೋದೆವು. ಆತ ಅಷ್ಟೇನೂ ತ್ರಾಣವುಳ್ಳವನಿರಲಿಲ್ಲ. ಬೆಳ್ಳಗೆ, ತಿಳಿ ವರ್ಣದ ಕೂದಲು, ದೊಡ್ಡ ಕನ್ನಡಕ, ಚಿಕ್ಕ ಮೀಸೆ ಹೊತ್ತ ದುರ್ಬಲ ಮನುಷ್ಯ.

'ನಿನಗೇನಾಗಿದೆ?' ಎಂದು ಕೇಳಿದೆ.

'ಈ ಕೋಣೆಯೊಳಗೆ ಯಾರೋ ಇದ್ದಾರೆ' ಎಂದು ಕೂಗಾಡಿದ, 'ಈಗ ಯಾರೋ ಸೀನಿದಂತಾಯಿತು.'

'ಭೋಜನ ಕೋಣೆಯಲ್ಲಿ ನಾನೇ ಸೀನಿದೆ. ನಿನಗೇನೊ ಭ್ರಮೆಯಾಗಿರಬೇಕು.'

ಮಾರಿಯಾನ್ ಮತ್ತು ಗುಸ್ಸಿ ಇಬ್ಬರೂ ಆತನ ತೋಳುಗಳನ್ನು ಹಿಡಿದು, ಅವನನ್ನು ಊಟದ ಕೋಣೆಯತ್ತ ಎಳೆದುಕೊಂಡು ನಡೆದರು.

'ಆ ಕೋಣೆಗೆ ಯಾವಾಗಲೂ ಬೀಗ ಹಾಕಿರುವುದು ಯಾಕೆ?' ಅವನು ನನ್ನ ಪತ್ನಿಯನ್ನು ಕೇಳಿದ ಅವಳು ಉತ್ತರಿಸುವ ಮುಂಚೆಯೇ ಮತ್ತೆ ನನ್ನನ್ನು ಕೇಳಿದ, 'ಆಲ್ಟ್ ಡೋರ್ಫರ್ ಬಗ್ಗೆ ರೊಸೆನ್ ಬರೆದ ಪುಸ್ತಕವನ್ನು ನನಗೆ ಸ್ವಲ್ಪ ಕೊಡುವಿರಾ ?'

ಲೇಫೆರ್. ನಾನು ಉನ್ನತ ಸ್ಥಾನದಲ್ಲಿರುವ ಒಬ್ಬ ನ್ಯಾಯಾಧೀಶನೆಂದು ನೀನು ಬಲ್ಲೆ. ಆದರೂ ಏಕೋ ಆ ವೇಳೆಯಲ್ಲಿ ಯಾವ ಸುಳಿವೂ ಇಲ್ಲದೆ ಆ ಯುವಕನನ್ನು ಹೇಗೆ ನಿರ್ನಾಮ ಮಾಡಿಬಿಡಬಹುದೆಂಬ ವಿಚಾರ ಒಮ್ಮೆ ನನ್ನಲ್ಲಿ ಸುಳಿದುಹೋಯಿತು. ಈ ವಿದ್ಯಾರ್ಥಿ, ಸೀಗ್‌ಫ್ರೀಡ್‌ನ ಪುಸ್ತಕವನ್ನು ತನ್ನೊಡನೆ ತೆಗೆದುಕೊಂಡು ಹೋಗಿ, ಗ್ರಂಥಕರ್ತನ ಹಸ್ತಾಕ್ಷರ ಸಹಿತವಿರುವ ಯಹೂದ್ಯನೊಬ್ಬನ ಪುಸ್ತಕವನ್ನು ಇಟ್ಟುಕೊಂಡಿದ್ದನ್ನು ನೆಪಮಾಡಿ ನನ್ನನ್ನು ಪೇಚಿನಲ್ಲಿ ಸಿಕ್ಕಿಸಬೇಕೆನ್ನುತ್ತಾನೆ ಎಂದು ಭಾವಿಸಿದೆ, ಆದರೂ ನಾನು ಜಗ್ಗಲಿಲ್ಲ. ಆ ಬೀಗ ಹಾಕಿದ ಕೋಣೆಯಲ್ಲಿ ಯಾರಿರುವರೆಂದು ಅವನಿಗೆ ಇಷ್ಟರಲ್ಲಿ ತಿಳಿದಿದೆಂಬುದು ನನಗೆ ಖಚಿತವಾಗಿತ್ತು.

ಅದೇ ಹೊತ್ತಿನಲ್ಲಿ ಹೊರಗೆ ಕರೆಗಂಟೆ ಬಾರಿಸಿದ ಶಬ್ದ ಕೇಳಿ ನಾವೆಲ್ಲ ಬೆಚ್ಚಿಬಿದ್ದೆವು. 'ಬಾಗಿಲು ತೆರೆಯಬೇಡಿ' ಎಂದು ಗುಸ್ಸಿ ಚೀರಿಕೊಂಡಳು. 'ನಾನು ತೆರೆಯಲೇ ?' ಆ ವಿದ್ಯಾರ್ಥಿ ಕೇಳಿದ. ಆಂ. ಹೌದು ಅವನ ಹೆಸರು ನಾನು ಇದುವರೆಗೆ ಹೇಳಿಯೇ ಇಲ್ಲ– ಆತ ಫ್ರಿಜ್ ಫಾನ್ ಸ್ಟ್ರಾಶೋ. 'ಬೇಡ, ನಾನು ತೆರೆಯುತ್ತೇನೆ,' ಎಂದೆ. ಬಾಗಿಲ ಹೊರಗಡೆ ನಮ್ಮ ಮಕ್ಕಳ ಮೂವರು ಗೆಳೆಯರು ನಿಂತಿದ್ದರು; ಒಬ್ಬ ಔದ್ಯೋಗಿಕ ಶಾಲೆಯ ವಿದ್ಯಾರ್ಥಿ; ಮತ್ತೊಬ್ಬ ಸೈನ್ಯದಲ್ಲಿನ ಉಪನಾಯಕ; ಇನ್ನೊಬ್ಬ ಪಟ್ಟಣದ ಆಸ್ಪತ್ರೆಯಲ್ಲಿಯ ತರುಣ ಶಸ್ತ್ರವೈದ್ಯ. ಗುಸ್ಸಿ ಅವರೆಲ್ಲರಿಗೂ ಮನೆಗೆ ಬರಲು ಆಮಂತ್ರಣವಿತ್ತು, ಅನಂತರ ಆ ವಿಷಯ ಮರೆತೇಬಿಟ್ಟಿದ್ದಳು.

ಅವರೆಲ್ಲರನ್ನೂ ಒಳಗೆ ಬರಮಾಡಿಕೊಂಡೆವು. ನಾನು ಎಲ್ಲರಿಗೆ ಪಾನೀಯಗಳನ್ನು ನೀಡಿದೆ. ಆ ಸಂಜೆ

ಸಂತೋಷದಿಂದಲೇ ಕಳೆಯಿತು. ಶಸ್ತ್ರವೈದ್ಯನಾದವನು ಪಿಯಾನೋ ನುಡಿಸಿದ. ಬಳಿಕ ಗ್ರಾಮೋಫೋನ್ ಸಂಗೀತದ ಶ್ರುತಿಲಯದೊಂದಿಗೆ ಯುವಕ ಯುವತಿಯರು ನೃತ್ಯಮಾಡುತ್ತಾ ನಲಿದಾಡಿದರು. ವಾಲ್ಜ್ ಸಂಗೀತದ ಹಿಮ್ಮೇಳದಲ್ಲಿ ನಾನು ಗುಸ್ತಿಯೊಡನೆ ನರ್ತಿಸಿದೆ: ಫ್ರಿಜ್ ಫಾನ್ ಸ್ಟ್ರಾಶೋ ಸಹ ನನ್ನ ಪತ್ನಿಯೊಡನೆ ನೃತ್ಯದಲ್ಲಿ ಜೋಲಾಡಿದ. ಎಲ್ಲರೂ ಹೋದ ಬಳಿಕ, ತಾನೂ ಹೊರಟು ಹೋದ. ಆದರೆ ಆಲ್ಟ್‌ಡೊರ್ಫರನ ಪುಸ್ತಕದ ಬಗ್ಗೆಯಾಗಲಿ ಆ ಬೀಗ ಹಾಕಿದ ಕೋಣೆಯ ವಿಷಯವಾಗಲಿ ಆತ ಪುನಃ ಪ್ರಸ್ತಾಪಿಸಲಿಲ್ಲ.

*

'ಅಂದು ರಾತ್ರಿಯಿಡಿ ನಮಗಾರಿಗೂ ನಿದ್ರೆ ಬರಲಿಲ್ಲ. ನಾನು ಮೃತ್ಯುಪತ್ರವನ್ನು ಬರೆದಿಟ್ಟೆ. ರಾತ್ರಿಯೆಲ್ಲ ಅನೇಕ ಕಾಗದಪತ್ರಗಳನ್ನು ಪರಿಶೀಲಿಸಿ ಎಲ್ಲಾ ಸುಟ್ಟುಹಾಕಿದೆವು. ರೊಸೆನ್ನನ ಪುಸ್ತಕವನ್ನು ಮಾತ್ರ ಸುಡಬೇಕೋ ಬೇಡವೋ, ಎಂದು ಬಹಳ ಹೊತ್ತು ಚರ್ಚೆ ಮಾಡಿದರೂ ಯಾವ ನಿರ್ಧಾರಕ್ಕೂ ಬರಲಾಗಲಿಲ್ಲ. ಬೆಳಕು ಹರಿಯುವುದೇ ತಡ, ಆ ಯುವಕನ, ಕಿತಾಪತಿಯಿಂದಾಗಿ 'ಗೆಸ್ಟಪೋ' ಪಡೆಯವರು ಪ್ರತ್ಯಕ್ಷರಾಗುವರೆಂಬ ನಿರ್ಧಾರಕ್ಕೆ ಆಗಲೇ ಬಂದುಬಿಟ್ಟಿದ್ದೆವು.

ಮುಂದಿನ ಮೂರು ದಿನಗಳಲ್ಲಿ ನಾವು ನರಕಯಾತನೆಯನ್ನೇ ಅನುಭವಿಸಿದೆವು. ಸೀಗ್‌ಫ್ರೀಡ್‌ನಿಗೆ ಇದೆಲ್ಲ ಸಮಾಚಾರ ತಿಳಿಸಬೇಕಾದದ್ದು ಸ್ವಾಭಾವಿಕ. ಸ್ಟ್ರಾಶೋನ ಕೂಗಾಟ, ಬಾಗಿಲು ಬಡಿಯುವಿಕೆಯಿಂದ ರೊಸೆನ್ನನಿಗೆ ಹೃದಯಾಘಾತವಾದರೂ ಆಗಬಹುದು ಎಂದು ಹೆದರಿಕೊಂಡಿದ್ದೆವು. 'ಇಲ್ಲ, ನೀನೀಗ ಇಲ್ಲಿಂದ ಹೊರಡಲೇ ಬೇಕು,' ನಾನು ರೊಸೆನ್ನನಿಗೆ ಹೇಳಿದೆ. ಪ್ರತಿಯಾಗಿ ಆತ ತನಗೆ ವಿಷ ಕುಡಿಸಬೇಕೆಂದಿಷ್ಟೇ ಹೇಳಿದ. ನಮಗೆಲ್ಲ ಅವನ ಮೇಲೆ ಕೋಪ ಉಕ್ಕಿ ಬಂತು.

'ಹಾಗಾದರೆ ನಿನ್ನ ಹಣದ ಗತಿ ಏನು?'ಎಂದು ಒಂದೇ ಉಸುರಿನಲ್ಲಿ ಈಡಿತ್ ಹಾಗು ನಾನು ಗರ್ಜಿಸಿದೆವು.

'ನನ್ನ ಹಣ?' ಪೆದ್ದನಂತೆ ಬಾಯಿ ಬಿಡುತ್ತ ಸೀಗ್‌ಫ್ರೀಡ್ ಕೇಳಿದ. ಅವನು ನಮ್ಮೆಲ್ಲರ ಮುಖ ನೋಡಿ, ಎಲ್ಲರೂ ತನ್ನನ್ನು ಕೈಬಿಡುತ್ತಿದ್ದಾರೆಂದು ಭಾವಿಸಿದ. 'ನನ್ನ ಹಣ ತೆಗೆದುಕೊಂಡು ನೀವೇನು ಮಾಡುವಿರಿ? ನಿಮಗೆ ಏತಕ್ಕೆ ಬೇಕು?' ಎಂದು ಕೇಳಿದ.

'ನಾವು ಹೇಳುತ್ತಿರುವದೂ ಅದೇ' ಮಾರಿಯಾನ್ ಕಿರುಚಿದಳು, 'ನಮಗೆ ನಿನ್ನ ಹಣ ಬೇಡವೇ ಬೇಡ.'

ಆತ ಭಯಪೂರಿತ ಕಣ್ಣುಗಳಿಂದ ಒಬ್ಬೊಬ್ಬರಂತೆ ಎಲ್ಲರನ್ನೂ ನೋಡಿದ.

ಕೆಲವು ವ್ಯಕ್ತಿಗತ ಕಾರಣಗಳಿಂದ ಮಾರಿಯಾನ್ ಅವನನ್ನು ಬಹಳವಾಗಿ ದ್ವೇಷಿಸುತ್ತಿದ್ದಳು. 'ಪ್ರಿಯ ರೊಸೆನ್,' ಆಕೆ ಅಣಕದ ನಗೆ ಬೀರುತ್ತ ಹೇಳಿದಳು, 'ನೀನು ಇಲ್ಲಿಂದ ಹೋಗಲೇಬೇಕು.'

'ಇಲ್ಲಿಂದ ಹೋಗಲೇಬೇಕು?' ಏನೂ ತಿಳಿಯದವನಂತೆ ಪುನರುಚ್ಚರಿಸಿದ. 'ಇಲ್ಲಿಂದ ಹೊರಬೀಳು...' ಮಾರಿಯಾನ್ ಅಬ್ಬರಿಸಿದಳು. ಹೊರಟುಹೋಗು...ಕೊಲೆಗಡುಕ... ಆತ್ಮನಿಷ್ಠೆಯಿಲ್ಲದವ...'

'ಇನ್ನು ಸಾಕು, ಸುಮ್ಮನಿರು,' ಬೆಲ್ಲಾ ಅಂದಳು. ನನ್ನ ಪತ್ನಿ ನಿಜವಾಗಿಯೂ ಗಟ್ಟಿಮನಸ್ಸಿನ ಹೆಂಗಸು. 'ಪ್ರಸ್ತುತ ಕಾಲದ ಗಂಭೀರ ಸಮಸ್ಯೆಗಳನ್ನು ಲೆಕ್ಕಿಸಿ, 'ಬರುವ ರವಿವಾರ ನಿನ್ನ ವಿವಾಹ ನಿಶ್ಚಯ ಸಮಾರಂಭಕ್ಕೆ ಕೇವಲ ಹನ್ನೆರಡು ಅತಿಥಿಗಳನ್ನು ಮಾತ್ರ ಆಮಂತ್ರಿಸೋಣ.' ಅಂದಳು.

'ಊಹುಂ ನಾನು ಇದಕ್ಕೆ ಒಪ್ಪುವದಿಲ್ಲ' ಎಂದೆ.

'ಇದು ವಿವಾಹ ನಿಶ್ಚಯ ಅಷ್ಟೇ, ಮದುವೆಯೇನೂ ಅಲ್ಲವಲ್ಲ' ನನ್ನ ಪತ್ನಿ ಅಂದಳು.

'ಆದರೆ ಸ್ಟ್ರಾಶೋ ತನ್ನ ಭಾವೀ ಪತ್ನಿಯೊಡನೆ ಅತಿ ಸಲಿಗೆಯಿಂದ ವರ್ತಿಸುವಂಥವನು.' ನಾನೆಂದೆ, 'ಅವಳನ್ನು ಚುಂಬಿಸಲೂಬಹುದು ಮತ್ತು...' 'ಸದ್ಯದ ಪರಿಸ್ಥಿತಿಯಲ್ಲಿ ನಾನೂ ಸ್ಟ್ರಾಶೋನನ್ನೂ ಚುಂಬಿಸಬಹುದು' ನನ್ನ ಪತ್ನಿ ನುಡಿದಳು, 'ಈಗ ನಾನು ಮೊಸಳೆಯನ್ನೂ ಚುಂಬಿಸುತ್ತೇನೆ. ಅದೇನೆ ಇರಲಿ. ಸೀಗ್‌ಫ್ರೀಡ್ ಈ ಸ್ಥಳ ಬಿಡಲೇಬೇಕು.'

'ನಾನು ಈ ಸ್ಥಳ ಬಿಡಬೇಕು?' ಆತ ಥರ ಥರನೆ ನಡುಗುತ್ತ ಕೇಳಿದ. 'ಯಾಕಿಲ್ಲ?' ಅಂತ ಕೇಳಿದೆ, ನನ್ನ ಪತ್ನಿಯ ಮಾತಿನ ಅರ್ಥ ತಿಳಿಯದೇ...'ನೀನು ಈಗ ಸ್ಥಳ ಬಿಡಲೇಬೇಕು, ಸೀಗ್‌ಫ್ರೀಡ್', ಎಂದೆ.

ಕಟ್ಟಕಡೆಗೆ ಬೆಲ್ಲಾ ತನ್ನ ಮನಸ್ಸಿನಲ್ಲಿದ್ದುದನ್ನು ಹೊರಗೆಡುಹಿದಳು; ಸೀಗ್‌ಫ್ರೀಡ್‌ನನ್ನು ತನ್ನ ಕೋಣೆಗೆ ಸ್ಥಳಾಂತರಿಸಬೇಕೆಂದು ಅವಳ ವಿಚಾರವಾಗಿತ್ತು. ಆ ಕೋಣೆಯ ಒಳಸೇರಬೇಕಾದರೆ ನಮ್ಮ ಮಲಗುವ ಕೋಣೆಯಲ್ಲಿಯೇ ಹಾಯ್ದುಹೋಗಬೇಕು. ಅದರ ಬಾಗಿಲು ಕಪಾಟಿನ ಬಾಗಿಲಂತೆಯೇ ಕಾಣುತ್ತಿತ್ತು. ಬೆಲ್ಲಾ ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ಕಲ್ಪಿಸಿದ್ದಳು. ಈ ಕೋಣೆ ಸಂಪೂರ್ಣ ಮರೆಯಾಗುವಂತೆ, ಅದರ ಬಾಗಿಲೆದುರು ಒಂದು ದೊಡ್ಡ ಕಪಾಟನ್ನು ಎಳೆದಿಟ್ಟೆವು.

ಪ್ರತಿದಿನ ರಾತ್ರಿ ಸ್ವಲ್ಪ ಸಮಯ ಸೀಗ್‌ಫ್ರೀಡ್‌ನಿಗೆ ನೀರು, ಆಹಾರ ಕೊಡಲು, ಆತ ತನ್ನ ಮೂತ್ರದ ಮಡಿಕೆಯನ್ನು ಖಾಲಿಮಾಡಲು ಹಾಗು ಮುಂದಿನ ಇಪ್ಪತ್ನಾಲ್ಕು ಗಂಟೆಗಳಿಗಾಗಿ ಅವನ ಅವಶ್ಯಕತೆಗಳನ್ನು ವಿಚಾರಿಸಲು ನಾವು ಆ ಕಪಾಟನ್ನು ಮತ್ತೆ ಬದಿಗೆ ಸರಿಸಬೇಕಾಗುತ್ತಿತ್ತು. ಅವನ ಕೋಣೆಯಲ್ಲಿ ವಿದ್ಯುದ್ದೀಪದ ಬೆಳಕು ಮಾತ್ರ; ಹೊರಗಿನಿಂದ ಗಾಳಿ ಬರುವ ಹಾಗೆಯೆ ಇರಲಿಲ್ಲ. ಹೀಗಾಗಿ ಆ ಭಾರವಾದ ಕಪಾಟನ್ನು ನಾವು ಸರಿಸಿದಾಗ ಮಾತ್ರ ಸೀಗ್‌ಫ್ರೀಡ್ ತನ್ನ ಕೋಣೆಯ ಹೊರಗೆ ಬರಬಹುದಿತ್ತು. ಬಾಂಬುದಾಳಿಯಾದಾಗ, ನಾವೆಲ್ಲ ಸುರಕ್ಷಿತ ಸ್ಥಳಗಳಲ್ಲಿ ಅಡಗಿಕೊಂಡು, ಅವನೊಬ್ಬನೇ ಆ ಗೂಡಿನಲ್ಲಿ ಬಂದಿಯಾಗಿದ್ದು, ಸಹಾಯಕ್ಕಾಗಿ ಕೂಗಿಕೊಂಡರೂ, ಯಾರೂ ಅಲ್ಲಿ ಬಾರದಂತಹ ಪರಿಸ್ಥಿತಿ ಬಂದುದನ್ನು ಕಂಡು ನಮಗೂ ವ್ಯಥೆಯಾಗುತ್ತಿತ್ತು.

ಆದರೆ ನಾವಾದರೂ ಏನು ಮಾಡಬಹುದಾಗಿತ್ತು? ನಾವೆಲ್ಲ ಬಿಡಿಸಲಾರದ ತೊಡಕಿನಲ್ಲಿ ಸಿಕ್ಕಿಕೊಂಡಾಗಿತ್ತು. ಇನ್ನೇನೂ ಮಾಡುವ ಹಾಗಿರಲಿಲ್ಲ. ನಾವು ಕಷ್ಟಕ್ಕೆ ಈಡಾಗದೆಯೇ ಆತನ ಗುಟ್ಟನ್ನು ಬಹಿರಂಗಪಡಿಸಬಹುದಾಗಿತ್ತು. ಆದರೆ ಜೀವಂತ ಪ್ರಾಣಿಯನ್ನು ಶಿರಚ್ಛೇದಕ್ಕೆ ಒಪ್ಪಿಸುವುದು ನಮಗೆ ಇಷ್ಟವಿರಲಿಲ್ಲ.

ನಾನು ನ್ಯಾಯಾಧೀಶನಾಗಿಯೂ ದೇಶದ ಕಾನೂನಿನ ಪ್ರಕಾರ ಏಕೆ ವರ್ತಿಸಲಿಲ್ಲವೆಂದು ನೀನು ಪ್ರಶ್ನಿಸಬಹುದು. ನಾನು ತಪ್ಪುಮಾಡಿದ್ದು ನಿಜ, ಆದರೆ ಸಾಮಾನ್ಯವಾಗಿ ಬಹಿರಂಗವಾಗಿ ಒಪ್ಪಿಕೊಳ್ಳುವ ಮೂಲತತ್ವಗಳನ್ನು ನಿಜ ಜೀವನದಲ್ಲಿ ಯಾರೂ ಅಂಗೀಕರಿಸುವದಿಲ್ಲ. ಈ ಪರಿಸ್ಥಿತಿಯಲ್ಲಿ ನಾನು ಸೀಗ್‌ಫ್ರೀಡ್‌ನನ್ನು ಸುಮ್ಮನೆ ಹೊರಗಟ್ಟುವದು ಅಸಾಧ್ಯವಾದ ಮಾತು. ನಾನು ಒಂದು ವೇಳೆ ಹಾಗೆಮಾಡಿದ್ದೇ ಆದರೆ ಖಂಡಿತ ಅವನು ಆತ್ಮಹತ್ಯೆಮಾಡಿಕೊಳ್ಳುತ್ತಿದ್ದ. ಇಲ್ಲವೆ ಇನ್ನಾರಿಂದಲೋ ಕೊಲ್ಲಲ್ಪಡುತ್ತಿದ್ದ. ಅಲ್ಲದೆ ಅವನನ್ನು ಮನೆಯಲ್ಲಿ ಇಟ್ಟುಕೊಳ್ಳುವುದರಲ್ಲಿ ಒಂದು ಸ್ವಾರ್ಥವೂ ಇತ್ತು. ಅವನು ನಮ್ಮ ಗುಟ್ಟನ್ನು ಹೊರಗೆಡುಹದಿದ್ದರೂ, ಅವನಿಗೆ ಚಿತ್ರಹಿಂಸೆ ವಿಧಿಸಿ, ಕೊನೆಯಲ್ಲಿ ಆತ ಎಲ್ಲವನ್ನೂ ತಪ್ಪೊಪ್ಪಿಕೊಳ್ಳುವ ಪರಿಸ್ಥಿತಿಗೆ ತರುತ್ತಿದ್ದರು. ಮೇಲಾಗಿ ನಾವು ಈ ವರೆಗೆ ಅವನಿಗಾಗಿ ಸಾಕಷ್ಟು ತಾಪತ್ರಯಗಳನ್ನೂ ಅನುಭವಿಸಿದ್ದಾಗಿತ್ತು. ಈ ಕಾರಣಕ್ಕಾಗಿ ಕೊನೆಯವರೆಗೂ, ಬಂದದ್ದೆಲ್ಲಾ ಬರಲಿ ಎಂದು ಹೀಗೇ ಸಾಗಬೇಕೆಂದು ನಿರ್ಧರಿಸಿದೆವು.

ಅವನಿಗಾಗಿ ರೇಶನ್ ಕಾರ್ಡು ಮಾಡಿಸದೇ ಇದ್ದ ಕಾರಣ ನಮ್ಮ ಆಹಾರದಲ್ಲಿಯೇ ಸ್ವಲ್ಪ ಭಾಗವನ್ನು ಅವನಿಗೆ ಕೊಡಬೇಕಾಗುತ್ತಿತ್ತು.

ಕೊನೆಕೊನೆಗಂತೂ ಆತ ನನಗೆ ದುಸ್ವಪ್ನದ ಹಾಗೆಯೇ ಭಾಸವಾಗತೊಡಗಿದ. ರಾತ್ರಿ ಮಲಗುವಾಗ ಅವನದೇ ಚಿಂತೆ. ಮಧ್ಯರಾತ್ರಿಯಲ್ಲಿ ಕೆಟ್ಟ ಕನಸು ಬಿದ್ದು ಒಮ್ಮೆಲೆ, 'ಸೀಗ್‌ಫ್ರೀಡ್' ಅಂತ ಚೀರುತ್ತ ಏಳುತ್ತಿದ್ದೆ. ಹಗಲು ಹೊತ್ತಿನಲ್ಲೂ ಕಚೇರಿಯಲ್ಲಿರಲಿ, ಬೀದಿಯಲ್ಲಿ ನಡೆಯುತ್ತಿರಲಿ ರಾತ್ರಿಯ ಐದು ನಿಮಿಷಗಳ ಕಾಲ ಅವನನ್ನು ಬೋನಿನಿಂದ ಕಾಡು ಮೃಗವನ್ನು ಹೊರಗೆ ಬಿಡುವಂತಿರುವ ಅದೇ ಭಯಾನಕ ಚಿತ್ರ ಕಣ್ಣು ಮುಂದೆ ಕಟ್ಟುತ್ತಿತ್ತು. ಅವನಾದರೂ ಗಾಳಿ, ಬೆಳಕು ಇಲ್ಲದೆ ವ್ಯಾಧಿಗ್ರಸ್ಥನಂತೆ ತೋರುತ್ತಿದ್ದ.

*

'ಪುಣ್ಯಕ್ಕೆ ಆ ಕಲಾವಿದ್ಯಾರ್ಥಿ ಮಾತ್ರ, ಹೊಸ ಸಮಸ್ಯೆಗಳನ್ನೇನೂ ತಂದೊಡ್ಡಲಿಲ್ಲ. ವಿವಾಹ ನಿಶ್ಚಯ ಸಮಾರಂಭ ನಡೆದಾಗ ಮಾರಿಯಾನ್ ತನ್ನ ಭಾವೀ ಪತಿಗೆ ಯಾವುದೋ ನೆಪದಿಂದ, ಇಡೀ ಮನೆಯನ್ನು ತೋರಿಸಿದಳು. ಈ ಮೊದಲು ಬೀಗ ಹಾಕಿದ ಕೋಣೆ ಹಾಗು ನಮ್ಮ ಮಲಗುವ ಕೋಣೆಯನ್ನು ನೋಡಿದಾಗ ಸ್ಮಾಶೋ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಲಿಲ್ಲ. ಮನೆಯ ಪ್ರತಿಯೊಂದು ಕೋಣೆಯಲ್ಲೂ ಮಾರಿಯಾನ್‌ಳನ್ನು ಚುಂಬಿಸಿದ. ಸೀಗ್‌ಫ್ರೀಡ್ ರೊಸೆನ್ನನ ಪುಸ್ತಕದ ಬಗ್ಗೆಯೂ ಪ್ರಸ್ತಾಪಿಸಲಿಲ್ಲ.

ಒಂದು ದಿನ ಕಲ್ಪನಾತೀತವಾದ ಘಟನೆ ಸಂಭವಿಸಿತು; ಸೀಗ್‌ಫ್ರೀಡನಿಗೆ ಅಸ್ವಾಸ್ಥ್ಯವುಂಟಾಯಿತು. ಜ್ವರ ಛಳಿ, ಮೈ–ಕೈ ಶೂಲೆ, ಗಂಟಲು ನೋವುಗಳಿಂದ ಪೀಡಿತನಾದ. ಚಿತ್ತ ಭ್ರಮೆಯೂ ಆಯಿತು. ನಾವು ಪೀಠೋಪಕರಣಗಳನ್ನು ಮಾರುವವರಂತೆ, ಆ ಭಾರವಾದ, ದೊಡ್ಡ ಕಪಾಟನ್ನು ಸದಾಕಾಲ ಹಿಂದು ಮುಂದೆ ಸರಿಸುತ್ತಾ ಇರಬೇಕಾಯಿತು.

ಜರದ ಉನ್ಮಾದದಲ್ಲಿ ಸೀಗ್‌ಫ್ರೀಡ್ ನಮ್ಮ ಮೇಲೆ ಬಯ್ಗುಳುಗಳ ಮಳೆಯನ್ನೇ ಸುರಿಸುತ್ತಿದ್ದ. ಆತನು ನಮ್ಮನ್ನು ದ್ವೇಷಿಸುತ್ತಿದ್ದಾನೆಂಬುದು ಸ್ಪಷ್ಟನಾಗಿತ್ತು. ನಾವು ನಾಜಿಗಳು, ನಮಗೆ ಯಹೂದ್ಯರನ್ನು ಕಂಡರೆ ಆಗುವುದಿಲ್ಲ ಎಂದು ಕೂಗುತ್ತಿದ್ದ. ನಮ್ಮ ಮನೆಯಲ್ಲಿಯೇ ಯಾತನಾಶಿಬಿರವನ್ನು ರಚಿಸಿದ್ದೇವೆಂದೂ ನಿಂದಿಸಿದ. ನಾನು ಅವನಿಗೆ ಮಾತ್ರೆಗಳನ್ನು ಕೊಟ್ಟಾಗ, 'ಮನೆಯಿಂದ ಶವವನ್ನು ಸಾಗಿಸುವದು ಅಷ್ಟೇನೂ ಸುಲಭವಲ್ಲ' ಎಂದು ವ್ಯಂಗ್ಯವಾಗಿ ನುಡಿದ. ಅವನು ನೀರು, ಆಹಾರ, ಎಲ್ಲಾ ನಿರಾಕರಿಸಿ, ದಿನೇ ದಿನೇ ಕ್ಷೀಣಿಸುತ್ತಿದ್ದ. ಅವನಿಗೆ ಜ್ವರ ಬಾಧೆಯೂ ಹೆಚ್ಚಾದಾಗ, ನಾವು ದಿಕ್ಕುಗಾಣದೇ ಹತಾಶರಾಗಿಬಿಟ್ಟೆವು.

ಕೊನೆಗೆ, ಆಳವಾಗಿ ವಿಚಾರಿಸಿದ ನಂತರ ಪಟ್ಟಣದ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಆ ತರುಣ ಶಸ್ತ್ರವೈದ್ಯನನು ಕರೆಸಿ, ಅವನಿಗೆ ನಮ್ಮ ಗುಟ್ಟನ್ನು ತಿಳಿಸಿಬಿಡಬೇಕೆಂದು ನಿರ್ಧರಿಸಿದೆವು. ತನ್ನನ್ನು ಪ್ರೇಮಿಸುತ್ತಿದ್ದ ಆ ವೈದ್ಯನಿಗೆ ಎಲ್ಲವನ್ನೂ ತಿಳಿಸಿ ಹೇಳುವುದು. ಈಡಿತ್‌ಳ ಜವಾಬುದಾರಿಯಾಯಿತು. 'ಫ್ರಿಜ್‌ನೊಡನೆ ಮಾರಿಯಾನ್ ವರ್ತಿಸಿದ ಹಾಗೆಯೇ ನಾನೂ ಎರಿಕ್‌ನೊಡನೆ ವರ್ತಿಸುವೆ' ಎಂದು ಹೇಳಿ, ಮರುದಿನ ಬೆಳಿಗ್ಗೆ ಆ ಯುವಕ ಡಾಕ್ಟರ್ ಎರಿಕ್ ಕೊಲ್ಬೆಯೊಡನೆ ಮನೆಗೆ ಬಂದಳು. ಸೀಗ್‌ಫ್ರೀಡನನ್ನು ಮಾರಿಯಾನ್‌ಳ ಕೋಣೆಗೆ ಸ್ಥಳಾಂತರಿಸಿ, ವೈದ್ಯನಿಗೆ, ಈತ ಹಿಂದಿನ ದಿನವೇ ಇಂಥಾ ಸ್ಥಿತಿಯಲ್ಲಿ ಇಲ್ಲಿಗೆ ಬಂದಿದ್ದ; ಇಷ್ಟು ದಿನವೆಲ್ಲಾ ಆತ ಬರ್ಲಿನ್ನಿನಲ್ಲೆ ತಲೆ ಮರೆಸಿಕೊಂಡಿದ್ದನೆಂದು ಹೇಳಬೇಕೆಂದು ನಿರ್ಣಯಿಸಿದ್ದೆವು. ಇದನ್ನು ರೊಸೆನ್ನನಿಗೆ ವಿವರಿಸಿ, ಅದನ್ನು ಸರಿಯಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದೂ ಎಂಥ ಪ್ರಸಂಗದಲ್ಲಿಯೂ ನಮ್ಮ ಗುಟ್ಟು ರಟ್ಟು ಮಾಡಬಾರದೆಂದೂ ಎಚ್ಚರಿಕೆ ಕೊಟ್ಟೆವು. ಆತ ಸುಮ್ಮನೆ, ನಿರುತ್ತರನಾಗಿ, ಶೂನ್ಯ ದೃಷ್ಟಿಯಿಂದ ನಮ್ಮನ್ನು ದಿಟ್ಟಿಸಿದ. ಅವನಿಗೆ ನಮ್ಮ ಮಾತಿನ ಅರ್ಥವಾಯಿತೋ ಇಲ್ಲವೋ ತಿಳಿಯಲಿಲ್ಲ. ಒಂದೆರಡು ದಿನಗಳೂ ಸಹ ಆತ ಬದುಕಲಿಕ್ಕಿಲ್ಲ ಎನ್ನುವ ಹಾಗೆ ಕಾಣಿಸುತ್ತಿದ್ದ.

ಡಾ. ಕೊಲ್ಬೆ ಬಂದು ಸೀಗ್‌ಫ್ರೀಡ್‌ನನ್ನು ಪರೀಕ್ಷಿಸಿದ. ಕತ್ತಲಾದ ಮೇಲೆ ನಾವು ಅವನ ಬಟ್ಟೆ ಬದಲಾಯಿಸಬೇಕು; ಹಾಗೂ ಕೊಲ್ಬೆ ಸ್ವತಃ ಬಂದು ರೋಗಿಯನ್ನು ತನ್ನ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದೂರದಲ್ಲೆ ಅವನನ್ನಿಳಿಸಬೇಕು. ಕೊಸೆನ್ ಅಲ್ಲಿ ಡಾ. ಕೊಲ್ಬೆಗಾಗಿ ವಿಚಾರಿಸಬೇಕು. ಆವಾಗ ಕೊಲ್ಬೆ ಹೊರಬಂದು, ಅವನನ್ನು ಒಳಗೆ ಕರೆದುಕೊಂಡು ಹೋಗಿ ವೈದ್ಯಕೀಯ ಕಾರಣಗಳಿಂದಲ್ಲದೆ ಪೋಲೀಸರನ್ನು ವಂಚಿಸುವ ಉದ್ದೇಶದಿಂದ ಶಸ್ತ್ರಕ್ರಿಯೆ ನಡೆಸಬೇಕು ಎಂದು ನಿರ್ಧರಿಸಿದೆವು. ಹ್ಯಾಂಬರ್ಗಿನಲ್ಲಿ ನಡೆದ ಬಾಂಬು ದಾಳಿಯ ನಂತರ ನಿರಾಶ್ರಿತನಾದೆನೆಂದು ಹೇಳಿ, ರೊಸೆನ್ ಸೀಗ್‌ಫ್ರೀಡ್ ಕಲ್ಪಿತ ಹೆಸರನ್ನು ನಮೂದಿಸಬೇಕಾಗಿತ್ತು.

'ಇನ್ನುಳಿದದ್ದೆಲ್ಲ ಪರಮಾತ್ಮನ ಕೈಯ್ಯಲ್ಲಿದೆ ನಿನಗೆಲ್ಲ ಅರ್ಥವಾಯಿತೇ?' ಡಾ. ಕೊಲ್ಬೆ ಸೀಗ್‌ಫ್ರೀಡ್‌ನನ್ನು ಕೇಳಿದ.

ಸೀಗ್‌ಫ್ರೀಡ್ ತಿಳಿಯಿತೆಂಬಂತೆ ಗೋಣುಹಾಕಿದ. ಡಾ.ಕೊಲ್ಬೆ ಅವನಿಗೆ ಚುಚ್ಚುಮದ್ದು ಹಾಗು ಕೆಲವು ಮಾತ್ರೆಗಳನ್ನು ಕೊಟ್ಟ ಬಳಿಕ, ಕೆಲವು ಗಂಟೆಗಳ ಕಾಲ ನಿದ್ರಿಸಿದ. ಸಾಯಂಕಾಲ ಅವನ ಬಟ್ಟೆ ಬದಲಾಯಿಸಿ, ಡಾ. ಕೊಲ್ಬೆಯೊಡನೆ ಕಳಿಸಿದೆವು. ಸುದೈವದಿಂದ ಸೀಗ್‌ಫ್ರೀಡ್ ಮನೆ ಬಿಟ್ಟುಹೋಗುತ್ತಿರುವುದು ಯಾರ ಕಣ್ಣಿಗೂ ಬೀಳಲಿಲ್ಲ.

ಅದೆಲ್ಲಾ ನಮ್ಮ ಅದೃಷ್ಟವೇ ಅನ್ನಬಹುದು. ಡಾ. ಕೊಲ್ಬೆ ಸಮರ್ಥ ವೈದ್ಯ. ನಮ್ಮ ಈಡಿತ್‌ಳನ್ನೂ ತುಂಬಾ ಪ್ರೇಮಿಸುತ್ತಿದ್ದ. ಅಂತೂ ತನ್ನ ದಕ್ಷತೆಯಿಂದಲೂ ದೇವರ ಕೃಪೆಯಿಂದಲೂ ಆತ ಸೀಗ್‌ಫ್ರೀಡ್‌ನನ್ನು ಗುಣಪಡಿಸಿದ.

ಸೀಗ್‌ಫ್ರೀಡ್ ಐದು ವಾರಗಳ ವರೆಗೆ ಡಾ. ಕೊಲ್ಬೆಯ ವಾರ್ಡಿನಲ್ಲಿ ನರಳುತ್ತ ಬಿದ್ದುಕೊಂಡಿದ್ದ. ಅವನಿಗೆ ಹೊರಗೆ ಅಡ್ಡಾಡಲು ಅಪ್ಪಣೆ ಸಿಕ್ಕ ಮೊದಲ ದಿನವೇ ನಮ್ಮ ಮನೆಗೆ ಬಂದ. ಅವನ ಭೇಟಿಯಿಂದ ನಮಗೇನೂ ಸಂತೋಷವಾಗಲಿಲ್ಲ. ಆತ ತನ್ನ ಹಸ್ತಪ್ರತಿಗಾಗಿ ಬಂದಿದ್ದ. ಆಗ ನಾವು ಅವನ ಇತರ ಸಾಮಾನುಗಳ ಜೊತೆಗೆ ಅದನ್ನೂ, ಸುಟ್ಟು ಹಾಕಿದ ವಿಷಯವನ್ನು ನಿರ್ವಾಹವಿಲ್ಲದೆ ಹೇಳಬೇಕಾಯಿತು. 'ಇಷ್ಟು ಬೇಗನೇ ಸುಟ್ಟುಬಿಟ್ಟಿದ್ದೀರಾ? ಹಾಗಾದರೆ ನಾನು ಇಲ್ಲಿ. ಇರುವುದರಲ್ಲಿ ಯಾವ ಅರ್ಥವೂ ಇಲ್ಲ,' ಎಂದು ಎದ್ದು ನಿಂತ.

ನಾವು ಏನೂ ಮಾತನಾಡಲಿಲ್ಲ. 'ಇನ್ನೊಂದು ಮಾತು,' ರೋಸೆನ್ ಹಿಂದಿರುಗಿ ಬರುತ್ತ, 'ನಾನು ನಿಮಗೆ ತುಂಬಾ ಋಣಿ' ಅಂದ.

ನಾವು ಅದಕ್ಕೂ ಉತ್ತರಿಸಲಿಲ್ಲ.

'ಹಾಗಾದರೆ ಸರಿ, ನಿಮಗೆ ಧನ್ಯವಾದಗಳು. ತೊಂದರೆ ಕೊಟ್ಟಿದ್ದಕ್ಕೆ ಕ್ಷಮಿಸಬೇಕು' ಎಂದು ಹೇಳಿ ಹೊರಟು ಹೋದ.

*

ನಂತರ ನಾವು ಬಹಳ ಹೊತ್ತಿನ ವರೆಗೆ ಮೌನವಾಗಿ ಕುಳಿತಿದ್ದೆವು. ಇನ್ನು ನಾಲ್ಕು ದಿನಗಳಲ್ಲಿ ಆತ ಗುಣಹೊಂದಿ ಆಸ್ಪತ್ರೆಯಿಂದ ಬಿಡುಗಡೆಯಾಗುವವನಿದ್ದ. ಆ ಬಳಿಕ ಅವನು ಎಲ್ಲಿ ಹೋಗಬೇಕೆಂಬ ವಿಷಯವನ್ನು ಅವನಾಗಲಿ ನಾವಾಗಲಿ ಎಂದೂ ಪ್ರಸ್ತಾಪಿಸಲಿಲ್ಲ.

ಆದರೆ ಅವನ ಬಿಡುಗಡೆಯಾಗಲೇ ಇಲ್ಲ. ಆತ ನಮ್ಮ ಮನೆಗೆ ಬಂದ ಮರುದಿನವೇ ಇಬ್ಬರು 'ಗೆಸ್ಟಪೋ' ಅಧಿಕಾರಿಗಳು ಆಸ್ಪತ್ರೆಯಲ್ಲಿ ಪ್ರತ್ಯಕ್ಷರಾಗಿ, ಮೊದಲು ಬಲು ಮರ್ಯಾದೆಯಿಂದ ಅವನನ್ನು ವಿಚಾರಿಸಿದರು. ಆತ ಬಟ್ಟೆ ಬದಲಾಯಿಸುವ ವರೆಗೆ ತಡೆದು, ಅನಂತರ ತಮ್ಮೊಡನೆ ವಿಚಾರಣೆಗಾಗಿ ಕರೆದುಕೊಂಡು ಹೋದರು. ಅದೇ ದಿನ ಡಾ. ಕೊಲ್ಬೆ ಈಡಿತ್‌ಳಿಗೆ ಫೋನು, ಮಾಡಿ ಅವಳು ಆಸ್ಪತ್ರೆಗೆ ಬರಬೇಕೆಂದು ತಿಳಿಸಿದ. ಈ ಎಲ್ಲ ಸಂಗತಿಯನ್ನು ಅವಳಿಗೆ ಹೇಳಿ, ನಾವೆಲ್ಲರೂ ಸ್ವಲ್ಪ ಹುಷಾರಾಗಿರುವಂತೆ ಎಚ್ಚರಿಕೆ ಇತ್ತ.

ಆ ರಾತ್ರಿ 'ಗೆಸ್ಟಪೋ'ದವರು ರೋಸೆನ್‌ನನ್ನು ಸ್ಟ್ರೆಚರ್ ಮೇಲೆ ತಿರುಗಿ ತಂದು ಆಸ್ಪತ್ರೆಯಲ್ಲಿ ಬಿಟ್ಟುಹೋದರು. ರಾತ್ರಿಯೆಲ್ಲಾ ಅವನು ನೋವಿನಿಂದ ಕಿರುಚುತ್ತಲಿದ್ದ. ಬೆಳಿಗ್ಗೆ ಡಾ. ಕೊಲ್ಬೆ ಬಂದೊಡನೆ, ರಾತ್ರಿ ಪಾಳಿಯ ದಾದಿಯು ಅವನನ್ನು ರೋಗಿಯ ಮಂಚದ ಹತ್ತಿರ ಕರೆದುಕೊಂಡು ಹೋಗಿ ಆಸ್ಪತ್ರೆಯ ಸುತ್ತಲೂ 'ಗೆಸ್ಟಪೋ' ದವರು ಕಣ್ಣಿರಿಸಿದ್ದಾರೆಂದು ಮೆಲ್ಲನೆ ಹೇಳಿದಳು.

ದಾದಿಯನ್ನು ಕಳಿಸಿ, ಡಾ. ಕೊಲ್ಬೆ ರೋಗಿಯ ಹತ್ತಿರ ಕೆಲ ಕಾಲ ಒಬ್ಬನೇ ಇದ್ದು, ಅನಂತರ ಅವನಿಗೆ ನಿದ್ದೆ ಬರುವ ಔಷಧಿಯನ್ನು ಕೊಟ್ಟ, ಅದೇ ಸಂಜೆ ಕೊಲ್ಬೆ ನಮ್ಮ ಮನೆಗೆ ಬಂದಾಗ, ನಾವೆಲ್ಲರೂ ಉದ್ವಿಗ್ನರಾಗಿ ಅವನ ಸುತ್ತಲೂ ನೆರೆದೆವು. ರೋಸೆನ್ನನ ವಿಚಾರಣೆಯ ಬಳಿಕ, ನಮ್ಮನ್ನೂ ಬಂಧಿಸುವರೆಂಬ ಹೆದರಿಕೆ ನಮಗೆ ಇದ್ದೇ ಇತ್ತು.

'ಏನು ಸಮಾಚಾರ?' ಎಂದು ಕೇಳಿದೆ.

ಡಾ. ಕೊಲ್ಬೆ ಮೌನವಾಗಿಯೇ ಇದ್ದ. ಕೊನೆಗೆ ಧೈರ್ಯ ತಂದುಕೊಂಡು, 'ಈತ ನಿಜಕ್ಕೂ ಧೈರ್ಯಶಾಲಿ–ನಾನವನನ್ನು ಗೌರವಿಸುತ್ತೇನೆ. ನನಗೆ

ವಿಷ ಕೊಟ್ಟು ಬಿಡಿ' ಎಂದಿಷ್ಟೇ ನನಗೆ ಹೇಳಿದ. ಅವನಿಗೆ ಅಮಾನುಷ ರೀತಿಯಲ್ಲಿ ಚಿತ್ರಹಿಂಸೆ ವಿಧಿಸಿದ್ದಾರೆ ಅವರೂ ಆತ ನನ್ನ ಅಥವಾ ನಿಮ್ಮ ಕುಟುಂಬದವರ ಗುಟ್ಟು ಹೊರಗೆಡುಹಿಲ್ಲವೆಂದು ಆಣೆಯಿಟ್ಟು ಪ್ರಮಾಣ ಮಾಡಿದ. ಅವನ ಬಾಯಿಯಿಂದ ಅವರಿಗೆ ಏನೂ ಹೊರಗೆಡು-ಹಲು ಸಾಧ್ಯವಾಗಿಲ್ಲವೆಂದು ನಾನಂತೂ ನಂಬುತ್ತೇನೆ. ಏಕೆಂದರೆ ಈ ಮಧ್ಯಾಹ್ನ ಅವರು ಮತ್ತೆ ನನಗೆ ಫೋನು ಮಾಡಿ, ೭೭ನೇ ನಂಬರಿನ ಕೋಣೆಯ ರೋಗಿಯನ್ನು ಇನ್ನೊಂದು ವಿಚಾರಣೆಗಾಗಿ ಆದಷ್ಟು ಬೇಗನೆ ಕಳಿಸಲು ವ್ಯವಸ್ಥೆ ಮಾಡುವಂತೆ ತಿಳಿಸಿದರು. ಆತ ಹಾಸಿಗೆ ಬಿಟ್ಟು ಏಳಲಿಕ್ಕೇ ಒಂದು ವಾರ ಬೇಕು ಎಂದು ಹೇಳಿದೆ. ಅದಕ್ಕೆ ಅವರು ನನ್ನೊಡನೆ ಭಾರೀ ಚೌಕಾಸಿ ನಡೆಸಿ ಕೊನೆಗೆ ಐದು ದಿನಗಳ ಅವಧಿಕೊಟ್ಟರು.' ಎಂದ. 'ಮುಂದೇನು?' ಎಂದು ಕೇಳಿದೆ, 'ಡಾ. ಕೊಲ್ಬೆ, ನನ್ನ ಕುಟುಂಬದ ಯೋಗ ಕ್ಷೇಮವನ್ನು ನಾವು ನೋಡಿಕೊಳ್ಳಬೇಕು. ಮೇಲಾಗಿ ನಾನೊಬ್ಬ ಸರಕಾರಿ ಅಧಿಕಾರಿ,' ನಾನು ನುಡಿದೆ,

'ಸರಕಾರಿ ಅಧಿಕಾರಿ?' ಡಾಕ್ಟರನೆಂದ. 'ಹೌದು. ನ್ಯಾಯಾಧೀಶ.' 'ಹಾಗಾದರೆ ಹೇಳಿ, ಈಗ ನಾನು ಮಾಡಿದ್ದಕ್ಕೆ ಎಂಥ ಶಿಕ್ಷೆ ವಿಧಿಸುತ್ತೀರಿ'. 'ಮರಣ ದಂಡನೆ' ನಾನೆಂದೆ.

'ಮರಣ ದಂಡನೆ?' ಅಂತ ಆಶ್ಚರ್ಯದಿಂದ ಕೇಳಿದ.

'ಖಂಡಿತವಾಗಿ ಅದೇ. ಕಾನೂನು ಹೇಳುವುದೂ ಅದೆ.'

ಕೆಲವು ನಿಮಿಷಗಳ ನಂತರ ಅವನೆಂದ: '೭೭ನೇ ನಂಬರಿನ ಕೋಣೆಯಲ್ಲಿರುವ ಈ ಯೆಹೂದ್ಯ ತುಂಬಾ ಕಾಯಿಲೆಗ್ರಸ್ತನಾಗಿದ್ದೇನೆ. ಅವನಿಗೆ ಎರಡನೆ ಬಾರಿ ಶಸ್ತ್ರಕ್ರಿಯೆಮಾಡಬೇಕೋ ಹೇಗೆ ಎಂದು ಯೋಚಿಸುತ್ತಿದ್ದೇನೆ. ನೀವು ಅವನ ಪರಮ ಸ್ನೇಹಿತರು ಅಥವಾ ಆಪ್ತ ಬಂಧುಗಳು...'

'ಸಾಕು, ಬಾಯಿ ಮುಚ್ಚು' ಎಂದು ಕೂಗಿಕೊಂಡೆ. ಯೆಹೂದ್ಯನೊಬ್ಬ ನನ್ನ ಬಂಧುವಾಗುವ ವಿಚಾರಣೆ ನನಗೆ ಅಸಹನೀಯವಾಗಿತ್ತು.

'ಕ್ಷಮಿಸಿ' ಎಂದು ಉತ್ತರಿಸಿದ, 'ಬಹುಶಃ ಈ ರೊಸೆನ್ ರಹಸ್ಯವಾಗಿ ನಿಮ್ಮ ಅಳಿಯನಾಗಿದ್ದಾನೋ ಏನೊ ಅಂದುಕೊಂಡಿದ್ದೆ. ಈ ಕಾಲದಲ್ಲಿ ಕೇವಲ ಮಿತ್ರರಿಗಾಗಿ ಯಾರೂ ಇಂತಹ ಅಪಾಯವನ್ನು ಎದುರು ಹಾಕಿಕೊಳ್ಳುವುದಿಲ್ಲ.'

'ಅವನು ಶಾಲೆಯಲ್ಲಿ ನನ್ನ ಸಹಪಾಠಿ.'

'ಹಾಗಾದರೆ ಇದೆಂಥಾ ಆಶ್ಚರ್ಯ! ಸರಿ ಹಾಗಾದರೆ ಈ ಎರಡನೆ ಶಸ್ತ್ರಕ್ರಿಯೆ ಮಾಡಲು ನಿಮ್ಮ ಆಕ್ಷೇಪಣೆಯಿಲ್ಲ ತಾನೇ? ನನಗಷ್ಟೇ ತಿಳಿಯಬೇಕಾದದ್ದು. ಅದಕ್ಕೇ ನಾನು ಇಲ್ಲಿಗೆ ಬಂದದ್ದು.'

'ಎರಡನೆ ಶಸ್ತ್ರಕ್ರಿಯೆಯಿಂದ ಏನು ಪ್ರಯೋಜನ?' ಎಂದು ಕೇಳಿದೆ, 'ಅವನಿಗೆ ಜೀವನದಲ್ಲಿ ಇನ್ನಾವುದಾದರೂ ಅಪೇಕ್ಷೆಯಿದೆಯೆ?'

'ಏನು? ಯಾವ ಅಪೇಕ್ಷೆ?' ಡಾ. ಕೊಲ್ಬೆ ಗಟ್ಟಿಯಾಗಿ ಅನ್ನುತ್ತ ಎದ್ದು ನಿಂತ, 'ದೇವರ ದಯೆಯಿಂದ...'

'ಅಂದರೆ ಈ ಎರಡನೆ ಶಸ್ತ್ರಕ್ರಿಯೆಯಿಂದ ಆತ ನಿಸ್ಸಂಶಯವಾಗಿ...' ಡಾ. ಕೊಲ್ಬೆ ಉತ್ತರಿಸಲಿಲ್ಲ. ನಾವಾದರೂ ಅವನ ಮಾತಿನ ಅರ್ಥ ಗ್ರಹಿಸಿದ್ದೆವು. ನನ್ನ ಹಣೆಯ ಮೇಲೆ ಬೆವರ ಹನಿಗಳು ಮೂಡಿದವು. 'ಡಾಕ್ಟರ್' ಎಂದು ನಿಧಾನವಾಗಿ ನುಡಿದೆ, 'ನೀವು ವೈದ್ಯಕೀಯ ಪ್ರಮಾಣ ಮಾಡಿದವರು. ಈ ಶಸ್ತ್ರಕ್ರಿಯೆ ನಿಮಗೆ ಅವಶ್ಯವೆನಿಸಿದರೆ, ರೋಗಿಯ ಆಪ್ತಮಿತ್ರರಾದ ನಾವು ನಿಮಗೆ ತುಂಬಾ ಕೃತಜ್ಞರು.'

'ರೋಗಿಗೆ ಏನಾದರೂ ಸಂದೇಶ ಕಳಿಸಲಿಚ್ಛಿಸುವಿರಾ?'

ನಾನು ಇಲ್ಲವೆಂದು ತಲೆಯಾಡಿಸಿದೆ.

ಆ ಎರಡನೆ ಶಸ್ತ್ರಕ್ರಿಯೆಯ ನಂತರ ಸೀಗ್ ಫ್ರೀಡ್ ರೊಸೆನ್ ಬದುಕಲಿಲ್ಲ.

ಅನಂತರ ಇಬ್ಬರು ಗೆಸ್ಟಪೋ ಅಧಿಕಾರಿಗಳು ಆಸ್ಪತ್ರೆಗೆ ಹೋಗಿ, ಮೃತಪಟ್ಟ ರೋಗಿಯ ವಿಷಯವಾಗಿ ವಿಚಾರಿಸಿದರು. ಆತನ ಬಗ್ಗೆ ತನಗೇನೂ ಗೊತ್ತಿಲ್ಲವೆಂದು ಕೊಲ್ಬೆ ಹೇಳಿದ. ಆಗ ಆ ಅಧಿಕಾರಿಗಳು ಡಾಕ್ಟರನಿಗೆ ಹೇಳಿದರು: ಫ್ರೀಡ್‌ರಿಕ್ ಬಾರ್ಶರ್ ಎಂಬ ಹೆಸರಿನ

ಈ ಯಹೂದ್ಯ ನಿಜವಾಗಿಯೂ ಸೀಗ್‌ಫ್ರೀಡ್ ರೊಸೆನ್ ಎಂಬ ಕಲಾತಜ್ಞ.'

ಹೃದಯಾಘಾತದಿಂದ ಮೃತಪಟ್ಟನೆಂದು ಹೇಳಲಾದ ಸೀಗ್‌ಫ್ರಿಡ್ ರೊಸೆನ್‌ನ ಮರಣಾನಂತರ ಈಡಿತ್ ನಾವು ಎಷ್ಟು ಹೇಳಿದರೂ ಕೇಳದೆ ಡಾ. ಕೊಲ್ಬೆಯೊಡನೆ ಎಲ್ಲ ಸಂಬಂಧವನ್ನೂ ಕಡಿದುಕೊಂಡಳು.

*

ತನ್ನ ಕಥೆ ಮುಗಿಸಿ, ಹೆರ್ ಫ್ಲೋಮ್ ಕೇಳಿದ. 'ಲೊಫೆರ್, ಈಗ ಹೇಳು, ರೊಸೆನ್ನನ ಸಾವಿನ ಪ್ರಕರಣದಲ್ಲಿ ನಾನು ಅಪರಾಧಿಯೇ? ನಾನೇ ಅವನ ಕೊಲೆಗಾರನೇ?'

'ಓಹ್ ದೇವರೇ!' ಎಂದು ಉದ್ಗರಿಸುತ್ತ ಲೊಫೆರ್ ಗಡಿಯಾರ ನೋಡಿ, ತಟ್ಟನೆದ್ದು ನಿಂತ, 'ಆಗಲೇ ನಾಲ್ಕು ಗಂಟೆಯಾಗಿದೆ! ನಾನು ತ್ವರೆ ಮಾಡದಿದ್ದರೆ, ಬರ್ಲಿನ್ ರೈಲುಗಾಡಿ ತಪ್ಪಿಹೋಗುತ್ತದೆ. ದಯವಿಟ್ಟು ಕ್ಷಮಿಸಿ, ಹೆರ್ ಫ್ಲೋಮ್, ಆದರೆ ನಾನೀಗ ಹೊರಡಲೇ ಬೇಕು' ಅಂದ.

'ಅದು ಸರಿ. ಆದರೆ ಹೋಗುವ ಮೊದಲು ನನ್ನ ಪ್ರಶ್ನೆಗೆ ಒಂದಿಷ್ಟು ಉತ್ತರ ಕೊಡಯ್ಯಾ' ಹೆರ್ ಫ್ಲೋಮ್ ಕೇಳಿದ.

'ಉತ್ತರ?' ಲೊಫೆರ್ ಕೇಳಿದ, 'ನನ್ನನ್ನು, ನಿನ್ನ ಹಾಗೆ ನ್ಯಾಯಾಧೀಶನನ್ನಾಗಿ ಮಾಡದೇ ಇದ್ದುದಕ್ಕೆ ಪರಮಾತ್ಮನಿಗೆ ಧನ್ಯವಾದಗಳನ್ನು ಅರ್ಪಿಸಬೇಕು' ಎನ್ನುತ್ತ ಲೊಫೆರ್ ಹೊರಟು ಹೋದ.

ಫ್ಲೋಮ್ ಕುಟುಂಬದವರೆಲ್ಲರೂ ಸ್ತಬ್ಧರಾಗಿ ಕುಳಿತಿದ್ದರು. ಕೊನೆಗೆ ಹೆರ್ ಫ್ಲೋಮ್ ಎದ್ದು, ಮದ್ಯದ ಕೊನೆಯ ಗುಟುಕನ್ನು ಗುಟುಕರಿಸುತ್ತಾ, 'ನಾಳೆ ನಾವು ಹೊಸ ಬಾಡಿಗೆದಾರನನ್ನು ಹುಡುಕಬೇಕು,' ಎಂದ.

ಬಾಗಿಲವರೆಗೆ ಹೋದವನು ಮತ್ತೆ ತಿರುಗಿ ನಿಂತು, ತನ್ನ ಮಕ್ಕಳನ್ನೊಮ್ಮೆ ನಿಂದಾತ್ಮಕವಾಗಿ ನೋಡಿ, 'ಲೋಫೆರ್ ಎಂಥಾ ಒಳ್ಳೆಯ ಹುಡುಗ. ನಿಮ್ಮಲ್ಲಿ ಒಬ್ಬರಾದರೂ ಅವನನ್ನು ಮದುವೆಯಾಗುತ್ತೀರೆಂದು ಆಶೆಯಿರಿಸಿಕೊಂಡಿದ್ದೆ, ನೀವೆಲ್ಲಾ ಶುದ್ಧ ಗಯ್ಯಾಳಿಗಳು' ಎಂದ. ✿



ಆಸೆಯಿಲ್ಲದೆ ಯಾವ ಕೆಲಸವೂ ಎಲ್ಲಿಯೂ ಇಲ್ಲ. ಮನುಷ್ಯನು ಮಾಡುವ ಪ್ರತಿಯೊಂದು ಕೆಲಸವೂ ಆಸೆಯಿಂದಾದುದು. —ಮನುಸ್ಮೃತಿ

* * *

ಏಕಾಂತದಲ್ಲಿ ಗಂಡು ಹೆಣ್ಣು ಮದುವೆಯಾಗಬೇಕಾದರೆ ಚೆನ್ನಾಗಿ ಪರೀಕ್ಷಿಸಿರಬೇಕು. ಸ್ವಭಾವ ತಿಳಿಯದ ಮನುಷ್ಯರಲ್ಲಿ ಪ್ರೇಮವೂ ಹಗೆತನವಾಗಿ ಪರಿಣಮಿಸುತ್ತದೆ. —ಅಭಿಜ್ಞಾನ 'ಶಾಕುಂತಲ'

* * *

ಪರಿಚಯವು ಅತಿಯಾದರೆ ಉಪೇಕ್ಷೆಯುಂಟಾಗುತ್ತದೆ. ಯಾವಾಗಲೂ ಹೋಗುತ್ತಿದ್ದರೆ ಆದರವಿರುವುದಿಲ್ಲ. ಮಲಯಗಿರಿಯಲ್ಲಿ ಬೇಡಿತಿ ಶ್ರೀಗಂಧದ ಮರವನ್ನು ಸೌದೆಯಾಗಿ ಬಳಸುತ್ತಾಳೆ. —ವಿಷ್ಣುಪುರಾಣ

* * *

ಕಲಿಯುಗದಲ್ಲಿ ಕಂದಾಯದ ನೆಪದಿಂದ ಜನರ ಹಣವನ್ನು ಅರಸರು ಸುಲಿಗೆ ಮಾಡುತ್ತಾರೆ; ರಕ್ಷಣೆ ಮಾಡುವುದಿಲ್ಲ.


Nestle
NESCAFE
instant
ಸದಾ ಲವಲವಿಕೆಯಿಂದಿರಲು
ನೆಸ್‌ಕಾಫೆ
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟಂಟ್ ಕಾಫಿ
NS/CAS-2/79 KAN

282 13



ಬೆವರಿನ ಬೆಲೆ

ಬದರೀನಾಥ

ತುಂಗಭದ್ರೆಯು ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳ ಗಡಿಯನ್ನು ಗುರುತಿಸುವೆಡೆ ನಿಂತಿದೆ ಹರಿಹರ ನಗರ. ಇತ್ತೀಚಿನ ವರ್ಷಗಳಲ್ಲಿ ನದಿಯ ಉತ್ತರ ಅಂಚಿನಲ್ಲಿ ಕುಮಾರಪಟ್ಟಣವೆಂಬ ಇನ್ನೂ ಒಂದು ನಗರ ತಲೆಯೆತ್ತಿದೆ ಧಾರವಾಡ ಜಿಲ್ಲೆಯಲ್ಲಿ. ಬಿರ್ಲಾರವರ ಪಾಲಿಫೈಬರ್ ಕಾರಖಾನೆಯನ್ನು ಕೇಂದ್ರವಾಗಿರಿಸಿಕೊಂಡು ಮೈದಳೆಯುತ್ತಿರುವ ಈ ಊರಿಗೆ ಹೊಂದಿಯೇ ರಾಷ್ಟ್ರೀಯ ಹೆದ್ದಾರಿಯ ಪಶ್ಚಿಮಕ್ಕಿರುವ ಬಯಲಲ್ಲಿ ಕರ್ನಾಟಕ ಸರಕಾರವು ಬಡವರಿಗಾಗಿ ಜನತಾ ಮನೆಗಳಿಗಾಗಿ ನಿವೇಶನಗಳನ್ನು ಒದಗಿಸಿದೆ. ೩೦' × ೪೫" ಕ್ಷೇತ್ರಫಲದ ಈ ನಿವೇಶನಗಳಲ್ಲಿ ಹತ್ತಾರು ಮಾದರಿ ಮನೆಗಳು ಎದ್ದು ನಿಂತಿವೆ. ಹುಬ್ಬಳ್ಳಿಯಂತಹ ನಗರಗಳಲ್ಲಿ ಇಂಥ ಮನೆಗಳನ್ನು ಇಟ್ಟಿಗೆಗಳಿಂದ ಕಟ್ಟಿದ್ದರೆ ಇಲ್ಲಿ ವಿಪುಲವಾಗಿ ಸಿಗುವ ಕಲ್ಲುಗಳಿಂದಲೇ ಗೋಡೆಗಳನ್ನು ಏರಿಸಿದ್ದಾರೆ. ಸರಕಾರ ತನ್ನ ಪಾಲಿನ ಸಹಾಯವನ್ನು ರೂ. ೨೦೦೦ ಬೆಲೆ ಬಾಳುವಷ್ಟು ಕಟ್ಟಿಗೆ ಮತ್ತು ಹಂಚುಗಳ ರೂಪದಲ್ಲಿ ಕೊಡುತ್ತದೆ. ಇಲ್ಲಿ ನಿವೇಶನ ಪಡೆದು ಮನೆ ಕಟ್ಟಿಕೊಳ್ಳುವವರು ಶ್ರಮದಾನದ ಮೂಲಕ ಇಲ್ಲವೆ ತಮ್ಮ ಹಣ ವಿನಿಯೋಗಿಸಿ ಕಟ್ಟಡ ಪೂರ್ತಿ ಮಾಡಿಕೊಳ್ಳಬೇಕು. ಹೆಚ್ಚಾಗಿ ಅಜ್ಞರೇ ಇಂಥ ಮನೆಗಳಿಗೆ ಒಡೆಯರಾಗಿರುವುದರಿಂದ ಗುತ್ತಿಗೆದಾರರ ಕೈಗೆ ಸಿಕ್ಕು ಹೇಗೋ ಒಂದು ಮನೆ

ಎಂದು ಮಾಡಿಕೊಂಡಿರುವವರೇ ಬಹಳ. ಹೀಗೆ ಕಟ್ಟಿಕೊಂಡ ಕಟ್ಟಡಗಳ ಜೀವಮಾನ ಎಷ್ಟೆಂದು ಲೆಕ್ಕ ಹಾಕುವುದಕ್ಕೆ ವಿಶೇಷ ಇಂಜಿನಿಯರಿಂಗ್ ತರಣತಿಯೇನೂ ಬೇಕಾಗುವುದಿಲ್ಲ.

ಆದರೆ ಬಹುಶಃ ರಾಜ್ಯದಲ್ಲಿ ಇಂತಹ ಸರಕಾರ ಕೃಪಾಪೋಷಿತ ವಸತಿಗಳಲ್ಲಿ ತೋರಿಬರದಂತಹ ಒಂದು ಆಶ್ಚರ್ಯವನ್ನು ಇಲ್ಲಿ ಕಾಣಬಹುದಾಗಿದೆ. ನೋಡಿದೊಡನೆಯೇ ಸಹಜವಾಗಿಯೇ ಅರ್ಧ ಶತಮಾನವನ್ನೂ ಮಿಕ್ಕಿ ಬಾಳಬಹುದಾದಂಥದೆಂದು ಹೇಳಬಹುದಾದ, ಚಿಕ್ಕದಾದರೂ ಚೊಕ್ಕಟವಾದಂತಹ ಒಂದು ಮನೆ ಇಲ್ಲಿದೆ. 'ಶ್ರೀ ಸತ್ಯಬೋಧ ಕೃಪಾನಿಲಯ' ಎಂಬ ಹೆಸರು ಹೊತ್ತಿರುವ ಈ ಕಟ್ಟಡ ನಿಜಕ್ಕೂ ಒಬ್ಬ 'ಮೇಸ' ಕಟ್ಟಿಕೊಂಡದ್ದೆ ಅಥವಾ ಸ್ವಾತಂತ್ರ್ಯಭಾರತದ ಯಾವಾನಾದರೂ ಒಬ್ಬ 'ಮುತ್ಸದ್ದಿ' ಬಡವರ ಪಟ್ಟಿಯಲ್ಲಿ ಹೇಗೋ ನುಸುಳಿಕೊಂಡು, ಸರಕಾರ ನೀಡುವ ಸೌಲಭ್ಯಗಳನ್ನುಪಯೋಗಿಸಿಕೊಂಡು ಕಟ್ಟಿಸಿಕೊಂಡ 'ಕುಟೀರ'ವೋ ಎಂದು ಭ್ರಮೆಯಾಗುತ್ತದೆ.

ಆದರೆ ಸತ್ಯವನ್ನು ಕೂಡ ನಂಬಬೇಕಾದರೆ ಮೊದಲು ನೋಡಬೇಕಾಗುತ್ತದೆ. ಪ್ರತ್ಯಕ್ಷಗೋಚರವಾಗುವುದನ್ನು ದೃಢಪಡಿಸಿಕೊಳ್ಳಲು ಬೇಕಾದರೆ ಪ್ರಮಾಣಿಸಿನೋಡಬಹುದು.

ಈ ಮನೆಯನ್ನು ಅಕ್ಷರಶಃ ಬೆವರು ಸುರಿಸಿ ಕಟ್ಟಿದವರು ಭೀಮಾಚಾರ್ಯ ಕಟ್ಟಿ ಎಂಬವರು.* ವೃತ್ತಿಯಿಂದ ಆಯುರ್ವೇದ ವೈದ್ಯರು, ಕುಮಾರಪಟ್ಟಣದಿಂದ ಎರಡು - ಎರಡೂವರೆ ಮೈಲು ದೂರವಿರುವ ಮಾಕನೂರಲ್ಲಿ ಸರಕಾರದ ಸಹಾಯದಿಂದ ನಡೆಯುವ ದವಾಖಾನೆಯ ಡಾಕ್ಟರು. ಉಪಜೀವನಕ್ಕಾಗಿ ಸರಕಾರದಿಂದ ದೊರೆಯುವ ಮಾಸಿಕ ಸಹಾಯಧನ ಒಂದು ಒಂದೂವರೆ ನೂರು ರೂಪಾಯಿಗಳನ್ನೇ ಅವಲಂಬಿಸಬೇಕು. ಅವರಿಗೂ ಇಲ್ಲೊಂದು ನಿವೇಶನ ಸಿಕ್ಕಾಗ ಅವರು ಮನೆ ಕಟ್ಟುವ ನಿರ್ಧಾರ ಮಾಡಿದರು. ಆದರೆ ಇತರರಿಂದ ಕೆಲಸ ಮಾಡಿಸಿಕೊಳ್ಳುವ ರೂಢಿಯಿರದ ಅವರಿಗೆ ತಾವು ಇದನ್ನುಹೇಗೆ ಕಟ್ಟಬೇಕೆಂಬುದೇ ವಿಚಾರ. ಮನೆಯ ನಕ್ಷೆಸಿದ್ಧಪಡಿಸಿದರು. ಕಟ್ಟಲು ಕಲ್ಲು ಅಥವಾ ಮಣ್ಣಿನ ಇಟ್ಟಿಗೆಗಳಿಗಿಂತ ಸಿಮೆಂಟಿನಿಂದ ತಯಾರಿಸಿದ ಇಟ್ಟಿಗೆಗಳೇ ಹೆಚ್ಚು ಯೋಗ್ಯವೆಂದು ಬಗೆದು ಅವುಗಳನ್ನು ಸ್ವತಃ ತಯಾರಿಸಲು ಸಾಧ್ಯವೆಂದು ಮನಗಂಡು ತಮ್ಮ ಅಪಾರ ಮಿತ್ರರ ಬಳಗದೊಂದಿಗೆ ಚರ್ಚಿಸತೊಡಗಿದರು.

ಕಟ್ಟಿಯವರ ಕರ್ತೃತ್ವ ಶಕ್ತಿಯ ಬಗ್ಗೆ ಅವರನ್ನು ಹತ್ತಿರದಿಂದ ಬಲ್ಲವರಿಗೆಲ್ಲ ಅಪಾರ ವಿಶ್ವಾಸ. ಈ ಸುದಾಮನಿಗೆ ಅವಶ್ಯವೆನಿಸಿದಷ್ಟು (೮೦ ಚೀಲ) ಸಿಮೆಂಟು ಕೊಡಲು ಹಲವಾರು ಹಿತೈಷಿಗಳು, ಮಿತ್ರರು ಮುಂದಾದರು. ಕಟ್ಟಿಯವರಿಗೆ ಎರಡು ಮೂರು ದಶಕಗಳಿಂದ ಆಸರೆಯಾಗಿರುವ ಅವರ ಸೈಕಲ್ಲು ಈಗಲೂ ಅವರ ನೆರವಿಗೆ ಬಂತು. ಹರಿಹರದ ತುಂಗಭದ್ರೆಯವರೆಗೆ ಸೈಕಲ್ ತುಳಿದುಕೊಂಡು



* ಕಳೆದ ಜನೆವರಿ ೧೧ರ ಸಂಯುಕ್ತ ಕರ್ನಾಟಕ (ಹುಬ್ಬಳ್ಳಿ) ದಲ್ಲಿ ಬಂದ ಒಂದು ವರದಿಯಲ್ಲಿ ಶ್ರೀ ಕಟ್ಟಿಯವರಿಗೆ ಮನೆಯಿಲ್ಲವೆಂಬ ಮಾತು ಬಂದಿದೆ. ಅದು ವಸ್ತುಸ್ಥಿತಿಗೆ ವ್ಯತಿರಿಕ್ತ.


ಬಂದು, ಅವಶ್ಯವಿದ್ದ ಉಸುಕನ್ನೂ ಹರಳನ್ನೂ ಹೇರಿಕೊಂಡು ಮಾಕನೂರಿಗೆ ತರಬೇಕು. ನಂತರ ಬಿಡುವಿನ ಸಮಯದಲ್ಲಿ ಇಟ್ಟಿಗೆಗಳ (ಆಕಾರ ೮"×೮"×೧½") ಎರಕ ಹೊಯ್ದು, ಆಮೇಲೆ ನೀರು ಕಟ್ಟಬೇಕು. ಅಂತೂ ಕೆಲವು ತಿಂಗಳುಗಳಲ್ಲಿ ಈ ಮನೆಗೆ ಅಗತ್ಯವೆನಿಸಿದ ಒಂದು ಸಾವಿರ ಇಟ್ಟಿಗೆಗಳು ಸಿದ್ಧವಾಗುತ್ತಿರುವಂತೆಯೆ ನಕ್ಷೆಯ ಪ್ರಕಾರ ಗೋಡೆಗಳನ್ನು ಕಟ್ಟುವುದಕ್ಕೆ ಮಾತ್ರ ಉಪ್ಪಾರರನ್ನು ಉಪಯೋಗಿಸಿದರು. ಆದರೆ ಅವಶ್ಯವಾದ ಬಡಿಗತನದ ಕೆಲಸ – ಬಾಗಿಲು, ಚೌಕಟ್ಟು, ಕಿಟಕಿ, ತೊಲೆ ಇತ್ಯಾದಿ ಎಲ್ಲವನ್ನೂ ಕಟ್ಟಿಯವರು ತಾವೇ ಕೂತು ಮಾಡಿದರು. ಮುಂದೆ ಮನೆಗೆ ಹಂಚುಗಳನ್ನೂ ತಾವೇ ದೊಚ್ಚಿದರು. ವಿಧ್ಯುಕ್ತವಾಗಿ ವಾಸ್ತುಶಾಂತಿ ಮಾಡಿ ಗೃಹ ಪ್ರವೇಶವನ್ನು ಮಾಡಿ ಈಗಲ್ಲಿಯೇ ವಾಸವಾಗಿದ್ದಾರೆ. ಅಲ್ಲಿಯ ಒಂದೊಂದು ಇಟ್ಟಿಗೆ, ಒಂದೊಂದು ಕಟ್ಟಿಗೆ, ಕಬ್ಬಿಣ ತುಂಡು ಕೂಡ ನಾನು ಇವರ ಕೈಯಲ್ಲೇ ಹಾಯ್ದು ಬಂದೆನೆಂದು ಸಾರುತ್ತ ನಿಂತಿವೆ.

ಕಟ್ಟಿಯವರನ್ನೂ ಅವರು ತೊಟ್ಟ ಬಟ್ಟೆಗಳನ್ನೂ ನೋಡಿದರೆ ಯಾವ ವರ್ಚಸ್ಸೂ ನೋಡಿದವರ ಮೇಲಾಗುವುದಿಲ್ಲ. ಪಂ. ತಾರಾನಾಥರಂಥ ಪ್ರತಿಭಾಶಾಲಿಗಳ ಬಳಿಯಿದ್ದು ಆಯುರ್ವೇದದ ಮೂಲ ಪಾಠ ಹೇಳಿಸಿಕೊಂಡ ಅವರಿಗೆ ಆಯುರ್ವೇದೀಯ ಔಷಧಗಳನ್ನು ಸ್ವತಃ ಕೈಯಿಂದ ತಯಾರಿಸಿ ಕೊಡುವುದರಲ್ಲಿ ನಂಬಿಕೆ ಹೆಚ್ಚು. ಆದರೆ ಅವರಿಗೆ ಯಾವ ಕ್ಷಣಕ್ಕೆ ಯಾವ ವಿಷಯದಲ್ಲಿ ಆಸಕ್ತಿ ಹುಟ್ಟುತ್ತದೆಂದು ಊಹಿಸುವುದೇ ಕಷ್ಟವಾಗುತ್ತದೆ.

ಇಪ್ಪತ್ತು ವರ್ಷಗಳ ಹಿಂದೆ ಪುಟ್ಟ ಸ್ಪ್ರಿಂಗಿನಿಂದಾರಂಭಿಸಿ ಸಕಲ ಸಾವಿರಾರು ಬಿಡಿಭಾಗಗಳನ್ನು ತಾವೇ ಮನೆಯಲ್ಲಿ ತಯಾರಿಸಿ ಪರಿಪೂರ್ಣ ಕನ್ನಡ ಟೈಪ್‌ರೈಟರ್ ತಯಾರಿಸಿದ್ದರು. ಉತ್ತರಾದಿ ಮಠಕ್ಕೆ ೧೧½ ಕಿಲೋಗ್ರಾಂ ಬೆಳ್ಳಿಯ ಬಾಳೆಯೆಲೆಯನ್ನು ಮಾಡಿಕೊಟ್ಟರು. ಮಠವು ಕೊಟ್ಟ ಬೆಳ್ಳಿಯನ್ನು ತಗಡು ಮಾಡುವ ಪ್ರಶ್ನೆ ಬಂದಾಗ ಬುದ್ಧಿಯನ್ನು ಉಪಯೋಗಿಸಿ ಎರಡು ಹಿತ್ತಾಳೆ ತಗಡುಗಳ ನಡುವೆ ಇಟ್ಟು ಪ್ರೆಸಿನಲ್ಲಿಟ್ಟು ಒತ್ತಿದರೆ ಸಾಧ್ಯವಾಗುವುದೆಂದು ಹೇಳಿ ಅದನ್ನು ಮಾಡಿಸಿದರು. ಹಾರ್ಮೋನಿಯಂ, ತಬಲಾ ಮುಂತಾದವುಗಳನ್ನು ಸ್ವತಃ ತಯಾರಿಸುವುದರಲ್ಲೂ ಅವರ ಕುಶಲತೆ ಬೆಳಕಿಗೆ ಬಂದಿದೆ. ಜಮಖಂಡಿ ನಾಟಕ ಕಂಪನಿಯವರಿಗಾಗಿ 'ಸ್ವಪ್ನಸಾಮ್ರಾಜ್ಯ'ವೆಂಬ ನಾಟಕ ಬರೆದುಕೊಟ್ಟರು. ಪುಣೆಯ ಬಳಿ ಸಿರೂರಲ್ಲಿ ಎಸ್.ಎಂ.ಪಿ. ತರಬೇತಿಗೆಂದಿದ್ದಾಗ ಅಂದಿನ ಆರೋಗ್ಯ ಇಲಾಖೆಯ ಡೈರೆಕ್ಟರರ ಆದೇಶದಂತೆ ಇವರು ಬರೆದ 'ದೇವೀ ಮಹಿಮಾ' ಕನ್ನಡದಲ್ಲಿ ಫಿಲ್ಮ್ ಆಗುವುದೆಂದು ಮುಂಬಯಿ ಸರಕಾರ ತಿಳಿಸಿತ್ತು. ಮುಂದೆ ಮೈಸೂರು ರಾಜ್ಯವಾದಾಗ ಪ್ರತಿ ಹಾಗೇ ಹೊರಳಿ ಬಂತು. ೧೯೪೭ರಲ್ಲಿ ಮೈಸೂರಿನ ಆಕಾಶವಾಣಿ ಇವರು ಬರೆದ 'ಸೀತಾ ವ್ಯಾಲೀಕಾಶ್ರಮ'ವೆಂಬ ನಾಟಕವನ್ನು ಬಿತ್ತರಿಸಿತು...

ಕಟ್ಟಿಯವರಲ್ಲಿ ಏನೆಲ್ಲ ಇದೆ, ಆದರೆ ದೈವವಿಲ್ಲ. ಅಂಥ ಕರ್ತೃತ್ವಶಾಲಿ ವ್ಯಕ್ತಿಯೊಬ್ಬನನ್ನು ನಾಡು ಎಂದಾದರೂ ಗಮನಿಸಿದರೆ ಕರಾಳ ಬಡತನದಿಂದ ಇವರಿಗೆ ಮುಕ್ತಿ ದೊರಕೀತು.

ಆದರೆ ಅವರಿಗೆ ಬೇಕಾದಷ್ಟು ಅನುಭವವಿದ್ದೂ ಆಧುನಿಕ ಶಿಕ್ಷಣ ಮತ್ತು ಅದು ನೀಡಬಹುದಾದ ಬಿರುದು ಬಾವಲಿಗಳಿಲ್ಲ. ಅದರಿಂದಾಗಿ ಜಗತ್ತು ಅವರನ್ನು ಗಮನಿಸುತ್ತಿಲ್ಲ. ಅವರು ಜೀವನೋಪಾಯಕ್ಕಾಗಿ ಅವಲಂಬಿಸಿರುವ ನೌಕರಿಯೊಂದು ತ್ರಿಶಂಕು ಸ್ವರ್ಗ. ಹಿಂದಿನ ಮುಂಬಯಿ ಸರಕಾರ ಗ್ರಾಮಾಂತರ ಪ್ರದೇಶಕ್ಕೆ ವೈದ್ಯರು ಹೋಗಲು ಉತ್ತೇಜನ ಕೊಡುವುದಕ್ಕಾಗಿ ಹಳ್ಳಿಗಳಲ್ಲಿ ಕೆಲ ಕೇಂದ್ರಗಳನ್ನು ಸ್ಥಾಪಿಸಿ ಅದರಿಗೆ ಮಾಸಿಕ ಸಹಾಯಧನ ಕೊಟ್ಟು ಅಲ್ಲಲ್ಲಿಗೆ ಕಳಿಸಿದರು. ಅವರು ಸರಕಾರಿ ನೌಕರರಲ್ಲ, ಅವರಿಗೆ ನಿವೃತ್ತಿಯೂ ಇಲ್ಲ, ಬದಲಿಯೂ ಆಗುವುದಿಲ್ಲ. ಆದರೆ ಕರ್ನಾಟಕ ಸರಕಾರದಲ್ಲೂ ಅವರು ನೌಕರರಲ್ಲ, ಆದರೆ ಕೆಲವರನ್ನು ಸರಕಾರ ನಿವೃತ್ತಗೊಳಿಸಿದೆ, ಕೆಲವರನ್ನು ಬದಲಿ ಮಾಡಿದೆ, ಸರಕಾರಿ ನೌಕರನೊಬ್ಬ ಮಾಡಬೇಕಾದ ಆಡಳಿತಾತ್ಮಕ ಕೆಲಸವನ್ನಿವರು ಮಾಡಬೇಕೆಂದೂ ವಿಧಿಸಲಾಗುತ್ತಿದೆ. ಮಾಸಿಕ ಸಹಾಯಧನ ಒಮ್ಮೊಮ್ಮೆ ಹಲವಾರು ತಿಂಗಳಾದರೂ ಕೈಗೆಟುಕುವುದಿಲ್ಲ! ✡



ಬರಲಿದೆ ಸೂರ್ಯಗ್ರಹಣ


ಹಾಗೆ ನೋಡಿದರೆ ನಾವೆಲ್ಲ ಒಂದು ದೃಷ್ಟಿಯಿಂದ ಸುದೈವಿಗಳೆಂದೇ ಹೇಳಬೇಕು. ಆಕಾಶದಲ್ಲಿ ಅಪರೂಪಕ್ಕೆ ಕಾಣುವ ಒಂದು ಮಹದ್ಘಟನೆಗೆ ಸಾಕ್ಷಿಯಾಗಿ ನಾವೆಲ್ಲ ನಿಲ್ಲಲಿದ್ದೇವೆ. ೧೮೯೮ರ ಜನವರಿ ೨೨ ರಂದು ಖಗ್ರಾಸ ಸೂರ್ಯಗ್ರಹಣವನ್ನು ಕಂಡಿದ್ದ ಭಾರತ ೮೨ ವರ್ಷಗಳ ನಂತರ ಇದೇ (ಫೆಬ್ರುವರಿ) ೧೬ರಂದು ಮತ್ತೊಮ್ಮೆ ಕಾಣಿಸಲಿದೆ.

ಅನತಿ ದೂರದಲ್ಲೇ ನಾವು ನೋಡಲಿರುವ ಇಂಥ ಘಟನೆಯೆಂದರೆ ಫೆಬ್ರುವರಿ ೧೬ರ ಸೂರ್ಯಗ್ರಹಣ.* ಸದ್ಯ ಆ ಬಗ್ಗೆ ವಿಚಾರ ಮಾಡೋಣ. ಅನಾದಿಕಾಲದಿಂದಲೂ ಮನುಷ್ಯನನ್ನು ಚಕಿತಗೊಳಿಸಿದ, ದಿಗ್ಭ್ರಮೆಪಡಿಸಿದ, ಭಯಾಕ್ರಾಂತನನ್ನಾಗಿ ಮಾಡಿದ ಘಟನೆಗಳಲ್ಲಿ ವರ್ಷವರ್ಷವೂ ಆಗುವ ಚಂದ್ರಗ್ರಹಣ, ಸೂರ್ಯಗ್ರಹಣಗಳಿಗೆ ಮಹತ್ತರ ಸ್ಥಾನವಿದೆ. ಜಗತ್ತಿಗೆ ಬೆಳಕಿನ ಮೂಲ ಸ್ರೋತ್ರುಗಳೆನಿಸಿದ ಈ ಆಕಾಶ ಕಾಯಗಳನ್ನು ಯಾರೋ ರಾಕ್ಷಸರು ನುಂಗುತ್ತಾರೆಂದೂ ಅವುಗಳಿಗೆ ಬೇಗ ಮೋಕ್ಷ ಸಿಗಲೆಂದು ದೇವರಿಗೆ ಶರಣು ಹೋಗಿ ಪ್ರಾರ್ಥನೆ ಸಲ್ಲಿಸುವುದೇ ತನ್ನ ಧರ್ಮವೆಂದೂ ಭಾವಿಸಿದ ಮನುಷ್ಯರನ್ನು ನಾವಿಂದಿಗೂ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಕಾಣಬಹುದು. ಇಂಥ ತರ್ಕಾತೀತ ನಂಬುಗೆಗಳಿಗೆ ತವರಿನೋಪಾದಿಯಲ್ಲಿರುವ ನಮ್ಮ ದೇಶದಲ್ಲಂತೂ ಕಾಲ್ಪನಿಕ ರಕ್ಕಸ ಗ್ರಹಗಳಾದ ರಾಹು–ಕೇತುಗಳು ಚಂದ್ರ–ಸೂರ್ಯರನ್ನು ಕಬಳಿಸುವರೆಂದು ಭಯವಿಹ್ವಲರಾದವರನ್ನು ಊರೂರಿನಲ್ಲೂ ನೋಡಬಹುದು.


ಆದರೆ ಸೂರ್ಯ, ಚಂದ್ರ, ಪೃಥ್ವಿ ಮೂರೂ ಒಂದೇ ರೇಷೆಯಲ್ಲಿ ಬಂದಾಗ ಗ್ರಹಣಗಳುಂಟಾಗುತ್ತವೆಂಬ ಸಾಮಾನ್ಯ ಸಂಗತಿಯನ್ನು ಇಂದು ಶಾಲಾಬಾಲಕರೂ ಬಲ್ಲರು. ಸೂರ್ಯ ಮತ್ತು ಚಂದ್ರರ ಮಧ್ಯೆ ಪೃಥ್ವಿ ಬಂದಾಗ ಪೃಥ್ವಿಯ ನೆರಳು ಚಂದ್ರನನ್ನು ಭಾಗಶಃ ಇಲ್ಲವೆ ಪೂರ್ತಿ ಮುಚ್ಚುವುದರಿಂದ ಖಂಡಗ್ರಾಸ ಇಲ್ಲವೆ ಖಗ್ರಾಸ ಚಂದ್ರಗ್ರಹಣವಾಗುತ್ತದೆ. ಅದೇ ಸೂರ್ಯ ಮತ್ತು ಪೃಥ್ವಿಗಳ ನಡುವೆ ಚಂದ್ರ ಬಂದಾಗ ಮೂರು ಬಗೆಯ ಸೂರ್ಯ

---


* ಮೇಲಿನ ನಕಾಶದಲ್ಲಿ ಈ ಸೂರ್ಯಗ್ರಹಣ ಖಗ್ರಾಸವಾಗಿ ಕಾಣುವ ಭಾರತದ ಭೂಭಾಗವನ್ನು ಗುರುತಿಸಲಾಗಿದೆ.



ಚಿತ್ರ ೧ : ಸೂರ್ಯನಿಗೆ ಗ್ರಹಣ ಹಿಡಿಯುತ್ತ ಬಂದಿದೆ




ತ್ರ ೨ : ಖಗ್ರಾಸ ಸೂರ್ಯಗ್ರಹಣ



ಚಿತ್ರ : ೩ ಸೂರ್ಯಗ್ರಹಣ ಹಂತ ಹಂತವಾಗಿ ಬಿಡುತ್ತ ನಡೆದಿದೆ

ಗ್ರಹಣದ ತಕ್ಕತೆಯಿದೆ. ಒಂದೊ ಖಂಡಗ್ರಾಸ ಸೂರ್ಯಗ್ರಹಣವಾಗಬಹುದು, ಇಲ್ಲವೆ ಖಗ್ರಾಸ ಸೂರ್ಯಗ್ರಹಣವಾಗಬಹುದು, ಅಥವಾ ಕಂಕಣಾಕೃತಿಯ** ಸೂರ್ಯಗ್ರಹಣವೇರ್ಪಡಬಹುದು. ಚಂದ್ರಗ್ರಹಣದಲ್ಲಿ ಪೃಥ್ವಿಯ ನೆರಳಿನಿಂದ ಚಂದ್ರ ಮುಚ್ಚುವುದರಿಂದ ಗ್ರಹಣ ಸಂಭವಿಸಿದರೆ, ಸೂರ್ಯ ಗ್ರಹಣದಲ್ಲಿ ಚಂದ್ರನ ನೆರಳಿನಿಂದ ಸೂರ್ಯ ಮುಚ್ಚಿದಂತೆ ನಮಗೆ ಭಾಸವಾಗುವುದು ಮಾತ್ರ. ಅಲ್ಲಿ ಚಂದ್ರನ ನೆರಳು ಪೃಥ್ವಿಯ ಮೇಲೆ ಬಿದ್ದ ಭಾಗದಲ್ಲಿ ಮಾತ್ರ ಸೂರ್ಯಗ್ರಹಣ ಗೋಚರಿಸುವುದಲ್ಲದೆ ಸೂರ್ಯನ ಮೇಲೆ ಯಾವ ನೆರಳೂ ಬೀಳಲಾರದು. ಸೂರ್ಯ ಸ್ವಯಂಪ್ರಕಾಶವುಳ್ಳ ಒಂದು ತಾರೆ, ನಮ್ಮ ಸೌರಮಂಡಲದಲ್ಲೇ ಅತ್ಯಂತ ಬೃಹದ್ಗಾತ್ರದ ಕಾಯ. ಸೂರ್ಯನ ಮಾನದಿಂದಂತೂ ಪೃಥ್ವಿ ಮತ್ತು ಚಂದ್ರ, ತೀರ ಕ್ಷುಲ್ಲಕ ಅಪಾರದರ್ಶಕ ಕಾಯಗಳು. ಚಂದ್ರನಂತೂ ಪೃಥ್ವಿಗಿಂತಲೂ ಅತಿ ಚಿಕ್ಕ ಗಾತ್ರದ ಕಾಯ. ಈಗ ಚಿತ್ರ ೪ ನೋಡಿದರೆ ಸೂರ್ಯಗ್ರಹಣದ ಕಲ್ಪನೆ ನಿಮಗೆ ಬಂದೀತು. ಮೇಲ್ಬದಿಯಲ್ಲಿ ಪ್ರಕಾಶಮಾನವಾಗಿರುವುದು ಸೂರ್ಯ. ಕೆಳಕ್ಕಿರುವ ಬೃಹದ್ಗೋಲದ ಭಾಗವಾಗಿ ತೋರುವುದು ಪೃಥ್ವಿ. ಪೃಥ್ವಿಯಿಂದ ತುಸುವೆ ಎತ್ತರದಲ್ಲಿರುವ ಚಿಕ್ಕ ಕಾಯವೇ ಚಂದ್ರ. ಈ ಮೂರೂ ಕಾಯಗಳು ಒಂದೇ ರೇಷೆಯಲ್ಲಿವೆ. ಚಂದ್ರನ ನೆರಳು ಪೃಥ್ವಿಯ ಅಲ್ಪ ಭಾಗದ ಮೇಲೆ ಬಿದ್ದುದು ಕಾಣುತ್ತದೆ. ನೆರಳಿನ ನಟ್ಟ ನಡುವೆ ಸ್ವಲ್ಪ ಪ್ರದೇಶ ಕಡುಗಪ್ಪಾಗಿ ತೋರುವ ಭಾಗದಲ್ಲಿರುವವರಿಗೆ ಪೂರ್ತಿ ಖಗ್ರಾಸ ಗ್ರಹಣ ಇಲ್ಲವೆ ಕಂಕಣಾಕೃತಿ ಗ್ರಹಣ ಕಾಣಿಸಬಹುದು. ಸುತ್ತಲಿನ ಕಡಿಮೆ ದಟ್ಟ ನೆರಳಿನಲ್ಲಿರುವವರಿಗೆ ಮಧ್ಯಬಿಂದುವಿನಿಂದ ಇರುವ ದೂರವನ್ನು ಅವಲಂಬಿಸಿ ಹೆಚ್ಚು ಕಡಿಮೆ ಪ್ರಮಾಣದ ಖಂಡಗ್ರಾಸ ಗ್ರಹಣ ಕಾಣಿಸುತ್ತದೆ.



ಚಿತ್ರ ೪: ಅವಕಾಶದಲ್ಲಿ ಚಂದ್ರನನ್ನು ದಾಟಿ ದೂರ ನಿಂತು ನೋಡಲು ಸಾಧ್ಯವಾದಾಗ ಸೂರ್ಯಗ್ರಹಣವಿಂತು ಗೋಚರಿಸುತ್ತದೆ

ಇಡಿ ಸೌರಮಂಡಲವೇ ಅಂತರಿಕ್ಷದ ಅವಕಾಶದಲ್ಲಿ ಚಲಿಸುತ್ತಿರಬಹುದಾದರೂ ನಮ್ಮ ಮಟ್ಟಿಗೆ ಸೂರ್ಯ ಒಂದು ನಿಶ್ಚಲ ಕಾಯ. ಅದರ ಒಂಭತ್ತು ಗ್ರಹಗಳೂ ತಂತಮ್ಮ ಚಂದ್ರರಿಂದೊಡಗೂಡಿ ಸೂರ್ಯನಿಗೆ ಪ್ರದಕ್ಷಿಣೆ ಹಾಕುತ್ತಿರುತ್ತವೆ. ಪೃಥ್ವಿ ತನ್ನ ಮೈಸುತ್ತ ದಿನಕ್ಕೊಂದಾವರ್ತಿ ತಿರುಗುವುದರ ಜೊತೆಗೆಯೇ ಸೂರ್ಯನಿಗೆ ವರ್ಷಕ್ಕೊಂದು ಪ್ರದಕ್ಷಿಣೆ ಸುತ್ತುತ್ತದೆ. ಅದಕ್ಕಾಗಿ ಒಂದು ನಿಶ್ಚಿತ ಮಾರ್ಗದಲ್ಲಿ ಪ್ರದಕ್ಷಿಣೆ ನಡೆದಿರುತ್ತದೆ. ಚಂದ್ರ ಪೃಥ್ವಿಯ ಉಪಗ್ರಹವಾಗಿದ್ದು ಒಂದು ಪೃಥ್ವೀ ಪ್ರದಕ್ಷಿಣೆ ಮುಗಿಸಲವನಿಗೆ ಸುಮಾರು ೨೮ ದಿನ ಬೇಕು.

** ಪೃಥ್ವಿಯಿಂದ ಚಂದ್ರನು ಸಮೀಪದಲ್ಲಿದ್ದರೆ ಅವನ ಛಾಯೆ ಸೂರ್ಯನನ್ನು ಪೂರ್ತಿ ಆವರಿಸಿ ಖಗ್ರಾಸ ಗ್ರಹಣವಾದರೆ ಅವನು ಹೆಚ್ಚು ದೂರವಿದ್ದಾಗ ಅವನ ನೆರಳು ಸೂರ್ಯನನ್ನು ಪೂರ್ತಿ ಮುಚ್ಚದೆ ಅವನ ನೆರಳಿನ ವರ್ತುಲದ ಸುತ್ತ ಕಂಕಣಾಕೃತಿಯಲ್ಲಿ ಅಥವಾ ಬಳೆಯ ಆಕಾರದಲ್ಲಿ ಸೂರ್ಯ ಗೋಚರಿಸುವುದಕ್ಕೆ ಕಂಕಣಾಕೃತಿಯ ಗ್ರಹಣವೆನ್ನುತ್ತಾರೆ.

ಸೂರ್ಯನನ್ನು ಸುತ್ತುವ ಪೃಥ್ವಿಯ ಪಥ ಮತ್ತು ಪೃಥ್ವಿಯನ್ನು ಸುತ್ತುವ ಚಂದ್ರನ ಪಥ ಒಂದೇ ಪಾತಳಿಯಲ್ಲಿದ್ದರೆ ಪ್ರತಿ ಹುಣ್ಣಿಮೆಗೂ ಚಂದ್ರಗ್ರಹಣ, ಪ್ರತಿ ಅಮಾವಾಸ್ಯೆ ಸೂರ್ಯಗ್ರಹಣವಾಗಬೇಕು. ಆದರೆ ಚಂದ್ರನ ಪಥ ಪೃಥ್ವೀಪಥಕ್ಕಿಂತ ಸ್ವಲ್ಪ ಅಂತರದಲ್ಲಿದೆ. ಸೂರ್ಯ ಮತ್ತು ಪೃಥ್ವೀ ಛಾಯೆಗಳೆರಡೂ ಕ್ರಾಂತಿವೃತ್ತದ ಮೇಲೆಯೇ ಯಾವಾಗಲೂ ಇರುತ್ತವೆ. ತಿಂಗಳಲ್ಲಿ ಎರಡು ಸಲ ಚಂದ್ರನು ಪೃಥ್ವೀಪಥವನ್ನು ಹಾಯ್ದು ಹೋಗುತ್ತಾನೆ. ಅಮಾವಾಸ್ಯೆ ಅಥವಾ ಹುಣ್ಣಿಮೆಗಳಂದು ಅವನು ಪೃಥ್ವೀಪಥ ಅಥವಾ ಕ್ರಾಂತಿವೃತ್ತದಲ್ಲಿರದಿದ್ದರೆ ಅವನ ನೆರಳು ಭೂಗೋಲದ ಮೇಲ್ಗಡೆ ಅಥವಾ ಕೆಳಗಡೆ ಹಾಯ್ದು ಹೋಗುತ್ತದೆಯಾದ್ದರಿಂದ ಗ್ರಹಣಗಳು ಸಂಭವಿಸುವುದಿಲ್ಲ. ಕ್ರಾಂತಿವೃತ್ತವನ್ನು ಚಂದ್ರನು ಛೇದಿಸುವ ಎರಡು ಬಿಂದುಗಳನ್ನು ರಾಹು ಮತ್ತು ಕೇತು ಎಂದು ಹೆಸರಿಸಲಾಗಿದೆ. ಈ ವೃತ್ತದಿಂದ ಚಂದ್ರನು ಹುಣ್ಣಿಮೆಯ ದಿನ ರಾಹು ಇಲ್ಲವೆ ಕೇತುವಿನಿಂದ ೯ ರಿಂದ ೧೫ ಅಂಶಗಳಷ್ಟು ಅಂತರದಲ್ಲಿದ್ದರೆ ಚಂದ್ರಗ್ರಹಣ ಸಂಭವನೀಯ ಹಾಗು ೯ ಅಂಶಗಳಿಗಿಂತ ಕಡಿಮೆ ಅಂತರದಲ್ಲಿದ್ದರೆ ಖಂಡಿತ. ಇದೇ ರೀತಿ ಅಮಾವಾಸ್ಯೆಯಂದು ಸೂರ್ಯ ಇಲ್ಲವೆ ಚಂದ್ರನು ರಾಹು ಅಥವಾ ಕೇತುವಿನಿಂದ ೧೯ ಅಂಶಗಳಿಗಿಂತ ದೂರವಿದ್ದರೆ ಸೂರ್ಯಗ್ರಹಣವಾಗುವುದಿಲ್ಲ. ೧೫ ರಿಂದ ೧೯ ಅಂಶಗಳವರೆಗಿದ್ದರೆ ಸಂಭವನೀಯ ಮತ್ತು ೧೫ ಅಂಶಗಳಿಗಿಂತ ಕಡಿಮೆ ಅಂತರದಲ್ಲಿದ್ದರೆ ಖಂಡಿತ.

ಗ್ರಹಣಗಳು ಒಂದು ಕ್ರಮದಲ್ಲೇ ಆಗುತ್ತಿರುತ್ತವೆ. ೧೮ ಸೌರವರ್ಷ ಮತ್ತು ೧೧⅓ ದಿನಗಳಲ್ಲಿ (ಈ ಅವಧಿಯಲ್ಲಿ ಐದು ಲೀಪ್ ವರ್ಷಗಳಿದ್ದರೆ ೧೦⅓ ದಿನಗಳಲ್ಲಿ) ಆಗುವ ಸಕಲ ಗ್ರಹಣಗಳೂ ಅದೇ ಕ್ರಮದಲ್ಲಿ ಪುನಃ ಸಂಭವಿಸುತ್ತವೆ. ಆದರೆ ಯಾವುದೊಂದು ನಿಶ್ಚಿತ ಸ್ಥಳಗಳಲ್ಲಿ ಅದೇ ಗ್ರಹಣ ಅದೇ ಸಮಯಕ್ಕೆ ಪುನಃ ಕಾಣಲು ೫೬೦ ವರ್ಷ ಕಾಯಬೇಕು.

ಸಾಮಾನ್ಯ ನಂಬುಗೆಯೆಂದರೆ ಸೂರ್ಯಗ್ರಹಣಕ್ಕಿಂತ ಚಂದ್ರಗ್ರಹಣವಾಗುವುದೇ ಹೆಚ್ಚು ಎಂಬುದು. ಆದರೆ ಇದು ತಪ್ಪು ಗ್ರಹಿಕೆ. ಪೃಥ್ವಿಯ ಛಾಯೆಯ ಸರಾಸರಿ ಉದ್ದಳತೆ ೮,೫೭,೦೦೦ ಮೈಲುಗಳಾದರೆ ಚಂದ್ರನದು ೨,೩೯,೦೦೦ ಮೈಲುಗಳು ಮಾತ್ರ. ಆದ್ದರಿಂದ ಪೃಥ್ವಿಯ ನೆರಳು ಚಂದ್ರನನ್ನು ಬಹಳ ಹೊತ್ತು ಆವರಿಸಬಲ್ಲದು. ಖಗ್ರಾಸ ಚಂದ್ರಗ್ರಹಣ ನಾಲ್ಕು ತಾಸುಗಳವರೆಗೂ ಉಳಿಯಬಲ್ಲದು. ಅಲ್ಲದೆ ಚಂದ್ರಗ್ರಹಣ ಆ ಕಾಲಕ್ಕೆ ರಾತ್ರಿಯಿರುವ ಪೃಥ್ವಿಯ ಎಲ್ಲ ಭಾಗದಲ್ಲಿ ಕಾಣಿಸಬಹುದು. ಆದ್ದರಿಂದ ಚಂದ್ರಗ್ರಹಣ ಹೆಚ್ಚು ಸಲ ಆಗುತ್ತದೆಂಬ ಕಲ್ಪನೆ ಬರುತ್ತದೆ. ಆದರೆ ಚಂದ್ರನ ನೆರಳು ಸೂರ್ಯಗ್ರಹಣ ಸಮಯದಲ್ಲಿ ಅತ್ಯಲ್ಪ ಭಾಗವನ್ನು ಮಾತ್ರ ಮರೆಮಾಡುವುದರಿಂದ ಎಷ್ಟೋ ಸಲ ಜನವಸತಿಯಿಲ್ಲದ ಅಥವಾ ವಿರಳ ಭಾಗದಲ್ಲಿ ಮಾತ್ರ ಅದು ಗೋಚರಿಸಬಹುದು. ಕಳೆದ ಶತಮಾನದಲ್ಲಿ ಥಿಯೋಡೋರ್ ಒಪ್ಪೊಲ್ಜರ್ ಎಂಬ ಆಸ್ಟ್ರಿಯನ್ ಖಗೋಳವಿಜ್ಞಾನಿಯು ಕ್ರಿ.ಪೂ. ೧೨೦೭ರಿಂದ ಕ್ರಿ.ಶ. ೨೧೬೨ರವರೆಗೆ ಸಂಭವಿಸಿದ ಮತ್ತು ಸಂಭವಿಸಲಿರುವ ಎಲ್ಲ ಗ್ರಹಣಗಳ ಪಟ್ಟಿಯನ್ನೇ ಪ್ರಕಟಿಸಿದ್ದಾನೆ. ಅವನ ಪ್ರಕಾರ ಈ ಅವಧಿಯಲ್ಲಿ ೮.೦೦೦ ಸೂರ್ಯಗ್ರಹಣಗಳು, ಹಾಗು ೫.೨೦೦ ಚಂದ್ರಗ್ರಹಣಗಳು.

೮೨ ವರ್ಷಗಳ ನಂತರ ನಮಗೆ ಕಾಣಲಿರುವ ಈ ಸಲದ ಸೂರ್ಯಗ್ರಹಣದ ಖಗ್ರಾಸಾವಧಿ ಸುಮಾರು ೨⅓ ಮಿನಿಟುಗಳು. ಮುಖ್ಯವಾಗಿ ಕರ್ನಾಟಕ, ಆಂಧ್ರ, ಓಡಿಸಾ, ಮಣಿಪುರಗಳಲ್ಲಿ, ಕೆಲ ಮಟ್ಟಿಗೆ ಗೋವಾ ಹಾಗು ಮಧ್ಯಪ್ರದೇಶಗಳಲ್ಲೂ ಕಾಣಿಸುತ್ತದೆ. ಯಾವುದೇ ಸೂರ್ಯಗ್ರಹಣ ಕಾಲದಲ್ಲಿ ಗರಿಷ್ಠ ಖಗ್ರಾಸಾವಧಿ ಏಳು ಮಿನಿಟು ೪೦ ಸೆಕೆಂದುಗಳು ಮಾತ್ರ.

ಚಂದ್ರ ಛಾಯೆಯು ತಾಸಿಗೆ ಸಾವಿರ ಮೈಲು ವೇಗದಲ್ಲಿ ಆವರಿಸುವುದರಿಂದ, ಬಲು ಶೀಘ್ರವೇ ಹಗಲು ಹೊತ್ತಿನಲ್ಲೇ ಕತ್ತಲು ಆಗತೊಡಗುವುದರಿಂದ ಆ ಪ್ರಕ್ರಿಯೆ ಅಮಾಯಕರಲ್ಲಿ ವಿಚಿತ್ರ ಭಯವನ್ನು ಹುಟ್ಟಿಸಬಹುದಾಗಿದೆ. ಆದರೆ ಗ್ರಹಣಗಳು ತೀರ ಸ್ವಾಭಾವಿಕ ನೈಸರ್ಗಿಕ ಕ್ರಿಯೆಗಳೆಂದು ಅರಿತವರು ವಿನಾಕಾರಣ ಭಯಪಡುವ ಅವಶ್ಯಕತೆಯಿಲ್ಲ. ✡

★★★★★★★★★★★★★★★★

ವೈಜ್ಞಾನಿಕ ದೃಷ್ಟಿಕೋನದ
ಹೆಸರಿನಲ್ಲಿ ನಾವು
ಹಳೆಯ ನಂಬಿಕೆಗಳನ್ನೂ
ಶಾಸ್ತ್ರಗಳನ್ನೂ ಅಲ್ಲಗಳೆವುದು ಸಾಧುವೆ?

ಜ್ಯೋತಿಷ್ಯರ ದೃಷ್ಟಿಯಲ್ಲಿ ಸೂರ್ಯಗ್ರಹಣ

ಎನ್. ಕೆ. ಜೋಗಳೇಕರ

ವೈಜ್ಞಾನಿಕ ಪ್ರಗತಿಯು ಈ ಯುಗದಲ್ಲಿ ಮಾನವನು ಎಷ್ಟೊಂದು ಮುಂದುವರೆದಿದ್ದರೂ ಅವನು ಪ್ರಕೃತಿಯ ಮಗುವಾಗಿದ್ದಾನೆ, ನಿಸರ್ಗದ ಕೂಸಾಗಿದ್ದಾನೆ. ಅವನ ಆಶೆ ನಿರಾಶೆ, ದ್ವೇಷ ಮಹತ್ವಾಕಾಂಕ್ಷೆ. ಅಧಃಪತನ ಊರ್ಜಿತಾವಸ್ಥೆಗಳಿಗೆ ಗ್ರಹಯೋಗಗಳೇ ಕಾರಣವಾಗುತ್ತವೆ ಎಂಬುದು ಅನಾದಿ ಕಾಲದಿಂದಲೂ ಅನುಭವವೇದ್ಯ ಸಂಗತಿ. ನಾವಿರುವ ಪೃಥ್ವಿಯ ಮೇಲಿನ ನೈಸರ್ಗಿಕ ಕ್ರಿಯೆಗಳ ಮೇಲೆ, ಸಕಲ ಜೀವಿಗಳ ಜೀವನದ ಮೇಲೆ, ಪ್ರಪಂಚದ ಆಗುಹೋಗುಗಳ ಮೇಲೆ ಗಗನಚರಗಳಾದ ಗ್ರಹಗಳು ಪರಿಣಾಮ ಮಾಡುತ್ತವೆ. ಪ್ರಪಂಚದ ಜೀವನದ ಬದಲಾವಣೆಗಳಿಗೆ ಗ್ರಹಗತಿಗಳೇ ಕಾರಣೀಭೂತವಾಗುತ್ತವೆ. ಭೌತಿಕ ವಿಜ್ಞಾನಗಳಲ್ಲಿ ಯಂತೆ ಕಾರ್ಯಕಾರಣ ಸಂಬಂಧವನ್ನು ಪ್ರಯೋಗಶಾಲೆಗಳಲ್ಲಿ ಸಿದ್ಧಪಡಿಸಿ ತೋರಿಸಲು ಜೋತಿಶ್ಶಾಸ್ತ್ರಕ್ಕೆ ಶಕ್ಯವೇಯಿಲ್ಲ. ಹಾಗೆಂದ ಮಾತ್ರಕ್ಕೆ ಇದೊಂದು ಶಾಸ್ತ್ರವೇ ಅಲ್ಲ. ವಿಜ್ಞಾನವೇ ಅಲ್ಲವೆಂದು ನಿರಾಕರಿಸುವುದು ಮತ್ತು ಇದು ಬರಿ ಮೂಢ ನಂಬಿಗೆಯೆಂದು ಜರೆಯುವುದು ಹಾಗೆ ಮಾಡುವವರು ಪೂರ್ವಗ್ರಹ ಪೀಡಿತ ಮನಸ್ಕರೆಂಬುದನ್ನೇ ಎತ್ತಿ ತೋರಿಸುತ್ತದೆ. ವಿಜ್ಞಾನರಂಗದಲ್ಲಿ ಪ್ರಯೋಗಿಸಿನೋಡುವುದರಷ್ಟೇ ಮಹತ್ವ ಪ್ರಯೋಗಕ್ಕೆ ನಿಲುಕದ್ದನ್ನು ವೀಕ್ಷಿಸುವುದಕ್ಕೂ ಇದೆ. ಖಗೋಳ ವಿಜ್ಞಾನಿಗಳು ಸಾವಿರಾರು ವರ್ಷಗಳಿಂದ ಇದನ್ನೇ ಮಾಡುತ್ತ ಬಂದಿದ್ದಾರೆ. ಇಂದಂತೂ ಬರಿಗಣ್ಣಿಗೆ ಕಾಣದಂತಹ ದೂರದರ್ಶಕ, ರೇಡಿಯೋ ದೂರದರ್ಶಕಗಳಿಗೂ ನಿಲುಕದಂತಹ ದೂರದಲ್ಲಿರುವುದನ್ನು ಗುರುತಿಸಲು ಮನುಷ್ಯ ಯತ್ನಿಸುತ್ತ ಅಷ್ಟಿಷ್ಟು ಯಶಸ್ಸನ್ನೂ ಸಂಪಾದಿಸಿದ್ದಾನೆ. ಇದೇ ರೀತಿ ನಮ್ಮ ಕಣ್ಣಿಗೆ ಕಾಣುವ ಗ್ರಹ, ನಕ್ಷತ್ರಗಳ ಚಲನೆಯು ವಿಶ್ವದ ಅಂತರ್ಗತ ಭಾಗವೇ ಆದ ಈ ಪೃಥ್ವಿಯ ಮೇಲೆ, ಅಲ್ಲಿನ ಸಕಲ ಚರಾಚರ ವಸ್ತುಗಳ ಮೇಲೆ ಪರಿಣಾಮ ಬೀರುತ್ತದೆಂದು ಹೇಳಿದರೆ ಅದು ಅಂಧಶ್ರದ್ಧೆ ಯಾಕಾಗಬೇಕು? ವಿಶ್ವದಲ್ಲಿಯ ಪ್ರತಿ ವಸ್ತುವೂ ಇನ್ನೊಂದಕ್ಕೆ ಸಂಬಂಧಪಟ್ಟುದು ಆಗಿ-

ರಲೇಬೇಕೆಂದು ತರ್ಕಬದ್ಧವಾಗಿದೆ. ಪುರಾತನ ಕಾಲದಿಂದಲೂ ಮನುಷ್ಯ ಆಕಾಶಕಾಯಗಳನ್ನು ಗಮನಿಸುತ್ತ, ಈ ನೆಲದ ಮೇಲೆ ಮನುಷ್ಯಾದಿ-ಗಳ ಮೇಲೆ ಅವುಗಳ ಚಲವಲನದ ಪರಿಣಾಮ-ವನ್ನು ನಿರೀಕ್ಷಿಸುತ್ತ ಬಂದು ಜ್ಯೋತಿಷ್ಯ ದಂತಹ ಒಂದು ಶಾಸ್ತ್ರವನ್ನು ರೂಪಿಸಿದ್ದಾನೆ. ಹೀಗಿರುವಾಗ ಪುರಾತನರು ಕಂಡದ್ದೆಲ್ಲ ಜೊಳ್ಳು ಎಂದು ಹೇಳುತ್ತ ಹೋಗುವುದು ನಮ್ಮ ದೌರ್ಬಲ್ಯವನ್ನೇ ತೋರಿಸೀತು. ನಾವಿಲ್ಲಿ ಮಾಡ ಬೇಕಾದದ್ದೆಂದರೆ ನಮಗೆ ಲಭ್ಯವಿರುವ ಜ್ಞಾನ-ನಿಧಿಯನ್ನೆಲ್ಲ ದುಡಿಸಿಕೊಳ್ಳುವುದು. ಈ ದೃಷ್ಟಿ-ಯಿಂದ ಯೋಚಿಸಿದಾಗ ಮಾತ್ರ ಜ್ಯೋತಿಷ್ಯ ವಿಚಾರವನ್ನು, ಅರ್ಥಮಾಡಿಕೊಳ್ಳಬಹುದಾ-ಗಿದೆ. ಪರ್ಜನ್ಯ, ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಬರಗಾಲ, ಗ್ರಹಣ, ರಾಜ್ಯ ಕ್ರಾಂತಿ, ಸೈನ್ಯಕ್ರಾಂತಿ, ಮಹಾಯುದ್ಧ, ನೈಸ-ರ್ಗಿಕ ಅನಾಹುತ, ಮೊದಲಾದ ಸಂಗತಿ ಗಳನ್ನು ಜ್ಯೋತಿಶ್ಶಾಸ್ತ್ರದ ಆಧಾರದ ಮೇಲಿಂದ ತಿಳಿ ಹೇಳುವುದೇ ಫಲಜ್ಯೋತಿಶ್ಶಾಸ್ತ್ರ. ಇದನ್ನು, ಜ್ಯೋತಿಶ್ಶಾಸ್ತ್ರದ ಶಾಖೆಯಾದ ಮೇಧನಿಜಾ-ತಕದ ಮೇಲಿಂದ ವಿವೇಚಿಸಬಹುದು. ತನ್ನ ನಿರೀಕ್ಷೆಯ ಬಲದಿಂದ ಬೆಳಕನ್ನು ತೋರಿ ಸುವವನೇ ಜ್ಯೋತಿಷಿಯು, ರವಿ ಕಾಣದ್ದನ್ನು ಕವಿ ಕಂಡ ಎಂದು ಹೇಳುವಂತೆಯೆ ರವಿ, ಕವಿ ಇಬ್ಬರೂ ಕಾಣದ್ದನ್ನು ಜ್ಯೋತಿಷಿ ಕಾಣುತ್ತಾ ನೆಂದೂ ಹೇಳಬಹುದು. ಗ್ರಹಗತಿಯಿಂದ ಆಗ-ಬಹುದಾದ ಪರಿಣಾಮ ಕುರಿತು ಹೇಳುವವನು ಫಲಜ್ಯೋತಿಷಿ.

ಈ ಹಿನ್ನೆಯಲ್ಲಿ ಇದೇ ಫೆಬ್ರುವರಿ ೧೬ ರಂದು (ಮಧ್ಯಾಹ್ನ ೨-೨೦ರಿಂದ ಸಂಜೆ ೪-೫೩ರವರೆಗೆ ಹಿಡಿಯಲಿರುವ ಖಗ್ರಾಸ ಸೂರ್ಯಗ್ರಹಣದ ವಿಷಯವಾಗಿ ಫಲಜ್ಯೋತಿಷ್ಯದ ಭಾಷೆ ಏನು? ಗ್ರಹಣದ ಪರಿಣಾಮವೆಂತು? ಏನು? ಮೊದ ಲಾದ ವಿಷಯಗಳನ್ನು ಕುರಿತು ಇಲ್ಲಿ ವಿಶ್ಲೇ-ಷಿಸಲು ಪ್ರಯತ್ನಿಸಲಾಗಿದೆ. ಕಾರಣ ಈ ಸಮಯದಲ್ಲಿ ಜಗತ್ತಿನ ಅನೇಕ ವಿಜ್ಞಾನಿಗಳು ಭಾರತಕ್ಕೆ ಬಂದು ಗ್ರಹಣದ ಸಮಯದಲ್ಲಿ ಸೂರ್ಯಬಿಂಬದ ಸಂಶೋಧನೆಗೆ ತೊಡಗು ತ್ತಾರೆ. ಖಗೋಳವಿಜ್ಞಾನಿಗಳು ಮಾಡಬೇ ಕಾದ ಅವಶ್ಯ ಕಾರ್ಯವದುವಾದರೂ ನಮ್ಮ ಶಾಸ್ತ್ರ ಈ ವಿಷಯದಲ್ಲಿ ಏನು ಹೇಳುತ್ತದೆ ಎಂಬು ದನ್ನೂ ನಾವು ಈ ಸಮಯದಲ್ಲಿ ನೋಡು ವುದು ಅವಶ್ಯವೆಂದು ನನಗನಿಸುತ್ತದೆ. ಗ್ರಹಣ ಎಂದು ? ಇದೇ ಸಂವತ್ಸರದ ಅಂದರೆ ೧೯೦೧ ಸಿದ್ಧಾರ್ಥಿಸಂವತ್ಸರದ ಮಾಘ ಬಹುಳ ಅಮಾ ವಾಸ್ಯೆ ಶನಿವಾರ ದಿನಾಂಕ ೧೬-೨-೧೯೮೦ ರಂದು ಧಾರವಾಡದ ಅಂಕ್ಷಾಂಶ ರೇಖಾಂಶ ದಲ್ಲಿ ಅಂದರೆ ಸೂರ್ಯೋದಯ ಸೂರ್ಯಾಸ್ತದ ಪ್ರಕಾರ ಹಗಲು ಮೂರನೇ ಪ್ರಹರದಲ್ಲಿ, ಅಂದರೆ ಮಧ್ಯಾಹ್ನ ೨-೨೦ಕ್ಕೆ (೧೪-೨೦) ಹಿಡಿದು ಸಂಜೆ ೪-೫೩ಕ್ಕೆ (೧೬-೫೩) ಬಿಡುತ್ತದೆ. ಈ ಗ್ರಹಣ ಹಿಡಿಯುವಿಕೆ ಬಿಡುವಿಕೆ ಅರ್ಥಾತ್ ಸ್ಪರ್ಶ ಮೋಕ್ಷಗಳು ಭಾರತದ ಬೇರೆ ಬೇರೆ ಪ್ರಾಂತದಲ್ಲಿ ಹಾಗೂ ಕರ್ನಾಟಕದ ಬೇರೆ ಬೇರೆ ಊರುಗಳಲ್ಲಿ ಭಿನ್ನವಿರುತ್ತವೆ; ಆಯಾ ಊರು ಗಳ ರೇಖಾಂಶ ಅಕ್ಷಾಂಶ ಸೂರ್ಯೋದಯ ಸೂರ್ಯಾಸ್ತ ಸಮಯಕ್ಕನುಸಾರವಾಗಿ ಭಿನ್ನ-ವಾಗುತ್ತದೆ.

ಗ್ರಹಣದ ವೈಶಿಷ್ಟ್ಯವೇನು? ಸಾಮಾನ್ಯ ವಾಗಿ ಪ್ರತಿ ಸಂವತ್ಸರದಲ್ಲಿ ಒಂದಿಲ್ಲೊಂದು ಗ್ರಹಣ ಅಂದರೆ ಸೂರ್ಯಗ್ರಹಣ ಇಲ್ಲವೆ ಚಂದ್ರ ಗ್ರಹಣ ಇದ್ದೇ ಇರುತ್ತದೆ. ಗ್ರಹಣರಹಿತ ಸಂವತ್ಸರವಿರುವುದು ಕಡಿಮೆ. ಈ ದೇಶದಲ್ಲಿ ಕಾಣಿಸದಿದ್ದರೆ ಬೇರೆ ದೇಶಗಳಲ್ಲಿಯಾದರೂ ಕಾಣಿಸುತ್ತದೆ. ಹಾಗಾದರೆ ಈ ಸಂವತ್ಸರದ ಈ ತಿಂಗಳಲ್ಲಿ ಗೋಚರಿಸುವ ಈ ಸೂರ್ಯ ಗ್ರಹಣಕ್ಕೆ ಇಷ್ಟೇಕೆ ಮಹತ್ವ ಎಂದು ಎಲ್ಲರೂ ಪ್ರಶ್ನಿಸುತ್ತಾರೆ. ಇದಕ್ಕೆ ಉತ್ತರವಿಷ್ಟೇ, ಪ್ರತಿ ಸಂವತ್ಸರದಲ್ಲಿ ಜರಗುವ ಗ್ರಹಣಕ್ಕೂ ಈ ಸಂವತ್ಸರದಲ್ಲಿಯ ಗ್ರಹಣಕ್ಕೂ ತುಂಬ ಅಂತರ ವಿದೆ. ಈ ತಿಂಗಳಲ್ಲಿ ಜರಗುವ ಸೂರ್ಯ ಗ್ರಹಣವು ಖಗ್ರಾಸವಿದ್ದು ಸೂರ್ಯಬಿಂಬವು ಪೂರ್ಣ ಪ್ರಮಾಣದಲ್ಲಿ ಚಂದ್ರಬಿಂಬದಿಂದ ಮುಚ್ಚಲ್ಪಡುತ್ತದೆ. ಈ ಪ್ರಕಾರದ ದೃಶ್ಯವು ೮೫

ವರ್ಷಗಳ ನಂತರ ಪ್ರಪ್ರಥಮವಾಗಿ ಭಾರತದ ವಿಸ್ತೀರ್ಣ ಪ್ರದೇಶದಲ್ಲಿ ಗೋಚರಿಸುತ್ತದೆ. ೨೨-೧-೧೮೯೮ರಲ್ಲಿ ರತ್ನಾಗಿರಿ ಕೊಲ್ಲಾಪುರ ಭಾಗದಲ್ಲಿ ಈ ಪ್ರಕಾರದ ಖಗ್ರಾಸ ಸೂರ್ಯಗ್ರಹಣ ಗೋಚರಿಸಿತ್ತು. ಇದಾದ ಬಳಿಕ ೮೨ ವರುಷಗಳ ನಂತರ ಈ ತಿಂಗಳಲ್ಲಿ ಕಾಣುತ್ತದೆ. ೩೦-೬-೧೯೫೪ರ ಸಂಜೆ ೬-೪೩ಕ್ಕೆ ಹಿಡಿದು ರಾತ್ರಿ ೮-೨೩ಕ್ಕೆ ಬಿಟ್ಟದ್ದು ಇಂಥದೇ ಖಗ್ರಾಸ ಸೂರ್ಯಗ್ರಹಣವಾಗಿತ್ತು. ಆದರೆ ಆ ಗ್ರಹಣದ ದೃಶ್ಯ ಭಾರತದ ರಾಜಸ್ಥಾನದ ಸ್ವಲ್ಪ ಪ್ರದೇಶದಲ್ಲಿ ಮಾತ್ರ ೩೦ ಸೆಕೆಂದಿನಿಂದ ಒಂದು ಮಿನಿಟಿನಷ್ಟು ಮಾತ್ರ ಕಂಡಿತು. ಅಲ್ಲದೆ ಅದು ಜ್ಯೇಷ್ಠಮಾಸ (ಜೂನ್ ತಿಂಗಳು) ಮಳೆಗಾಲದ, ವ್ಯಾಪಕವಾಗಿ ಮೋಡ ಮುಸುಕಿದ್ದ ಸೂರ್ಯಾಸ್ತದಲ್ಲಿ ಗ್ರಹಣವಿದ್ದ ಕಾರಣ ಖಗ್ರಾಸ ದೃಶ್ಯ ನೋಡಲು ಸಿಗಲಿಲ್ಲ. ಈ ಸಲ ಹಾಗಿಲ್ಲ ಶಿಶಿರಋತುವಿನ ಫೆಬ್ರುವರಿ ತಿಂಗಳಲ್ಲಿ ಶುಭ್ರ ಆಕಾಶದಲ್ಲಿ ಮಧ್ಯಾಹ್ನ ೨-೨೦ ರಿಂದ ಸಂಜೆ ೪-೫೩ರ ಸಮಯದಲ್ಲಿ ಸೂರ್ಯಾಸ್ತವಾಗಲು ಬೇಕಾದಷ್ಟು ಸಮಯವಿದೆ. ಇನ್ನೊಂದು ವೈಶಿಷ್ಟ್ಯವೆಂದರೆ ಭಾರತದ ಕರ್ನಾಟಕ, ಆಂಧ್ರ, ಓಡಿಸಾ, ಮಧ್ಯಪ್ರದೇಶ, ಬಂಗಾಲ, ಮಿಜೋರಾಮ ಈ ಆರು ರಾಜ್ಯಗಳ ಅನೇಕ ಪುರಪಟ್ಟಣಗಳಲ್ಲಿ ಖಗ್ರಾಸ ಸೂರ್ಯಗ್ರಹಣದ ದೃಶ್ಯ ನೋಡಲು ಸಿಗುತ್ತದೆ. ಇದೊಂದು ಅಪೂರ್ವ ಯೋಗವಲ್ಲದಿನ್ನೇನು? ಸಪ್ತಗ್ರಹಯೋಗ ಅಷ್ಟಗ್ರಹಯೋಗಗಳಂತೆಯೆ ೮೨ ವರುಷದ ನಂತರ ನೋಡಲು ಸಿಗುವ ಖಗ್ರಾಸ ಸೂರ್ಯಗ್ರಹಣದ ದೃಶ್ಯವೂ ಒಂದು ವಿರಳ ವೈಶಿಷ್ಟ್ಯ. ನಮ್ಮ ಪಂಚಾಂಗಕರ್ತರ ಪ್ರಕಾರ ಇನ್ನು ೧೫ ವರುಷಗಳ ನಂತರ ಅಂದರೆ ೨೪-೧೦-೧೯೯೫ ರಂದು ನಾಗಪುರ ವಿದರ್ಭ ಪ್ರದೇಶದಲ್ಲಿ ಇಂಥದೇ ಖಗ್ರಾಸ ಸೂರ್ಯಗ್ರಹಣ ಗೋಚರಿಸುವುದಂತೆ.

ಗ್ರಹಣದ ಪರಿಣಾಮ ಹೇಗಾಗಬಹುದು? ಪರಂಪರಾಗತ ಶಾಸ್ತ್ರ ರೀತ್ಯಾ ಈ ಗ್ರಹಣದ ಪರಿಣಾಮವನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಆರೋಗ್ಯ ದೃಷ್ಟಿಯಿಂದ, ರಾಜ್ಯಗಳ ಮೇಲೆ, ಭಾರತದ, ಮೇಲೆ, ಜಗತ್ತಿನ ಮೇಲೆ, ಪ್ರಮುಖ ಪಟ್ಟಣಗಳ ಮೇಲೆ ಏನಾಗಬಹುದೆಂಬುದನ್ನು ಪರಿಶೀಲಿಸುವ ಮೊದಲು ಲಕ್ಷ್ಯದಲ್ಲಿಡಬೇಕಾದ ಸಂಗತಿಯೆಂದರೆ ಚಂದ್ರಗ್ರಹಣದ ಶುಭಾಶುಭ ಫಲದ ಪರಿಣಾಮದ ಅವಧಿ ಗ್ರಹಣ ಹಿಡಿದಂದಿನಿಂದ ಮೂರು ತಿಂಗಳವರೆಗೆ ಇದ್ದರೆ ಸೂರ್ಯಗ್ರಹಣದ ಶುಭಾಶುಭ ಫಲದ ಅವಧಿ ಆರು ತಿಂಗಳವರೆಗೆ ಇರುತ್ತದೆ. ಮಾಘಮಾಸದಲ್ಲಿ ಕುಂಭ ರಾಶಿಯಲ್ಲಿ ಧನಿಷ್ಠಾ ನಕ್ಷತ್ರದಲ್ಲಿ ಗ್ರಹಣವಾಗುತ್ತಿದೆ. ಕುಂಭವು ವಾಯುತತ್ವದ ರಾಶಿ, ಧನಿಷ್ಠಾ ಭೂ ಹಾಗೂ ವಾಯುತತ್ತ್ವದ ಮಿಶ್ರಿತ ನಕ್ಷತ್ರ, ಆದುದರಿಂದ ಹವಾದೂಷಿತ ರೋಗಗಳು ಪ್ರಧಾನ ರೋಗಗಳು, ರಕ್ತಕ್ಕೆ ಸಂಬಂಧಿಸಿದ ಎಲ್ಲ ರೋಗಗಳು ಅರ್ಥಾತ್ ಬ್ಲಡ್ ಪ್ರಶರ್, ಪಾಂಡುರೋಗ, ಕಾಮಣಿ ರೋಗಿಗಳ ಸಂಖ್ಯೆ ಹೆಚ್ಚಾಗುತ್ತದೆ. ಅಲ್ಲದೆ ಹೃದಯರೋಗಿಗಳ, ಮಾನಸಿಕ ರೋಗಿಗಳ, ಅರ್ಧಾಂಗ ಪೀಡಿತ ರೋಗಿಗಳ ಸಂಖ್ಯೆಯೂ ಮೊಳಕಾಲು ತೊಡೆನೋವುಗಳಿಂದ ಬಳಲುವ ರೋಗಿಗಳ ಸಂಖ್ಯೆಯೂ ಹೆಚ್ಚಾಗಬಹುದಾಗಿದೆ. ಅಲ್ಲದೇ ವಾಯುತತ್ವದ ಕುಂಭ ರಾಶಿಯಲ್ಲಿ ಗ್ರಹಣವಾಗುವದರಿಂದ ಆಣೆಕಟ್ಟು, ಜಲಾಶಯ ಯೋಜನೆಗಳ ಪ್ರದೇಶಗಳಿಗೂ ವಿಮಾನ ನಿಲ್ದಾಣ ಹಾಗು ವಿಮಾನಗಳಿಗೂ ಹಾನಿ, ಬಿರುಗಾಳಿಗಳಿಂದ ಅಹಾಹುತ, ಸಂಪರ್ಕ ಮಾಧ್ಯಮಗಳಾದ ಆಕಾಶವಾಣಿಗೆ, ಪತ್ರಿಕೆಗಳಿಗೆ ತೊಂದರೆ ಕಂಡುಬರುತ್ತದೆ.

ಗ್ರಹಣದ ಶುಭಾಶುಭ ಪರಿಣಾಮವು ಜಗತ್ತಿನ ಯಾವ ಪಟ್ಟಣ ಯಾವ ದೇಶ ಹಾಗು ಯಾವ ಭಾಗದ ಮೇಲೆ ಹೇಗೆ ಆಗುತ್ತದೆ ಎಂಬುದನ್ನು ಅರಿಯಲು ಎರಡು ಸಂಗತಿಗಳನ್ನು ಪರಿಶೀಲಿಸಬೇಕು. ೧) ಯಾವ ಭಾಗದಲ್ಲಿ ಗ್ರಹಣ ಕಾಣುತ್ತದೆ? ೨) ಯಾವ ರಾಶಿಯಲ್ಲಿ ಗ್ರಹಣ ಹಿಡಿಯುತ್ತದೆ? ಈ ಎರಡು ಸಂಗತಿಗಳಿಂದ ಗ್ರಹಣದ ಶುಭಾಶುಭ ಪರಿಣಾಮವನ್ನು ಗುಣಿಸಿ ಹೇಳಬಹುದು. ಪ್ರಸ್ತುತ ಸೂರ್ಯ ಗ್ರಹಣವು ಬಂಗ್ಲಾದೇಶ, ಆಫ್ರಿಕದ ದಕ್ಷಿಣ ಭಾಗ ಭಾರತದಲ್ಲಿ ಕರ್ನಾಟಕ, ಮಧ್ಯ

(೧೧೦ ನೇ ಪುಟಕ್ಕೆ)

ಗ್ರಹಣ ವೀಕ್ಷಕರಿಗೊಂದು ಕಿವಿಮಾತು

ಫೆಬ್ರವರಿ ೧೬ ರಂದು ಸಂಭವಿಸಲಿರುವ ಸೂರ್ಯಗ್ರಹಣದ ಬಗ್ಗೆ ಈಗಾಗಲೇ ಪತ್ರಿಕೆಗಳಿಂದ ಅನೇಕ ವಿಷಯಗಳು ತಿಳಿದಿರಬಹುದು. ಈ ಗ್ರಹಣಕ್ಕಾಗಿ ದೇಶ ವಿದೇಶಗಳಿಂದ ಅನೇಕ ಗಣ್ಯರು, ವಿಜ್ಞಾನಿಗಳು ಬರುತ್ತಾರೆ. ಖಂಡಗ್ರಾಸ ಗ್ರಹಣಗಳು ವರ್ಷಕ್ಕೆ ಒಂದು, ಕೆಲವೊಮ್ಮೆ ಎರಡೂ ಉಂಟಾಗಬಹುದು, ಆದರೆ ಖಗ್ರಾಸ ಗ್ರಹಣಗಳು ಅಪರೂಪ. ಈ ಗ್ರಹಣದ ಖಗ್ರಾಸಾವಸ್ಥೆಯು ಅಲ್ಪ ಅವಧಿಯ ಮೂರು ನಿಮಿಷಗಳು ಮಾತ್ರ. ಕರ್ನಾಟಕದಲ್ಲಿ ಇದನ್ನು ವೀಕ್ಷಿಸ ಬಯಸುವ ಕೆಲವು ಸ್ಥಳಗಳಲ್ಲಿ ಈ ಅವಧಿಯ ದಿನಗಳನ್ನು ಪಕ್ಕದಲ್ಲಿ ಪಟ್ಟಿ ಮಾಡಲಾಗಿದೆ.

ಸೂರ್ಯ ಗ್ರಹಣವನ್ನು ಬರಿಗಣ್ಣಿನಿಂದ ನೋಡುವುದು ಅಪಾಯಕಾರಿ. ಸಾಕಷ್ಟು ಎಚ್ಚರಿಕೆ ವಹಿಸದಿದ್ದಲ್ಲಿ ದೃಷ್ಟಿಹೀನರಾಗುವ ಸಂಭವವಿದೆ. ಆದ್ದರಿಂದ ಗ್ರಹಣವನ್ನು ನೇರವಾಗಿ ನೋಡದಂತೆ ಬೇರೆ ಉಪಾಯಗಳನ್ನು ಹುಡುಕಬೇಕು. ಒಂದು ಉಪಾಯವು ಅತ್ಯಂತ ಸುಲಭ. ಒಂದು ಕಪ್ಪು ಕಾಗದದ ಮೇಲೆ ಸಣ್ಣ ರಂಧ್ರವನ್ನು ಮಾಡಿ. ಆ ಕಪ್ಪು ಕಾಗದವನ್ನು ಕನ್ನಡಿಯೊಂದರ ಮೇಲೆ ಮುಚ್ಚಿ. ಇದನ್ನು ಹೊರಗಡೆ ಇಟ್ಟು [illegible] ಅಥವಾ [illegible] ಬಿಸಿಲನ್ನು ಮನೆಯೊಳಗೆ ಹಾಯಿಸಿ ಗೋಡೆಯ ಮೇಲೆ ಸೂರ್ಯಬಿಂಬ ಮೂಡುವುದು. ಬಿಳಿಯ ಕಾಗದ, ಬಿಳಿಯ ಬಟ್ಟೆ ಅಥವಾ ಫೋಟೋ ಕಾಗದ ಇದನ್ನು, ಗೋಡೆಯ ಮೇಲೆ ಬಿಸಿಲಿನಲ್ಲಿ ಬಹಳ ಚೆನ್ನಾಗಿ ಕಾಣುತ್ತದೆ. ಗ್ರಹಣದ ಪ್ರಾರಂಭವಾಗುವುದರಿಂದ ಮುಗಿಯುವವರೆಗಿನ ವಿವಿಧ ಹಂತಗಳನ್ನು ಗೋಡೆಯ ಮೇಲೆ ನೋಡಬಹುದು. ಗ್ರಹಣ ಖಗ್ರಾಸವಾದಾಗ ಗೋಡೆಯ ಮೇಲೆ ಏನೂ ಕಾಣುವುದಿಲ್ಲ. ಆ ಕ್ಷಣವೇ ಹೊರಗೆ ಹೋಗಿ ಬರಿಗಣ್ಣಿನಿಂದ ಸೂರ್ಯನನ್ನು ನೋಡಬಹುದು. ಆಗ ಸೂರ್ಯನ ಸಮೀಪದಲ್ಲಿ ಬುಧಗ್ರಹವೂ ನೆತ್ತಿಯ ಮೇಲೆ ಶುಕ್ರಗ್ರಹವೂ ಕಾಣುವುವು. ಕುಂಭ ಮತ್ತು ಮಕರ ರಾಶಿಗಳ ನಡುವೆ ಸೂರ್ಯನು ಇರುವುದರಿಂದ ಅತ್ಯಂತ ಪ್ರಕಾಶಮಾನವಲ್ಲದ ನಕ್ಷತ್ರಗಳು ಯಾವವೂ ಕಾಣುವುದಿಲ್ಲ. ಆದರೂ ಅಲ್ಲಿ ಇಲ್ಲಿ ನಕ್ಷತ್ರಗಳು ಕಾಣುವ ಸಾಧ್ಯತೆ ಇದೆ.

ಬರಿಗಣ್ಣಿನಿಂದ ಹೀಗೆ ನೋಡಿದಾಗ ಸೂರ್ಯನ ಕಿರೀಟ ಕಾಣುತ್ತದೆ. ಆದರೆ ಹೆಚ್ಚು ಹೊತ್ತು ಅದನ್ನೇ ನೋಡದೆ ಮತ್ತೆ ಒಳಗೆ ಹೋಗಿ ಗೋಡೆಯತ್ತ ಕಾತರರಾಗಿ ನೋಡಿದರೆ, ಗ್ರಹಣದ ಮುಕ್ತಾಯದ ವೇಳೆಯಲ್ಲಿ ಸೂರ್ಯಬಿಂಬ ಥಳಥಳನೆಯು ಹೊಳೆಯುವುದು. ಆಗ ಕ್ಯಾಮರಾದಿಂದ ಅದನ್ನು ಫೋಟೋ ತೆಗೆದರೆ ವಜ್ರದುಂಗುರದಂತೆ ಕಾಣುವುದು.

ಇದಲ್ಲದೆ ಮಹಡಿಯ ಮೇಲೆ ವಾಸಿಸುವವರು, ಚಂದ್ರನ ನೆರಳು ಸಮೀಪಿಸುತ್ತಿರುವುದನ್ನು ದೂರದಿಂದಲೇ ನೋಡಬಹುದು. ಈ ನೆರಳಿನ ವೇಗ ಸುಮಾರು ಗಂಟೆಗೆ ಒಂದು ಸಾವಿರ ಮೈಲುಗಳು. ಆದ್ದರಿಂದ ದೂರದ ಪರ್ವತ ಪ್ರದೇಶಗಳು ಹಂತಹಂತವಾಗಿ ನೆರಳಿನಲ್ಲಿ ಕರಗಿಹೋಗುವುದನ್ನು ಕ್ಯಾಮರಾದಿಂದ ಸೆರೆಹಿಡಿಯಬಹುದು. ಹಾಗೆ ನೋಡುವಾಗ, ಗಾಳಿಯಿಲ್ಲದೆ ಆಕಾಶ ನಿರ್ಮಲವಾಗಿದ್ದರೆ ಕಪ್ಪು ಬಣ್ಣದ ಉಂಗುರಗಳು ಗಾಳಿಯಲ್ಲಿ ತೇಲುತ್ತಿರುವಂತೆ ಅನ್ನಿಸುತ್ತದೆ. ಕ್ರಮೇಣ ಈ ಉಂಗುರಗಳ ಸಂಖ್ಯೆ ಹೆಚ್ಚಿ, ಅವು ನಮ್ಮ ಮೂಲಕ ತೂರಿ ಹೋಗುವ ಅನುಭವವೂ ಉಂಟಾಗುತ್ತದೆ. ಇದೊಂದು ಅಪೂರ್ವ ಅನುಭವವಾದದ್ದರಿಂದ ತಪ್ಪದೇ ಗಮನಿಸಬೇಕು.

ಮಸಿ ಹಿಡಿದ ಗಾಜು, ತಂಪು ಕನ್ನಡಕಗಳಿಗಿಂತ ಈ ವಿಧಾನ ನಿರಪಾಯಕಾರಿ. ಆದ್ದರಿಂದ ಇದನ್ನು ಬಳಸುವುದೇ ಸೂಕ್ತ.

–ಬಿ. ಎಸ್. ಶೈಲಜಾ

ಗ್ರಹಣ ಎಲ್ಲಿ? ಹೇಗೆ?

ಸ್ಥಳ	ಖಂಡಗ್ರಾಸ ಗ್ರಹಣದ ಆರಂಭ	ಖಗ್ರಾಸ ಗ್ರಹಣದ ಆರಂಭ	ಖಗ್ರಾಸ ಗ್ರಹಣದ ಮುಕ್ತಾಯ	ಖಂಡಗ್ರಾಸ ಗ್ರಹಣದ ಮುಕ್ತಾಯ
	ಗಂ. ನಿ. ಸೆ.	ಗಂ. ನಿ. ಸೆ.	ಗಂ. ನಿ. ಸೆ.	ಗಂ. ನಿ. ಸೆ.
ಕಾರವಾರ	14 17 20	15 38 35	15 41 17	16 52 11
ಬೆಳಗಾಂವಿ*	14 19 07	—	—	16 52 50
ಕಲಘಟಗಿ	14 19 29	15 40 00	15 42 42	16 52 58
ಧಾರವಾಡ	14 19 48	15 40 33	15 42 34	16 53 05
ಹುಬ್ಬಳ್ಳಿ	14 20 00	15 40 25	15 42 57	16 53 09
ಹಾವೇರಿ	14 20 06	15 40 38	15 42 51	16 53 08
ಸವಣೂರು	14 20 06	15 40 23	15 43 06	16 53 09
ಕುಂದಗೋಳ	14 20 08	15 40 23	15 43 09	16 53 11
ಬ್ಯಾಡಗಿ	14 20 10	15 41 05	15 42 29	16 53 08
ರಾಣೆಬೆನ್ನೂರು*	14 20 26	—	—	16 53 13
ನವಲಗುಂದ	14 20 37	15 40 58	15 43 12	16 53 22
ಅಣ್ಣಿಗೇರಿ	14 20 40	15 40 48	15 43 27	16 53 23
ಶಿರಹಟ್ಟಿ	14 20 49	15 40 49	15 43 38	16 53 25
ಹರಿಹರ*	14 20 44	—	—	16 53 18
ದಾವಣಗೆರೆ*	14 20 57	—	—	16 53 21
ಗದಗ	14 21 06	15 41 02	15 43 47	16 53 32
ಮುಂಡರಗಿ	14 21 26	15 41 18	15 43 56	16 53 37
ಗಜೇಂದ್ರಗಡ	14 22 03	15 41 45	15 44 16	16 53 52
ಮುನಿರಾಬಾದ್	14 22 28	15 42 05	15 44 28	16 53 58
ಕುಷ್ಟಗಿ	14 22 31	15 41 59	15 44 39	16 54 02
ಇಳಕಲ್	14 22 31	15 42 17	15 44 20	16 54 02
ಹೊಸಪೇಟೆ	14 22 33	15 42 14	15 44 25	16 53 59
ಗಂಗಾವತಿ	14 22 57	15 42 22	15 44 49	16 54 08
ಬೆಂಗಳೂರು*	14 23 31	—	—	16 53 37
ಲಿಂಗಸ್ಗೂರು	14 23 51	15 42 55	15 45 25	16 54 27
ಮಸ್ಕಿ	14 24 26	15 43 10	15 45 55	16 54 40
ರಾಯಚೂರು	14 25 13	15 43 42	15 46 23	16 54 56
ಮೈಸೂರು*	14 47 43	—	—	17 02 23

* ಈ ಸ್ಥಳದಲ್ಲಿ ಖಗ್ರಾಸ ಗ್ರಹಣ ಕಾಣುವುದಿಲ್ಲ.

(೧೦೭ನೇ ಪುಟದಿಂದ)

ಪ್ರದೇಶ, ಆಂಧ್ರ, ಓಡಿಸ್ಸಾ, ಬಂಗಾಲ, ಮಿಜೋರಾಂ ಈ ರಾಜ್ಯಗಳಲ್ಲಿ, ಗೋಚರಿಸುವುದರಿಂದ ಈ ರಾಜ್ಯಗಳಿಗೆ ಅಶುಭವಿದ್ದು ಇವು ನೈಸರ್ಗಿಕ ಪ್ರಕೋಪವನ್ನು ಎದುರಿಸಬೇಕಾಗುತ್ತದೆ. ಅದರಲ್ಲಿಯೂ ಕರ್ಕರಾಶಿಯು ಆಂಧ್ರ, ಆಸಾಮ, ವೃಶ್ಚಿಕರಾಶಿಯು ಓಡಿಸಾ, ಕಾಶ್ಮೀರ, ಕುಂಭರಾಶಿಯು ಬಂಗ್ಲಾದೇಶ ಮತ್ತು ಬಂಗಾಲ ರಾಜ್ಯಗಳಿಗೂ ಕರಾವಳಿಯ ಪ್ರದೇಶದ ಜನರಿಗೂ ಈ ಗ್ರಹಣ ಹೆಚ್ಚು ಅನಿಷ್ಟವಿದ್ದು ಬಿರುಗಾಳಿ, ಭೂಕಂಪ, ದಂಗೆಗಲಭೆ, ಅಪಘಾತಾದಿಗಳಿಂದ ಇವು ಹಾನಿಗೀಡಾಗಬಹುದಾಗಿದೆ. ಅಲ್ಲದೇ ಜಲಾಶಯ ಮತ್ತು ನದೀ ಯೋಜನೆ ಪ್ರದೇಶಗಳಾದ ಅಣೆಕಟ್ಟುಗಳಿಗೂ ಆಕಾಶವಾಣಿ, ವಿಮಾನ ಹಾಗೂ ವಿಮಾನ ನಿಲ್ದಾಣಗಳಿಗೂ ಪತ್ರಿಕಾಲಯಗಳಿಗೂ ತೊಂದರೆಯ ಯೋಗವಿದೆ.

ವಿಶ್ವದ ವಿವಿಧ ರಾಷ್ಟ್ರಗಳ ಮೇಲೆ ಗ್ರಹಣದ ಪರಿಣಾಮ ಗ್ರಹಣ ಕಾಣಿಸುವ ರಾಷ್ಟ್ರಗಳಾದ ಭಾರತ, ದಕ್ಷಿಣ ಆಫ್ರಿಕೆ, ಬಂಗ್ಲಾದೇಶಕ್ಕಂತೂ ಅನಿಷ್ಟ ಇದ್ದೇ ಇದೆ. ಅಲ್ಲದೇ ಕುಂಭರಾಶಿಯು ದೇಶಗಳಾದ ರಶಿಯ, ಇರಾಣ, ಸ್ವೀಡನ್, ಪೋರ್ತುಗಾಲಗಳಿಗೂ ಕರ್ಕರಾಶಿಯು ಚೀನ, ಸ್ಕಾಟ್‌ಲಂಡ್, ಹಾಲಂಡ್, ಕೆನಡಾ, ನ್ಯೂಜಿಲಂಡ್‌ಗಳಿಗೂ ವೃಶ್ಚಿಕರಾಶಿಯು ನಾರ್ವೆ, ಅಲ್ಜೀರಿಯಾ, ಬ್ರಾಜಿಲ್ ದೇಶಗಳಿಗೂ, ಮೀನರಾಶಿಯು ಇಜಿಪ್ತ, ಇರಾಕ್‌ಗಳಿಗೂ ಈ ಗ್ರಹಣ ಅಶುಭವಿದ್ದು, ಭೂಕಂಪ, ಬಿರುಗಾಳಿ, ವಾಹನಗಳ ಅಪಘಾತ, ಯುದ್ಧದ ಕಿಡಿ, ಹಾರುವಿಕೆ, ಸೈನ್ಯಕ್ರಾಂತಿ, ರಾಜ್ಯಕ್ರಾಂತಿಗಳಿಂದ ಅಧಿಕಾರದಲ್ಲಿರುವ ವ್ಯಕ್ತಿಗಳಿಗೆ ಪಕ್ಕಕ್ಕೆ ತೊಂದರೆ ಉಂಟಾಗಬಹುದಾಗಿದೆ.

ಗ್ರಹಣ ಪರಿಣಾಮದಿಂದ ಹಾನಿಗೀಡಾಗಬಹುದಾದ ಪುರಪಟ್ಟಣಗಳು: ನ್ಯೂಯಾರ್ಕ್, ವಾಶಿಂಗ್ಟನ್, ತೆಹರಾನ್, ಮಾಸ್ಕೋ, ಕಲಕತ್ತಾ, ಸುರತ, ಕಾನ್‌ಸ್ಟಂಟಿನೋಪಲ್, ಲಿವರ್‌ಪೂಲ್, ಟೋಕಿಯೋ, ವಿಶಾಖಪಟ್ಟಣ, ಮಂಗಳೂರು ಇವೇ ಮೊದಲಾದ ಪಟ್ಟಣಗಳು ಗ್ರಹಣದ ಪರಿಣಾಮದಿಂದ ನೈಸರ್ಗಿಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ವಿವಿಧ ರಾಶಿಯ ವ್ಯಕ್ತಿಗಳ ಮೇಲೆ ಗ್ರಹಣದ ಪರಿಣಾಮ: ಕುಂಭರಾಶಿಯಲ್ಲಿ ಗ್ರಹಣವಾಗುವುದರಿಂದ ಕರ್ಕ, ವೃಶ್ಚಿಕ, ಕುಂಭ, ಮೀನ ಈ ನಾಲ್ಕು ರಾಶಿಯವರಿಗೆ ಅಶುಭವಿದೆ. ಅವರಲ್ಲಿಯೂ ಧನಿಷ್ಟಾ ನಕ್ಷತ್ರದವರಾದ ಕುಂಭರಾಶಿಯವರಿಗೆ ವಿಶೇಷಾನಿಷ್ಟವಿದೆಯೆಂಬುದನ್ನು ಗಮನಿಸಬೇಕು.

ಮಿಥುನ, ಸಿಂಹ, ತುಲಾ, ಮಕರ ಈ ನಾಲ್ಕು ರಾಶಿಯವರಿಗೆ ಈ ಗ್ರಹಣವು ಶುಭಾಶುಭ ಮಿಶ್ರಿತ ಫಲ ಕೊಡುತ್ತದೆ.

ಮೇಷ, ಸಿಂಹ, ಕನ್ಯಾ, ಧನು ಈ ನಾಲ್ಕು ರಾಶಿಯವರಿಗೆ ಈ ಗ್ರಹಣವು ಶುಭಫಲವನ್ನು ಕೊಡುತ್ತದೆ.

ಪ್ರಾಣಿಗಳ ಮೇಲೆ ಗ್ರಹಣದ ಪರಿಣಾಮ ಮಾಘಮಾಸದಲ್ಲಿ ಗ್ರಹಣ ಇರುವದರಿಂದ ಗಜ ಅಶ್ವ, ಸೂಕರ (ಹಂದಿ) ಈ ಪ್ರಾಣಿಗಳಿಗೆ ಈ ಗ್ರಹಣವು ಅಶುಭ ಇದ್ದುದರಿಂದ ಈ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಬಹುದು.

ಪ್ರಸ್ತುತ ಸೂರ್ಯಗ್ರಹಣದ ಫಲಾಫಲಗಳನ್ನು ಸ್ಥೂಲಮಾನದಿಂದ ಇಲ್ಲಿ ರೇಖಿಸಿಯಾಗಿದೆ. ಆಧುನಿಕ ವೈಜ್ಞಾನಿಕ ರೀತ್ಯಾ ಅಂಕಿಸಂಖ್ಯೆಗಳನ್ನು ಸಂಗ್ರಹಿಸಿ ಗ್ರಹ ನಕ್ಷತ್ರಾದಿ ಆಕಾಶಕಾಯಗಳ ಚಲನೆಯ ಪರಿಣಾಮ ಈ ಪೃಥ್ವೀವಾಸಿಗಳ ಮೇಲೆ ಎಂತು ಆಗುತ್ತದೆಂಬುದನ್ನು ನಿರೀಕ್ಷಿಸಿ ಪುರಾತನ ವಿಚಾರಗಳ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ✡

ಫೆಬ್ರುವರಿ
1980

ಶ್ರದ್ಧೆಯೇ ಅವನ ಶಕ್ತಿ

ಬೆಳಂಬಾರಿನ ಗೌಡ

ಎಸ್. ಕೆ. ಕಲ್ಲಾಪುರ

ಬೆಳಂಬಾರಿನ ತೈಲ ಲೇಪನದಿಂದ ಆ ರೋಗವು ಗುಣವಾಗುತ್ತದೆ. ಕಾಲು ಕಿಲೋಗ್ರಾಮಿನಷ್ಟು ಅದನ್ನು ಕಳುಹಿಸಿಕೊಡು" ಎಂದು ಬೆಂಗಳೂರಿನಲ್ಲಿರುವ ನನ್ನ ಸಂಬಂಧಿಕರೊಬ್ಬರ ಮಗ ನನಗೆ ಪತ್ರ ಬರೆದ. ನನ್ನ ಸಂಬಂಧಿಕರು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರು. ಪತ್ರವನ್ನೋದುತ್ತಿದ್ದ ಹಾಗೆ ನನಗೆ ೧೯೧೧ನೆಯ ಇಸವಿಯ ಸುಮಾರಿನ ಘಟನೆಯೊಂದು ನೆನಪಿಗೆ ಬಂತು. ಆಗ ನಾನು ಕುಮಟಾ ಹೈಸ್ಕೂಲಿನ ವಿದ್ಯಾರ್ಥಿ.

▪

ಬೆಳಂಬಾರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಿಂದ ಎಂಟು ಕಿಲೋಮೀಟರ್ ಅಂತರದಲ್ಲಿ ದಕ್ಷಿಣ ದಿಕ್ಕಿಗಿರುವ ಹಳ್ಳಿ. ಅಲ್ಲಿಯ ಗೌಡರ ಜಾತಿಯ ಒಂದು ಕುಟುಂಬದವರು ನೂರಾರು ವರ್ಷಗಳಿಂದಲೂ ಗಿಡಮೂಲಿಕೆಗಳಿಂದ ತಯಾರಿಸುತ್ತಿರುವ ಒಂದು ತೈಲವನ್ನು ಲೇಪಿಸಿ ಪದ್ಧತಿಯಂತೆ ತಿಕ್ಕುವುದರಿಂದ ಪಾರ್ಶ್ವವಾಯು ರೋಗವು ಗುಣಹೊಂದುತ್ತದೆ ಎಂಬ ಪ್ರತೀತಿ ಇದೆ.

ಹೆಚ್ಚು ಕಡಿಮೆ ೬೦ ವರ್ಷಗಳ ಹಿಂದಿನ ಮಾತು. ಮುಂಬಯಿಯಲ್ಲಿ ಸೇಠ್ ಗೋಪಾಲಜೀ ಎಂಬ ಬಹು ದೊಡ್ಡ ಸಾಹುಕಾರರಿಗೆ ಪಾರ್ಶ್ವವಾಯುವಾಯಿತು. ದೇಹದ ಅರ್ಧ ಭಾಗವು ನಿರ್ಜೀವವಾಯಿತು. ಮಾತಾಡುವದು, ತಿನ್ನುವದು, ಕುಡಿಯುವದು, ಕಠಿಣ ಸಾಧ್ಯವಾಯಿತು. ಶೆಟ್ಟರು ಜೀವಚ್ಛವವಾದರು. ಮುಂಬಯಿಯ ಪ್ರಸಿದ್ಧ ಡಾಕ್ಟರುಗಳು ಉಪಚರಿಸಿದರು. ಹಣ ಸೂರೆಯಾಯಿತಾದರೂ ಅವರ ಪರಿಸ್ಥಿತಿ ಸುಧಾರಿಸಲಿಲ್ಲ.

ಆ ಸಮಯದಲ್ಲಿ ಅಂಕೋಲಾದ ನರಸಿಂಹ ಪ್ರಭು ಎಂಬವರು ಮುಂಬಯಿಯಲ್ಲಿ ದಲಾಲೀ ಪೇಡಿ(ಅಂಗಡಿ)ಯನ್ನು ನಡೆಸುತ್ತಿದ್ದರು. ಶೇಠಜಿಗೆ ಅವರು ಪರಿಚಿತರು.

ಬೆಳಂಬಾರಿನ ಗೌಡ ಗಿಡ ಮೂಲಿಕೆಗಳಿಂದ ತಯಾರಿಸಿದ ಎಣ್ಣೆಯಿಂದ ಪಾರ್ಶ್ವವಾಯುವನ್ನು ಗುಣ ಪಡಿಸುವ ವಿಷಯವನ್ನು ಅವರು ಶೇಠಜಿಯ ಮನೆಯವರಿಗೆ ಹೇಳಿದರು. "ಗುಣ ಬರಲಿ, ಬರದಿರಲಿ ಆ ತರದ ಶೂಶ್ರೂಷೆಯಿಂದ ಕೆಡಕಂತೂ ಆಗುವದಿಲ್ಲ" ಎಂದು ಡಾಕ್ಟರರು

ಅಭಿಪ್ರಾಯ ಪಟ್ಟರು. ಶೇಠಾಣಿ ಆ ಗೌಡ ನಿಂದ ತನ್ನ ಪತಿಗೆ ಖಂಡಿತವಾಗಿಯೂ ಗುಣ ವಾಗುತ್ತದೆ ಎಂದು ನಂಬಿಬಿಟ್ಟರು. ಎಷ್ಟೇ ಖರ್ಚಾಗಲಿ ಆ ಗೌಡನನ್ನು ಮುಂಬಯಿಗೆ ಬರ ಮಾಡಿಕೊಂಡು, ಆತನಿಂದ ಶುಶ್ರೂಷೆಯಾ-ರಂಭಿಸಬೇಕೆಂದು ಅವರು ಆಗ್ರಹಪಡಿಸ-ತೊಡಗಿದರು. ಪ್ರಭು ಅವರು ಅಂಕೋಲಾ ದಲ್ಲಿರುತ್ತಿದ್ದ ತಮ್ಮ ಅಣ್ಣನಿಗೆ ಪತ್ರ ಬರೆದು, ಗೌಡನನ್ನು ಕೂಡಲೆ ಆ ಎಣ್ಣೆಯೊಂದಿಗೆ ಕಳು ಹಿಸಿಕೊಡಲು ವಿನಂತಿಸಿಕೊಂಡರು. ಆದರೆ ಗೌಡ ತನ್ನ ಮನೆ, ಬೆಳೆದು ನಿಂತ ಗದ್ದೆ, ದನಕರು, ತೆಂಗಿನ ಹಿತ್ತಲು, ಮನೆ ಜನರನ್ನು ಬಿಟ್ಟು ಅಷ್ಟು ದೂರ ಮುಂಬಯಿಗೆ ಹೋಗಲು ಸರ್ವಥಾ ಒಪ್ಪಲಿಲ್ಲ. ಹಣ ಅವನಿಗೆ ಬೇಕಿರಲಿಲ್ಲ. "ಅವರ್ನೇ ಇಲ್ಲಿ ಕರ್ಸಿ ಒಡ್ಯಾ, ಹುಷಾರ ಮಾಡಿಕಳಸ್ತೆ." ಎಂದು ಹೇಳಿಬಿಟ್ಟರು.

ಶೇಠಜಿ ಮುಂಬಯಿ ಬಿಟ್ಟು ಬರುವದೂ ಅಸಾಧ್ಯವಾಗಿತ್ತು. ಎಷ್ಟೇ ಕಷ್ಟವಾಗಲಿ, ಖರ್ಚಾ ಗಲಿ ಗೌಡನು ಮುಂಬಯಿಗೆ ಬರಲೇಬೇಕೆಂದು ಶೇಠಜಿ ಮನೆಯವರು ಪಟ್ಟು ಹಿಡಿದರು. ಕೊನೆಗೆ ಪ್ರಭುಗಳ ಮನೆಯವರು, ಮಾಮಲೇದಾರ (ತಹಸೀಲದಾರ), ಊರ ಶಾನಭೋಗ ಪಟೇಲರು ಒತ್ತಾಯ ಮಾಡಿದ್ದರಿಂದಾಗಿ ಅನು-ಮಾನಿಸುತ್ತ ಗೌಡನು ಮುಂಬಯಿಗೆ ಹೋಗಲು ಒಪ್ಪಿದನು, ಒಂದು ದಿನ ಸಂಜೆಗೆ ಕೃಷ್ಣ ಪ್ರಭು ಗಳು ಗೌಡನೊಡನೆ ಬೆಳಗಾಗುವುದರೊಳಗೆ ೩೩ ಕಿಲೋಮೀಟರ್ ದೂರದ ಕಾರವಾರಕ್ಕೆ ಚಕ್ಕಡಿಯಲ್ಲಿ ಹೋದರು. ಅಂದೇ ರಾತ್ರಿ ಮಂಗ ಳೂರಿನಿಂದ ಮುಂಬಯಿಗೆ ಹೋಗುತ್ತಿದ್ದ ಬಾಂಬೇ ಸ್ಟೀಮ್ ನ್ಯಾವಿಗೇಶನ್. ಕಂಪನಿಯ ಉಗಿಪಡಗ ವನ್ನೇರಿದರು. ಅಷ್ಟರೊಳಗಾಗಿ ಗೌಡ ಹೆದರಿ ಬಿಟ್ಟಿದ್ದ. ಆ ಯಂತ್ರದ ಸದ್ದು, ಜನಸಂದಣಿ, ದುರ್ವಾಸನೆ, ಅಲ್ಲಿಯೇ ರಾಶಿರಾಶಿಯಾಗಿ ಬಿದ್ದ ಕೊಳಚೆ ಇವುಗಳನ್ನು ಕಂಡ ಗೌಡ ಅಳು ಮೋರೆ ಮಾಡಿದ. "ಒಡ್ಯಾ, ನಾ ಮನೀಗ ಹೋತೀ" ಎಂಬುದೊಂದೇ ಆತನ ಮಾತಾಯಿತು. ಅಂತೂ ಎರಡು ರಾತ್ರಿಗಳು ಒಂದೂವರೆ ಹಗಲುಗಳನ್ನು ಕಳೆದು ಗೌಡನನ್ನು ಮುಂಬಯಿಗೆ ತಲುಪಿಸುವದೆಂ-ದರೆ ಪ್ರಭುಗಳಿಗೆ ಸತ್ತು ಹುಟ್ಟಿದ ಹಾಗಾಯಿತು.

ಆಗ ಇನ್ನೂ ಮೋಟರ್ ಬಂಡಿಗಳ ಯುಗ ಪ್ರಾರಂಭವಾಗಿರಲಿಲ್ಲ. ಟ್ರಾಮುಗಳು, ಕುದುರೆ ಗಾಡಿಗಳು (ವಿಕ್ಟೋರಿಯಾ) ಎಂಬವು ಜನರ ಸಾಗಾಟದ ಸಾಧನಗಳಾಗಿದ್ದವು. ಎತ್ತಿನ ಬಂಡಿ ಗಳನ್ನು ಅಲ್ಲಿ ಸಾಮಾನುಗಳ ಸಾಗಾಟಕ್ಕೆ ಮಾತ್ರ ಬಳಸಲಾಗುತ್ತಿತ್ತು. ಜನರು ಅವುಗಳನ್ನು ಏರುತ್ತಿದ್ದಿಲ್ಲ. ಗೌಡನು ಆ ತನಕ ಕುದುರೆ ಗಳನ್ನು ನೋಡಿರಲಿಲ್ಲ. ಟ್ರಾಮು ಮತ್ತು ಕುದುರೆ ಗಾಡಿಗಳನ್ನು ಏರಲು ಆತ ಒಪ್ಪದೇ ಎತ್ತಿನ ಬಂಡಿಯಲ್ಲೇ ಹೋಗೋಣವೆಂದು ಹಟಹಿಡಿದ. ಪ್ರಭುಗಳು ಒಪ್ಪಲೇಬೇಕಾಯಿತು. ರಸ್ತೆಗಳಲ್ಲಿ ತೆರಪಿಲ್ಲದೆ ನಡೆದಾಡುತ್ತಿದ್ದ ಜನಸಮೂಹ ವನ್ನೂ ಪಕ್ಕಗಳಲ್ಲಿಯ ಎತ್ತರವಾದ ಕಟ್ಟಡ ಗಳನ್ನೂ ಅಸಂಖ್ಯಾತವಾದ ವಾಹನಗಳನ್ನೂ ಕಂಡು ಗಾಬರಿಗೊಂಡ ಗೌಡ ತಿರುಗಿ ಊರಿಗೇ ಹೋಗಿ ಬಿಡುವ ದೃಢ ನಿಶ್ಚಯವನ್ನು ಮಾಡಿ ದನು. ಹ್ಯಾಗೋ ಪ್ರಭುಗಳು ಅವನನ್ನು ಮನೆಗೆ ತಲುಪಿಸಿದರು. ಅಲ್ಲಿ ನರಸಿಂಹ ಪ್ರಭು ಮುಂತಾದ ಪರಿಚಿತರನ್ನು ಕಂಡ ನಂತರ ಅವನ ಮನಸ್ಸು ಎಷ್ಟೋ ಹಗುರವಾಯಿತು.

ಗೌಡ ಬಂದ ವಾರ್ತೆ ಕೇಳಿ, ಶೇಠಜಿಯ ಮನೆಯವರಿಗೆ ಸಂತೋಷವಾಯಿತು. ಚಿಕಿತ್ಸೆ ಯನ್ನು ಪ್ರಾರಂಭಿಸಲು ಮೂರು ದಿನಗಳ ನಂತರದ ಮುಹೂರ್ತ ಪ್ರಶಸ್ತವಾಗಿತ್ತು. ಕೂತಲ್ಲಿಯೇ ಕೂತು ಬೇಸರಗೊಂಡ ಗೌಡ ಹೊಸ ಪೋಷಾಕನ್ನು ಧರಿಸಿ ತುಸು ತಿರು ಗಾಡಿ ಬರೋಣವೆಂದು ಮನೆಯ ಮಹಡಿ ಯಿಂದ ರಸ್ತೆಗೆ ಇಳಿದ. ಹಾಗೇ ಸ್ವಲ್ಪ ದೂರ ಅಚೆ ಈಚೆಯ ಅಂಗಡಿಗಳನ್ನು ನೋಡುತ್ತ ಹೊರಟ. ಕೆಲವರಿಗೆ ಗೌಡರ ಪೋಷಾಕು ಮಜ ಅನ್ನಿಸಿತು. ಅಷ್ಟು ದೂರ ಹೋಗಿ ಇನ್ನು ಮನೆಗೆ ಹೋಗೋಣವೆಂದು ಹಿಂತಿರುಗಿದ. ಗೌಡನಿಗೆ ಮನೆಯನ್ನು ಗುರುತಿಸುವದಾಗಲಿಲ್ಲ. ದಾರಿಯಲ್ಲಿ ಹೋಗುತ್ತಿರುವ ಕೆಲವರನ್ನು "ಪರಭುರ ಮನೆ ಎಲ್ಲೀತ್ರಾ?" ಎಂದು ಕೇಳಿದ.

ಯಾರಿಗೂ ಇವನ ಮಾತಿನ ಅರ್ಥವಾಗಲಿಲ್ಲ. ಆಗಿನ ದಿನಗಳಲ್ಲಿ ಮುಂಬಯಿಯಲ್ಲಿ ಕನ್ನಡವನ್ನು ಬಲ್ಲವರು ಬಹಳ ಕಡಿಮೆ. ಜನರು ಇವನ ಸುತ್ತ ನೆರೆದರು. ಗೌಡನದು ಅಳುಮೋರೆಯಾಯಿತು. ಅವರು ಇವನನ್ನು ಪರಿ–ಪರಿಯಿಂದ ವಿಚಾರಿಸಿದರು. ಪರಸ್ಪರ ಭಾಷೆಯ ತೊಡಕಿನಿಂದಾಗಿ ಏನೂ ಇತ್ಯರ್ಥವಾಗಲಿಲ್ಲ. ಗೌಡ ಅಳತೊಡಗಿದ. ಇವನ್ಯಾರೋ ಕಾಡು ಮನುಷ್ಯ. ಯಾವದೋ ಸುಗಡ ಮುಂಬಯಿಗೆ ಬಂದು ದಾರಿ ತಪ್ಪಿರಬೇಕು ಎಂದುಕೊಂಡರು ಜನ. ಅವರಲ್ಲೊಬ್ಬ ಇತನನ್ನು ಸಮೀಪದ ಪೋಲೀಸ್ ಠಾಣ್ಯಕ್ಕೆ ಕರೆನೊಯ್ದ. ಉತ್ತರ ಕರ್ನಾಟಕವು ಆಗ ಮುಂಬಯಿ ಇಲಾಖೆಯ ಒಂದು ಭಾಗವಾಗಿದ್ದರಿಂದ ಪ್ರತಿ ಪೋಲೀಸ್ ಠಾಣೆಯಲ್ಲಿ ಕನ್ನಡ ಬಲ್ಲ ಒಬ್ಬಿಬ್ಬರು ಇದ್ದೇ ಇರುತ್ತಿದ್ದರು. ಗೌಡನ ಮಾತುಗಳು ಅವರಿಗೆ ಸರಿಯಾಗಿ ಅರ್ಥವಾಗಲಿಲ್ಲವಾದರೂ ಆತ ಅಂಕೋಲೆಯವನು, ಪರಭು ಎಂಬವರ ಮನೆಗೆ ಬಂದಿದ್ದಾನೆ, ದಾರಿ ಗೊತ್ತಿಲ್ಲ, ಅಲ್ಲಿಗೆ ಹೋಗಬೇಕೆನ್ನುತ್ತಾನೆ ಎಂಬುದಷ್ಟು ಅವರಿಗೆ ತಿಳಿಯಿತು.

ಆ ದಿನಗಳಲ್ಲಿ ಅಂಕೋಲಾ ಒಳ್ಳೆಯ ಈಸಾಡೀ ಮಾವಿನ ಹಣ್ಣು ಮತ್ತು ಸುಂದರಿಯರಾದ ಬೆಲೆವೆಣ್ಣುಗಳಿಗೆ ಹೆಸರಾಗಿತ್ತು. ಮುಂಬಯಿಗೂ ಆ ಪ್ರಸಿದ್ಧಿ ಪಸರಿಸಿತ್ತು. ಅಂಕೋಲಾದಿಂದ ಬಂದ ಬೆಲೆವೆಣ್ಣುಗಳ ಹೆಸರು ವಿಳಾಸಗಳ ಪಟ್ಟಿ ಪೋಲೀಸ್ ಸ್ಟೇಶನ್ನುಗಳಲ್ಲಿ ಇತ್ತು. ಇನ್ಸ್‌ಪೆಕ್ಟರರು ಹೇದೆಯೊಬ್ಬನನ್ನು ಕರೆದು ಒಬ್ಬಾಕೆಯ ಹೆಸರು ವಿಳಾಸಗಳನ್ನು ಬರೆದು ಕೊಟ್ಟು "ಈತನನ್ನು ಆಕೆಯಲ್ಲಿಗೆ ಕರೆದೊಯ್ದು ಹ್ಯಾಗಾದರೂ ಅಂಕೋಲೆಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳಿದ್ದೇನೆಂದು ಹೇಳು" ಎಂದರು.

ಆಕೆ ಗೌಡನನ್ನು ಆದರದಿಂದಲೇ ಬರಮಾಡಿಕೊಂಡಳು. ಅವನಿಗೆ ತಿಳಿಯುವ ರೀತಿಯಲ್ಲೇ ಕನ್ನಡ ಮಾತನಾಡಿ ಉಪಚರಿಸಿದಳು. ಗೌಡ ತನ್ನ ಕಥೆಯನ್ನೆಲ್ಲ ಹೇಳಿದ. ನರಸಿಂಹ ಪ್ರಭುಗಳ ಊರಲ್ಲಿಯ ಮನೆತನ ಬಗ್ಗೆ ಬಲ್ಲವಳಾಗಿದ್ದ ಆಕೆಗೆ ಮುಂಬಯಿಯಲ್ಲಿ ಅವರು ಎಲ್ಲಿರುತ್ತಾರೆ ಎಂಬುದು ಗೊತ್ತಿರಲಿಲ್ಲ. ೨–೩ ದಿನಗಳಲ್ಲಿ ಪತ್ತೆ ಹಚ್ಚಿ ಅಲ್ಲಿಗೆ ತಲುಪಿಸುವೆನೆಂದು ಹೇಳಿದಳು. ಅದು ಗೌಡನಿಗೆ ಬೇಕಾಗಿರಲಿಲ್ಲ. ಆತ ಬೆಳಂಬಾರಿನ ಗೌಡನೆಂದು ತಿಳಿದ ಮೇಲಂತೂ ಹೆಚ್ಚಾಗಿ ಆದರಿಸಹತ್ತಿದಳು. ಗೌಡನಿಗೆ ಯಾವ ಕೊರತೆಯೂ ಆಗಲಿಲ್ಲ. ಆದರೆ ಆಕೆಯ ಮತ್ತು ಅಲ್ಲಿದ್ದ ಇನ್ನಿಬ್ಬರು ತರುಣಿಯರ ವೇಷ, ರೂಪ, ಆ ಮನೆಯ ವ್ಯವಸ್ಥೆಗಳು, ಗೋಡೆಗಳಿಗೆ ತೂಗುಹಾಕಿದ ಬತ್ತಲೆ ಅರೆಬೆತ್ತಲೆ ಹೆಣ್ಣುಗಳ ಚಿತ್ರಗಳು, ಅಲ್ಲಿ ನಡೆಯುವ ವ್ಯವಹಾರಗಳು ಆತನನ್ನು ದಿಗ್ಭ್ರಮೆಗೊಳಿಸಿದವು. "ನಾ ಮನೆಗೆ ಹೋಗ್ತೀ" ಎಂದು ಆತ ಒಂದೇ ಸಮನೆ ಗೋಳಾಡತೊಡಗಿದ. ಮುಂದೆರಡು ದಿನಗಳಲ್ಲಿ ಮುಂಬಯಿಯಿಂದ



ಚಿತ್ರ ಓದುವವರಿಗೂ ನಮ್ಮ ಮಾತ್ರೆ ಓದುವುದರಲ್ಲಿ ಸಂಶಯವೇ ಇಲ್ಲ.

ಮಂಗಳೂರಿಗೆ ಒಂದು ಉಗಿ ಹಡಗವು ಪೊರಡು ವದಿತ್ತು. ಅದರ ಮೇಲೆ ಅವನನ್ನು ಹತ್ತಿಸಿ, ಕಾರವಾರಕ್ಕೆ ಹೋಗಲಿರುವ ಒಬ್ಬ ಪ್ರಯಾಣಿಕನಿಗೆ ಹೇಳಿ ಅಂಕೋಲಾಕ್ಕೆ ತಲುಪಿಸುವ ವ್ಯವಸ್ಥೆ ಮಾಡಿದಳು.

ಅಂಕೋಲಾವನ್ನು ತಲುಪಿ ಗೌಡ ಪ್ರಭುಗಳ ಮನೆಗೆ ಹೋಗಿ, ನಡೆದುದನ್ನು ತಿಳಿಸಿ, ತಾನು ಇನ್ನು ಸರ್ವಥಾ ಮುಂಬಯಿಗೆ ಹೋಗಲಿಕ್ಕಿಲ್ಲ, ಶೇಠಜೀ ಬೇಕಾದರೆ ಬೆಳಂಬಾರಿಗೇ ಬರಲಿ, ಗುಣಪಡಿಸಿ ಕಳಿಸುವೆ ಎಂದು ಹೇಳಿದನು. ಮನೆಯವರು ಅದರಂತೆಯೇ ನರಸಿಂಹ ಪ್ರಭುಗಳಿಗೆ ಬರೆದರು.

ಎಲ್ಲಿ ತಪ್ಪಿಸಿಕೊಂಡನೋ, ಏನು ಗತಿಯಾಯಿತೋ ಎಂದುಕೊಂಡಿದ್ದ ಶೇಠಜಿಯ ಮನೆಯವರು ಮತ್ತು ಪ್ರಭುಗಳಿಗೆ, ಗೌಡ ಸುಖರೂಪವಾಗಿ ಅಂಕೋಲಾಕ್ಕೆ ತಲುಪಿದ ಸುದ್ದಿ ಕೇಳಿ ಸಂತೋಷವಾಯಿತು. ಗೌಡನ ಕೈಯಿಂದಲೇ ತನ್ನ ಪತಿಗೆ ಗುಣವಾಗುತ್ತದೆಂದು ಶೇಠಾಣಿಯವರು ಮೊದಲಿನಿಂದಲೂ ನಂಬಿದ್ದರು. ಎಷ್ಟು ತೊಂದರೆಯಾದರೂ ಸರಿ, ಬೆಳಂಬಾರಿಗೆ ಹೋಗಿ ಅವನ ಚಿಕಿತ್ಸೆಗೆ ಒಳಗಾಗಲೇಬೇಕೆಂದು ಅವರು ಹಟ ಹಿಡಿದರು. ಶೇಠಜಿ ದಂಪತಿಗಳೂ ಕೃಷ್ಣಪ್ರಭುಗಳೂ ಒಬ್ಬ ಅಡಿಗೆಯವನೂ ಮುಂಬಯಿಯಿಂದ ಉಗಿ ಪಡಗಿನಲ್ಲಿ ಹೊರಟು ಕಾರವಾರವನ್ನು ತಲಪಿದರು. ಅಲ್ಲಿಂದ ಮೇಣೆಯಲ್ಲಿ ಬೆಳಂಬಾರಿಗೆ ಬಂದರು. ಖಾಲಿ ಬಿದ್ದಿದ್ದ ಹಳೆಯ ಅಂಗಡಿಯೊಂದನ್ನು ಪ್ರಭುಗಳ ಮನೆಯವರು ಶೇಠಜಿಯ ವಾಸ್ತವ್ಯಕ್ಕಾಗಿ ತಕ್ಕ ಮಟ್ಟಿಗೆ ಅಣಿ ಮಾಡಿದ್ದರು. ಗೌಡನ ಚಿಕಿತ್ಸೆ ಪ್ರಾರಂಭವಾಯಿತು. ಗೌಡನ ಹೆಂಡತಿ ಒಕ್ಕಲಗಿತ್ತಿಯಾಗಿ ಕೆಲಸಮಾಡತೊಡಗಿದಳು.

ಆತನು ಬಳಸುವ ಈ ಔಷಧಕ್ಕೆ ಮುಖ್ಯವಾಗಿ ಬೇಕಾದದ್ದು ಕೆಲ ಗಿಡಮೂಲಿಕೆಗಳನ್ನು ಅರೆದು ಮಾಡಿದ ರಸ ಮತ್ತು ಎಳ್ಳೆಣ್ಣೆ. ಆ ರಸ ಯಾವ ಗಿಡಮೂಲಿಕೆಯದು ಎಂಬುದು ಗೌಡ ಮತ್ತು ಆತನ ಮಗನಿಗೆ ಮಾತ್ರ ಗೊತ್ತು. ಅವುಗಳನ್ನು ತರಲು ಬೆಟ್ಟಕ್ಕೆ ಹೋಗಬೇಕು. ಬೆಟ್ಟದಿಂದ ತರುವ ಮತ್ತು ತೈಲವನ್ನು ತಯಾರಿಸುವ ಕೂಲಿ? ಅದನ್ನು ಕೇಳುವದು ಅಥವಾ ಸ್ವೀಕರಿಸುವುದು ಪಾಪ. ಆ ದಿನಗಳಲ್ಲಿ ರೂಪಾಯಿಗೆ ೨೫-೩೦ ತೆಂಗಿನಕಾಯಿಗಳು ಸಿಗುತ್ತಿದ್ದವು. ೨ತೆಂಗಿನ ಕಾಯಿಗಳು ೫ ವೀಳ್ಯದೆಲೆಗಳು ೫ ಹಣ್ಣು ಅಡಿಕೆಗಳು ಕಾಲಾಣೆ ಬೆಲೆಯ ೫ ಬಾಳೆಯ ಹಣ್ಣುಗಳು ಇವಿಷ್ಟನ್ನು ಗೌಡರ ಮನೆದೇವರೆದುರಿನಲ್ಲಿ ಇಟ್ಟು ಪೂಜೆಯನ್ನು ಮಾಡಿ ಗಿಡಮೂಲಿಕೆಗಳನ್ನು ತರುವದಕ್ಕೆ ಕಾಡಿಗೆ ಹೋಗುವದು ಪರಿಪಾಠ. ಶೇಠಾಣಿ ಅವಿಷ್ಟನ್ನು ಪೂರೈಸಿದರು. ಎಲ್ಲ ಕೂಡಿ ನಾಲ್ಕು ಆಣೆಗಳ ಖರ್ಚು!

ಗೌಡ ಪ್ರತಿನಿತ್ಯ ಮುಂಜಾನೆ ಸಂಜೆಗೆ ಅರ್ಧರ್ಧ ತಾಸು ಶೇಠಜಿಯ ಮೈಕೈಗಳನ್ನು ಎಣ್ಣೆ ಹಚ್ಚಿ ತಿಕ್ಕಿ ಮಾಲಿಶ್ ಮಾಡಹತ್ತಿದನು. ಒಂದು ತಿಂಗಳಾಗುವಷ್ಟರಲ್ಲಿ ಕೆಲ ಮಟ್ಟಿಗೆ ಗುಣ ಕಾಣಹತ್ತಿತ್ತು. ಆ ಬಗ್ಗೆ ಗೌಡನಿಗೂ ಒಕ್ಕಲಗಿತ್ತಿಯ ಕೆಲಸಕ್ಕಾಗಿ ಗೌಡತಿಗೂ ಎಷ್ಟು ಕೂಲಿ ಕೊಡಬೇಕೆಂದು ಶೇಠಾಣಿಯು ಪ್ರಭುಗಳನ್ನು ಕೇಳಿದಳು. ಎಷ್ಟನ್ನು ಕೊಡಲಿಕ್ಕೂ ಆಕೆ ಸಿದ್ಧಳಿದ್ದಳು. ಪ್ರಭುಗಳು ನಕ್ಕರು. "ಇವರ್‍ಯಾರೂ ಆಳುಗಳಲ್ಲ. ಎಲ್ಲರಿಗೂ ಅವರ ಜೀವನಕ್ಕೆ ಅವಶ್ಯವಿರುವಷ್ಟನ್ನು ತಂದುಕೊಡುವ ಹೊಲ ಮನೆಗಳು ಇರುತ್ತವೆ. ಈ ಊರಲ್ಲಿ ಕೂಲಿ ಕೊಡುವ ಪರಿಪಾಠವೂ ಇಲ್ಲ, ಸ್ವೀಕರಿಸುವ ಪರಿಪಾಠವೂ ಇಲ್ಲ. ನೀವು ಕೂಲಿಯನ್ನು ಕೊಡಹೋದರೆ ಅವರಿಗೆ ಅಪಮಾನವಾಗುವದು. ಶೇಠಜಿಗೆ ಪೂರ್ತಿ ಗುಣವಾಗಿ ಊರಿಗೆ ಮರಳುವಾಗ ಏನಾದರೂ ಉಡುಗೊರೆಯನ್ನು ಕೊಟ್ಟರಾಯಿತು." ಎಂದು ಅವರು ಹೇಳಿದರು.

ತೈಲದ ಕಾರಣವೋ. ಅದನ್ನು ತಿಕ್ಕಿ ಮಾಲಿಶ್ ಮಾಡುವಲ್ಲಿ ಗೌಡನ ಕೌಶಲ ಕಾರಣವೋ. ಅವನಿಗೆ ತನ್ನ ಯೋಗ್ಯತೆಯಲ್ಲಿ ಇರುತ್ತಿದ್ದ ಆತ್ಮವಿಶ್ವಾಸವೋ, ತನ್ನನ್ನು ಅರಿಸಿ ಬಂದ ರೋಗಿಯ ಮೇಲಿನ ಪ್ರೇಮದ ಕಾರಣವೋ ಮೂರು ತಿಂಗಳುಗಳ ಚಿಕಿತ್ಸೆಯು ಶೇಠಜಿಯನ್ನು ಗುಣಪಡಿಸಿತು. ಇನ್ನು ಅವರು ತಮ್ಮ

ಊರಿಗೆ ಮರಳಬಹುದೆಂದೂ ಆವಶ್ಯವಿರುವ ಎಣ್ಣೆಯನ್ನು ತಯಾರಿಸಿ ಕೊಡುವೆನೆಂದೂ ತಿಕ್ಕುವ ಕ್ರಮವನ್ನು ಅಡಿಗೆಯವನಿಗೆ ತಿಳಿಸುವೆ-ನೆಂದೂ ಗೌಡ ಪ್ರಭುಗಳಿಗೆ ಹೇಳಿದ.

ಬೆಳಂಬಾರನ್ನು ಬಿಡುವ ದಿನ ನಿಶ್ಚಯ ವಾಯಿತು. ಶೇಠಾಣಿಯು ಗೌಡನಿಗೂ ಗೌಡ ತಿಗೂ ಕೊಡಬಹುದಾದ ಪ್ರತಿಫಲದ ವಿಚಾರ ಮಾಡಹತ್ತಿದಳು. ಒಂದು ಸಾವಿರ ರೂಪಾಯಿ ಗಳನ್ನು ಕೊಡಬಹುದೆಂದು ಶೇಠಜಿ ಹೇಳಿದರು. ಅದು ಕಡಿಮೆ ಎಂದಳು ಶೇಠಾಣಿ. ಯಾವದಕ್ಕೂ ಪ್ರಭುಗಳನ್ನು ಕೇಳೋಣವೆಂದುಕೊಂಡರು.

"ಸಾವಿರ ರೂಪಾಯಿ ಗಳೆಂದರೆ ಈ ಜನರ ದೃಷ್ಟಿ ಯಲ್ಲಿ ಬಹು ದೊಡ್ಡ ಸಂಪತ್ತು. ಅವು ಎಷ್ಟು ಎಂಬು ದರ ಕಲ್ಪನೆಯೂ ಇವರಿಗಿಲ್ಲ. ಅದನ್ನು ನೀವು ಕೊಟ್ಟರೆ ಗೌಡನು ಈ ಉಳಿದೆಲ್ಲರಿಗಿಂತ ಶ್ರೀಮಂತ ನಾಗಿ ಊರವರು ಅವನ ಮೇಲೆ ಅಸೂಯೆ-ಪಡಬಹುದು. ಶ್ರೀಮಂತಿಕೆಯಿಂದಾಗಿ ಗೌಡ ಈಗ ತಾನು ಮಾಡತ್ತಿರುವ ಸೇವೆಯನ್ನು ದುಡಿ ಮೆಯ ಸಾಧನವಾಗಿಸಿಕೊಳ್ಳಬಹುದು. ಇಲ್ಲವೇ ಇದನ್ನು ಬಿಟ್ಟುಬಿಡಬಹುದು. ದಯವಿಟ್ಟು ದುಡ್ಡಿನ ವಿಷಯ ಮರೆತು ಬಿಡಿ. ಏನಾದರೂ ಕೊಡಲೇಬೇಕೆಂದಿದ್ದರೆ ಪ್ರೀತಿಯ ಕಾಣಿಕೆ ಕೊಡಿರಿ. ಅದೂ ನೀವು ಹೊರಡುವ ದಿನ. ಅದರ ಹಿಂದಿನ ದಿನ ಈ ಹಳ್ಳಿಯವರೆಲ್ಲರಿಗೆ ಬೆಲ್ಲ ಹಾಕಿದ ಅಕ್ಕೀ ಪಾಯಸದ ಊಟವನ್ನು ಮಾಡಿಸಿರಿ," ಎಂದು ಕೃಷ್ಣಪ್ರಭುಗಳು ಹೇಳಿದರು.

ಎಲ್ಲವೂ ಆ ಪ್ರಕಾರ ನಡೆಯಿತು. ಹಳ್ಳಿ ಯವರೆಲ್ಲರೂ ಶೆಟ್ಟರನ್ನು ಹೊಗಳಹತ್ತಿದರು. ಶೇಠಜಿ ದಂಪತಿಗಳನ್ನು ಕರೆದೊಯ್ಯಲು ಮೇಣೆ ಸಿದ್ಧವಾಗಿ ಬಂತು. ಪ್ರಭುಗಳು ಉಡು ಗೊರೆಗಳನ್ನು ತಂದಿದ್ದರು. ಗೌಡ ಗೌಡತಿಯ ರನ್ನು ಮಣೆಗಳ ಮೇಲೆ ಕುಳ್ಳಿರಿಸಿದರು. ಗೌಡ ನಿಗೆ ಎರಡಾಣೆ ಬೆಲೆಯ ಒಂದು ಬಿದಿರಿನ ಬುಟ್ಟಿ, ಅದರೊಳಗೆ ಒಂದು ಲಂಗೋಟಿಯ ಬಟ್ಟೆ; ತಲೆಗೆ ಸುತ್ತುವ ಮೂರುಮೊಳದ ಪಂಚೆ, ಎರಡು ಎರಡೂವರೆ ರೂಪಾಯಿ ಬೆಲೆಯ ಒಂದು ಕಂಬಳಿ, ಅರ್ಧ ಕಿಲೋಗ್ರಾಮಿನಷ್ಟು ಬೆಲ್ಲ, ೫೦ ವೀಳ್ಯದೆಲೆಗಳ ಕಟ್ಟು, ೫ ಹಣ್ಣು ಅಡಿಕೆ ಗಳು, ೨ ಹೊಗೆಸೊಪ್ಪಿನ ಎಸಳುಗಳು, ೧೦-೧೨ ಬಾಳೆಯ ಹಣ್ಣುಗಳ ಒಂದು ಚಿಪ್ಪು, ತೆಂಗಿನ ಕಾಯಿ, ನಾಲ್ಕು ಆಣೆಯ ಒಂದು ಬೆಳ್ಳಿಯ ಪಾವಲಿ ಕೊಟ್ಟರು. ಗೌಡತಿಗೆ ಒಂದು ಬಿದಿರಿನ ಗೆರಸಿ (ಮೊರ) ಎರಡೂವರೆ ರೂಪಾಯಿ ಬೆಲೆಯ ೧೦-೧೨ ಮೊಳ ಉದ್ದದ ಒಂದು ದಟ್ಟಿ (ಸೀರೆ) ತೆಂಗಿನಕಾಯಿಗಳು, ೧೦–೧೨ ಬಾಳೆಹಣ್ಣುಗಳ ಚಿಪ್ಪು, ೫೦ ವೀಳ್ಯದೆಲೆಗಳ ಕಟ್ಟು, ೫ ಹಣ್ಣು ಅಡಿಕೆಗಳು, ೨ ಹೊಗೆಸೊಪ್ಪಿನ ಎಸಳುಗಳು, ಕರಿಮಣಿ, ಒಂದು ಹೂವಿನ ದಂಡೆ, ಕುಂಕುಮ, ಅರಿಶಿಣ ಒಂದು ಮುದ್ದೆ ಬೆಲ್ಲ, ನಾಲ್ಕಾಣೆ ಬೆಳ್ಳಿಯ ಪಾವಲಿ ಉಡಿಯಲ್ಲಿ ಹಾಕಿದರು. (ಎಲ್ಲ ಸೇರಿ



"ನನ್ನ ವಿದೇಶ ಪ್ರವಾಸಗಳಿಂದನನಗಾದ ಅನು. ಭವಗಳೇ...? ಕೂತು ಕೂತು ಸೊಂಟ ನೋವು... ಮತ್ತು ಅತಿನಿದ್ದೆ... ಮತ್ತೂ..."

ಹತ್ತು ರೂಪಾಯಿಗಿಂತ ಹೆಚ್ಚು ಖರ್ಚಾಗಿರಲಿಲ್ಲ ಎಂದರಿತು ಶೇಠಾಣಿಯವರು ಅವಾಕ್ಕಾದರು.)

ಗೌಡ ಮತ್ತು ಗೌಡತಿ ಉಡುಗೊರೆಯನ್ನು ಬಹುಸಂತೋಷದಿಂದ ಸ್ವೀಕರಿಸಿ ಸಂತೃಪ್ತರಾದರು.

ಮೇಣೆಯು ಹೊರಟಿತು. ಊರವರೆಲ್ಲ ಕೆಲ ದೂರದ ವರೆಗೆ ಹಿಂಬಾಲಿಸಿ ಶೇಠಜಿ ಶೇಠಾಣಿಯವರನ್ನು ಬೀಳ್ಕೊಟ್ಟರು.

ಗೌಡನ ಹೃದಯ ಶ್ರೀಮಂತಿಕೆಯೆದುರು ತಮ್ಮ ಸಿರಿ-ಸಂಪತ್ತು ತೃಣಸಮಾನವೆನ್ನಿಸತೊಡಗಿತು ಶೇಠಾಣಿಗೆ. ಆ ನಿಃಸ್ವಾರ್ಥ ಜೀವಿಗಳಿಗೆ, ಆ ಊರಿಗೆ ಹಿತವಾಗುವಂಥ ಏನಾದರೂ ಮಾಡಬೇಕೆಂದು ಅವರು ಪತಿಯೊಡನೆ ವಿಚಾರಿಸತೊಡಗಿದರು. ಊರಿಗೊಂದು ಸಭಾಗೃಹ, ಊರ ಮಕ್ಕಳಿಗೊಂದು ಶಾಲೆ, ಶಾಲೆಗೊಬ್ಬ ಶಿಕ್ಷಕ, ಆತನಿಗೆ ತಕ್ಕ ಸಂಬಳ ಸಿಗುವ ವ್ಯವಸ್ಥೆ ಮುಂತಾದುವನ್ನು ಏರ್ಪಾಡು ಮಾಡಬೇಕೆಂದುಕೊಂಡರು.

ಮುಂಬಯಿ ತಲುಪಿದ ಮೇಲೆ ಶೇಠಜಿ ಗುಣಹೊಂದಿ ಬಂದುದಕ್ಕಾಗಿ ಅಭಿನಂದಿಸಲು ಬರುವ ಬಂಧು-ಬಾಂಧವರು, ಮಿತ್ರರನ್ನು ಮಾತಾಡಿಸುವುದರಲ್ಲೇ ಒಂದು ತಿಂಗಳು ಕಳೆಯಿತು. ಆಮೇಲೆ ದೇವರಿಗೆ ಹೊತ್ತ ಹರಕೆಗಳನ್ನು ಸಲ್ಲಿಸುವುದು, ದೇವತಾರ್ಚನೆ, ಮಿತ್ರರಿಗೆ ಔತಣ ಸಮಾರಂಭ, ಹೀಗೆ ಮತ್ತೊಂದು ತಿಂಗಳು ದಾಟಿತು. ನಂತರ ತಮ್ಮ ಕಾಹಿಲೆಯಿಂದಾಗಿ ಸ್ಥಗಿತಗೊಂಡಿದ್ದ ವ್ಯವಹಾರದತ್ತ ಲಕ್ಷ್ಯ ಹರಿಸಿದ ಶೇಠಜಿ ಪೂರ್ತಿ ಅದರಲ್ಲೇ ಮುಳುಗಿಹೋದರು. ಇತ್ತ ಗೌಡನು ಅಂಕೋಲಾಕ್ಕೆ ಹೋದಾಗೆಲ್ಲ ತಪ್ಪದೆ ಪ್ರಭುಗಳ ಮನೆಗೆ ಹೋಗಿ, "ಶೆಟ್ಟರು ಗನಾಕ ಅವರೆಯಾ? ಒಡತಿ ಗನಾಕ ಇವಳಾ? ಅಂಗಡಿಗನಾಕೆ ನಡೀತೀತಾ?" ಎಂದು ವಿಚಾರಿಸುತ್ತಿದ್ದ. ಪ್ರಭುಗಳು "ಹೌದು, ಚೆನ್ನಾಗಿಯೇ ಇದ್ದಾರೆ. ಅವರ ವ್ಯವಹಾರಗಳು ಮುಂಚೆಗಿಂತಲೂ ಚೆನ್ನಾಗಿ ನಡೆಯುತ್ತಿದೆ. ಅವರು ಹೆಚ್ಚೆಚ್ಚು ಶ್ರೀಮಂತರಾಗುತ್ತಿದ್ದಾರೆ" ಎಂದು ಉತ್ತರಿಸುತ್ತಿದ್ದರು. ಅದನ್ನು ಕೇಳಿ ಗೌಡನು ಸಂತೋಷಪಡುತ್ತ ಬೆಳಂಬಾರಿನ ದಾರಿ ಹಿಡಿಯುತ್ತಿದ್ದ.

*

ಬೆಳಂಬಾರಿನ ತೈಲ ಬೆಳಂಬಾರಿನ ಮದ್ದು ಈಗ ಧಾರವಾಡದಲ್ಲಿ ಕ್ರಯಕ್ಕೆ ದೊರಕುತ್ತದೆ. ಔಂಸಿಗೆ ಒಂದು ರೂಪಾಯಿ, ಕಿಲೋ ಒಂದಕ್ಕೆ ೩೦ ರೂಪಾಯಿಗಳು. ಕಾಲು ಕಿಲೋ ತೈಲವನ್ನು ಖರೀದಿಸಿ ಬೆಂಗಳೂರಿನಲ್ಲಿಯ ನನ್ನ ಸಂಬಂಧಿಕರಿಗೆ ಕಳುಹಿಸಿದೆ. ಆದರೆ ಅದರೊಂದಿಗೆ ತೈಲವನ್ನು ತಯಾರಿಸುವಾಗ ಆ ಗೌಡನಿಗಿದ್ದ ಶ್ರದ್ಧೆ ಭಕ್ತಿ, ಅದರ ಚಿಕಿತ್ಸೆ ಪಡೆಯಲಿರುವ ರೋಗಿಗಳಿಗೆ ಗುಣ ಬರಬೇಕೆಂಬ ಅವನ ಸದಿಚ್ಛೆ, ಖಂಡಿತವಾಗಿಯೂ ಗುಣವಾಗುವುದೆಂಬ ಅವನ ಆತ್ಮವಿಶ್ವಾಸ ನಿಃಸ್ವಾರ್ಥ ಬುದ್ಧಿಗಳು ಕ್ರಯಕ್ಕೆ ಸಿಗುವುದಿಲ್ಲ! ✿

ಭಾಸ್ಕರನ ಮಂಡಲವ ಕಂಡು ನ। ಮಸ್ಕರಿಸಿ ಮೋಹಿಪೆನೆ ದ್ವೇಷದಿ।
ತಸ್ಕರನು ನಿಂದಿಸಲು ಕುಂದಹುದೆ ದಿವಾಕರಗೆ ॥
ಸಂಸ್ಕೃತವಿದಲ್ಲೆಂದು ಕುಹಕ ಕಿ। ರಸ್ಕರಿಸಲೇನಹುದು ಭಕ್ತಿಪು।
ರಸ್ಸರದಿ ಕೇಳ್ವರಿಗೆ ಒಲಿದನು ಪುಷ್ಕರಾಕ್ಷಸಖಾ ॥

-ಜಗನ್ನಾಥದಾಸ

* * *

ಮುನ್ನ ಹುಟ್ಟಿದುದಕ್ಕೆ ಕೃಪೆಮಾಡು, ಲಿಂಗವೇ
ಇನ್ನು ಹುಟ್ಟದೆನಾದೊಡೆ, ಕೂಡಲಸಂಗಮದೇವಾ, ನಿಮ್ಮಾಣೆ

—ಬಸವೇಶ್ವರ

"ನನ್ನ ಜತೆ ಊಟ ಮಾಡಲಿಕ್ಕೆ ನಿಂಗೆ ಬಹಳ ಸಂತೋಷವಾಗಬಹುದಲ್ವಾ?"

"ಓ ಎಸ್. ಭಾಳಾ ಸಂತೋಷವಾಗತ್ತೆ. ಯಾವಾಗ ಬರ್ಲಿ?"

"ನೀನೇನ್ ಬರ್ಬೇಡಾ, ನಿಮ್ಮನೇಗೆ ನಾನೇ ಬರ್ತೀನಿ. ನನ್ನ ಜತೆ ನೀ ಊಟಾ ಮಾಡಬಹುದ್ದು."

*

ಸ್ಮಶಾನದ ಪಕ್ಕದಲ್ಲಿ ಹಾಯುತ್ತ ಹೊರಟಿದ್ದಾತನಿಗೆ ಗೋರಿಯೊಂದರ ಬಳಿ ಒಬ್ಬ ಅಳುತ್ತ ಮತ್ತೆ ಮತ್ತೆ, "ನೀ ಸಾಯಬಾರದಿತ್ತು! ನೀ ಸಾಯಬಾರದಿತ್ತು!" ಎನ್ನುತ್ತಿದ್ದುದನ್ನು ಕೇಳಿ ಅನುಕಂಪವುಂಟಾಯಿತು.

"ಯಾರು ಸತ್ತವರು? ನಿನ್ನ ತಂದೆಯು, ತಾಯಿಯೋ," ಎಂದು ಕೇಳಿದ.

"ಅಲ್ಲಲ್ಲ, ನನ್ನ ಹೆಂಡತಿಯ ಮೊದಲ ಗಂಡ," ಬಂತು ಉತ್ತರ.

*

"ನಿನ್ನ ಹೆಂಡತಿಯನ್ನು ನಾಲ್ಕನೇ ಅಂತಸ್ತಿನಿಂದ ಕೆಳಕ್ಕೆಸೆದದ್ದೇಕೆ? ನ್ಯಾಯಾಧೀಶರು ಕೇಳಿದರು.

"ಮೊದಲು ಮೊದಲಂತಸ್ತಿನಲ್ಲಿರುತ್ತಿದ್ದೆವು."

"ನಾನು ಕೇಳಿದ್ದಕ್ಕೆ ಇದು ಸರಿಯಾದ ಉತ್ತರವಾಗಲಿಲ್ಲ."

"ನಾಲ್ಕನೇ ಅಂತಸ್ತಿಗೆ ಶಿಫ್ಟ್ ಮಾಡಿದ್ದು ಮರೆತೇ ಹೋಗಿತ್ತು" ಎಂದನಾ ಭೂಪ.

*

"ನಾನು ಕೈ ಹಿಡಿಯೋದಕ್ಕೆ ಮುಂಚೆ ಯಾವ ಮೂರ್ಖನೂ ನಿನ್ನ ಒಪ್ಪಿರಲಿಲ್ಲಂತ ಕಾಣತ್ತೆ," ಕೋಪಿಷ್ಟ ಗಂಡ ಅಂದ.

"ಯಾಕಿಲ್ಲ ಒಬ್ಬ ಒಪ್ಪಿದ್ದ."

"ಹಾಗಾದ್ರೆ ಯಾಕೊಪ್ಪಿಕೊಳ್ಳಲಿಲ್ಲ?"

"ಒಪ್ಕೊಂಡದ್ದಕ್ಕೆ ತಾನೇ ಹೀಗಾಗ್ತಿರೋದು?"

ಸಾರಿಗೆ ಅಧಿಕಾರಿ ಓಡುತ್ತಿದ್ದ ಕಾರನ್ನು ತಡೆದು ನಿಲ್ಲಿಸಿದ. ಒಳಗೆ ಡ್ರೈವಿಂಗ್ ಮಾಡುತ್ತಿದ್ದಾಕೆ ಓರ್ವ ಸುಂದರಿ– ತರುಣಿ. "ನಿಮ್ಮ ಲೈಸೆನ್ಸ್ ನೋಡಬೇಕು. ಕೊಡಿ" ಎಂದ ಅಧಿಕಾರಿ. ಆಕೆ ಕೊಟ್ಟಳು. ಅದನ್ನು ನೋಡಿ, "ನಾನು ಕೇಳಿದ್ದು ಲೈಸೆನ್ಸ್. ನೀವು ಕೊಟ್ಟಿದ್ದು ಲೈಬ್ರರಿಕಾರ್ಡ್" ಎಂದ ಆತ. "ಲೈಸೆನ್ಸ್ ಕಳೆದಿದೆ. ಅದನ್ನು ಹುಡುಕೋ ವರೆಗೂ ನೀವು ಈ ಕಾರ್ಡ್ ಮೇಲೆ ಯಾವುದಾದರೂ ಪುಸ್ತಕ ತಂದು ಓದಿಕೊಳ್ಳಿ, ಯಾಕೆ ಸುಮ್ನೇ ಕಾಯ್ತೀರ" ಎನ್ನಬೇಕೆ ಆಕೆ?

*

ಸಾಹಿತಿ ಮುಂಜಾನೆಯ ಚಹ ಸೇವಿಸುತ್ತ ಕುಳಿತಿದ್ದ ಹಾಗೆಯೇ ಹೊರಗೆ, "ಅಮ್ಮಾವ್ರೆ– ಸಾಯೇಬ್ರು ಹೊಸ್– ಪುಸ್ತಕಗಳೇನಾದ್ರೂ ಬರಿದಿದ್ರೆ ಕೊಡಿ– ರದ್ದೀ ಬೆಲೆ ಎರಡೂ ಪುಸ್ತಕಾಲ್ರೂಪಾಯಿ ಆಗ್ಯತೆ ಕೇಜೀಗೆ" ಅಂದದ್ದು ಕೇಳಿಸಿತು.

*

ಆ ವೃದ್ಧ ನೂರನೆಯ ವರ್ಷದ ಹುಟ್ಟು ಹಬ್ಬ ಆಚರಿಸ್ತಾ ಇದ್ದ. ದೊಡ್ಡ ಸಮಾರಂಭ ಏರ್ಪಡಿಸಿದ್ದ. ಪತ್ರಕರ್ತರಲ್ಲೊಬ್ಬ ಕೇಳಿದ: "ಇಷ್ಟು ಸುದೀರ್ಘ ಜೀವನದ ರಹಸ್ಯ ಏನು?"

"ನಾನು ೧೮೭೮ರಲ್ಲಿ ಹುಟ್ಟಿದ್ದು" ಉತ್ತರಿಸಿದ ಶತಾಯುಷಿ.

*

ಶಿಕ್ಷಕ: "ವಿಮಾನ ಮತ್ತು ಪ್ಯಾರಾಚೂಟುಗಳನ್ನು ಶೋಧಿಸಿದವರಾರು?"

ವಿದ್ಯಾರ್ಥಿ: "ಆಶಾವಾದಿ ಮತ್ತು ನಿರಾಶಾವಾದಿ ಸಾರ್."

*

ಡಾಕ್ಟರ್: "ಅವಶ್ಯ ಅನಿಸಿದರೆ ಆಪರೇಶನ್ ಮಾಡ್ಬೇಕು, ಫೀಸ್ ಕೊಡಲು ಸಾಧ್ಯವೆ?"

ರೋಗಿ: "ಫೀಸ್ ಕೊಡೋಕೆ ಸಾಧ್ಯವಾಗದಿದ್ರೂ ಆಪರೇಶನ್ ಅವಶ್ಯ ಅನಸುತ್ತಾ? ಮಾಡಿಬಿಡಿ."

*

"ಹೆಂಡಂದ್ರು ಯಾವಾಗ್ಲೂ ಮದುವೆ ವಾರ್ಷಿಕೋತ್ಸವಗಳ ದಿನ ನೆನಪಿಟ್ಕೊಳ್ತಾರೆ, ಗಂಡಂದ್ರು ಮರೀತಾರೆ. ಯಾಕೆ?"

"ಸರಿ, ನೀನು ಮೀನುಗಾರ ಅಂತಿಟ್ಕೊ. ದೊಡ್ಡ ಮೀನನ್ನು ಹಿಡಿದ ದಿನವನ್ನು ನೆನಪಿಟ್ಟುಕೊಳ್ತೀಯಾ?"

"ಓಹೋ-ಯಾಕಿಲ್ಲ?"

"ಆದ್ರೆ ಮೀನುಗಳು ನೆನಪಿಟ್ಕೊಳೊಲ್ಲ."

*

ಕಾಲೇಜಿನ ಲೆಕ್ಚರರು ಕೇಳಿದ ಪ್ರಶ್ನೆಗೆ ಕಿಟ್ಟು ಗಂಟೆಗಟ್ಟಳೆ ಉತ್ತರಿಸುತ್ತಿದ್ದ. ಇದನ್ನು ಕೇಳಿ ಕೇಳಿ ಬೇಸತ್ತ ಲೆಕ್ಚರರು, "ನೀನು, ಪ್ರಶ್ನೆಗೆ ಉತ್ತರ ಕೊಡುತ್ತಿದ್ದೀಯೋ ಅಥವಾ ನನ್ನ ಹಾಗೆ ಕ್ಲಾಸಿಗೆ ಲೆಕ್ಚರ್ ಕೊಡುತ್ತಿದ್ದೀಯೋ?" ಎಂದು ಗದರಿಸಿದರು. "ಖಂಡಿತಾ ಲೆಕ್ಚರ್ ಕೊಡುತ್ತಿಲ್ಲಾ ಸಾರ್, ಉತ್ತರ ಸ್ವಲ್ಪ ದೀರ್ಘವಾಯಿತಷ್ಟೆ," ಕಿಟ್ಟು ಉತ್ತರಿಸಿದ. ''ಹಾಗಾದರೆ ಮೂರ್ಖನ ಹಾಗೆ ಮಾತಾಡುವುದನ್ನು ಬಿಟ್ಟುಬಿಡು," ಲೆಕ್ಚರರ್ ಅಬ್ಬರಿಸಿದರು.

*

ಹೊಸದಾಗಿ ಮದುವೆಯಾದ ತರುಣಿ ತಾನು ಮಾಡಿದ ಅಡುಗೆಯನ್ನು ಒಯ್ಯಾರದಿಂದ ಬಡಿಸುತ್ತಾ, ನಾನು "ಎಷ್ಟು ಚೆನ್ನಾಗಿ ಅಡುಗೆ ಮಾಡಿದ್ದೇನೆ ನೋಡಿ, ದಿನಾಲು ಹೀಗೇ ಅಡುಗೆ ಮಾಡಿದರೆ ಏನು ಕೊಡುತ್ತೀರಿ?" ಎಂದು ಕೇಳಿದಳು. "ಕೊಡುವುದು? ಏನು ಕೊಡುವುದು? ತಾನೇ ಬರುತ್ತೆ ಬಿಡು," ಗಂಡ ಉತ್ತರಿಸಿದ. "ಏನದು?" ಹೆಂಡತಿ ಅತಿ ಕುತೂಹಲದಿಂದ ಕೇಳಿದಾಗ ಗಂಡ, "ಇನ್ಶೂರನ್ಸ್" ಎಂದು ಜೋಲು ಮುಖ ಹಾಕಿ ಉತ್ತರಿಸಿದ.

*

"ದಿನಾಲು ದೇವರ ಪೂಜೆ ಮಾಡೋದಿಲ್ವೆ?"

"ಅಂಥ ಕಷ್ಟ ಇನ್ನೂ ಬಂದಿಲ್ಲಪ್ಪಾ"

*

ಪ್ರೊಫೆಸರ್ ಸಾಹೇಬರು ಫಾರ್ಮ್ ತುಂಬಿ ಇನ್‌ಶೂರನ್ಸ್ ಏಜಂಟನಿಗೆ ಕೊಟ್ಟಾಗ ಅವನು ೯೨ ವರ್ಷಗಳ ವಿಮೆ ಇಳಿಸಿದನ್ನು ನೋಡಿ, ''ರಾಯರೆ, ನೀವು ಅವಸರದಲ್ಲಿ ಫಾರ್ಮು ತುಂಬಿದ ಹಾಗೆ ಕಾಣುತ್ತದೆ ನೋಡಿ. ಯಾರೂ ೯೨ ವರ್ಷಗಳ ಇನ್‌ಶೂರನ್ಸ್ ಇಳಿಸುವುದಿಲ್ಲ," ಎಂದು ಅನುಮಾನಿಸುತ್ತಾ ಹೇಳಿದ. ''ಸರಿ ಸರಿ, ಎಲ್ಲರೂ ತಪ್ಪು ಮಾಡುತ್ತಾರೆಂದು ನಾನು ಮಾಡಬೇಕೆ? ನಮ್ಮ ದೇಶದಲ್ಲಿ ಮರಣ ಹೊಂದುವವರಲ್ಲಿ ೯೨ ಅನ್ನು ಮೀರಿದವರ ಸಂಖ್ಯೆ ಕಡಿಮೆ ಎಂಬುದನ್ನು ಅಂಕಿಸಂಖ್ಯೆಗಳಿಂದ ಈಗಾಗಲೆ ಖಚಿತಪಡಿಸಿಕೊಂಡಿದ್ದೇನೆ" ಪ್ರೊಫೆಸರ್ ಸಾಹೇಬರು ಸಿಡುಕಿನಿಂದಲೆ ಉತ್ತರಿಸಿದರು.

*

"ಆಂ! ಆತನಿಗೆ ಚಿಕ್ಕನ ಎಲ್ಲಾ ಆಸ್ತಿ ಹೇಗೆ ಬಂತು?" "ಆತ ಚಿಕ್ಕನ ಲಾಯರ ಮಗಳನ್ನೇ ಮದುವೆಯಾದ."

*

"ಗೃಹಸ್ಥ ಹಾಗೂ ಬ್ರಹ್ಮಚಾರಿಯಲ್ಲಿರುವ ಅಂತರವೇನು?" "ಒಬ್ಬ ಮಾಡದ ತಪ್ಪನ್ನು ಒಪ್ಪಿಕೊಳ್ಳುವವ; ಇನ್ನೊಬ್ಬ ಹೊಸ ಹೊಸ ತಪ್ಪುಗಳನ್ನು ಮಾಡುತ್ತಲೇ ಇರುವವ—ಮದುವೆಯಾಗುವ ದೊಡ್ಡ ತಪ್ಪನ್ನು ಮಾಡುವವರೆಗೂ."

*

ಪ್ರೇಮಕ್ಕಾಗಿ ಮಾಡಿದ ಸಾಹಸಗಳ ಬಗ್ಗೆ, ಅದಕ್ಕೆ ಸಂಬಂಧಿಸಿದ ರೋಮಾಂಚಕ ಘಟನೆಗಳ ಬಗ್ಗೆ ಮಾಹಿತಿ ಬೇಕೆಂದರೆ ಅದು ಎಲ್ಲಿ ಸಿಗುತ್ತದೆ ಅನ್ನುತ್ತೀರಾ?— ಪೇಪರುಗಳ ಕೊಲೆ, ಮೊಕದ್ದಮೆಗಳ ಕಾಲಮ್ಮಿನಲ್ಲಿ.

—ಜಾರ್ಜ್ ಬನಾರ್ಡ್

ಶ್ರೀ ಅರವಿಂದರ ಜೀವನ ಸಂದೇಶ



ಡೇ. ಶಿವರಾಮ ಕುಲಕರ್ಣಿ

ಹೈದರಾಬಾದಿನ ವೀರ ಕನ್ನಡಿಗ

ಜನನಿ ಮಾತೃಭೂಮಿ ಸ್ವರ್ಗಕ್ಕೂ ಮಿಗಿಲಾದವು. ಅಂತೆಯೇ ಮಾತೃಭಾಷೆ ಕೂಡ. ತಾನು ನೆಲೆನಿಂತಲ್ಲಿ ಮಾತೃಭಾಷೆಗೊದಗಿದ ದಯನೀಯ ಸ್ಥಿತಿ ಕಂಡು ಮರುಗಿ ಅದರ ಉದ್ಧಾರಕ್ಕೆ ಶ್ರಮಿಸುವಾತನೇ ನಿಜವಾದ ಮಾತೃಭಾಷಾಪ್ರೇಮಿ. ಚಿಮ್ಮಲಗಿ ಭೀಮಾಚಾರ್ಯರು ಅಂಥವರಲ್ಲಿ ನಿಸ್ಸಂಶಯವಾಗಿಯೂ ಮೊದಲಿಗರು. ಅವರ ಕಾರ್ಯ, ಇಂದು ಕಲ್ಪವೃಕ್ಷವಾಗಿದೆ ಹೈದರಾಬಾದಿನಲ್ಲಿ.

ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಹೈದರಾಬಾದಿನಲ್ಲಿ ಇತರ ಭಾಷಿಕರು ಕನ್ನಡವನ್ನು ಮೂಲೆಗೊತ್ತಿದಾಗ ಹೋರಾಡಿ, ಆ ನಗರದಲ್ಲಿ ಕನ್ನಡವನ್ನು ನೆಲೆಗೊಳಿಸಿದ ಭೀಮಾಚಾರ್ಯ ಚಿಮ್ಮಲಗಿಯವರ ಚರಿತ್ರೆಯಿದು. ಕಡು ಬಡತನದ ವಿರುದ್ಧವೂ ಅವರು ಹೋರಾಡಬೇಕಾಗಿ ಬಂದಿತು. ಹೈಸ್ಕೂಲ್ ಮಟ್ಟದ ವರೆಗಾದರೂ ಇಂಗ್ಲಿಷ್ ಶಿಕ್ಷಣವನ್ನು ಪಡೆಯಬೇಕೆಂದಿದ್ದರೂ ಅದು ಕೈಗೂಡದಿದ್ದಾಗ ವ್ಯಾಪಾರ ರಂಗದಲ್ಲಿ ಕಾಲಿರಿಸಿದರು–ಬಂಡವಲಿನ ಯಾವ ಬೆಂಬಲವೂ ಇಲ್ಲದೆ. ಕೇವಲ ಕಾರ್ಯಶ್ರದ್ಧೆಯ ನೆರವಿನಿಂದ ಅದರಲ್ಲಿ ಯಶಸ್ವಿಯಾದರು. ಮಹತ್ವದ್ದೆಂದರೆ ಗಳಿಸಿದ ಸಂಪತ್ತಿನ ಬಹುಭಾಗವನ್ನು ಕನ್ನಡದ ಅಭಿವೃದ್ಧಿಗಾಗಿ ವ್ಯಯಿಸಿದರು. ಹದವಾದ ಭೂಮಿಯಲ್ಲಿ ಹೆಚ್ಚಿನ ಫಸಲನ್ನು ಪಡೆಯುವುದಕ್ಕೆ ಪರಿಶ್ರಮ ಬೇಕೇ ಬೇಕು. ಆದರೆ ಬಂಜರು ಭೂಮಿಯಲ್ಲಿ ಸಸಿಯನ್ನು ನೆಟ್ಟು ಪೋಷಿಸಿ ಕೊಂಡು ಬರುವುದಕ್ಕೆ ಅದಕ್ಕೂ ಹೆಚ್ಚಿನ ಪರಿಶ್ರಮ ಬೇಕಾಗುತ್ತದೆ. ಹೈದರಾಬಾದಿನಲ್ಲಿ ಚಿಮ್ಮಲಗಿಯವರ ಕನ್ನಡ ಸಾಧನೆ ಈ ಬಗೆಯದು.

ಚಿಮ್ಮಲಗಿಯವರು ಹುಟ್ಟಿ ಬೆಳೆದದ್ದು ಗುಳೇದಗುಡ್ಡದಲ್ಲಿ (ಜನನ ೧೮೮೯). ಅವರದು ಏಳು ಜನ ಒಡಹುಟ್ಟಿದವರಿದ್ದ ನಿತ್ಯ ಬಡತನದ ಬ್ರಾಹ್ಮಣ ಮನೆತನ. ಯಾರದೋ ಅನುಕೂಲವಂತರ ಮನೆಯಲ್ಲಿ ನಡೆದ ಉಪನಯನದ ಕಾಲಕ್ಕೆ ಈ ಭೀಮನದೂ ಜರುಗಿತು. ಪಾಟಿ–ಪೆನ್ಸಿಲುಗಳಿಗೆ ಬೇಕಾಗುವ ಅಲ್ಪ ಹಣವನ್ನು ಸಹ ಒದಗಿಸಲಾರದಷ್ಟು ತಂದೆಯ ಆರ್ಥಿಕ ಸ್ಥಿತಿಗತಿ. ಆದರೆ ಈ 'ಮುಂಜಿವೆ ಮಣಿ'ಗೆ ಆಗಾಗ ಊಟದ ಆಮಂತ್ರಣ ಬಂದು ದಕ್ಷಿಣೆಯ ರೂಪದಲ್ಲಿ ಪುಡಿಗಾಸು ಸಿಗುತ್ತಿತ್ತು. ಹಾಗೆ ಬಂದದ್ದನ್ನು ಕೂಡಿಡಲು ತಂದೆ ಒಂದು ಡಬ್ಬಿಯನ್ನು ಮಾಡಿ ಕೊಟ್ಟಿದ್ದರಂತೆ. ಅದರಲ್ಲಿ ಜಮೆಯಾದ ಹಣದಿಂದಲೇ ಇವನ ಚಿಲ್ಲರೆ ವೆಚ್ಚ ಸಾಗಬೇಕು. ದುಸ್ಥಿತಿಯ ಅವಹೇಳನೆಯಿಂದಾಗಿ ಈ ವ್ಯವಸ್ಥೆ ಮಾಡಿದ್ದರೆ ಇವನಿಗೆ ಅದು ಮಿತವ್ಯಯದ ಒಂದು ಪಾಠವಾಗಿ ಪರಿಣಮಿಸಿತು !

ಭೀಮನು ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದಾಗ ಓರ್ವ ಬಣಜಿಗರ ಹುಡುಗ ಇವನ ಸಹಪಾಠಿಯಾಗಿದ್ದ. ಅವನ ಮನೆಯಲ್ಲಿ ತಾಯಿ

ಮಗ ಇಬ್ಬರೇ–ಗಳಿಸುವ ಯಜಮಾನ ತೀರಿ ಹೋಗಿದ್ದನೆಂದು, ತಾಯಿ ಕೂಲಿಯ ಕೆಲಸ ಮಾಡುತ್ತಿದ್ದಳು. ಮಗ ಸಂತೆಯಲ್ಲಿ ಕಡ್ಡಿಪೆಟ್ಟಿಗೆ ಮಾರಿ ಕಿಂಚಿತ್ ಗಳಿಸಿ ತರುತ್ತಿದ್ದ. ಆರ್ಥಿಕವಾಗಿ ತನ್ನ ಪರಿಸ್ಥಿತಿಯಾವರೂ ಆದೇ ಎಂದು ಕಂಡು ಕೊಂಡಿದ್ದ ಭೀಮ ತಾನೂ ಸಂತೆಯ ದಿವಸ ಹಾಗೆ ಮಾಡಲು ನಿರ್ಧರಿಸಿದನು. ಒಂದು ಬಿಲ್ಲಿಗೆ ಕೀಲಿಕೈ ಛಾಪಿನ ೩ ಪೆಟ್ಟಿಗೆಗಳು! ಎರಡು ಡಜನ್ ಕೊಂಡು ಬಿಲ್ಲಿಗೆ ಎರಡರಂತೆ ಮಾರಾಟ ಮಾಡತೊಡಗಿದನು. ಭೀಮನಿಗೆ ಆಗ ೮ ವರ್ಷ.

ತಂದೆಗೆ ಈ ವಿಷಯ ತಿಳಿದಾಗ, ಚೆನ್ನಾಗಿ ಬೈದರು. ವೈದಿಕ ಬ್ರಾಹ್ಮಣರ ಹುಡುಗ; ಈ ಧಂದೆ ಮಾಡುವುದೆ ? ಆದರೇನು ಇಂಥ ಕೆಲಸ ದಿಂದ ವಾರಕ್ಕೆ ಸಿಗುವ ೩–೪ ಆಣೆಯನ್ನು ಬಿಟ್ಟುಕೊಡಲು ಭೀಮನು ಸಿದ್ಧನಿದ್ದಿಲ್ಲ. ತುಸು ದೊಡ್ಡವನಾದ ಮೇಲೆ, ನೆರೆಯ ಮುಷ್ಟೇಜಿಹಾಳದ ಸಂತೆಗೆ ಹೋಗಿ ಪಂಚಾಂಗ, ಪಾಕೆಟ್ ಡೈರಿ, ಸೀಸಕಡ್ಡಿಗಳ ಮಾರಾಟವನ್ನು ಮಾಡತೊಡಗಿದನು.

ಗುಳೇದಗುಡ್ಡದಲ್ಲಿಯ ಪ್ರಾಥಮಿಕ ಶಿಕ್ಷಣ ಮುಗಿಯುತ್ತ ಬಂದಿತ್ತು. ಇತರ ಕೆಲವು ಜೊತೆಗಾರರಂತೆ ಭೀಮನು ತಾನೂ ಇಂಗ್ಲಿಷ್ ಶಾಲೆಗೆ ಹೋಗಬೇಕು ಎಂದು ತಿಳಿಸಿದ. ಆದಕ್ಕಾಗಿ ಬಾಗಿಲುಕೋಟೆಗೆ ಹೋಗಬೇಕಿತ್ತು. ತಂದೆಯನ್ನು ಕೇಳಿದಾಗ "ದುಡ್ಡು ಎಲ್ಲಿಂದ ತರೋದು ? ಪೌರೋಹಿತ್ಯವನ್ನು ಕಲಿ; ಸಾಕು" ಎಂದರು. ಮನೆಯಲ್ಲಿ ಇನ್ನೂ ಹಲವಾರು ಬಾಯಿಗಳಿಗೆ ಆಹಾರವನ್ನು ಪೂರೈಸಬೇಕಾಗಿದ್ದ ಆ ತಂದೆ ಇನ್ನೇನು ಹೇಳಿಯಾರು? ಮುಂದಕ್ಕೆ ಓದಬೇಕು ಎನ್ನುವ ಭೀಮನ ಆಸೆಗೆ ಮಣ್ಣು ಹೊಯ್ದಂತಾಯಿತು, ಸಿಂಧನೂರಿಗೆ ಹೋದರೆ ಹೇಗೆ?

ಭೀಮನ ತಾಯಿಯ ತವರಿನವರು ಇದ್ದ ಸಿಂಧನೂರು ಮೊಗಲಾಯಿಗೆ ಸೇರಿದ ಊರಾಗಿತ್ತು. ಆ ಊರಲ್ಲಿ ರಾಮದೇವರ ಪ್ರತಿಷ್ಠಾಪನೆ ಜರುಗಲಿತ್ತು. ಆದಕ್ಕಾಗಿ ಅಡಿಗೆ, ಮೇಲುಗೆಲಸ ಮಾಡಲು ಜನ ಬೇಕೆಂದು ತಿಳಿದಾಗ, ಭೀಮನ ತಾಯಿ ಮತ್ತು ಅಜ್ಜಿ ಹೊರಟು ನಿಂತರು. ಹುಟ್ಟೂರನ್ನು ಬಿಡಬಿಲ್ಲರೆ. ವಿದ್ಯಾಭ್ಯಾಸದ ಆಸೆಯನ್ನು ಬಿಡಬೇಕಾಗುವದೆಂಬ ಕಟುಸತ್ಯ ಭೀಮನಿಗೆ ಮನವರಿಕೆಯಾಗಿತ್ತಾದ್ದರಿಂದ ತಾನೂ ಹೊರಟು ನಿಂತನು. "ಅಲ್ಲಿ ಹೋಗಿ ಇಂಗ್ಲೀಷ ಕಲೀತೀನಿ" ಎಂದು ಸಾಧಿಸಿದನು–ಅಂಥ ಶಾಲೆ ಸಿಂಧನೂರಿನಲ್ಲಿ ಇದೆಯೇ ಇಲ್ಲವೇ–ಎಂಬುದು ಸಹ ಗೊತ್ತಿಲ್ಲದೇ. ತಂದೆ ಗದರಿಸಿದರು. ತಾಯಿಗೂ ಇಷ್ಟವಿರಲಿಲ್ಲ.

ಇಪ್ಪತ್ತನೆಯ ಶತಮಾನವೇ ಕಾಲಿರಿಸಿದ್ದ ಆಗಿನ ದಿನಗಳಲ್ಲಿ, ಗುಳೇದಗುಡ್ಡದಂಥ ಸಣ್ಣ ಊರಲ್ಲಿ ಬಸ್ಸುಗಳು ಎಲ್ಲಿಂದ ಬರಬೇಕು? ಅದೂ ೯೦ ಮೈಲು ದೂರದ ಮೊಗಲಾಯಿ ಗ್ರಾಮಕ್ಕೆ. ಆದ್ದರಿಂದ ಇವರು ಒಂದು ತಟ್ಟೂ ಕುದುರೆಯನ್ನು ಬಾಡಿಗೆ ಮಾಡಿಕೊಂಡು ಹೊರಟರು. ತುಸು ದೂರ ಸಾಗಿರಬೇಕು. ಧೂಳಿನ ದಾರಿಯಲ್ಲಿ ಈ ಹೆಂಗಳೆಯರಿಗೆ ತಮ್ಮ ಭೀಮನಂತೆಯೇ ಇರುವ ಓರ್ವ ಹುಡುಗ ಕಂಡನು. ಹೌದು, ಅವನೇ! ತಾನೂ ಬರುವುದಾಗಿ ಹಟಮಾಡಿ ಅಳತೊಡಗಿದನು. ಅವನನ್ನು ಗದರಿಸಲು ಸನಿಹದಲ್ಲಿ ತಂದೆ ಇರಲಿಲ್ಲ. ಬದಲಾಗಿ ಸದಾ ಅಚ್ಚೆ ಮಾಡುವ ಅಜ್ಜಿ! ಅಂತೂ ಈ ಎರಡೂವರೆ ಜನರ ಸವಾರಿ ಪಾಳಿಯ ಮೇಲೆ ಒಂದಿಷ್ಟು ನಡೆದುಕೊಂಡು ಬರುತ್ತ, ಐದು ದಿನಗಳ ಪ್ರಯಾಣಾನಂತರ ಸಿಂಧನೂರನ್ನು ಸೇರಿತು.

ಆ ಊರಲ್ಲಿ ಹೈಸ್ಕೂಲು ಇರಲೇ ಇಲ್ಲ ಇದ್ದದ್ದು ಉರ್ದು ಶಾಲೆ, ನಿಜಾಮರ ರಾಜ್ಯದಲ್ಲಿ ಅದು ರಾಜಭಾಷೆ ತಾನೇ. ಭೀಮನು ಎರಡು ವರ್ಷ ಅತಿ ಕಷ್ಟದಿಂದ ಉದರ ನಿರ್ವಹಣೆಯನ್ನು ಹೊಂದಿಸಿಕೊಂಡು ಅಲ್ಲಿಯೇ ಕಲಿತನು. ಆದರೆ ಮೂಲ ಉದ್ದೇಶ ಕೈಗೂಡಿರಲಿಲ್ಲ. ಇಂಗ್ಲಿಷ್ ಶಾಲೆಯಿರುವ, ಹಾಗೂ ಅಲ್ಲಿ ತನಗೆ ಊಟಕ್ಕೆ ಹಾಕಿ ಇಟ್ಟುಕೊಳ್ಳುವಂಥ ಮನೆ ಇರುವ ಊರೂರುಗಳನ್ನು–ಮಾನ್ವಿ, ರಾಯಚೂರು, ಶಹಾಪುರ, ಸುರಪುರ ಇತ್ಯಾದಿ– ಅಲೆದಾಡಿದನು. ಮುಂದುವರಿದವರು ಎಂಬ ಹಣೆಪಟ್ಟಿಯನ್ನು ಬ್ರಾಹ್ಮಣ ವರ್ಗಕ್ಕೆ ತಗುಲಿಸಲಾದರೂ ಎರಡು ಹೊತ್ತಿನ ಅನ್ನ, ವಿದ್ಯಾರ್ಜನೆಯ ಅನುಕೂಲ ಇವು ಇಲ್ಲದ ಇಂಥ ಬ್ರಾಹ್ಮಣ ಕುಟುಂಬಗಳು ನೂರಾರು ಅಲ್ಲ ಸಾವಿರಾರು ಇವೆ ಎಂಬುದನ್ನು ನೆನೆದಿರಬೇಕು.

ಈಗಷ್ಟೇ ಅಲ್ಲ ಒಂದೆರಡು ಶತಮಾನಗಳಿಂದ ನಡೆದುಕೊಂಡು ಬಂದ ಬಳುವಳಿ ಇದು. ಉಳಿದ ಬಡ ವರ್ಗದವರಿಗೂ ಇವರಿಗೂ ಇರುವ ವ್ಯತ್ಯಾಸವೆಂದರೆ, 'ಇತರರಿಗೆ ಉಪಜೀವನದ ಬೇರೆ ಮಾರ್ಗಗಳಿದ್ದರೆ ತನಗೆ ವಿದ್ಯೆಯೊಂದೇ ಗತಿ. ಆದಕಾರಣ ಎಂತಾದರೂ ವಿದ್ಯಾರ್ಜನೆ ಮಾಡಬೇಕು 'ಎಂಬ ಅದಮ್ಯ ಉತ್ಸಾಹ. ನಾಲ್ಕೈದು ವರ್ಷ ಸುತ್ತಾಡಿದ ಮೇಲೆ ಗಳಿತಪ್ರಯತ್ನನಾಗಿ ಭೀಮಣ್ಣನು ಮರಳಿ ಗುಳೇದಗುಡ್ಡಕ್ಕೇನೆ ಬಂದನು.

ಇಲ್ಲಿಯೂ ಒಂದು ಉರ್ದು ಪ್ರಾಥಮಿಕ ಶಾಲೆಯಿದ್ದಿತು–ಮುಸ್ಲಿಂ ಮಕ್ಕಳಿಗಾಗಿ. ಅಲ್ಲಿ ಅಸಿಸ್ಟೆಂಟ್ ಮಾಸ್ತರನ ಜಾಗ ಖಾಲೀಯಿದ್ದಿತು. ಭೀಮಾಚಾರ್ಯನು ಕಲಿತ ಉರ್ದು ಎರಡು ಮೂರ–ರನೆಯ ಇಯತ್ತೆಯದು ಮಾತ್ರ. ಮೇಲಾಗಿ ೧೬ ವರ್ಷದ ಅಲ್ಪವಯ. ಆದರೂ ೭ ರೂಪಾಯಿ ಸಂಬಳದ ಆ ನೌಕರಿ ಸಿಕ್ಕಿತು! ಒಳ್ಳೆ ಹುರುಪಿನಿಂದ ಪಾಠ ಹೇಳಿದನು. ಹೆಡ್‌ಮಾಸ್ತರ್ ಸೈಫುದ್ದೀನರ ವಿಶ್ವಾಸಕ್ಕೆ ಪಾತ್ರನಾದನು. ಒಂದು ಒಳ್ಳೆಯ ಸಂಗತಿಯೆಂದರೆ ಆ ಹಣವನ್ನು ಭೀಮನ ತಂದೆ ತಮ್ಮ ಸಂಸಾರ ನಿರ್ವಹಣೆಗಾಗಿ ಕಸಿದು ಕೊಂಡಿರಲಿಲ್ಲ. ಹೀಗಾಗಿ ಒಂದೆರಡು ವರ್ಷಗಳ ಅವಧಿಯಲ್ಲಿ ತುಸು ಹಣವನ್ನು ಉಳಿಸುವುದು ಭೀಮಾಚಾರ್ಯನಿಗೆ ಸಾಧ್ಯವಾಯಿತು.

ಗುಳೇದಗುಡ್ಡದಲ್ಲಿ ಶಾಲೆಯ ಪುಸ್ತಕಗಳ ಅಂಗಡಿಯಿರಲಿಲ್ಲ. ಅವು ಬೇಕೆಂದಾಗ ಬಾಗಿಲು ಕೋಟೆಗೆ ಹೋಗಿ ತರುತ್ತಿದ್ದರು. ಭೀಮಾಚಾರ್ಯನು ಮನೆಯಲ್ಲಿ ಒಂದು ಸಣ್ಣ ಪುಸ್ತಕದ ಅಂಗಡಿಯನ್ನು ತೆರೆದನು: ಜೊತೆಗೆ ಎಕ್ಸರ್‌ಸೈಜ್ ಮುಂತಾದ ಲೇಖನ ಸಾಧನಗಳನ್ನು ತಂದು ಇರಿಸಿದನು. ಬೆಳಗಾಂವಿಯಲ್ಲಿ ಸ್ವದೇಶೀ ಸಾಮಾನುಗಳ ಅಂಗಡಿಯೊಂದು ಇದೆಯೆಂದು ತಿಳಿದುಬಂತು. ಸ್ವದೇಶಿ ಚಳುವಳಿಯ ಭಾಷಣಗಳನ್ನು ಎಳೆಯ ವಯಸ್ಸಿನಲ್ಲಿ ಕೇಳಿದ್ದ ಅವನಿಗೆ ಅಂಥ ಸಾಮಾನುಗಳನ್ನೂ ತರಿಸಿ ಮಾರಾಟಮಾಡಬೇಕೆಂದು ಕಂಡಿತು. ಹೀಗೆ, ಕಡಿಮೆ ಲಾಭಾಂಶದಲ್ಲಿಯೇ ಆಗಲಿ, ವ್ಯಾಪಾರ ಬೆಳೆಯಿತು. ಅದರಿಂದಾಗಿ ರಸ್ತೆಯ ಮೇಲಿನ ಒಂದು ಚಿಕ್ಕ ಮಳಿಗೆಗೆ ಅಂಗಡಿಯು ಸ್ಥಾನ ಬೆಳೆಸಿತು– 'ಶ್ರೀ ಲಕ್ಷ್ಮೀನಾರಾಯಣ ಬುಕ್ಕ ಡಿಪೊ' ಎಂಬ ಹೆಸರಿನಲ್ಲಿ. ಉರ್ದು ಶಾಲೆ ಬಿಟ್ಟ ಮೇಲೆ ಸಂಜೆ ಇದರ ವ್ಯವಹಾರ ನಡೆಯುತ್ತಿತ್ತು.

ಆ ವೇಳೆಗೆ ಮಹೇಂದ್ರಕರರೆಂಬ ಹುಬ್ಬಳ್ಳಿಯ ಫೋಟೋಗ್ರಾಫರರು ಗುಳೇದಗುಡ್ಡಕ್ಕೆ ಬಂದರು. ಈಗಿನ ಹಾಗೆ ಬೀದಿಗೊಂದರಂತೆ ಫೋಟೋಸ್ಟುಡಿಯೋಗಳು ಇರಲಿಲ್ಲ. ಅನೇಕರು ಟೂರಿಂಗ್ ಫೋಟೋಗ್ರಾಫರರೇ. ಹಳ್ಳಿಯ ಜಾತ್ರೆಗಳಲ್ಲಿ ಈಗಲೂ ಇಂಥವರನ್ನು ಕಾಣಬಹುದೆನ್ನಿ. ಅಂತೂ ತಮ್ಮ ಮೈ–ಮುಖಗಳನ್ನು ತದ್ವತ್ತಾಗಿ ಮೂಡಿಸ–ಬಲ್ಲ ಈ ಕಲೆ ಜನಕ್ಕೆ ಆಕರ್ಷಕವೆನಿಸಿತ್ತು. ಮಹೇಂದ್ರಕರರು ಗುಳೇದಗುಡ್ಡದಲ್ಲಿ ಹಲವು ವಾರ ಇದ್ದುಕೊಂಡು, ಅನೇಕರ ಫೋಟೋ ತೆಗೆಯುತ್ತಿದ್ದಾಗ, ತಾವೂ ಏಕೆ ಈ ಯುಕ್ತಿಯ ವಿದ್ಯೆಯನ್ನು ಕಲಿಯಬಾರದು ಎಂದು ಭೀಮಾಚಾರ್ಯರಿಗೆ ತೋಚಿತು. ಸರಿ, ಮಹೇಂದ್ರಕರರ ಸ್ನೇಹ ಸಂಪಾದಿಸಿದರು. ಒಂದು ತಿಂಗಳು ರಜೆ ಪಡೆದಾದರೂ ಅದನ್ನು ಕಲಿಯುವ ಉತ್ಕಟಾಪೇಕ್ಷೆ! ಆದಕ್ಕಾಗಿ ಹುಬ್ಬಳ್ಳಿಗೆ ಹೋಗಿ ಅವರಲ್ಲಿಯೇ ಇದ್ದು ಕಲಿತು, ರೂಢಿಮಾಡಿಕೊಂಡರು. ಒಂದು ನೂರು ರೂಪಾಯಿಯಷ್ಟು ಅದುವರೆಗೆ ಕೂಡಿಸಿದ್ದ ಹಣವನ್ನೆಲ್ಲ ವೆಚ್ಚಮಾಡಿ, ಕ್ಯಾಮೆರಾ ಮತ್ತು ಅದಕ್ಕೆ ಬೇಕಾಗುವ ಫಿಲ್ಮ್, ಕಾಗದ, ರಸಾಯನಗಳನ್ನು ತಂದುಬಿಟ್ಟರು. ಆದರೆ ಮರಳಿ ಇಲ್ಲಿಗೆ ಬಂದ ಮೇಲೆ, ಫೋಟೋಗಳು ಚೆನ್ನಾಗಿ ಮೂಡಿದ್ದೇ ಇಲ್ಲ! ಮಹೇಂದ್ರಕರರಲ್ಲಿ ಮೂರು ವಾರ ಇದ್ದರೂ ಪ್ರಯೋಜನಕ್ಕೆ ಬಾರದೆ ಹೋಯಿತು. ಈ ವಿದ್ಯೆ ತಾನೆಣಿಸಿದಷ್ಟು ಸರಳವಲ್ಲ ಎಂದು ತೋಚಿ, ಕ್ಯಾಮರಾವನ್ನು ನಾಗೊಂದಿಗೆಗೆ ಸೇರಿಸಿದರು !

ಈ ವೇಳೆಗೆ ಇಪ್ಪತ್ತನೆಯ ಶತಮಾನವು ಕಾಲಿರಿಸಿಯಾಗಿತ್ತು. ಸ್ವರಾಜ್ಯ ಚಳವಳಿಯ ಗಾಳಿ ಪುಣೆಯ ಕಡೆಯಿಂದ ಉತ್ತರ ಕರ್ನಾಟಕದತ್ತ ಬೀಸುತ್ತಿದ್ದ ಕಾಲವದು. ಅಲ್ಲಿಯ ಸುಧಾರಕರು, ಟಿಳಕರು, ಆರಂಭಿಸಿದ್ದ ಗಣೇಶೋತ್ಸವದ ಮೂಲಕ ಸ್ವಾತಂತ್ರ್ಯದ ಬೀಜವನ್ನು ಜನಮನದಲ್ಲಿ ಬಿತ್ತುತ್ತ ನಡೆದಿದ್ದರು. ಪುಣೆಯಿಂದ ಪರಾಂಜಪೆ

ಎಂಬವರು ಬಂದು ಊರಲ್ಲಿಯ ಹುಡುಗರನ್ನು ಕಲೆ ಹಾಕಿ ಕವಾಯಿತು ಮುಂತಾದ್ದನ್ನು ಮಾಡಿಸುತ್ತಿದ್ದರು. ಸಮವಸ್ತ್ರ ಧರಿಸಿದ ತಮ್ಮ ಆ ಮಂಡಳಿಯನ್ನು ಅವರು ಗಣೇಶನ ಹಬ್ಬದ ದಿನಗಳಲ್ಲಿ ಮನೆಮನೆಗೆ ಕರೆದೊಯ್ದು ದೇಶಭಕ್ತಿಯ ಹಿಂದೀ, ಮರಾಠೀ ಹಾಡುಗಳನ್ನು ಹಾಡಿಸುತ್ತಿದ್ದರು. ತರುಣ ಭೀಮಾಚಾರ್ಯರ ಮನಸ್ಸಿನ ಮೇಲೆ ಗಾಢ ಪರಿಣಾಮ ಮಾಡಿದ್ದಿತು.

ಹಳ್ಳಿಗಳಲ್ಲಿಯ ಅಂಗಡಿ ಕಟ್ಟೆಯ ಮೇಲೆ ಕುಳಿತು ಜನ ಹರಟೆ ಹೊಡೆಯುವುದು ಸಹಜವೇ. ಲಕ್ಷ್ಮೀನಾರಾಯಣ ಬುಕ್ಕ ಡಿಪೋದ ಕಟ್ಟೆಯ ಮೇಲೆ ಶಿಕ್ಷಕರು, ಮಕ್ಕಳ ಪಾಲಕರು, ಮುದುಕರು ಬರುತ್ತಿದ್ದರು. ಚಂದಪ್ಪನೆಂಬ ಹವಾಲದಾರನೂ ಹಾಗೆ ಹರಟೆ ಹೊಡೆಯುತ್ತ ಕುಳ್ಳಿರುತ್ತಿದ್ದ. ಒಂದು ದಿನ ಅವನಿಗೆ ಅಂಗಡಿಯಲ್ಲಿ ಹೊಸ ಫ್ರೇಮ್ ಹಾಕಿ ಇರಿಸಿದ ಟಿಳಕರ ಫೋಟೋ ಕಂಡಿತು. ಅಲ್ಲಿ ಅದು ಹೇಗೆ ಬಂದಿತೆಂಬುದು ಗೊತ್ತಿಲ್ಲದೆಯೊ, ಅಥವಾ ಗೊತ್ತಿದ್ದರೂ ಇದೊಂದು ಕೇಸು ಸಿಕ್ಕಿತೆಂದೋ, ಚಂದಪ್ಪನು ಆ ಬಗ್ಗೆ ಗುಪ್ತ ವರದಿ ಕಳಿಸಿದ. ಮರುದಿನವೇ ಸರ್ಕಲ್ ಇನ್‌ಸ್ಪೆಕ್ಟರರು ಬಂದರು. ಅಂಗಡಿಯಲ್ಲಿಯ ಸಾಮಾನನ್ನೆಲ್ಲ ಕಿತ್ತಾಡಿದರು. ರಾಷ್ಟ್ರೀಯ ಸಾಹಿತ್ಯ, ಸಾಮಗ್ರಿ ಏನೇನಿದೆಯೆಂಬುದನ್ನು ನೋಡಲು, ಪಠ್ಯ ಪುಸ್ತಕಗಳು, ನೋಟ್‌ಬುಕ್, ಮಸಿಗುಳಿಗೆ, ಫೋಟೊ ಕಟ್ಟು ಹಾಕಲು ಬೇಕಾಗುವ ಸಾಮಗ್ರಿ ಇಷ್ಟನ್ನು ಬಿಟ್ಟರೆ ಏನೂ ಇರಲಿಲ್ಲ. ಆದರೆ ಇದೊಂದು ಫೋಟೋ ಇತ್ತಲ್ಲ! "ಗೋವಿಂದರಾವ್ ಎನ್ನುವವರು ಕಟ್ಟು ಹಾಕಲೆಂದು ಕೊಟ್ಟಿದ್ದಾರೆ" ಎಂದು ಭೀಮಾಚಾರ್ಯರು ತಿಳಿಸಿದಾಗ, ಅವರಿಗೆ ಕರೆ ಹೋಯಿತು. ಗೋವಿಂದರಾಯರು ಊರಿನ ಗಣ್ಯ ವ್ಯಕ್ತಿ. ಅವರನ್ನು ಕೇಳಿದಾಗ, "ಛೇ. ನಾನು ಕೊಟ್ಟದ್ದು ಅಲ್ಲವೆ ಅಲ್ಲ" ಎಂದುಬಿಟ್ಟರು! ರಾಜದ್ರೋಹಿಗಳ ಫೋಟೋ ಇಟ್ಟುಕೊಳ್ಳುವುದೆ? ಆಗಿಂದಾಗ ಅಂಗಡಿಯನ್ನು ಮುಚ್ಚಲು ಸರಕಾರದ ಹುಕುಮು ಹೊರಟಿತು.

ಟಿಳಕರ ಫೋಟೊ ಬಹಿರಂಗವಾದ ಈ 'ಮಹಾನ್' ರಾಜದ್ರೋಹದ ಸುದ್ದಿಯು ಆಗಿನ ಜಿಲ್ಹಾ ಕಲೆಕ್ಟರನ ವರೆಗೂ ಹೋಯಿತು. ಈ ಬಗೆಯ ಆರೋಪದ ಮೇಲೆ ಇನ್ನಿಬ್ಬರು ಶಿಕ್ಷಕರ ಮೇಲೆಯೂ ನಜರು ಇಡಲಾಗಿತ್ತು. ಇವರು ಭೀಮಾಚಾರ್ಯರ ಅಂಗಡಿಯ ಕಟ್ಟೆಗೆ ದಿನವೂ ಬರುತ್ತಿದ್ದದ್ದೇ ಅವರ ಅಪರಾಧವಾಗಿತ್ತು. ಪ್ರಾಥಮಿಕ ಶಾಲೆಗಳು ಸ್ಕೂಲ್ ಬೋರ್ಡಿನ ಕೈಕೆಳಗಿರವೇ. ಶಿಕ್ಷಣ ಖಾತೆಯ ನೇರ ವಶದಲ್ಲಿದ್ದಿದ್ದರೆ ಈ ಮೂವರು ಶಿಕ್ಷಕರನ್ನು ಆ ಕ್ಷಣವೆ ಕೆಲಸದಿಂದ ತೆಗೆದುಹಾಕುತ್ತಿದ್ದರು !

ಕೆಲ ಕಾಲ ಸರಿದ ಮೇಲೆ ಕಲೆಕ್ಟರನು (ಶೆಫರ್ಡ್ ಎಂಬುದು ಅವನ ಹೆಸರು) ಗುಳೇದಗುಡ್ಡಕ್ಕೆ ಬರುವವನಿದ್ದ. ಸರಿ, ಅವನಿಗೆ ಸ್ಕೂಲ್ ಬೋರ್ಡಿನವರು ಆಗಿನ ಕಾಲದ ಶಿಷ್ಟಾಚಾರದಂತೆ 'ಪಾನಸುಪಾರಿ' ಕೊಡಬೇಕೆಂದರು. ಆತನೋ "ಆ ಮೂವರು ರಾಜದ್ರೋಹೀ ಶಿಕ್ಷಕರನ್ನು ಕೆಲಸದಿಂದ ತೆಗೆದರೆ ಮಾತ್ರ ಬರುವೆ" ಎಂದು ತಿಳಿಯಪಡಿಸಿದನು. ಈ ವಿಷಯವು ಬೋರ್ಡಿನ ಸಭೆಯಲ್ಲಿ ಮತ್ತೆ ಚರ್ಚೆಗೆ ಬಂದಾಗ, ಒಬ್ಬ ಮೆಂಬರರು ಮಾತ್ರ–ಅವರು ಖಾಸಗೀ ಡಾಕ್ಟರರು–ಇದನ್ನು ವಿರೋಧಿಸಿದರಂತೆ. ಆದರೆ ಪ್ರಯೋಜನವಾಗಲಿಲ್ಲ. ಊರಲ್ಲಿಯ ಉರ್ದು ಮಾಸ್ತರಿಕೆಯಿಂದ ಭೀಮಾಚಾರ್ಯರ 'ಬಡತರ್ಫ್' ಆಯಿತು (೧೯೦೯). ಬೋರ್ಡಿನ ಚೇರಮನ್ನರು "ಕಲೆಕ್ಟರರಿಗೆ ಹೋಗಿ ಮಾಫಿ ಬೇಡಿರಿ. ಇನ್ನೊಮ್ಮೆ



"ಪಾಂಡವರ ಬೆನ್ನು ಹಿಡಿದದ್ದಕ್ಕೆ ಅಲ್ಲವೇ ನಾಯಿಗೆ ಸ್ವರ್ಗ ಸಿಕ್ಕದ್ದು......"

ರಾಜದ್ರೋಹದ ಯಾವ ಕೆಲಸ ಮಾಡುವದಿಲ್ಲ ಎಂದು ಹೇಳಿಕೆಕೊಟ್ಟು ಬರ್ರಿ. ಆಗ ನಿಮ್ಮನ್ನು ಮತ್ತೆ ಕೆಲಸದ ಮೇಲೆ ತಗೊಳ್ಳುವೆವು" ಎಂದರಂತೆ! ಇನ್ನಿಬ್ಬರು ಶಿಕ್ಷಕರು ಹಾಗೆ ಬರೆದು ಕೊಟ್ಟು ಮತ್ತೆ ಕೆಲಸಕ್ಕೆ ಹಾಜರಾದರು. ಭೀಮಾಚಾರ್ಯರು! ತಮ್ಮ ಮೇಲೆ ಅನಾವಶ್ಯಕವಾಗಿ ಆಪಾದನೆ ಮಾಡಿ, ಅಂಗಡಿಯನ್ನೇ ಮುಚ್ಚಿಸಿದ್ದು, ಅವರಿಗೆ ಸಂತಾಪ ಬರಿಸಿತ್ತು. ಇದಂತೂ ಸ್ವಾಭಿಮಾನದ ಪ್ರಶ್ನೆ, ಸೈಫುದ್ದೀನರಿಗೆ ಆತ್ಮೀಯವಾದ ವಿದಾಯ ಹೇಳಿ, ಶಾಲಾ ನೌಕರಿಗೆ ಶರಣುಹೊಡೆದರು.

ಈ ಮಧ್ಯೆ ಭೀಮಾಚಾರ್ಯರ ಮದುವೆಯೂ ಆಗಿತ್ತು. ಇವೆಲ್ಲದರಿಂದಲೇ ಅವರೇನು ವ್ಯಾಪಾರವೂ ಇಲ್ಲ, ನೌಕರಿಯೂ ಇಲ್ಲ ಎಂಬ ಸ್ಥಿತಿ ಬಂದೊದಗಿತ್ತು. ಇಲ್ಲಿಯೇ ಇದ್ದರೆ ಬೇರೇನಾದರೂ ಕಾರಣ ಹುಡುಕಿ ಸರಕಾರದವರು ಕಿರುಕುಳ ಕೊಡುವವರೇ ಎಂದುಕೊಂಡು ರಾಮದುರ್ಗ ಸಂಸ್ಥಾನಕ್ಕೆ ಹೋದರು. ಜೊತೆಗೆ ಕ್ಯಾಮೆರಾ ಪೆಟ್ಟಿಗೆಯಿದ್ದಿತು. ಛಾಯಾಚಿತ್ರ ದೇವತೆ ಆಗೂ ಇವರಿಗೆ ಒಲಿದಿರಲಿಲ್ಲ. ಕೆಲವು ತಿಂಗಳ ಬಳಿಕ ಮೇಲೆ ಮಾವನವರು ತೀರಿಕೊಂಡ ಸುದ್ದಿ ಬಂದಿತು. ಅವರೂ ವ್ಯಾಪಾರದಲ್ಲಿಯೇ ಇದ್ದುದೊಂದು ವಿಶೇಷ. ಅವರದು ಕಾಳುಕಡಿಗಳ ಅಡತಿ/ದಲಾಲಿ ಅಂಗಡಿ. ಅವರೆ ಲುಕ್ಸಾನಿನಲ್ಲಿಯೇ ಸಾದ್ದಿಗಿತಾದ್ದರಿಂದ, ಹೊಲ ಮನೆಗಳೆಲ್ಲ ಒತ್ತೆ ಬಿದ್ದಿದ್ದವು. ಭೀಮಾಚಾರ್ಯರು ತಮ್ಮ ಜವಾಬ್ದಾರಿಯಲ್ಲಿ ಅಂಗಡಿಯನ್ನು ನಡೆಸಲೆಂದರು. ನಿಲ್ಲಿಸಿಬಿಟ್ಟಿದ್ದರೆ ಇನ್ನಷ್ಟು ಸಾಲವಾಗುಬಹುದಿತ್ತು. ವ್ಯವಹಾರ ಚೇತರಿಸಿಕೊಳ್ಳತೊಡಗಿತು. ಮುಂದೆ ಅಂಗಡಿಯ ಹಳೆಯ ಸಾಲ ತೀರುವೆಯ ಒತ್ತಡ ಬಂದಾಗ ಇವರ ಮಾವನ ಅಣ್ಣ, ಇವರೇ ಅದನ್ನು ಕೊಟ್ಟು ತೀರಿಸಬೇಕೆಂದರು. ಭೀಮಾಚಾರ್ಯರಿಗೆ ಬೇಸರವಾಯಿತು. ಅಂಗಡಿಯನ್ನು ಬಿಟ್ಟುಕೊಟ್ಟರು. ಪುನಃ ಗ್ರಾಮತ್ಯಾಗ...

ಆದರೆ ಎಲ್ಲಿಗೆ ಹೋಗಬೇಕು? ಈ ಬಾರಿ ಪೂರ್ವ ಪರಿಚಯದ ಸಿಂಧನೂರನ್ನು ಆಯ್ದುಕೊಂಡರು. ಉದ್ಯೋಗ? ಫೊಟೊಗ್ರಾಫಿ! ಆದರೆ ಅದನ್ನೊಂದೇ ನೆಚ್ಚಿಕೊಂಡಿರುವಂತಿದ್ದಿಲ್ಲ. ಗುಳೇದಗುಡ್ಡವು ಈಗಿನಂತೆ ಆಗೂ ಖಣಕ್ಕೆ ಪ್ರಸಿದ್ಧವಾದ ಊರು. ಸಿಂಧನೂರು ದೂರವಿದ್ದರೇನಾಯಿತು. ಇಲ್ಲಿ ಖರೀದಿಸಿ ಅವನ್ನು, ಸಿಂಧನೂರು, ಬಳಗಾನೂರು ಮುಂತಾದ ಕಡೆಗಳಿಗೆ ಹೊತ್ತುಕೊಂಡು ಹೋಗಿ, ವ್ಯಾಪಾರ ಮಾಡತೊಡಗಿದರು. ಇದರ ಲಾಭಾಂಶವಾದರೂ ಕಡಿಮೆಯದೇ ಎಂದು ಬೇರೆ ಹೇಳಬೇಕಾಗಿಲ್ಲ.

ಹೀಗಿರುತ್ತ ಕಲಬುರ್ಗಿಯ 'ಮೊಹತಮೀಮ್' ನಲ್ಲಿ (ಪೋಲೀಸ್ ಕಚೇರಿ) ಫೋಟೊಗ್ರಾಫರ್ ಕೆಲಸ ಖಾಲಿ ಇರುವ ವಿಷಯ ಭೀಮಾಚಾರ್ಯರಿಗೆ ತಿಳಿಯಿತು. ಅವರು ಅರ್ಜಿ ಹಾಕಿದರೆ, ಕೂಡಲೇ ಕೆಲಸಕ್ಕೆ ಹಾಜರಾಗಲು ಆರ್ಡರ್ ಬರಬೇಕೆ! ಈ ಮೊದಲು ಹೇಳಿದಂತೆ ಈ ಕಸಬು ಬಲ್ಲವರು ಕಡಿಮೆ ಜನ ಇದ್ದರು. ಅಪಘಾತ ನಡೆದ ಸ್ಥಳದ ಮತ್ತು ಅಪರಾಧಿಗಳ ಫೋಟೋ ತೆಗೆಯುವುದು ಪೋಲೀಸರಿಗೆ ಅಗತ್ಯದ ಕೆಲಸವಷ್ಟೆ.

ಆರ್ಡರ್ ಬಂದಾಗ ಅವರು ರಾಯಚೂರಿನಲ್ಲಿ ಇದ್ದರು. ಅಲ್ಲಿಂದ ಕಲಬುರ್ಗಿಯ ತನಕ ಹೋಗುವಷ್ಟು ಹಣ ಇರಲಿಲ್ಲ. ಸರಿ, ಸೈದಾಪುರದವರೆಗೆ (ಅಥವಾ ನಾರಾಯಣಪೇಟ?) ರೈಲಿನ ಟಿಕೀಟು ತೆಗೆದರು. ಅಲ್ಲಿಂದ ನಡೆದು ಹೋಗುವ ವಿಚಾರ ಅವರದು, ಕತ್ತಲಾಗತೊಡಗಿದ್ದಿತೆಂದು ಅಲ್ಲೇ ಪ್ಲ್ಯಾಟ್‌ಫಾರ್ಮಿನ ಬೆಂಚಿನ ಮೇಲೆ ಒರಗಿದರು. ಹಸಿವು ಬೇರೆ. ಹಣವಿಲ್ಲದ್ದರಿಂದ ಏನೂ ತಿಂದಿರಲಿಲ್ಲ. ಅಲ್ಲಿಯ ರೇಲ್ವೆ ಕಾರಕೂನನು ಯಾರೋ ಹಾದಿಹೋಕನಿರಬೇಕೆಂದು ಎಣಿಸಿ ಅವರನ್ನು ವಿಚಾರಿಸಿದನು. ಪರಿಸ್ಥಿತಿ ತಿಳಿದ ಮೇಲೆ ತನ್ನ ಮನೆಗೆ ಕರೆದೊಯ್ದನು. ಹೊಟ್ಟೆ ತುಂಬ ಊಟವಾಯಿತು. ಫೋಟೊಗ್ರಾಫರನೆಂಬ ಮರ್ಯಾದೆಯೂ ಸಿಕ್ಕಿತು. ಇವರು ನಾಲ್ಕಾರು ದಿನ ಅಲ್ಲಿಯೇ ನಿಂತು, ಆತಿಥೇಯರ ಸಹಾಯದಿಂದ ಊರೊಳಗೆ ಅಡ್ಡಾಡಿ. ಫೋಟೊ ತೆಗೆದು ಬಂದಷ್ಟು ಹಣ ಸಂಪಾದಿಸಿದರು. ಕಿಸೆ ತುಂಬ ನಾಣ್ಯಗಳು. ಒಳ್ಳೇ ಖುಶಿಯಿಂದ ಕಲಬುರ್ಗಿಗೆ ಬಂದು ಪೋಲೀಸ್ ಕಚೇರಿಗೆ ಹೋದರು.

ಆದರೆ ಅಲ್ಲಿ ಬೇರೊಬ್ಬರನ್ನು ನೇಮಿಸಿಬಿಟ್ಟಿದ್ದರು! 'ನಡು ದಾರಿಯಲ್ಲಿ ಹಣ ಗಳಿಕೆಗೆ ಮನ

ಸೊತು ಸುಮ್ಮನೆ ನೌಕರಿ ಕಳೆದುಕೊಂಡೆನಲ್ಲ; ಕೈಗೆ ಬಂದ ತುತ್ತು ಬಾಯಿಗೆ ಬರದಂತಾಯಿತಲ್ಲ' ಎಂದು ಪರಿತಪಿಸಿದರು. ಮೇಲಾಗಿ ನೇಮಿಸಿಕೊಂಡದ್ದು, ಫೋಟೋಗ್ರಾಫಿ ಏನೂ ಗೊತ್ತಿರದ ಓರ್ವ ಧಾಂಡಿಗನನ್ನು! ಇವರು ಮತ್ತೆ ಕೇಳಿಕೊಂಡಿರಬೇಕು. ಆಗ ಅಲ್ಲಿಯ ಸುಪರಿಟೆಂಡೆಂಟನು "ಬೇಕಾದರೆ ಪೋಲೀಸ್ ಸಿಪಾಯಿಯಾಗಿ ಸೇರು, ಫೋಟೋಗ್ರಾಫರ್ ಜಾಗ ಖಾಲಿಯಾದಾಗ ನೋಡೋಣ" ಎಂದು ಹೇಳಿದ್ದಕ್ಕೆ ಒಪ್ಪಿದರು.

ಕೇವಲ ೧೦ರೂ. ಸಂಬಳದ ಕನಿಷ್ಠ ದರ್ಜೆಯ ಪೋಲೀಸ್ ಪೇದೆಯ ಕೆಲಸವದು. ಕೈಗೆ ಬರುವ ೯ರೂ.ಯಲ್ಲಿ ಹೋಟೆಲ್ ಊಟಕ್ಕೇನೆ ೧೦ರೂ. ಕೊಡಬೇಕಾದ ಪರಿಸ್ಥಿತಿ. ಇವರಿಗೋ ಊರೂರು ತಿರುಗಿ ಸಾಕು ಸಾಕಾಗಿತ್ತು. ಆದ್ದರಿಂದ ನೌಕರಿಗೆ ಒಪ್ಪಿ, ಈಚೆಗೆ ಮದುವೆಯಾಗಿದ್ದ ಹೆಂಡತಿಯನ್ನು ಕರೆದುಕೊಂಡು ಬಿಡಾರ ಮಾಡಿದರು. ಇಬ್ಬರ ಊಟ ವಸತಿಗೆ ಸಂಬಳವೊಂದೇ ಸಾಲ–ದಿದ್ದಾಗ, ಪೇಟೆಯಲ್ಲಿ ಹಲವು ವರ್ಷಗಳಿಂದ ಮಾಡಿ ಬಿಟ್ಟಿದ್ದ ಮನಸ್ಸಿನೊಂದನ್ನು ಸ್ವಚ್ಛವಾಗಿಸಿ ಹವ್ಯಾಸವಾದ 'ಫೋಟೋಗ್ರಾಫಿ' ಕಾಯಕವನ್ನು ಆರಂಭಿಸಿದರು.

ಚಿಮ್ಮಲಗಿ ಭೀಮಾಚಾರ್ಯರ ಆಗಿನ ದಿನಚರಿ ಎಂದರೆ ೪॥ಗೆ ಪ್ರಾರಂಭ. ೫ರಿಂದ ೮ರ ವರೆಗೆ ಕವಾಯತು. ಮಧ್ಯಾಹ್ನ ಆಫೀಸಿನಲ್ಲಿ ಆ ಈ ಚಿಲ್ಲರೆ ಕೆಲಸ. ಸಂಜೆ ೪ರಿಂದ ೫ರ ವರೆಗೆ ಮತ್ತೆ ಕವಾಯತು. ಕೊಟ್ಟ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದರು. ಜನಪ್ರಿಯರೂ ಆಗಿದ್ದರು. ಆದರೆ ಈ ಪೋಲೀಸ್ ಸಿಪಾಯಿಯಾಗಲೆಂದೇ ತಾವು ಜನ್ಮ ತಾಳಿದ್ದೇ? ಇದೇ ರೀತಿ ಕೆಲಸ ಮುಂದುವರಿದರೆ ತಾವು ರಾಜೀನಾಮೆಯಿತ್ತು ಹೊರಟುಹೋಗಬೇಕಾಗುವುದೆಂದು ಹೇಳುವಷ್ಟು ಸ್ವಾಭಿಮಾನ ಧೈರ್ಯ ಅವರಲ್ಲಿ ಇದ್ದದ್ದೇ. ಹೀಗೇ ಎರಡು ವರ್ಷ ಕಳೆಯಿತು. ಒಂದು ದಿನ ಅವರಿಗೆ ಓರ್ವ ಕೈದಿಯನ್ನು ೧೨ ಮೈಲು ದೂರದ ಊರಿಗೆ ಕರೆದೊಯ್ದು ಅಲ್ಲಿ ಮುಟ್ಟಿಸುವ ಕೆಲಸ ಕೊಡಲಾಗಿತ್ತು. ಅಷ್ಟನ್ನು ಮುಗಿಸಿ ಹಿಂತಿರುಗಿ ಬಂದು 'ಈ ಕತ್ತೇ ಕೆಲಸ ಇನ್ನು ಸಾಕು' ಎಂದು ರಾಜೀನಾಮೆ ಸಲ್ಲಿಸಿದರು.

ಆದರೆ ರಾಜೀನಾಮೆ ಸ್ವೀಕೃತವಾಗಿರಲಿಲ್ಲ. ಅಷ್ಟರಲ್ಲಿ ಹೈದ್ರಾಬಾದಿನ ಮುಖ್ಯ ಪೋಲೀಸು ಠಾಣೆಗೇನೆ ಓರ್ವ ಫೋಟೋಗ್ರಾಫರ್ ಬೇಕೆಂದು ನಿಜಕ್ಕೂ ಯೋಗ್ಯರೊಬ್ಬರನ್ನು ಶಿಫಾರಸು ಮಾಡಬೇಕೆಂದೂ ಎಲ್ಲ ಪೋಲೀಸು ಕಚೇರಿಗಳಿಗೆ ಹುಕುಂ ಹೋಯಿತು. ಕಲಬುರ್ಗಿಯವರಿಗೆ ಚಿಮ್ಮಲಗಿಯವರ ಹೆಸರನ್ನು ಸೂಚಿಸಲು ಇದೊಂದು ಸುಸವಕಾಶ. ಅದಕ್ಕೆ ಪ್ರತಿಯಾಗಿ ಹೈದ್ರಾಬಾದಿನಿಂದ ಆರ್ಡರ್ ಬಂದಿತು. ಕೂಡಲೇ ಹೊರಟು ನಿಂತರು (೧೯೧೧). ಹಿಂದಿನಂತೆ ತಡವಾಗಿ ಈ ರೂ.೨೫ ಸಂಬಳದ ನೌಕರಿ ತಪ್ಪಬಾರದಲ್ಲ!!

ಇವರು ಹೊತ್ತಿಗೆ ಹೋಗಿ ಅಲ್ಲಿ ಮುಟ್ಟಿದರೂ ಆದದ್ದು ಹಾಗೇಯೇ. ಬೇರೊಬ್ಬರನ್ನು ನೇಮಿಸಿಬಿಟ್ಟಿದ್ದರು. ಮೊಗಲಾಯಿ ದರ್ಬಾರು ಎಂದರೆ ಇದೇನೇ. "ಆರ್ಡರ್ ತಲುಪಿ ಎರಡು ದಿನದ ಅವಕಾಶವನ್ನಾದರೂ ಕೊಡಬೇಡವೆ?" ಎಂದೆಲ್ಲ ಅವರು, ಆಕ್ಷೇಪಿಸಿದರೂ, "ಏನು ಮಾಡೋದು? ನವಾಬರ ಪೈಕಿ ಒಬ್ಬರು ಬಂದಿದ್ದರು, ಅವರನ್ನು ನೇಮಿಸಲೇಬೇಕಾಯಿತು. ಹೇಗೂ ಬಂದೀರಿ ರೂ.೧೫. ಮೇಲೆ ಪೋಲೀಸು ಸಿಪಾಯಿಯೆಂದು ತೆಗೆದುಕೊಳ್ಳುತ್ತೇವೆ. ಅನುಭವವೂ ಇದೆಯಲ್ಲ" ಎಂದರು, ಇವರು,

"ಆ ಕೆಲಸ ಬೇಡವೆಂದು ಅಲ್ಲಿ ರಾಜೀನಾಮೆಯನ್ನೇ ಕೊಟ್ಟಿದ್ದೇನೆ. ನಾನು ಮೇಲಿನವರನ್ನು ಕಾಣುತ್ತೇನೆ" ಎಂದೆಲ್ಲ ಪ್ರತಿಭಟಿಸಿದರು. "ಈಗ ಬಂದವರು ಬಹಳ ದಿನವೇನೂ ನಿಲ್ಲುವುದಿಲ್ಲ. ಆ ಮೇಲೆ ಫೋಟೋಗ್ರಾಫರ್ ಕೆಲಸ ನಿಮಗೇ ಕೊಡುತ್ತೇವೆ" ಎಂದು ಸಮಾಧಾನ ಹೇಳಲಾಯಿತು.

ಪೋಲೀಸ್ ಠಾಣೆ ಇದ್ದುದು ಅಂಬರ ಪೇಟೆಯಲ್ಲಿ, ಇವರ ವಾಸ್ತವ್ಯ ಬಾರಾಗಲ್ಲಿಯಲ್ಲಿ. ಏಳು ಮೈಲಿಗಳ ಅಂತರವನ್ನು ದಿನವೂ ನಡೆದುಕೊಂಡೇ ಹೋಗಬೇಕು. ರೂ.೧೪ (೧೫–೦–ಹೈ.ಸಿಗಾಗಿ!) ಸಂಬಳದಲ್ಲಿ ಇವರ ಅದೇ ಕನಿಷ್ಠ ಸಿಪಾಯಿಯ ನೌಕರಿ ಆರಂಭವಾಯಿತು. ನಿಜವಾದ ಪೋಲೀಸು ಕೆಲಸಕ್ಕಿಂತ ಬಿಟ್ಟಿ ಕೆಲಸಗಳೇ ಜಾಸ್ತಿ



ಸೊಳ್ಳೆಗಳ ಕಾಟ ತಪ್ಪುವುದು...ಗಾಢ ನಿದ್ದೆ ಬರುವುದು
ಓಡೊಮಸ್ ಹಚ್ಚಿಕೊಂಡಾಗ ಸೊಳ್ಳೆಗಳು ನಿಮ್ಮ ಹತ್ತಿರ ಕೂಡ ಬರುವುದಿಲ್ಲ. ಆದ್ದರಿಂದ ನಿಮಗೆ ರಾತ್ರಿಯಿಡೀ ಗಾಢ ನಿದ್ದೆಯ ಸುಖ ಪ್ರಾಪ್ತವಾಗುತ್ತದೆ. ಓಡೊಮಸ್ ನಿಮ್ಮ ತ್ವಚೆಗೂ ಸುರಕ್ಷಿತವಾಗಿರುತ್ತದೆ.
ದೀರ್ಘಕಾಲ ರಕ್ಷಣೆಗಾಗಿ ಅತ್ಯಾಧುನಿಕ ಸೊಳ್ಳೆ-ನಿರೋಧಕ
ODOMOS
mosquito repellent
ಸೊಳ್ಳೆಗಳ ವೈರಿ—ಬಲ್ಸಾರಾದವರ
ಓಡೊಮಸ್
ಬಲ್ಸಾರಾ
ಸುಖಮಯ ಜೀವನಕ್ಕೆ ಆಧುನಿಕ ಸಾಧನಗಳು
BALSARA
100 ಗ್ರಾಂ'ನ: ಮಿತವ್ಯಯಕರ ಪ್ಯಾಕಿಂಗ್‌ನಲ್ಲಿ ಈಗಲೂ ಸಹ ಲಭ್ಯವಿವೆ.
CHAITRA-BLS-243 KAN

ಅಲ್ಲದೆ, ಅವರಿವರ ಮರ್ಜಿಯನ್ನು ಹಿಡಿದುಕೊಂಡೇ ಇರಬೇಕು. ಆದರೂ ಇಂದಿಲ್ಲ, ನಾಳೆ ತಮಗೆ ಫೋಟೋಗ್ರಾಫರ್ ನೌಕರಿ ಸಿಕ್ಕೀತೆಂಬ ಆಶಯದಿಂದ ನುಂಗಿಕೊಂಡರು. ವರ್ಷ ಸರಿದರೂ, ಅದರ ಸುಳಿವಿಲ್ಲ. ತ್ರಸ್ತರಾಗಿ ರಾಜೀನಾಮೆ ಸಲ್ಲಿಸಿದರು. ಆದರೆ ಇಲ್ಲಿಯೂ ಜನಪ್ರಿಯರಾಗಿದ್ದುದರಿಂದ, ರಾಜೀನಾಮೆಯನ್ನು ಬದಿಗೆ ಇರಿಸಲಾಯಿತು. ಅಲ್ಲದೆ ಕೆಲ ಸಮಯದಲ್ಲಿಯೇ ಅವರಿಗೆ ಛಾಯಾಗ್ರಾಹಕನ ಕೆಲಸ ದೊರೆಯಿತು!

ಚಿಮ್ಮಲಗಿಯವರಿಗೆ ಆಗ ೨೩ ವರುಷ. ಜೀವನಕ್ಕೆ ಒಂದು ನೆಲೆ ಸಿಕ್ಕಿತೆಂಬ ನೆಮ್ಮದಿಯಲ್ಲಿ ಸಂಸಾರ ಹೂಡಿದರು. ಹಿರಿಯ ಮಗ ರಾಮಚಂದ್ರ ಜನಿಸಿದ. ಹುಬ್ಬಳ್ಳಿಯಲ್ಲಿ ಕಲಿಯುತ್ತಿದ್ದ ತಮ್ಮ ವೇದವ್ಯಾಸನ ಶಿಕ್ಷಣದ ಜವಾಬ್ದಾರಿಯನ್ನು ಇವರೇ ವಹಿಸಿದರು. ಬರುವ ಸಂಬಳದಲ್ಲಿ ಅವನಿಗೂ ಒಂದಷ್ಟು ಹಣ ಕಳುಹಿಸುತ್ತಿದ್ದರು.

ಕಚೇರಿಯಲ್ಲಿ ಒಮ್ಮೆ ಲಂಚದ ಪ್ರಕರಣವೊಂದು ಬಹಿರಂಗವಾಯಿತು. ಚಿಮ್ಮಲಗಿಯವರ ಒಳ್ಳೆಯತನವನ್ನು ಕಂಡುಕೊಂಡಿದ್ದ ಓರ್ವ ಕಾರಕೂನನು ಇವರನ್ನು ತನ್ನ ಲಂಚದ ವ್ಯವಹಾರಕ್ಕಾಗಿ ಬಳಸಿಕೊಂಡನಾದ್ದರಿಂದ, ತನಿಖೆಯಲ್ಲಿ ಇವರ ಹೆಸರೂ ಸೇರಿಕೊಂಡಿತು. ಅಂತೂ ಒಮ್ಮೆ ಅದರಿಂದ ಪಾರಾದರೂ ಇವರ ಮನಸ್ಸಿಗೆ ಹುರಹುರಿಯಾಯಿತು. ಮುಂದೆ ಕೆಲವು ದಿನಗಳಲ್ಲಿಯೆ ಹೆಂಡತಿ ವಿಷಮಜ್ವರದಿಂದ ತೀರಿಕೊಂಡಳು. ಆಗ ಲಂಚದ ಪಾಪವೇ ತಟ್ಟಿತೆಂದು ಚಿಮ್ಮಲಗಿಯವರಿಗೆ ಅನಿಸಿತು. ಮಗುವನ್ನು ಊರಿನಲ್ಲಿ ಬಿಟ್ಟು ಬಂದು ಪುನಃ ನೌಕರಿಗೆ ಹಾಜರಾದರು.

ತಿಂಗಳೊಪ್ಪತ್ತಿನಲ್ಲಿ ಮರುಮದುವೆಯೂ ಆಯಿತು. ಅವರ ಹೊಸ ಹೆಂಡತಿಯೊಡನೆ, ಆಕೆಯ ಅಣ್ಣ ತಮ್ಮಂದಿರು ವಿದ್ಯಾಭ್ಯಾಸಕ್ಕಾಗಿಯೂ, ಆಕೆಯ ತಾಯಿ ಆಸರೆಗೆಂದೂ ಇವರಲ್ಲಿಯೇ ಇದ್ದರು. ಆ ವೇಳೆಗೆ ವೇದವ್ಯಾಸನ ಶಿಕ್ಷಣ ಮುಗಿದಿತ್ತಾದ್ದರಿಂದ, ಅವನನ್ನೂ ಕರೆಸಿಕೊಂಡರು. ಆರೇಳು ಜನರ ಸಂಸಾರವು ರೂ. ೨೩–೧–೬ರ ತಿಂಗಳ ಪಗಾರದಲ್ಲಿ ಸಾಗಬೇಕು. ಹಣದ ಅಡಚಣೆ ಎದ್ದು ಹೊಡೆಯುತ್ತಿತ್ತು. ಹೈದರಾಬಾದಿನ ಆಗಿನ ದಿನಗಳಲ್ಲಿ ಹಾಲು–ಹೈನ ಯಥೇಷ್ಟವಾಗಿ ಸಿಗುತ್ತಿದ್ದರೂ, ಒಂದು ತಂಬಿಗೆ ಮಜ್ಜಿಗೆಯಲ್ಲಿ ಎರಡು ಹೊತ್ತಿನ ಎಲ್ಲರ ಊಟ ಕೊನೆಗೊಳ್ಳುತ್ತಿತ್ತು. ಚಿಮ್ಮಲಗಿಯವರು ಪುನಃ 'ಫೋಟೋಗ್ರಾಫರ್' ಬೋರ್ಡನ್ನು ಹೊರತೆಗೆದರು! ಇನಾಮಿಯಾ ಬಜಾರಿನ ಒಂದು ಮಳಿಗೆಯಲ್ಲಿ ಆರಂಭಿಸಿದರು (೧೯೧೮). ಹಗಲು ಹೊತ್ತಿನಲ್ಲಿ ಅವರ ತಮ್ಮನೂ ಹೆಂಡತಿಯ ಅಣ್ಣನೂ ನೋಡಿಕೊಳ್ಳುತ್ತಿದ್ದರು. ಸಂಜೆ ಕಚೇರಿಯ ಕೆಲಸ ಮುಗಿದೊಡನೆ ಇವರ ಹಾಜರಿ.

ಈ 'ಚಿಮ್ಮಲಗಿಕರ ಬ್ರದರ್ಸ್' ಅಂಗಡಿಯಿಂದ ಹೇಳಿಕೊಳ್ಳುವಂತಹ ಗಳಿಕೆ ಏನೂ ಇರಲಿಲ್ಲ. ಇಂಥ ಅಂಗಡಿಗಳು ಇನ್ನೂ ಹಲವಾರು ಆ ನಗರದಲ್ಲಿ ಇದ್ದೇ ಇದ್ದುವು. ಮೇಲಾಗಿ ಫೋಟೋಗ್ರಾಫಿ ರಸಾಯನಗಳ ಗುಟ್ಟು ಅವರಿಗೆ ಆಗೂ ತಿಳಿದಿರಲಿಲ್ಲ. ಹಾಗೂ ಹೀಗೂ ಸಾಗಿದ್ದಿತು. ಆದರೆ ಈ ಉದ್ಯಮದ ಪ್ರಯೋಜನವನ್ನು ಬೇರೊಂದು ರೀತಿಯಿಂದ ಮಾಡಿಕೊಳ್ಳಲೆಂದರು.

ಈಗಿನಂತೆ ಆಗ ಫೋಟೋಗ್ರಾಫಿ ಸಾಮಾನುಗಳು ಸುಲಭವಾಗಿ ದೊರೆಯುತ್ತಿರಲಿಲ್ಲ. ಸಿಕ್ಕಾಪಟ್ಟೆ ಬೆಲೆಗಳು, ಈ 'ಸ್ಟುಡಿಯೋ ಕಾರ್ಯಕ್ಕಿಂತ; ಫೋಟೋಗ್ರಾಫಿಯ ಕಚ್ಚಾ ಸಾಮಗ್ರಿಗಳನ್ನು ಖರೀದಿಸಿ, ಮಾರಾಟ ಮಾಡಿದರೆ ಹೇಗೆ?' ಎಂದು ಯೋಚಿಸಿದರು. ಸ್ನೇಹಿತರೊಬ್ಬರಿಂದ ರೂ.೫೦೦ ಸಾಲ ಪಡೆದರು; ಹೆಂಡತಿಯ ಆಭರಣಗಳನ್ನು ಒತ್ತೆ ಹಾಕಿದರು. ಮುಂಬಯಿಯಲ್ಲಿದ್ದ ಪಿಸ್ತ್ರಮಜಿ ಎಂಬ ಪಾರ್ಸಿ ಅಂಗಡಿಯಲ್ಲಿ ಫಿಲ್ಮ್, ಕೆಮಿಕಲ್ಸ್ ಮುಂತಾದ್ದನ್ನು ಖರೀದಿಸುತ್ತ ಮರುಮಾರಾಟಕ್ಕೆ ತೊಡಗಿದರು. ಈ ವಸ್ತುಗಳ ನಿಯಮಿತ ಹಾಗೂ ಯೋಗ್ಯ ಬೆಲೆಯ ಪೂರೈಕೆಯಿಂದಾಗಿ ವ್ಯವಹಾರ ಕುದುರಿತು. ಪೋಲೀಸು ನೌಕರಿಯನ್ನು ಬಿಟ್ಟುಬಿಟ್ಟರು.

ವ್ಯಾಪಾರವೆಂದರೆ ಹಣ ಹಾಕಿ, ಹಣ ಜಮಾಯಿಸುವಂಥ ಧಂದೆ ತಾನೇ. ಹಣ ಜಮೆ ಆದ ಹಾಗೆಲ್ಲ ಪ್ರತಿನಿತ್ಯ ಜೆ. ರಘುನಾಥಮ್ ಎಂಬವರ ಖಾಸಗೀ ಬ್ಯಾಂಕಿನಲ್ಲಿ ಜಮೆ ಮಾಡುತ್ತಿ

ದ್ದರು. ಆ ಬ್ಯಾಂಕಿನಿಂದ ಇವರಿಗೆ ಬೇಕೆಂದಾಗ ಓವರ್–ಡ್ರಾಫ್ಟ್ ಸಿಕ್ಕುತ್ತಿತ್ತು. ಇತ್ತ ಪೂರೈಕೆ ದಾರರಲ್ಲಿ ಖಾತೆ ಬಾಕಿ ಇರಿಸಿ, ಸಾಮಗ್ರಿಯನ್ನು ಪಡೆಯುವುದು ಸುಲಭಸಾಧ್ಯವಾಯಿತು. ಹೈದರಾ ಬಾದ್ ನಗರವನ್ನು ದಾಟಿ; ನಿಜಾಮ ರಾಜ್ಯದ ಬೇರೆ ಪ್ರದೇಶಗಳಿಗೂ ಅವನ್ನು ಪೂರೈಸತೊಡ ಗಿದರು. ಆಗ ಅವರಿಗೆ ಇನ್ನೊಂದು ವಿಚಾರ ಹೊಳೆಯಿತು. ಎಷ್ಟೆಂದರೂ ಪಿಸ್ತೆಮಜಿ, ಮತ್ತಿ ತರರು ಉತ್ಪಾದಕರಿಂದ ವಸ್ತುಗಳನ್ನು ಪಡೆದು ವಿಕ್ರಯಿಸುವ ಠೋಕದಾರರು. ತಾವು ಉತ್ಪಾದಕ ರೊಡನೆಯೆ ನೇರವಾಗಿ ಏಕೆ ವ್ಯವಹರಿಸಬಾರದು. ಇಲ್ಫರ್ಡ್, ಕೊಡಕ್ ಮುಂತಾದ ಕಂಪನಿಗಳೊಡನೆ ಸಂಪರ್ಕವಿಟ್ಟುಕೊಂಡರು. ಪ್ರಾಮಾಣಿಕ ವ್ಯವ ಹಾರಸ್ಥರೆಂದು ಅದಾಗಲೇ ಹೆಸರುಗಳಿಸಿದ್ದ ಚಿಮ್ಮಲಗಿಯವರಿಗೆ ಅವರಿಂದ ಸರಕನ್ನು ಪಡೆ ಯುವುದು ಕಷ್ಟವಾಗಲಿಲ್ಲ. ಕೆಲ ಕಾಲದ ಅನಂತರ ಕೋಡಕ್‌ನವರು ನಿಜಾಮರಾಜ್ಯದಲ್ಲಿ ತಮ್ಮ ವ್ಯವಹಾರದ ಸಂಪೂರ್ಣ ಹಕ್ಕನ್ನು ಇವರಿಗೇ ಕೊಟ್ಟರು. ವಿದೇಶದಿಂದಲೂ, ಕೆಮರಾ ಮತ್ತಿ ತರ ವಸ್ತುಗಳನ್ನು ತರಿಸುವಷ್ಟು ಚಿಮ್ಮಲಗಿ– ಯವರ ಉದ್ಯಮವು ಪ್ರವೃದ್ಧಮಾನ– ವಾಯಿತು. ವ್ಯಾಪಾರವನ್ನು ಕುದುರಿಸುವಲ್ಲಿ ಅವರ ಒಂದು ವಿಧಾನವೆಂದರೆ "ಕ್ಯಾಮೆರಾ ಕೊಂಡುಕೊಳ್ಳಿ. ನಾವು ನಿಮಗೆ ಪುಕ್ಕಟೆ ಫೋಟೊ ಗ್ರಾಫಿ ಕಲಿಸುವೆವು." ಫೋಟೊಗ್ರಾಫಿ ವಸ್ತು ಗಳಲ್ಲದೆ, ಗ್ರಾಮೊಫೋನ್, ರೇಡಿಯೋ, ಬಲ್ಬ್ ಮತ್ತಿತರ ವಸ್ತುಗಳ ಮಾರಾಟವನ್ನೂ ಕೈ ಕೊಂಡರು. ಈ ಮಧ್ಯೆ ನೆರೆಯ ಸಿಕಂದರಾಬಾದಿ ನಲ್ಲಿ ತಮ್ಮನಿಗೆ ಬೇರೊಂದು ಅಂಗಡಿ ಯನ್ನು ಸ್ಥಾಪಿಸಿ ಅವರಿಗೇ ಬಿಟ್ಟುಕೊಟ್ಟರು. ಅಲ್ಲಿಯೂ ವ್ಯಾಪಾರೀ ಯಶಸ್ಸು ದೊರಕಿತು. ಇಂತು ಕೆಲವೇ ವರ್ಷಗಳ ಅವ್ಯಾಹತ ಪರಿಶ್ರಮ ದಿಂದ ಚಿಮ್ಮಲಗಿಯವರು ಹೈದರಾಬಾದಿನ ಓರ್ವ ಗಣ್ಯ ವ್ಯಾಪಾರಸ್ಥರೆನಿಸಿದರು. ಹೊಸದಾಗಿ ವ್ಯಾಪಾರ ಮಾಡಬಯಸುವವರಿಗೆ ಚಿಮ್ಮಲಗಿ ಯವರು ಉಪದೇಶಿಸುತ್ತಿದ್ದ ಒಂದು ಮಾತೆಂದರೆ, "ವ್ಯಾಪಾರ ಬೆಳೆಸಲು ದೊಡ್ಡ ಬಂಡವಾಳ ವೇನೂ ಬೇಡ, ಸರಕಿನ ಪೂರೈಕೆದಾರರ ಆದರಂತೆ ಗ್ರಾಹಕರ ವಿಶ್ವಾಸವನ್ನು ಕಾಯ್ದುಕೊಳ್ಳಬೇಕು. ಜೊತೆಗೆ ವೆಚ್ಚದಲ್ಲಿ ಮಿತ ಬೇಕು." ಈ ಮಾತು ಅವರ ಸ್ವಾನುಭವದ್ದೇ ಆಗಿತ್ತು.


ಅವರ ವ್ಯವಹಾರದ ಯಶಸ್ಸಿನ ದ್ಯೋತಕ ವೆಂದು, ಗ್ರಾಮೋಫೋನ್ ರೆಕಾರ್ಡುಗಳ ಮಾರಾಟವನ್ನು ಎತ್ತಿ ಹೇಳಬಹುದು. ಗ್ರಾಮೋ ಫೋನ್ ಹಾಡುಗಳು ಆವು ತಾನೇ ಪ್ರಸಿದ್ಧಿಗೆ ಬಂದಿದ್ದವು. ಚಿಮ್ಮಲಗಿಯವರು ಅವು ಹೊರ ಬಂದಂತೆಲ್ಲ, ಪ್ರತಿಯೊಂದು ರೆಕಾರ್ಡನ್ನೂ ತರಿ ಸುತ್ತಿದ್ದರು. ಅತ್ಯಂತ ಆಕರ್ಷಕ ರೀತಿಯಲ್ಲಿ ಅವನ್ನು ಪ್ರದರ್ಶನಕ್ಕಿಡುತ್ತಿದ್ದರು. ಅದರಲ್ಲಿ ಭಾಷಾವಾರು ವಿಂಗಡಣೆ ಬೇರೆ, ಕನ್ನಡ ರೆಕಾ ರ್ಡುಗಳನ್ನು ಕನ್ನಡಿಗರಿಗೆ ಕೇಳಿಸುವುದಕ್ಕಾಗಿ. ತಮ್ಮ ಊರಿನ ರೈತನೊಬ್ಬನ 'ಚಾಲಾಕ್' ಹುಡುಗ ನನ್ನು ಅಂಗಡಿಯಲ್ಲಿ ಇರಿಸಿಕೊಂಡಿದ್ದರು. ರೆಕಾ ರ್ಡುಗಳ ಖರೀದಿ–ವಿಕ್ರಯವಷ್ಟೇ ಅಲ್ಲ. ಕೆಲವು ಹಾಡುಗಳನ್ನು ಸೂಚಿಸಿ, ತಯಾರಿಸಲು ಹೇಳುತ್ತಿದ್ದರು. ಅವುಗಳ ಬೇಡಿಕೆಯ ಸಂಖ್ಯೆ ಯನ್ನು ಮನದಂದು, ಆಗಲೇ ಮುಂಗಡ ಆರ್ಡರ್ ಕೊಡುತ್ತಿದ್ದರು! ಅವುಗಳಲ್ಲಿ ಮಕ್ಕಳ 'ಮಾರ್ಚಿಂಗ್ ಸಾಂಗ್' ಒಂದು. ಅವರ ಹಾಡನ್ನು ಸೂಚಿಸಿ ಹೈದರಾಬಾದಿನ ಸಂಸ್ಥಾನದಲ್ಲಿ ಅವು ಗಳ ವಿತರಣೆಗಾಗಿ ೧,೦೦೦ ರೆಕಾರ್ಡುಗಳ ಆರ್ಡರ್ ಮುಂಚಿತವಾಗಿ ಕೊಟ್ಟಾಗ ಕಂಪೆನಿಯವರು ಬೆರಗಾಗಿಬಿಟ್ಟರಂತೆ ! 'ಗಾನದೋಸೆ'ಗಳು ಎಂಬ ಪದವನ್ನು ಅನೇಕರು ಕೇಳಿರಬಹುದು. ರೆಕಾರ್ಡು ಗಳಿಗೆ ಎಷ್ಟೊಂದು ಸಮರ್ಪಕವಾದ ಹೆಸರು! ಅದನ್ನು ಸೃಷ್ಟಿಸಿ ರೂಢಿಯಲ್ಲಿ ತಂದವರು ಚಿಮ್ಮ ಲಗಿಯವರೇ ಎಂದು ಹೇಳಲಾಗುತ್ತಿದೆ.

ಇಂಗ್ಲಿಷ್ ಕಲಿಯಲು ಅವರು ಧಾವತಿ– ಪಟ್ಟದ್ದನ್ನೂ ಅದು ಕೈಗೂಡದಿದ್ದದ್ದನ್ನೂ ಈ ಹಿಂದೆ ವಿವರಿಸಿದ್ದೇವೆ. ಮುಂದೂ ಅವರು ಇಂಗ್ಲಿಷ್ ಭಾಷೆಯ ಜ್ಞಾನವಿಲ್ಲದೇ, ತಮ್ಮ ಉದ್ಯಮವನ್ನು ಇಷ್ಟರ ಮಟ್ಟಿಗೆ ಬೆಳೆಯಿಸಿ ದರು. ಒಮ್ಮೆ ಅವರು ಮದ್ರಾಸಿಗೆ ಹೋಗಿ ದ್ದರು. ಅಲ್ಲಿಯ ಗ್ರಾಮೋಫೋನ್ ಕಂಪನಿಯ

ಮ್ಯಾನೇಜರನನ್ನು ಕಂಡಾಗ ಆತ "ಕಂಪನಿಯ ಡೈರೆಕ್ಟರರು ಕಲಕತ್ತೆಯಿಂದ ಬಂದಿದ್ದಾರೆ. ನೀವು ಬಂದದ್ದನ್ನು ತಿಳಿಸಿದೆ. ನಿಮ್ಮನ್ನು ಭೆಟ್ಟಿಯಾಗಲು ಉತ್ಸುಕರಾಗಿದ್ದಾರೆ" ಎಂದನು. ಅದಕ್ಕೆ ಇವರು "ಆತ ಯುರೋಪಿಯನ್ ಸಾಹೇಬ. ನನಗೆ ಇಂಗ್ಲಿಷ್ ಏನೂ ಬಾರದು" ಎಂದರು. ಭೆಟ್ಟಿಯಲ್ಲಿ ಮದ್ರಾಸ ಮ್ಯಾನೇಜರನು ದುಭಾಷಿಯಾಗಿ ಕೆಲಸ ಮಾಡಿದಾಗ ಕಲಕತ್ತೆಯ ಸಾಹೇಬನು "ಅರೆ! ಇಂಗ್ಲಿಷ್ ಬಾರದೇನೆ ಇವರು ನಮ್ಮೊಟ್ಟಿಗೆ ಇಷ್ಟೊಂದು ವ್ಯವಹಾರವನ್ನು ಮಾಡಿದ್ದರೆಂದರೆ ಆಶ್ಚರ್ಯವೇ ಸರಿ" ಎಂದು ಉದ್ಗಾರವೆತ್ತಿದನಂತೆ. ಸುರುವಿಗೆ ತಮ್ಮ ಮದ್ರಾಸಿನ ಇಂಗ್ಲೀಷ್ ಪತ್ರವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಅವರು ಸಿಕಂದರಾಬಾದಿನಲ್ಲಿ ಪ್ರತ್ಯೇಕ ವ್ಯವಹಾರದಲ್ಲಿ ತೊಡಗಿದ ಮೇಲೆ ಇವರು ಇಂಗ್ಲಿಷ್ ಬಲ್ಲ ಓರ್ವ ಕಾರಕೂನನಿಂದಲೇ ಕೆಲಸ ಸಾಗಿಸುತ್ತಿದ್ದರು. ವ್ಯವಹಾರದ ಮಾರ್ಗದರ್ಶನ ಮಾಡುತ್ತಿದ್ದವರೂ ಇವರದೇ ತಾನೇ.

೨

ಇನ್ನೀಗ ಚಿಮ್ಮಲಗಿಯವರ ಸಾಂಸ್ಕೃತಿಕ ಕಾರ್ಯವನ್ನು ಗಮನಿಸೋಣ. ಅದರ ಮಹತ್ತ್ವವನ್ನು ಅರಿಯಬೇಕಾದರೆ ಆಗಿನ ಹೈದರಾಬಾದಿನಲ್ಲಿ ಕನ್ನಡದ ಸ್ಥಿತಿ ಗತಿ ಏನಿತ್ತೆಂಬುದನ್ನು ತಿಳಿದಿರುವುದು ಅವಶ್ಯ. ಹೈದರಾಬಾದ್ ಕರ್ನಾಟಕದ (ಕಲಬುರ್ಗಿ ರಾಯಚೂರು ಬೀದರ ಜಿಲ್ಲೆಗಳಿಂದ ಕೂಡಿದ್ದು) ಪೂರ್ವೇತಿಹಾಸದಲ್ಲಿ ನೃಪತುಂಗ ಪಂಪರಂತಹ ಮಹಾ ವಿಭೂತಿಗಳು ರಾರಾಜಿಸಿದ್ದಾರೆ. ವೀರಶೈವ ಕ್ರಾಂತಿಯ ತಾಯ್ನೆಲೆಯಾಗಿದ್ದ ಕಲ್ಯಾಣವು ಇಲ್ಲಿಯದೇ. ಪ್ರಾರಂಭದ ವಚನಕಾರರಲ್ಲಿ ಬಹುಸಂಖ್ಯಾಕರು ಇಲ್ಲಿಯವರೇ ಆಗಿದ್ದರು. ದಾಸಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಎಂದರೆ ವಿಜಯದಾಸ



"ಡಿಯರ್ ಚೆರರ್... ನೀನು ಬೇಗ ಬರ್ತಿ ಅಂತ ನಂಬಿ ಕುಳಿತಿದ್ದೇವೆ. ನಿನ್ನ—ಟೇಬಲ್ ನಂ ೧೦ ಗಿರಾಕಿಗಳು."

ರಿಂದ ಹೊಡಲ್ಪೊಂಡು, ಅನಂತರದ ಪೀಳಿಗೆಯ ಅನೇಕರು ರಾಯಚೂರು ಕಲಬುರ್ಗಿಗಳಿಂದಲೇ ಬಂದವರು. ಮುಂದೆ, ಕರ್ನಾಟಕದ ಇತರತ್ರ ಆದಂತೆ. ೧೯ನೆಯ ಶತಮಾನದ ಮಧ್ಯಕಾಲದಲ್ಲಿ ಕನ್ನಡವು ಇಲ್ಲಿ ಗತಪ್ರಾಣವಾಗಿದ್ದಿತು. ಆ ನಂತರದ ಕಾಲದಲ್ಲಿ ಅಂದರೆ ಕ್ರಿ. ಶ. ಸು. ೧೯೨೦ರ ವರೆಗೆ, ಕರ್ನಾಟಕದ ಇತರ ಪ್ರದೇಶಗಳಲ್ಲಿ ಕನ್ನಡಾಭಿಮಾನವು ತುಸುವಾದರೂ ತಲೆದೋರಿತ್ತು. ಆದರೆ ಇಲ್ಲಿ ಅಭಿಮಾನದ ಮಾತಿರಲಿ. ಕನ್ನಡದ ಅಸ್ತಿತ್ವವೇ ಇಲ್ಲವೆನ್ನುವ ಸ್ಥಿತಿ ಇದ್ದಿತು.

ನಾಡಿನ ಇತರ ಭಾಗಗಳಲ್ಲಿ, ರಾಜಭಾಷೆಯಾಗಿ ಇಂಗ್ಲಿಷ್ ಮತ್ತು ನೆರೆಹೊರೆಯ ಭಾಷೆಯಾಗಿ. ಮರಾಠಿ, ತೆಲುಗು ಅಥವಾ ಮಲೆಯಾಳ —ಇವುಗಳ ಪ್ರಭಾವದಲ್ಲಿ ಕನ್ನಡವು ತೆರೆಯ ಹಿಂದೆ ಸರಿದಂತಾಗಿದ್ದರೆ, ಹೈದರಾಬಾದಿನಲ್ಲಿ ಇಂಗ್ಲಿಷ್ ಜೊತೆಗೆ ಉರ್ದು ಕೂಡ ರಾಜಭಾಷೆಯಾಗಿ ಮೆರೆಯುತ್ತಿತ್ತು. ಅಲ್ಲದೆ ಆ ನಗರದ ಜನರ ಮಾತೃಭಾಷೆಯಾದ ತೆಲುಗಿನ ಒತ್ತಡವೂ ಕನ್ನಡದ ಮೇಲೆ ಇರಬೇಕಲ್ಲವೆ. ಆದರೆ ಕನ್ನಡಿಗರ ಮಟ್ಟಿಗೆ ಹೇಳುವುದಾದರೆ ತೆಲುಗಿಗಿಂತ ಮರಾಠಿಯ ಕಾಟವೇ ಹೆಚ್ಚಾಗಿ ಇದ್ದಿತು. ಜೊತೆಗೆ ಅಲ್ಲಿಯ ಮರಾಠಿಗರಿಗೆ ಕನ್ನಡದ ಬಗ್ಗೆ ತೀರ ಅಸಡ್ಡೆ. "ಈ ಕಾನಡೀ ಮಂದಿಗೆ ನೆಟ್ಟಗೆ ಅಳಲಿಕ್ಕೆ ಸಹಿತ ಬರುವದಿಲ್ಲ. ಮೊದಲು ಅಳಲಿಕ್ಕೆ ಕಲೀರಿ" ಎಂಬುದಾಗಿ ಹೀಗಳೆಯುವದನ್ನು ಜಿಮ್ಮಣಗಿಯವರು ಹೈದರಾಬಾದಿಗೆ ಬಂದ ಹೊಸತರಲ್ಲಿ ಕೇಳಿದ್ದರು.

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಕನ್ನಡಕ್ಕೆ ಒಂದಿಷ್ಟು ಅವಕಾಶವಿದ್ದಿದ್ದರೆ. ಆ ಮೂಲಕವಾದರೂ. ಕನ್ನಡವು ತಲೆ ಎತ್ತಬಹುದಿತ್ತೇನೋ. ಶಾಲಾ ಸ್ಥಾಪನೆಯು ಸಂಪೂರ್ಣವಾಗಿ ಸರಕಾರದ ಕಕ್ಷೆಯಲ್ಲಿದ್ದುದರಿಂದ ಯಾರೂ ಖಾಸಗಿಯಾಗಿ ಶಾಲೆಗಳನ್ನು ತೆರೆಯುವಂತಿರಲಿಲ್ಲ. ರಾಯಚೂರು ಮತ್ತು ಕಲಬುರ್ಗಿ ಮುಂತಾದ ಕೆಲವೇ ಸ್ಥಳಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸರಕಾರವು ಸ್ಥಾಪಿಸಿದ್ದರೂ ಹೆಚ್ಚಿನ ಕನ್ನಡಿಗರು ಉರ್ದು ಇಲ್ಲವೆ ಮರಾಠೀ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಇಷ್ಟ ಪಡುತ್ತಿದ್ದರು. ಬೀದರ ಭಾಗದಲ್ಲಂತೂ ಕನ್ನಡವನ್ನು ಕೇಳುವವರೇ ಇರಲಿಲ್ಲ. ಮಿಶನರಿ ಜನರು ನಡೆಸುತ್ತಿದ್ದ ಒಂದು ಶಾಲೆಯ ಹೊರತು ಬೇರೆ ಕನ್ನಡ ಶಾಲೆ ಇರಲೇ ಇಲ್ಲ. ಕನ್ನಡಿಗರು ತಮ್ಮ ಮಕ್ಕಳನ್ನು ಮರಾಠೀ ಶಾಲೆಗೆ ಕಳಿಸುತ್ತಿದ್ದರು— ಖುಷಿಯಿಂದ. ಅನೇಕಾನೇಕ ವ್ಯಾಪಾರಸ್ಥ ಕನ್ನಡಿಗರು ಲೆಕ್ಕವನ್ನು ಇಡುತ್ತಿದ್ದುದು ಮರಾಠಿಯಲ್ಲಿ. ಸಾರ್ವಜನಿಕ ಪ್ರಸಿದ್ಧಿಯ ಕನ್ನಡಿಗರು ಸಾರ್ವಜನಿಕ ಸಭೆ ಇಲ್ಲವೆ ಕ್ಲಬ್ಬುಗಳಲ್ಲಿದ್ದಾಗ ಕನ್ನಡವನ್ನು ಮಾತನಾಡುವುದು ಹೀನಾಯವೆಂದು ಬಗೆಯುತ್ತಿದ್ದರು. ಹೈಸ್ಕೂಲು, ಕಾಲೇಜು ಮೆಟ್ಟಲು ಹತ್ತಿದವರಿಗೆ ಇಂಗ್ಲಿಷ್. ಉರ್ದುಗಳೇ ವ್ಯವಹಾರ ಭಾಷೆಗಳಾಗಿದ್ದವು. ಅಂತೂ ಹೈದರಾಬಾದ ಸಂಸ್ಥಾನದಲ್ಲಿ ಕನ್ನಡಿಗರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆಂಬುದು ಬೇರೆ ಭಾಷಿಕರ ಗಮನಕ್ಕೇ ಬಾರದಂತೆ ಅಲ್ಲಿಯ ಕನ್ನಡಿಗರ ವರ್ತನೆ ಇದ್ದಿತು. (ಇತರತ್ರವೂ ಅನೇಕ ಕನ್ನಡಿಗರ ನಡತೆ ಇದೇ ಬಗೆಯದಲ್ಲವೆ!)

ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿರುವ ರಾಯಚೂರು. ಕಲಬುರ್ಗಿ ಜಿಲ್ಲೆಗಳಲ್ಲಿಯೇ ಈ ಸ್ಥಿತಿ ಇರುವಾಗ ಹೈದರಾಬಾದ ನಗರದಲ್ಲಿ ಕನ್ನಡವನ್ನು ಕೇಳುವವರಾರು ? ೧೯೨೦ ನೆಯ ದಶಕದಲ್ಲಂತೂ ಒಂದಾದರೂ ಕನ್ನಡ ಶಾಲೆ ಆ ನಗರದಲ್ಲಿ ಇರಲಿಲ್ಲ. ಅಂತೂ ಕನ್ನಡವು ಅಲ್ಲಿಯ ಬಹುಜನ ಕನ್ನಡಿಗರ ಅಡಿಗೆಯ ಮನೆ. ಮಲಗುವ ಕೋಣೆಗಳನ್ನು ಬಿಟ್ಟು ಹೊರಗೆ ಬರುತ್ತಲೇ ಇರಲಿಲ್ಲ! ಇಂಥ ಬರಡು ವಾತಾವರಣದಲ್ಲಿ ಜಿಮ್ಮಣಗಿಯವರು ಕನ್ನಡದ ಸಸಿಯನ್ನು ಅಲ್ಲಿ ಊರಿದರು. ಮುಂದಿನ ಕೆಲವು ವರ್ಷಗಳ ವರೆಗೆ ಏಕೈಕರಾಗಿ ಅದನ್ನು ಪೋಷಿಸಿಕೊಂಡು ಬಂದರು.

ಕನ್ನಡಾಭಿಮಾನವು ಅವರಲ್ಲಿ ಜನ್ಮಗುಣವಾಗಿ ಇದ್ದಿತಾದರೂ, ಅಂಥ ಚಟುವಟಿಕೆಗಳನ್ನು ಕೈಗೊಳ್ಳಲು, ೧೯೨೪ರ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ನಿಮಿತ್ತವಾಗಿ ಬೆಳಗಾಂವಿಗೆ, ಅನಂತರ ಧಾರವಾಡಕ್ಕೆ ಹೋಗಿ ಬಂದಾಗ ಪ್ರೇರಣೆ ದೊರಕಿತು. ಅವರು ಕಾರ್ಯಾರಂಭ ಮಾಡಿದ್ದರ ಸಂದರ್ಭ ಮಾತ್ರ ಮೋಜಿನದಾಗಿದೆ.

ಚಿಮ್ಮಲಗಿಯವರ ಹಿರಿಯ ಮಗ ರಾಮನಿಗೆ ೧೧-೧೨ ವರ್ಷ ಇದ್ದೀತು. ಗಾಂಧೀಜಿಯವರು ಇತ್ತ ಕರೆಯಿಂದಾಗಿ ಸ್ವದೇಶೀ ವ್ರತಕ್ಕೆ ಅಂಟಿಕೊಂಡು, ಧಾರವಾಡದ ರಾಷ್ಟ್ರೀಯ ವಿದ್ಯಾಲಯಕ್ಕೆ ತಮ್ಮ ಮಗನನ್ನು ಕಳಿಸಿಕೊಟ್ಟರು. ಆದರೆ ಅಷ್ಟರಲ್ಲಿ ಆ ಶಾಲೆಯನ್ನು ಮುಚ್ಚಿದ್ದರಿಂದ ಹೈದರಾಬಾದಿನಲ್ಲಿಯೇ ಅವನ ಶಿಕ್ಷಣವು ಮೊದಲಾಯಿತು. ವಿದೇಶಿಯಾದದ್ದು ಯಾವದೂ ಬೇಡವೆಂಬ ಕಾರಣದಿಂದ, ಮಗನನ್ನು ಇಂಗ್ಲಿಷ್ ಶಾಲೆಗೆ ಹಾಕದೇ ಮರಾಠೀ ಮಾಧ್ಯಮದ ಹೈಸ್ಕೂಲನ್ನು ಆಯ್ದುಕೊಂಡರು. ತಮ್ಮ ವ್ಯವಹಾರದಿಂದಾಗಿ ಇವರಿಗೆ ಹಗಲಿನಲ್ಲಿ ಪುರುಸೊತ್ತು ಸಿಗುತ್ತಿದ್ದುದು ಕಡಿಮೆ. ಅಂಥದೊಂದು ದಿನ ಅವನು ಪುಸ್ತಕ ಹಿಡಿದುಕೊಂಡು ಕುಳಿತಿದ್ದಾಗ, "ಏನಪಾ ರಾಮಾ, ಒಂದಷ್ಟು ಗಟ್ಟಿಯಾಗಿ ಓದು, ನೋಡುವಾ" ಎಂದು ಹೇಳಿದರು. ಎದುರಿಗೇ ಪುಸ್ತಕವಿದ್ದರೂ ಹುಡುಗ ಮೌನಿ! ಕೆದರಿ ಕೇಳಿದಾಗ ತಾನು ಓದಲಾರೆನೆಂದೂ ಮಾಸ್ತರರು ಶಾಲೆಯಲ್ಲಿ ಹೇಳಿದ್ದು ತನಗೆ ತಿಳಿದಿಲ್ಲವೆಂದೂ ಅಳು ಮುಖದಿಂದ ಹೇಳಿದನು. ಏನೂ ತಿಳಿಯದ ಮರಾಠಿಗಿಂತ ವಿದೇಶೀ ಭಾಷೆ ವಾಸಿ ಎಂದುಕೊಂಡು ಆ ಶಾಲೆಯನ್ನು ಬಿಡಿಸಿ, ಇಂಗ್ಲಿಷ್ ಮಾಧ್ಯಮದ ಶಾಲೆಗೆ ಹಾಕಿದರು.

'ನನ್ನ ಮಗನಿಗೆ ಒದಗಿದಂಥ ಸ್ಥಿತಿ ಅನೇಕಾನೇಕ ಕನ್ನಡ ಬಾಲಕರಿಗೆ ಇದ್ದಿರಬೇಕಲ್ಲವೆ?' ಎಂದು ಅವರ ಮನಸ್ಸು ಮಿಡುಕಿತು. ಹೇಗಾದರೂ ಮಾಡಿ ಒಂದು ಕನ್ನಡ ಶಾಲೆಯನ್ನು ತೆರೆಯಬೇಕು, ಪ್ರಾಥಮಿಕ ವರ್ಗಗಳಿಂದ ಆರಂಭಿಸಬೇಕು—ಎಂದು ನಿರ್ಧರಿಸಿದರು. ೧೯೨೮ ರಲ್ಲಿ ರಥಸಪ್ತಮಿಯ ದಿನ ಐದು ಬಾಲಕರನ್ನು ಕರೆತಂದು ಆರಂಭಮಾಡಿಬಿಟ್ಟರು !

ಶಾಲೆಗೆ ಏನೆಂದು ಹೆಸರು ಕೊಡಬೇಕು? ಅಂಗಡಿಯಲ್ಲಿ ಸ್ನೇಹಿತರೊಡನೆ ಕುಳಿತಾಗ ಚಿಮ್ಮಲಗಿಯವರು ಅದರ ಪ್ರಸ್ತಾಪ ಮಾಡಿದರು. ಆಗ ಲಕ್ಷ್ಮಣರಾವ ಚಳಗೇರಿ ಎಂಬವರು 'ನೃಪತುಂಗ'ನ ಹೆಸರನ್ನು ಸೂಚಿಸಿದರು.

ಹುಡುಗರ ಸಂಖ್ಯೆ ಐದೇ ಇರಲಿ, ಶಾಲೆ ಎಂದ ಮೇಲೆ ಒಬ್ಬ ಶಿಕ್ಷಕರು ಬೇಕಲ್ಲ. ಸಂ. ಪಾಂಡಕ್ಕಿ ಗುಂಡಾಚಾರ್ಯ ಎಂಬ ಸ್ನೇಹಿತರನ್ನು ನೇಮಿಸಲಾಯಿತು. ಶಾಲೆಯು ಚಿಮ್ಮಲಗಿಯವರ ಮನೆಯ ಒಂದು ಭಾಗದಲ್ಲಿ ನಡೆಯುತ್ತಿತ್ತು. ಬೆರಳೆಣಿಕೆಯ ಸಂಖ್ಯೆಯಲ್ಲಿರುವ ಮತ್ತು ನೆಲದ ಮೇಲೆ ಕುಳಿತು, 'ಅಆಇಈ' ತೀಡುತ್ತಿದ್ದ ಬಾಲಕರ ಈ ಶಾಲೆಯನ್ನು ನೋಡಿದವರಿಗೆಲ್ಲ ನಗೆ-ಚಾಟಿಕೆಯ ವಿಷಯವಾಯಿತು. ಚಿಮ್ಮಲಗಿಯವರು ಅದನ್ನು ಲಕ್ಷಿಸದೆ, ಭೆಟ್ಟಿಯಾದ ಎಲ್ಲ ಕನ್ನಡಿಗರಿಗೂ ಮಕ್ಕಳನ್ನು ಇಲ್ಲಿಗೆ ಕಳಿಸಲು ಹೇಳುತ್ತಿದ್ದರು. ಶಿಕ್ಷಕನ ಪಗಾರವನ್ನು ಚಿಮ್ಮಲಗಿಯವರೇ ಕೈಯಿಂದ ಕೊಡುತ್ತಿದ್ದರು. ಶಿಕ್ಷಣವು ಉಚಿತವಾಗಿದ್ದಿತೆಂದು ಬೇರೆ ಹೇಳಬೇಕಿಲ್ಲ.

ಮೂರು ವರ್ಷಕ್ಕೆ ಶಾಲಾ ಮಕ್ಕಳ ಸಂಖ್ಯೆ ೨೫ಕ್ಕೆ ಏರಿತು. ನರಸಿಂಹ ಭಟ್ಟ ಎಂಬ ಇನ್ನೊಬ್ಬ ಶಿಕ್ಷಕರನ್ನು ನೇಮಿಸಿದರು. ಬೆಂಚು ಮೇಜುಗಳಿಲ್ಲದ ಶಾಲೆಗೆ ಮರ್ಯಾದೆ ಬಾರದೆಂದು, ಅವನ್ನು ತಾವೇ ಮಾಡಿಸಿದರು. ಹೆಚ್ಚೆಚ್ಚು ಪಾಲಕರು ತಮ್ಮ ಮಕ್ಕಳನ್ನು ಕಳಿಸುವಂತಾಗಬೇಕಾದರೆ ಸರಕಾರದ ಮನ್ನಣೆ ಇರಬೇಕು ಎಂಬುದನ್ನು ಮನಗಂಡು ಎಜ್ಯುಕೇಶನಲ್ ಇನಸ್ಪೆಕ್ಟರರಿಗೆ ಅರ್ಜಿಯನ್ನು ಸಲ್ಲಿಸಿದರು. ಅದರಲ್ಲಿ ಇಪ್ಪತ್ತು ಸಾವಿರ ಕನ್ನಡಿಗರಿರುವ ಹೈದ್ರಾಬಾದ ನಗರದಲ್ಲಿ ಒಂದಾದರೂ ಕನ್ನಡ ಶಾಲೆ ಇಲ್ಲವೆಂಬ ಮಾತನ್ನು ಎತ್ತಿ ಹೇಳಲಾಗಿತ್ತು. ಹಲವು ತಿಂಗಳುಗಳು ಸಂದರೂ ಆ ಅರ್ಜಿಯು ಶಿಕ್ಷಣ ಕಚೇರಿಯಲ್ಲೇ ಕೊಳೆಯುತ್ತ ಬಿದ್ದಿತ್ತು.

ಆಗೊಂದು ವಿಚಿತ್ರ ಘಟನೆ ಜರುಗಿತು. ಶ್ರೀ ಚಿಮ್ಮಲಗಿಯವರು ತಮ್ಮ ಅಂಗಡಿಯ ಕಟ್ಟೆಯ ಮೇಲೆ ಕುಳಿತಿದ್ದಾಗ ಅವರ ನಾಲ್ಕು ವರ್ಷದ ಮಗು ರಾಘವೇಂದ್ರ ಆಡುತ್ತ ಆಡುತ್ತ ಇಳಿದ. ಅಷ್ಟರಲ್ಲಿ ಒಂದು ಕಾರು ಬಂದು ಮಗುವಿನ ಮೇಲೆ ಹಾಯ್ದು ಹೋಯಿತು. ಕಾರನ್ನು ನಡೆಸುವವರು ಹಾಗೇ ಪಲಾಯನ ಮಾಡದೆ ಗಕ್ಕನೆ ಕಾರನ್ನು ನಿಲ್ಲಿಸಿದರು. ಆಗೇನೇ ಚಿಮ್ಮಲಗಿಯವರಿಗೆ ಅಪಘಾತ ಸಂಭವಿಸಿದ್ದುದು ತಿಳಿದದ್ದು. ಕೂಡಲೇ ಧಾವಿಸಿ, ಗಾಲಿಯ ಕೆಳಗೆ

ಸಿಕ್ಕಿಬಿದ್ದ ಮಗುವನ್ನು ಎತ್ತಿಕೊಂಡರು. ಮಗು ವಿನ ಮೈಮೇಲೆ ಎಚ್ಚರವಿರಲಿಲ್ಲ. ಅಷ್ಟರಲ್ಲಿ ಗಾಡಿ ಯಲ್ಲಿದ್ದವರೂ ಕೆಳಗಿಳಿದು ಬಂದು, ಅದೇ ಕಾರಿನಲ್ಲಿ ಎಲ್ಲರೂ ರೆಸಿಡೆನ್ಸಿ ದವಾಖಾನೆಗೆ ಧಾವಿಸಿದರು. ಚಿಮ್ಮಲಗಿಯವರು ತಮ್ಮ ಮಗುವಿನ ಬಗ್ಗೆ ಕಾತರವನ್ನು ಮಾತ್ರ ವ್ಯಕ್ತಪಡಿಸಿದ್ದರಲ್ಲದೇ 'ನೀವು ಅಲಕ್ಷ್ಯದಿಂದ ಡ್ರೈವ್ ಮಾಡಿದಿರಿ' ಎಂಬ ಸಿಟ್ಟನ್ನು ತೋರ್ಪಡಿಸಿರಲಿಲ್ಲ. ಮಗುವನ್ನು ಪರೀಕ್ಷಿಸಿದ ಡಾಕ್ಟರರು "ಗಾಯವೇನೂ ಆಗಿಲ್ಲ. ಗಾಬರಿಯಿಂದ ಮಗುವಿಗೆ ಎಚ್ಚರ ತಪ್ಪಿದೆ" ಎಂದು ಹೇಳಿದಾಗ, ಅವರಿಬ್ಬರಿಗೂ ಆದ ಸಂತೋಷ ಅಷ್ಟಿಷ್ಟಲ್ಲ.

ಪರಸ್ಪರ ಪರಿಚಯದ ಕಾಲಕ್ಕೆ ಚಿಮ್ಮಲಗಿಯವರಿಗೆ, ಅವರು 'ಅಲಿ ಅಕಬರ್' ಎಂಬುದು ಗೊತ್ತಾಗಿ ಆಶ್ಚರ್ಯವೇ ಆಯಿತು. "ನೀ–ನೀವು ಎಜ್ಯುಕೇಶನಲ್ ಇನಸ್ಪೆಕ್ಟರ್ ಅಲಿ ಅಕಬರ್ ಸಾಹೇಬರೇನು?" ಎಂದರು.

"ಹೌದು."

"ಇದೇನು ಯೋಗಾಯೋಗ? ನಾನು ತಮ್ಮನ್ನು ಕನ್ನಡ ಶಾಲೆಯ ಸಂಬಂಧದಲ್ಲಿ ಭೆಟ್ಟಿಯಾಗಬೇಕೆಂದು ಬರುವವನೇ ಇದ್ದೆನಲ್ಲ, ತಮ್ಮ ಅನುಕೂಲದ ಸಮಯವನ್ನು ತಿಳಿದುಕೊಳ್ಳುವದಕ್ಕಾಗಿ, ಮಿತ್ರರೊಬ್ಬರಿಗೆ ಹೇಳಿ ಇಟ್ಟಿದ್ದೆ," ಎಂದರು ಚಿಮ್ಮಲಗಿಯವರು.

ಮರುವಾರವೇ ಎಜುಕೇಶನಲ್ ಆಫೀಸಿನಿಂದ ಪತ್ರ ಬಂತು– ಸಾಹೇಬರು ಶಾಲೆಯ ವಿಜಿಟ್‌ಗೆ ಬರಲಿದ್ದಾರೆಂದು! ಸಮಯಕ್ಕೆ ಸರಕಾರದ ಹಿರಿಯ ಅಧಿಕಾರಿಯೊಬ್ಬರು ಇದ್ದರೆ ಒಳ್ಳೆಯದೆಂದು ಯೋಚಿಸಿ, ಸಂಸ್ಥಾನದ ವೆಟರ್ನರಿ ಶಾಖೆಯ ಮುಖ್ಯಾಧಿಕಾರಿಗಳಾಗಿದ್ದ ಡಾ. ಬಿ. ಕೆ. ಬಾದಾಮಿ ಎಂಬ ಕನ್ನಡಿಗರನ್ನು ಬರಮಾಡಿಕೊಂಡಿದ್ದರು. ಅಲಿ ಅಕಬರ ಸಾಹೇಬರು ಬಂದು ಹೋದ ಕೂಡಲೇ ಶಾಲೆಗೆ ಸರಕಾರದ ಮಂಜೂರಾತಿ ಸಿಕ್ಕಿತು.

ಮುಂದೆ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ತೀವ್ರ ಹೆಚ್ಚಳ ಕಂಡುಬಂತು. ಮೂರನೆಯ ಶಿಕ್ಷಕರು ಹಾಜರಾದರು. ಗ್ರ್ಯಾಂಟ್ ಕೂಡ ಮಂಜೂರಾಯಿತು. ಎಷ್ಟು ಎಂದು ಭಾವಿಸಿದಿರಿ? ರೂ. ೨೦ ಉಳಿದೆಲ್ಲ ವೆಚ್ಚವನ್ನು ಚಿಮ್ಮಲಗಿಯವರೇ ಭರಿಸುತ್ತಿದ್ದರು. ನಾಲ್ಕನೆಯ ಇಯತ್ತೆ ಆರಂಭವಾಗುವವರೆಗೂ ಶಾಲೆಯು ಚಿಮ್ಮಲಗಿಯವರ ಮನೆಯಲ್ಲಿ ನಡೆಯುತ್ತಿದ್ದಿತು. ಪುರೋಹಿತ ಎಂಬವರು ಹೆಡ್‌ಮಾಸ್ತರ್ ಆಗಿ ಬಂದ ಮೇಲೆ ದೊಡ್ಡ ಸ್ಥಳವೊಂದನ್ನು ಬಾಡಿಗೆಗೆ ಹಿಡಿದರು. ಆಗೂ ಶಾಲೆಯ ಆರ್ಥಿಕ ನಿರ್ವಹಣೆ ಚಿಮ್ಮಲಗಿಯವರದೇ ಆಗಿ ಮುಂದುವರಿಯಿತು. ಬೇರೆ ಉದಾರಿಗಳಿಂದ ಧನಸಹಾಯವನ್ನು ಕೇಳಬಾರದೆಂದೇನೂ ಅವರು ಇಟ್ಟುಕೊಂಡಿದ್ದಿಲ್ಲ. ಆದರೆ ಅದಕ್ಕೆಂದು ಓಡಾಡಲು, ತಮ್ಮ ಬೆಳೆಯುತ್ತಿದ್ದ ವ್ಯವಹಾರದಲ್ಲಿ ವೇಳೆ ಸಿಗುತ್ತಿರಲಿಲ್ಲ. ವೆಚ್ಚವೋ, ಅವರ ಎಣಿಕೆಯನ್ನು ಮೀರಿ ಹೆಚ್ಚಾಗುತ್ತ ನಡೆದಿತ್ತು. ಆದರೂ ನೂರಕ್ಕೆ ಮೇಲ್ಪಟ್ಟು ಕನ್ನಡ ಮಕ್ಕಳು ಓದುತ್ತಿರುವುದು ಅವರಿಗೆ ತುಂಬಾ ಸಂತೋಷದ ಸಂಗತಿಯಾದ್ದರಿಂದ ಹಣದ ಹೊರೆಯನ್ನು ಸಂತೋಷದಿಂದಲೆ ಹೊತ್ತರು.

ಆಗ ಹೈದರಾಬಾದಿನಲ್ಲಿ ವಿವೇಕವರ್ಧಿನಿ ವಿದ್ಯಾಲಯ ಎಂಬ ಮರಾಠೀ ಶಾಲೆ ವಿಶೇಷ ಪ್ರಸಿದ್ಧಿಯನ್ನು ಪಡೆದಿತ್ತು. ಅಲ್ಲಿ ಕನ್ನಡ ಹುಡುಗರು ಸಾಕಷ್ಟು ಜನ ಇದ್ದು; ಅವರೆಲ್ಲ ಮರಾಠೀ ಮಾಧ್ಯಮದಲ್ಲಿ ಕಲಿಯಬೇಕಾಗಿತ್ತು. ಆದರೂ ಕನ್ನಡವನ್ನು ಒಂದು ವಿಷಯವನ್ನಾಗಿ ಕಲಿಸಲೆಂದು ಓರ್ವ ಕನ್ನಡ ಶಿಕ್ಷಕನನ್ನು ನೇಮಿಸಲಾಗಿತ್ತು. ಆ ಶಾಲೆಯ ಮುಖ್ಯಸ್ಥರಾಗಿದ್ದ ವಾಮನ ನಾಯಕರು ನಗರದ ಓರ್ವ ಗಣ್ಯ ವ್ಯಕ್ತಿಗಳೆನಿಸಿಕೊಂಡಿದ್ದರು. 'ದೇಶಭಕ್ತ', 'ಧರ್ಮವೀರ'ಮುಂತಾದ ಗೌರವ ಪದವಿಗಳನ್ನು ಹೊಂದಿದ್ದ ಅವರು ಮೂಲತಃ ಕನ್ನಡಿಗರೇ ಆಗಿದ್ದರೂ ಮರಾಠಿಗೆ ಸಂಪೂರ್ಣ ಮಾರುಹೋಗಿದ್ದರು. ಚಿಮ್ಮಲಗಿಯವರಿಗೆ ಅವರು ಪರಿಚಿತರೇ.

ತಮ್ಮ 'ನೃಪತುಂಗ' ಶಾಲೆಯ ವಿದ್ಯಾರ್ಥಿಗಳೂ ಇಲ್ಲಿಯ ಕನ್ನಡ ಮಕ್ಕಳೂ ಸೇರಿದರೆ ಕನ್ನಡ ಮಾಧ್ಯಮದ ಒಂದು ಹೈಸ್ಕೂಲನ್ನು ತೆರೆಯಬಹುದೆಂದು ಕನಸನ್ನು ಚಿಮ್ಮಲಗಿಯವರು ಕಾಣತೊಡಗಿದರು. ಆ ಮುಂದೆ [illegible]


464
ಡಿಟರ್ಜೆಂಟ್ ಬಾರ್
ಬೇರೆ ಯಾವುದೇ ಸಾಬೂನುಗಳನ್ನು ಮೀರಿಸುತ್ತದೆ
464
SUPER POWER
464
more wash at low cost
DETERGENT WASHING BAR
464
UHP
ಈಗ ಸೂಪರ್ ಪವರ್ 464 ಡಿಟರ್ಜೆಂಟ್ ಒಗೆಯುವ ಬಾರ್ ಇಮ್ಮಡಿ ಒಗೆತದ ಶಕ್ತಿ ನಿಮಗೆ ನೀಡುವುದಲ್ಲದೆ ಬೇರೆ ಸಾಬೂನುಗಳಿಗಿಂತ ಶೇಕಡ 50 ರಷ್ಟು ಹೆಚ್ಚಿನ ಒಗೆತವನ್ನು ನೀಡುತ್ತದೆ. ಈಗ 464 ಡಿಟರ್ಜೆಂಟ್ ಬಾರ್‌ನಿಂದ ದುಬಾರಿ ಉಳಿತಾಯ ಮತ್ತು ಆದರ್ಶ ಒಗೆತವನ್ನು ಪಡೆಯಿರಿ.
ಈಗ ಅರಶಿನ ಹಾಗೂ ನೀಲಿ ಬಣ್ಣಗಳಲ್ಲಿ ದೊರೆಯುತ್ತದೆ.
UHP
ಯೂನಿಯನ್ ಹೋಮ್ ಪ್ರಾಡಕ್ಟ್ಸ್ ಲಿ.
ಮಂಗಳೂರು-575 001.
ಬೇರೆ ಯಾವುದೇ ಸಾಬೂನುಗಳಿಗಿಂತ 464 ಡಿಟರ್ಜೆಂಟ್ ಬಾರ್ ಹೆಚ್ಚಿನ ಪ್ರಕಾಶಮಯವಾದ ಒಗೆತವನ್ನು ನೀಡುತ್ತದೆ

mpa/uhp/176

ವಿದ್ಯಾಲಯದಲ್ಲಿ ಕನ್ನಡ ಮಕ್ಕಳು ಅದೆಷ್ಟು ಜನ ಇದ್ದಾರೆಂಬುದರ ಅಂದಾಜು ಬೇಕಲ್ಲವೆ? ಈ ಕುರಿತು ಚಿಮ್ಮಲಗಿಯವರು ವಾಮನ ನಾಯಕರನ್ನು ಭೆಟ್ಟಿಯಾಗಿ ವಿಚಾರಿಸಿದರು. ಅವರ ಪ್ರತ್ಯೇಕ ಹೈಸ್ಕೂಲಿನ ವಿಚಾರ ನಾಯಕರಿಗೆ ಸ್ವಾಭಾವಿಕ ವಾಗಿಯೆ ಬೇಡವಾದದ್ದು ಅದರಿಂದ ತಮ್ಮ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗು ವದಲ್ಲವೆ, "ನಿಮಗೆ ಕನ್ನಡ ಹುಡುಗರ ಸಂಖ್ಯೆ ಬೇಕಿದ್ದರೆ, ಮನೆ ಮನೆಗೆ ಹೋಗಿ ಖಾನೇ ಸುಮಾರಿ ತೆಗೆದುಕೊಳ್ಳಿ" ಎಂದು ಒದರಾಡಿದರು.

ಚಿಮ್ಮಲಗಿಯವರಿಗೆ ಸಾತ್ವಿಕ ಸಂತಾಪ ಉಕ್ಕೇರಿತು. ಆ ಮಾಹಿತಿಯನ್ನು ನೋಡಲೇಬೇಕೆಂಬ ಛಲ ಹೊಕ್ಕಿತು. ತಮ್ಮ ವ್ಯಾಪಾರದ ನಿಮಿತ್ತ ಮದ್ರಾಸಿಗೆ ಹೋದಾಗ ಎರಡು ಸಾವಿರದಷ್ಟು 'ನೋಟ್ ಬುಕ್'ಗಳನ್ನು ತಂದು, ಕಡಿಮೆ ಬೆಲೆಗೆ ಮರುಮಾರಾಟಕ್ಕೆಂದು ಇಟ್ಟರು. ಇದು ನಿಮಿತ್ತ ಮಾತ್ರ. ಜೊತೆಗೆ "ಕನ್ನಡ ಮಾತ ನಾಡುವ ಹುಡುಗರಿದ್ದರೆ, ಅವರಿಗೆ ಪುಕ್ಕಟೆ" ಎಂದು ಜಾಹೀರುಪಡಿಸಿದರು!

ಶಾಲಾರಂಭದ ದಿನಗಳವು. ವಿವೇಕವರ್ಧಿನಿ ಶಾಲೆಯ ಹತ್ತಿರ ಇವರ ಅಂಗಡಿ ಇದ್ದಿತಾದ್ದ ರಿಂದ ಅಲ್ಲಿಯ ಹುಡುಗರು ಕಡಿಮೆ ಬೆಲೆಗೆ ಇದ್ದ 'ನೋಟ್ ಬುಕ್' ಕೊಳ್ಳಲು ಬರತೊಡಗಿ ದರು. ಇತ್ತ "ನನಗೆ ಕನ್ನಡ ಬರ್‍ತದೆ" ಎಂದು ಹೇಳುವ ಮಕ್ಕಳು ಒಂದು ರಜಿಸ್ಟರಿನಲ್ಲಿ ತಮ್ಮ ಹೆಸರು, ಪಾಲಕರ ಹೆಸರು, ವಿಳಾಸ, ಮತ್ತು ತಾವು ಕಲಿಯುವ ವರ್ಗ ಇಷ್ಟನ್ನು ಬರೆಯ ಬೇಕಾಗುತ್ತಿತ್ತು. ಹಾಗೆ ಖುಷಿಯಿಂದ ಬರೆದು ಪುಸ್ತಕಗಳನ್ನು ಪುಕ್ಕಟೆ ಒಯ್ಯುತ್ತಿದ್ದರಲ್ಲ. ಆ ತಿಂಗಳಾವಧಿಯಲ್ಲಿ ಚಿಮ್ಮಲಗಿಯವರು ಹತ್ತಿ ಪ್ಪತ್ತು ಅಲ್ಲ, ಸುಮಾರು ೧೫೦ರಷ್ಟು ಕನ್ನಡ ಬಲ್ಲ ವಿದ್ಯಾರ್ಥಿಗಳ ಪಟ್ಟಿಯನ್ನು ಅವರವರ ತರಗತಿಯ ಉಲ್ಲೇಖದೊಡನೆ ವಾಮನ ನಾಯ-ಕರ ಮುಖಕ್ಕೆ ಹಿಡಿದರು! ಪಾಪ ನಾಯಕರು ಅಸಹಾಯಕತೆಯ ಬೇಸರವನ್ನು ತೋರ್ಪಡಿಸಿ ದರಲ್ಲದೆ, ಇನ್ನೇನು ಹೇಳಬಹುದಾಗಿತ್ತು? ಆದರೆ ಅವರಿಗೆ ತಮ್ಮಲ್ಲಿದ್ದ ಕನ್ನಡ ಶಿಕ್ಷಕ ಹಾಗೆ ಮಾಡಿರಬಹುದೆಂಬ ಸಂಶಯ ಬಂತು. ಅದಕ್ಕಾಗಿ ಅವರನ್ನು ಪೀಡಿಸಿದಾಗ ಚಿಮ್ಮಲಗಿ ಯವರು ತಾವು ಮಾಡಿದ ತಪ್ಪನ್ನು ಒಪ್ಪಿ ಕೊಂಡರು. ಇದರಿಂದ ವಾಮನ ನಾಯಕರಿಗೆ ಚಿಮ್ಮಲಗಿಯವರ ಬಗೆಯಲ್ಲಿ ಗೌರವ ಹುಟ್ಟಿ ತೆಂದೇ ಹೇಳಬೇಕು.

ಹೀಗೆ ಬೆಳೆದ ಚಿಮ್ಮಲಗಿಯವರಿಗೆ ಆ ಪಟ್ಟಿಯು ಮಿಡ್ಲ್‌ಸ್ಕೂಲ್ ತೆರೆಯುವುದಕ್ಕೆ ಪುಟಕೊಟ್ಟಿತು. ಇಂಗ್ಲಿಷ್ ಮೂರನೆಯ ವರ್ಗದವರೆಗೆ ಸ್ವತಂತ್ರ ವಿದ್ಯಾಲಯವು ಮುಂದುವರಿಯಿತು. ಅದನ್ನು ಮಿಡ್ಲ್‌ಸ್ಕೂಲ್ ಎಂದು ಮಂಜೂರು ಮಾಡಿಸಿಕೊಳ್ಳುವದಕ್ಕೆ ಬಿ.ಎ. ಗ್ರ್ಯಾಜುಯೇಟ್ ಹೆಡ್ ಮಾಸ್ತರನ ಅವಶ್ಯಕತೆ ಇತ್ತು. ಬಿಜಾಪುರದ ವೆಂಕಟರಾವ್ ಆರ್. ನಾಯಕ ಎಂಬ ಪದವೀಧರರನ್ನು ಕರೆಯಿಸಿ ಕೊಂಡರು. ಮ್ಯುನಿಸಿಪಲ್ ಆಫೀಸಿನಲ್ಲಿದ್ದ ಒಬ್ಬಾಂತ ಕರೊಬ್ಬರು 'ಉರ್ದು ಕಲಿಸಲು ಒಬ್ಬ ಮಾಸ್ತ ರನ್ನು ಶಿಕ್ಷಕರನ್ನಾಗಿ ನೇಮಿಸಿಕೊಳ್ಳಿರಿ' ಎಂದು ಕಿವಿಮಾತು ಹೇಳಿದ್ದರಿಂದ, ಹಾಗೆಯೇ ಮಾಡಿದರು. ನೇಮಿಸಿದ್ದು ಮಾತ್ರವಲ್ಲ, ಗುಲಬರ್ಗ ದಲ್ಲಿ ತಾವು ಉರ್ದು ಕಲಿಸುತ್ತಿದ್ದ ಶಾಲೆಯಿಂದ ನಿವೃತ್ತರಾಗಿದ್ದ ಸೈಫುದ್ದೀನರನ್ನು!

ಈ ಎತ್ತುಗಡೆಗಳಿಂದ ಶಾಲೆಯ ಗ್ರ್ಯಾಂಟ್ ಹೆಚ್ಚಾಯಿತೆಂಬುದು ನಿಜ. ಆದರೆ ಅದೆತ್ತ ಸಾಲ ಬೇಕು? ೨೫೦ ಮಕ್ಕಳಿದ್ದ ಆ ಶಾಲೆಯ ಯೋಗ ಕ್ಷೇಮವನ್ನು ಹೆಚ್ಚಿನ ಮಟ್ಟಿಗೆ ಇವರೇ ಹೊತ್ತಿದ್ದ ಚಿಮ್ಮಲಗಿಯವರಿಗೆ. ಅದರಿಂದ ಮುಕ್ತರಾಗಬೇ ಕೆಂದು ತೋರಿದ್ದರೆ ಅದು ಸಹಜವೇ. ಜನಾರ್ದನ-ರಾವ ದೇಸಾಯಿ ಅವರು ಅಧ್ಯಕ್ಷರಾಗಿದ್ದ ಸಮಿತಿಗೆ ಒಪ್ಪಿಸಿದರು. ಜನಾರ್ದನರಾಯರು ಕಲಬುರ್ಗಿ ಯನ್ನು ಬಿಟ್ಟು ಆ ವೇಳೆಗೆ ಹೈದರಾಬಾದಿನಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿದ್ದರು. ನಿಷ್ಠಾ ವಂತ ಸಮಾಜಸೇವಕರೆಂದು ಹೆಸರು ಪಡೆದಿ ದ್ದರು, ಶಾಲೆಯ ಆಡಳಿತದ ಹೊಣೆಯನ್ನು ಅವರಿಗೆ ಒಪ್ಪಿಸಿಕೊಡುವಾಗ ಬೆಳೆದ ಮಗಳನು ಬೀಳ್ಕೊಟ್ಟ ಭಾವನೆ ಚಿಮ್ಮಲಗಿಯವರಲ್ಲಿ ಮೂಡಿರಲು ಸಾಕು.

ಇತ್ತ ವೆಂಕಟರಾವ ನಾಯಿಕರ ದಕ್ಷ ಆಡಳಿತದಿಂದಾಗಿ ಶಾಲೆಯಲ್ಲಿ ಶಿಸ್ತು ನೆಲಸಿತು. ಪಾಠಗಳಲ್ಲಿ ವ್ಯವಸ್ಥಿತ ಕ್ರಮವೇರ್ಪಟ್ಟಿತು. ಹುಡುಗರು ಉತ್ತಮ ದರ್ಜೆಯಲ್ಲಿ ಪಾಸಾಗುತ್ತಿದ್ದರು. ಈ ಮಿಡ್ಲ್ ಸ್ಕೂಲಿನಿಂದ ಬೇರೆ ಯಾವುದೇ ಹೈಸ್ಕೂಲಿಗೆ ಹೋಗುವುದಾದರೆ ಈ ಶಾಲೆಯ ಹುಡುಗರಿಗೆ ಪ್ರಾಶಸ್ತ್ಯ ದೊರೆಯುವಷ್ಟು, ನೃಪತುಂಗ ವಿದ್ಯಾಲಯವು ಹೆಸರನ್ನು ಗಳಿಸಿತು. ಮುಂದೆ, ಚಿಂಚೋಳಿಯ ಕೃಷ್ಣಾಚಾರ್ಯ ಜೋಶಿ ಎಂಬವರು ಈ ಶಾಲೆಯ ಯಶಸ್ವಿತೆಯಿಂದ ಪ್ರೇರಿತರಾಗಿ ಕರ್ನಾಟಕ ಶಾರದಾ ಕನ್ಯಾಪಾಠಶಾಲೆಯನ್ನು ಆರಂಭಿಸಿದರು.

ಕನ್ನಡಿಗರ ಗಣೇಶೋತ್ಸವ

ಲೋಕಮಾನ್ಯ ಟಿಳಕರು ಮಹಾರಾಷ್ಟ್ರದಲ್ಲಿ ಆರಂಭಿಸಿದ ಗಣೇಶೋತ್ಸವಗಳ ಮೂಲಕವಾದ ಸಾರ್ವಜನಿಕ ಜಾಗೃತಿಯ ಕಾರ್ಯವು ನೆರೆಯ ನಿಜಾಮ ರಾಜ್ಯಕ್ಕೂ ಹಬ್ಬಿದ್ದಿತು. ಇಂಥ ಉತ್ಸವಗಳನ್ನು ನಡೆಸುವತ್ತ ಅಲ್ಲಲ್ಲಿಯ ಮರಾಠಿಗರು ಮುಂದಾಗುತ್ತಿದ್ದರು. ಹೈದ್ರಾಬಾದದ ಕನ್ನಡಿಗರೂ ಹಾಗೆ ಯೋಚಿಸಿ 'ಕರ್ನಾಟಕ ಸಮಾಜ ಗಣಪತಿ ಉತ್ಸವ ಮಂಡಳಿ' ಎಂಬುದನ್ನು ಆರಂಭಿಸಿದ್ದರು. ಆದರೆ ಇದು ನಾಮ-ಮಾತ್ರ ಮಂಡಳಿಯಾಗಿದ್ದಿತು. ಮತ್ತು ಕಾರ್ಯಕ್ರಮಗಳಲ್ಲಿ ಹುರುಳಿರಲಿಲ್ಲ.

ಚಿಮ್ಮಲಗಿಯವರು ಇದನ್ನು ಹೆಚ್ಚು ವ್ಯಾಪಕಗೊಳಿಸಿ ವ್ಯವಸ್ಥಿತವಾಗಿ ನಡೆಸಬೇಕೆಂದು ನಿರ್ಧರಿಸಿದರು. ಇವರು ಸಕ್ರಿಯವಾಗಿ ಭಾಗವಹಿಸಿದ ಮೊದಲನೆಯ ವರ್ಷ (೧೯೩೩) ಪ್ರೊ. ಡಿ. ಕೆ. ಭೀಮಸೇನರಾಯರನ್ನು ಮುಖ್ಯ ಅತಿಥಿಯೆಂದು ಬರಮಾಡಿಕೊಂಡರು. ಭೀಮಸೇನರಾಯರು ಮೈಸೂರಿನಲ್ಲಿ ಕನ್ನಡ ಎಂ.ಎ. ಮುಗಿಸಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಚಾರ್ಯರೆಂದು ಆದೇ ನೇಮಕಗೊಂಡಿದ್ದರು. ಆ ಸಲದ ಉತ್ಸವದ ವಿಶೇಷ ಆಕರ್ಷಣೆಯೆಂದರೆ ಸಂಗೀತ ಮೇಳಾ. ಜೀವಣರಾವ ಮಾಸ್ತರ-[illegible] ಹಾರ್ಮೋನಿಯಮ್ ಶಿಕ್ಷಕರು ದೊರೆತು ಕಾರ್ಯಕ್ರಮಕ್ಕೆ ತುಂಬಾ ಕಳೆ ಬಂದಿತು. ಮುಖ್ಯವಾಗಿ ಆ ೩-೪ ದಿನದ ಕಾರ್ಯಕ್ರಮಗಳಿಗೆ ಹೆಚ್ಚೆಚ್ಚು ಕನ್ನಡಿಗರು ಬರತೊಡಗಿದರು.

ಎರಡನೆಯ ವರ್ಷ ತಿ.ತಾ.ಶರ್ಮರನ್ನು ಮುಖ್ಯ ಅತಿಥಿಗಳನ್ನಾಗಿ ಬೆಂಗಳೂರಿನಿಂದ ಬರಮಾಡಿಕೊಂಡಿದ್ದಿತು. ಮೂರನೆಯ ವರ್ಷ ಕೆ. ಸಂಪದ್ಗಿರಿರಾಯರ ಆಗಮನ. ಸಂಪದ್ಗಿರಿರಾಯರ ವಾಗ್ವೈಖರಿಯನ್ನು ವಿವರಿಸಲಿಕ್ಕುಂಟೆ? ಮರುದಿನ ವಿವೇಕವರ್ಧಿನಿ ಶಾಲೆಯ ವಾಮನ ನಾಯಕರು ತಮ್ಮಲ್ಲಿಯ ಭಾಷಣಕ್ಕೆಂದು ಅವರನ್ನು ಆಮಂತ್ರಿಸಿದರು. ಆ ಅಸ್ಖಲಿತ ಭಾಷಣ ಕೇಳಿದ ಮೇಲೆ "ಅರೆ ಕಾನಡೀ ಲೋಕಾಮಧೇ ಇತಕೆ ಚಾಂಗಲೆ ಬೋಲಣಾರೆ ವಕ್ತಾ ಅಹೇತ್ ಕಾಯ್ !" ಎಂದು ಮರಾಟಿಗರು ಉದ್ಗಾರವೆತ್ತಿದರಂತೆ.

ಚಿಮ್ಮಲಗಿಯವರು ಇವೆಲ್ಲ ಕಾರ್ಯಕ್ರಮಗಳ ಹಿಂದಿನ ಸೂತ್ರಧಾರರಾಗಿದ್ದರು. ಕಾರ್ಯಕ್ರಮಗಳಿಗೆ ಹೆಚ್ಚು ಹೆಚ್ಚು ಜನ ಕನ್ನಡಿಗರು ಆಗಮಿಸುತ್ತ ಇದ್ದುದು ಅವರಿಗೆ ತುಂಬಾ ಸಂತೋಷವನ್ನುಂಟುಮಾಡಿತ್ತು. ನಾಲ್ಕನೆಯ ಕನ್ನಡಿಗರ ಗಣೇಶೋತ್ಸವವನ್ನು ಗವಳಿಗುಡ್ಡ ಉಪನಗರದಲ್ಲಿ ನೆರವೇರಿಸಬೇಕೆಂದು ಯೋಚಿಸಿದಾಗ, ವಾಮನ ನಾಯಕರು, "ನಾವು ಈಗಾಗಲೇ ಇಲ್ಲಿ ಗಣೇಶೋತ್ಸವವನ್ನು ಆಚರಿಸುತ್ತಿದ್ದೇವೆ. ನಮ್ಮೊಟ್ಟಿಗೆ ಕಾನಡಿ ಬಂಧುಗಳೂ ಇದ್ದಾರೆ. ಬೇಕಾದರೆ ನೀವೂ ಸೇರಿಕೊಳ್ಳಿ. ಗಣೇಶನು ಎಲ್ಲರಿಗೂ ದೇವರು ತಾನೇ? ನೀವು ಪ್ರತ್ಯೇಕವಾಗಿ ಆಚರಿಸುವದಾದರೆ ಕನ್ನಡ ಮರಾಠೀ ಭೇದದ ಬೀಜವನ್ನು ಬಿತ್ತಿದಂತಾಗುವುದು. ಇದನ್ನು ನಡೆಗೊಡುವುದಿಲ್ಲ. ಪರಸ್ಪರ ಜಗಳವಾಗಿ ಏನಾದರೂ ವಿಕೋಪಕ್ಕೆ ಹೋದರೆ ಅದಕ್ಕೆ ನೀವೇ ಜವಾಬುದಾರರು" ಎಂದು ಮುಂತಾಗಿ ವಿರೋಧಿಸಿದರು. ಗಣೇಶನೇನೊ ಎಲ್ಲರ ಪಾಲಿಗೆ ಸಮಾನ ದೇವರಿರಬಹುದು. ಆದರೆ ಕನ್ನಡತ್ವವನ್ನು ಬಿಂಬಿಸಿ, ಕನ್ನಡಿಗರಲ್ಲಿ ಜಾಗೃತಿಯನ್ನುಂಟುಮಾಡಿ, ಅವರನ್ನು ಒಂದೆಡೆ ಸೇರಿಸುವದಕ್ಕೆ ಇದೊಂದು ಅವಕಾಶವೆಂಬುದಾಗಿ ಭಾವಿಸಿದ ಚಿಮ್ಮಲಗಿಯವರು ನಾವು

ಕರು ವಿರೋಧವನ್ನು ಗಣಿಸದೇ ಕಾರ್ಯ ಕ್ರಮವನ್ನು ನಡೆಸಿಯೇಬಿಟ್ಟರು. ಈ ಬಾರಿಗೆ ಸುವಿಖ್ಯಾತ ಕೀರ್ತನಕಾರರಾದ ಕೊಪ್ಪಳ ಜಯ ರಾಮಾಚಾರ್ಯರ ಕಾರ್ಯಕ್ರಮವನ್ನು ಏರ್ಪಡಿಸ ಲಾಗಿತ್ತು. ಆ ಮುಂಚೆ ಮುಳಗುಂದ ರಾಮಾ ಶಾಸ್ತ್ರಿಗಳೆಂಬುವರು ಕನ್ನಡದಲ್ಲಿಯೆ ಹರಿಕಥೆ ಹೇಳುತ್ತಿದ್ದರು. ಆದರೆ ಮಾತುಮಾತಿಗೆ ಅವರು ಮಹಾರಾಷ್ಟ್ರ ಸಂತರ ಹಾಡುಗಳನ್ನು ಹೇಳುತ್ತಿ ದ್ದರಂತೆ, 'ಇದೇಕೆ?' ಎಂದು ಚಿಮ್ಮಲಗಿಯ ವರು ಪ್ರಶ್ನಿಸಿದಾಗ 'ಕರ್ನಾಟಕದಲ್ಲಿ ಅಂಥ ಮಹಾನುಭಾವರು ಇರುವರೆಲ್ಲಿ?' ಎಂದಿದ್ದರಂತೆ. ಜಯರಾಮಾಚಾರ್ಯರು ತಮ್ಮ ಕೀರ್ತನೆಗಳಲ್ಲಿ ಕನ್ನಡ ದಾಸಾರ್ಯರ ಹಾಡುಗಳನ್ನೇ ಉದ್ಧರಿಸು ತ್ತಿದ್ದರು. ಅವರ ಮುಂದಿನ ವರ್ಷದ ಗಣೇಶೋತ್ಸವವನ್ನು ತರುಣರಿಗೊಪ್ಪಿಸಿ, ಚಿಮ್ಮ ಲಗಿಯವರು ಆರ್ಥಿಕ ಸಹಾಯ ಮಾಡುತ್ತ ಬೆಂಗಲಿಗರಾಗಿ ನಿಂತರು.

ಜಯರಾಮಾಚಾರ್ಯರ ಕೀರ್ತನೆಯಿಂದ ಸ್ಫೂರ್ತಿ ಗೊಂಡು ಆಗ ನೆರೆದಿದ್ದ ಕನ್ನಡಿಗರು, ನಗರ ದಲ್ಲಿ ಕರ್ನಾಟಕ ಸಂಘವೊಂದನ್ನು ಸ್ಥಾಪಿಸುವ ಅಪೇಕ್ಷೆ ತೋರಿದರು. ಅದರ ಹೆಸರನ್ನು 'ಕರ್ನಾ ಟಕ ಸಾಹಿತ್ಯ ಮಂದಿರ' ಎಂದು ಇಡಲಾ ಯಿತು (೧೯೩೩). ಅದರ ಸ್ಥಾಪನೆಗೆ ಸಿದ್ದವ್ವನ ಹಳ್ಳಿ ಕೃಷ್ಣಶರ್ಮರು ವಿಶೇಷವಾಗಿ ಶ್ರಮಿಸಿ ದ್ದರು. ಕನ್ನಡ ಶಾಲೆಯಂತೆ ಇದಕ್ಕಾದರೂ ಚಿಮ್ಮಲಗಿಯವರ ಮನೆಯೇ ಪ್ರಾರಂಭದ ಕಾರ್ಯಸ್ಥಳವಾಗಿದ್ದಿತಲ್ಲದೆ ಅವರ ಬೆಳವಣಿಗೆ- ಯುದ್ದಕ್ಕೂ ಅನಿಸ್ಚಿತವಾಗಿ ಆರ್ಥಿಕ ಸಹಾಯ ಸಲ್ಲಿಸಿದರು. ಸಾಹಿತ್ಯ ಮಂದಿರವು ಸಾಕಷ್ಟು ಪ್ರಸಿದ್ಧವಾದ ಮೇಲೆಯೇ ಬೇರೆಡೆಗೆ ಸ್ಥಳಾಂತರವಾಯಿತು. ಈ ಸಂಘದಂತೆಯೇ ಅವಶ್ಯವಾಗಿದ್ದದ್ದು ಒಂದು 'ಬುಕ್ ಡೀಪೊ' ಹಾಗು ಒಂದು ಕನ್ನಡ ಪ್ರೆಸ್. ಚಿಮ್ಮಲಗಿ ಯವರು ಅವನ್ನು ಅಸ್ತಿತ್ವದಲ್ಲಿ ತಂದರು. 'ಬುಕ್ ಡಿಪೊ' ಕೆಲವು ವರ್ಷ ನಡೆಯಿತಾದರೂ ಪ್ರೆಸ್ ಮಾತ್ರ ಅದನ್ನು ನಡೆಸಿಕೊಂಡು ಹೋಗುವವ ರಿಲ್ಲದೆ, ನಿಂತುಹೋಯಿತು.

ನಿಜವಾದ ಕನ್ನಡಾಭಿಮಾನವಿದ್ದರೆ ಅದು ಸಣ್ಣ ಪುಟ್ಟ ಅಂಶಗಳಲ್ಲಿಯೂ ಕಂಡುಬರು ತ್ತದೆ. ವಿಶೇಷತಃ ಬೇರೆ ಭಾಷಿಕರ ದಬ್ಬಾ ಳಿಕೆಗೆ ತುತ್ತಾದಾಗ ಅದು ಇನ್ನಷ್ಟು ಪುಟಿ- ದೇಳುತ್ತದೆ. ಚಿಮ್ಮಲಗಿಯವರ ಜೀವನದಲ್ಲಿ ಇಂಥ ಹತ್ತಾರು ಸಂಗತಿಗಳು ಜರುಗಿದವು. ಅವರ ಅಂಗಡಿಯ ಹೆಸರು ಮೊದಲಿಗೆ 'ಚಿಮ್ಮ ಲಗಿಕರ್ ಬ್ರದರ್ಸ್' ಎಂದು ಇದ್ದಿತು. ಮರಾಠಿ ಗಳ ಮನೋವೃತ್ತಿಯನ್ನು ತಿಳಿ ಮೇಲೆ 'ಕರ್' ಎಂಬುದನ್ನು ತೊಡೆದುಹಾಕಿದರು. ಮರಾಠಿಗರನೇಕರು ಅವರ ವ್ಯವಹಾರಕ್ಕೆ ಧಕ್ಕೆ ಬರುವಂತೆ ಈ ಕುರಿತು ಅಪಪ್ರಚಾರ ಮಾಡಿದ ರಾದರೂ, ಯಾವ ದುಷ್ಪರಿಣಾಮವೂ ಆಗಲಿಲ್ಲ.

ಸುಪ್ರಸಿದ್ಧ ಬಾಲಗಂಧರ್ವ ಕಂಪನಿಯು ಗಡ- ಕರಿಯವರ 'ಭಾವಬಂಧನ' ನಾಟಕವನ್ನು ಹೈದರಾ- ಬಾದಿನಲ್ಲಿ ಪ್ರದರ್ಶಿಸುತ್ತಲಿತ್ತು; ಸಾಕಷ್ಟು ಜನಪ್ರಿ ಯತೆಯನ್ನೂ ಗಳಿಸಿತ್ತು. ಅವರು ಆಡುತ್ತಿದ್ದ ಒಂದು ನಾಟಕದಲ್ಲಿ "ಕನ್ನಡ ಭಾಷೆಯು ಗಡಗಿಯ ಒಳಗೆಬಗೆದ ಹರಳು ಸಪ್ಪಳ ಮಾಡಿದಂತೆ ಕೇಳಿ ಸುವದು" ಎಂಬ ಅವಹೇಳನೆಯ ಮಾತು ಬರುತ್ತದೆ. ರಂಗ ಪ್ರಯೋಗ ಕಾಲಕ್ಕೆ ಆ ಸಂದರ್ಭ ಬಂದಾಗಲೆಲ್ಲ ಪ್ರೇಕ್ಷಕರು ಘೊಳ್ಳೆಂದು ನಗು ತ್ತಿದ್ದರು. ಚಿಮ್ಮಲಗಿಯವರು ಇನ್ನಿತರ ಕೆಲವು ಉತ್ಸಾಹಿಗಳೊಡನೆ ಸೇರಿಕೊಂಡು ಪ್ರತಿಭಟಿಸಿ ದರು. ಕಂಪನಿಯವರು ಮೊದಲಿಗೆ ಅದನ್ನು ಗಣನೆಗೆ ತರಲಿಲ್ಲ. ಆದರೆ ಪ್ರತಿಭಟನೆಯ ರಭಸ ವನ್ನು ಕಂಡು ಆ ವಾಕ್ಯವನ್ನು ಕಿತ್ತುಹಾಕಲೇ ಬೇಕಾಯಿತು.

ನಿಜಾಮರ ರಾಜ್ಯದ ಭೂಗೋಲವನ್ನು ಪ್ರಾಥ ಮಿಕ ಶಾಲಾ ವಿದ್ಯಾರ್ಥಿಗಳಿಗೆ ಕಲಿಸುವಾಗ ಅದರಲ್ಲಿ ತೆಲಂಗಾಣ, ಮಹಾರಾಷ್ಟ್ರ ಎಂಬ ಎರಡೇ ಭಾಗಗಳನ್ನು ನಕಾಶದಲ್ಲಿ ತೋರಿಸಿ, ಅದರಂತೆ ಪಾಠ ಹೇಳುವ ಪರಿಪಾಠ ಬಿದ್ದು ಹೋಗಿತ್ತು. ಸಂಸ್ಥಾನದಲ್ಲಿ ಒಂದಲ್ಲ ಮೂರು ಜಿಲ್ಲೆಗಳು ಕನ್ನಡದವಿದ್ದವು. ಈ ಲೋಪವನ್ನು ಶಿಕ್ಷಣ ಶಾಖೆಯ ಗಮನಕ್ಕೆ ತರಲಾಯಿತು. ಆದರೆ ಫಲವೇನೂ ದೊರೆಯಲಿಲ್ಲ. ಚಿಮ್ಮಲಗಿಯ





ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.


ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ —ಆಮೇಲೆ ಇವು ನೋಯುವ ದಂತಕ್ಷಯವನ್ನು ಉಂಟುಮಾಡುತ್ತವೆ.

ಆದುದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೂಡಲೇ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ಶುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಅದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ.


ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ



ಉಸಿರಿನ ದುರ್ವಾಸನೆಯನ್ನು ಮತ್ತು ದಂತಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರಕಣಗಳಲ್ಲಿ ಬೆಳೆಯುತ್ತವೆ.



ಕೋಲ್ಗೇಟ್‌ನ ಅಪೂರ್ವವಾದ ಕಾರ್ಯಶೀಲ ನೊರೆ ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿಸುತ್ತದೆ ಮತ್ತು ಅಪಾಯಕರವಾದ ಆಹಾರಕಣಗಳನ್ನೂ, ರೋಗಾಣುಗಳನ್ನೂ ಹೋಗಲಾಡಿಸುತ್ತದೆ.



ಫಲಿತಾಂಶ: ಆಕರ್ಷಕವಾದ, ಬಿಳುಪಾದ ಹಲ್ಲುಗಳು, ಆತ್ಮವಿಶ್ವಾಸವನ್ನುಂಟುಮಾಡುವ ಶುಚಿಯಾದ ಉಸಿರು ಮತ್ತು ದಂತಕ್ಷಯದ ವಿರುದ್ಧ ರಕ್ಷಣೆ.

ಅಧಿಕ ಶುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟ್‌ಗಿಂತ ಅಧಿಕವಾಗಿ ಕೋಲ್ಗೇಟನ್ನು ಕೊಳ್ಳುತ್ತಾರೆ.



ಹಲ್ಲುಗಳ ಸಂಪೂರ್ಣ ರಕ್ಷಣೆಗಾಗಿ ಕೋಲ್ಗೇಟ್ ಬ್ರಾಂಡ್ ಟೂತ್‌ಬ್ರಶ್‌ಗಳನ್ನು ಉಪಯೋಗಿಸಿ. ಅವು ಹಲ್ಲಿನ ಎನಾಮೆಲ್‌ನ್ನು ಮತ್ತು ಒಸಡುಗಳನ್ನು ರಕ್ಷಿಸುತ್ತವೆ ಹಾಗೂ ಹಲ್ಲುಗಳ ಮೇಲೆ ಕೂಡಿಕೊಳ್ಳುವ ಕಶ್ಮಲವನ್ನು ತೆಗೆದು ಹಾಕುತ್ತವೆ. ನಿಮ್ಮ ಕುಟುಂಬದ ಪ್ರತಿಯೊಬ್ಬರಿಗೂ ಅನೇಕ ಮಾದರಿಗಳು

ದಂತವೈದ್ಯರು ಮಾತ್ರ ನಿಮಗೆ ಉತ್ತಮತರ ದಂತರಕ್ಷಣೆಯನ್ನು ನೀಡಬಲ್ಲರು

DC.G.64 KN

ದರು. ತಾವೇ ಬೇರೊಂದು ನಕಾಶೆಯನ್ನು ಬರೆಸಿದರು. ಅವರಲ್ಲಿ ಕನ್ನಡವನ್ನು ಸೇರಿಸಿ ಮೂರು ಭಾಷಾ ವಿಭಾಗಗಳನ್ನು ಮಾಡಿ, ಪ್ರಕಟಿಸಿದರು. ಅವನ್ನು ವಿವಿಧ ಶಾಲೆಗಳಿಗೂ, ಪ್ರಮುಖ ಮರಾಠೀ ಬಾಂಧವರಿಗೂ, ಸರಕಾರೀ ಅಧಿಕಾರಿಗಳಿಗೂ, ಅದರಂತೆ ಕರ್ನಾಟಕದ ಒಳನಾಡಿನಲ್ಲಿಯೂ ಹಂಚಿದರು. ಅದರಿಂದ ಸಂಸ್ಥಾನದಲ್ಲಿಯ ಕನ್ನಡಿಗರ ಅಸ್ತಿತ್ವವು ಕನ್ನಡೇತರರಿಗೆ ಸ್ಪಷ್ಟವಾಗಿ ಗೋಚರಿಸುವಂತಾಯ್ತು.

ಸಿನೆಮಗಳು ಹೆಚ್ಚಾಗಿ ಬಳಕೆಯಲ್ಲಿರದ ಆಗಿನ ದಿನಗಳಲ್ಲಿ (೧೯೩೦ರ ವರೆಗೆ) ನಾಟಕಗಳೇ ಪ್ರಮುಖ ಮನೋರಂಜನದ ಸಾಧನಗಳಾಗಿದ್ದುವು. ರಾ.ಭೀ. ಮನಸೂರ್ ಎಂಬುವರು ಕನ್ನಡ ನಾಟಕವನ್ನು ಪ್ರದರ್ಶಿಸಲೆಂದು ಹೈದರಾಬಾದಿಗೆ ಬಂದಾಗ, ಒಂದು ದಿವಸದ ಅವರ ಪ್ರದರ್ಶನ ವೆಚ್ಚವನ್ನು ತಾವೇ ವಹಿಸಿಕೊಂಡರು. ಮತ್ತು ಆ ದಿನದ ಪ್ರಯೋಗಕ್ಕೆ ಯಾವುದೇ ಕನ್ನಡಿಗನಿಗೆ ಉಚಿತ ಪ್ರವೇಶವೆಂದು ಸಾರಿದರು. ನೂರಾರು ಕನ್ನಡಿಗರು ಒಂದೆಡೆ ಸೇರುತ್ತಾರಲ್ಲ ಎಂಬ ತೃಪ್ತಿಭಾವವೇ ಇದರ ಕಾರಣವಾಗಿತ್ತು. ಒಳನಾಡಿನಿಂದ ಬಂದ ಕನ್ನಡಿಗರು, ಅವರ ಕಾರ್ಯದ ಕ್ಷೇತ್ರವಾವುದೇ ಇರಲಿ, ನಿರಾಶರಾಗಿ ಹಿಂತಿರುಗಿ ಹೋಗಬಾರದಲ್ಲವೆ, ಚಿಮ್ಮಲಗಿಯವರ ಬದುಕಿನಲ್ಲಿ ಇಂಥ ಘಟನೆಗಳು ಇನ್ನೂ ಹಲವಾರು ನಡೆದು ಹೋಗಿವೆ.

೩

ಕ್ರಿ.ಶ. ೧೯೩೯ಕ್ಕೆ ಎಂದರೆ ಜಾಗತಿಕ ಮಹಾಯುದ್ಧಾರಂಭದ ಕಾಲಕ್ಕೆ ಚಿಮ್ಮಲಗಿಯವರಿಗೆ ೫೦ ವರ್ಷ ತುಂಬಿದುವು. ಇದನ್ನು ನಾವು ಅವರ ಜೀವನದ ತೃತೀಯ ಘಟ್ಟವೆಂದು ಕರೆಯಬಹುದು. ಈ ವೇಳೆಗೆ ಅವರ ಉದ್ಯಮವು ಅತ್ಯಂತ ಊರ್ಜಿತಾವಸ್ಥೆಯನ್ನು ಮುಟ್ಟಿತ್ತು. ಉದ್ಯಮದ ಜೊತೆಗೇನೆ ಅವರ ಪರಸಹಾಯ ತತ್ಪರತೆ ಮತ್ತು ಔದಾರ್ಯಗಳೂ ವೃದ್ಧಿಗೊಂಡಿದ್ದುವು. ಅವು ಕನ್ನಡದ ಎಲ್ಲ ಬಗೆಯ ಚಟುವಟಿಕೆಗೆ ವ್ಯಾಪಿಸಿದ್ದುವು. ಇಷ್ಟರವರೆಗೆ ಅವರು ಕನ್ನಡವನ್ನು [illegible] ಕಾರ್ಯ ಕಲ್ಪಿಸುವಂತೆ ಮಾಡಿದರು. ಈಗ ಬರು [illegible] ಭಾರಾವಾದ ಆರ್ಥಿಕ ಸಹಾಯವನ್ನು ನೀಡುತ್ತ ಕನ್ನಡದ ಕಾರ್ಯವನ್ನು ಮುಂದುವರಿಸಿದರು.

ಅವರು [illegible] ಆರಂಭಿಸಿದ ನೃಪತುಂಗ ಶಾಲೆಯು ಈಗ ಹೈಸ್ಕೂಲ್ ಆಗಿ ಮಾರ್ಪಟ್ಟಿತ್ತು. ಆಗ ಹೆಡ್ ಮಾಸ್ತರರಾಗಿದ್ದ ವೆಂಕಟರಾವ ನಾಯಕರು ಸಂಸ್ಥಾನದ ಶಿಕ್ಷಣ ಖಾತೆಯನ್ನು ಸೇರಿ, ಮುಖ್ಯ ಶಿಕ್ಷಕರಾಗಿ ಶ್ರೀ [illegible] ಸ್ವಾಮಿರಾವ ನಾಯಕ ಎಂಬುವರು ಅವರ ಸ್ಥಳದಲ್ಲಿ ಬಂದರು. ಶಾಲೆಗೆಯ ಎರಡನೆಯ ಜಾಗವೂ ಸಾಲದಾದ್ದರಿಂದ ಆಟ-ಪಾಟಗಳಿಗೆ ಅನುಕೂಲವಾಗುವಂತೆ ಬಯಲು ಜಾಗವಿರುವ ಬೇರೊಂದು ನಿವೇಶನಕ್ಕೆ ಶಾಲೆಯು ಸ್ಥಳಾಂತರವಾಯಿತು. ವಿದ್ಯಾರ್ಥಿಗಳ ಸಂಖ್ಯಾ-ಮಾನದಿಂದ ಶಾಲೆಯು ಪ್ರಗತಿಪರವಾಗಿ ಕಂಡರೂ ಆರ್ಥಿಕ ಮುಗ್ಗಟ್ಟು ಬರತೊಡಗಿತು. ಸಮಿತಿಯ ಅಧ್ಯಕ್ಷರಾಗಿದ್ದ ಜನಾರ್ದನ ದೇಸಾಯಿಯವರು ಕಾಂಗ್ರೆಸ್ಸಿನ ಕಾರ್ಯಕ್ಕೆ ತಮ್ಮ ವೇಳೆಯನ್ನು ವಿನಿಯೋಗಿಸಬೇಕಾದ್ದರಿಂದ (ಆಗ ಇವರೂ ಅದಕ್ಕೆ ಹೋದರು) ಗುಡಗಂಟಿ ರಾಮಾಚಾರ್ಯ ಎಂಬುವರಿಗೆ ಶಾಲೆಯ ಆಡಳಿತವನ್ನು ಒಪ್ಪಿಸಲಾಯಿತು.

ರಾಮಾಚಾರ್ಯರೂ ಕಾಂಗ್ರೆಸ್ ಕಾರ್ಯಕರ್ತರೇ. ರಾಜಕೀಯ ಮುಖಾಂತರಕ್ಕೆ ಬಲಿ ಮಾಡಿದಂತಿದ್ದ ಅವರಿಗೆ ಬಂದು ಸೆರೆ ಬೇಕಾಗಿತ್ತು. ನೃಪತುಂಗ ವಿದ್ಯಾಲಯವು ಅನಾಥವಾಯಿತು. ಅವರು ಶಾಲೆಯ ಆಡಳಿತದ ಕಡೆಗೆ ಗಮನಕೊಡಲಿಲ್ಲವಾದ್ದರಿಂದಲೋ ಏನೋ. ಆರ್ಥಿಕ ಮುಗ್ಗಟ್ಟು ಹೆಚ್ಚಾಯಿತು. ಪಗಾರವೇ ಇಲ್ಲದ ಶಿಕ್ಷಕರು ಚಿಮ್ಮಲಗಿಯವರ ಕಡೆಗೆ ಬಂದು ತಮ್ಮ ಸಂಕಷ್ಟವನ್ನು ತೋಡಿಕೊಂಡರು. ಆಡಳಿತವನ್ನು ಅವರೇ ವಹಿಸಬೇಕೆಂದು ಕೇಳಿಕೊಂಡರು. ಚಿಮ್ಮಲಗಿಯವರಿಗಾದ ನೋವು ಅಷ್ಟಿಷ್ಟಲ್ಲ. ಶಾಲೆಯ ಆಗುಹೋಗುಗಳನ್ನು ತಮ್ಮ ಕೈಯಲ್ಲಿ ತೆಗೆದು

ಕೊಂಡು ಒಂದು ನೆಲೆಗೆ ತಂದರು. ಜೋಶಿ ಕೃಷ್ಣಾಚಾರ್ಯರು ಹೆಣ್ಣು ಮಕ್ಕಳಿಗಾಗಿ ಶಾರದಾ ಗರ್ಲ್ಸ್ ಸ್ಕೂಲ್ ಸ್ಥಾಪಿಸಿದ್ದರಲ್ಲವೆ, ಇವೆರಡನ್ನೂ 'ಕರ್ನಾಟಕ ಶಿಕ್ಷಣ ಸಮಿತಿ' ಎಂಬ ಒಂದೇ ಸಂಸ್ಥೆಯ ಆಡತಕ್ಕೆ ಒಳಪಡಿಸಲಾಯಿತು. ೧೯೪೭–೪೮ರ ಸುಮಾರಿಗೆ ಶಾಲೆಯ ಬೊಕ್ಕಸದಲ್ಲಿ ಇಪ್ಪತ್ತು ಸಾವಿರದಷ್ಟು ಶಿಲ್ಕು ಇದ್ದಾಗ ಚಿಮ್ಮಲಗಿಯವರು ಸಮಿತಿಯ ಅಧ್ಯಕ್ಷ ಪದವಿಯನ್ನು ಮತ್ತೊಮ್ಮೆ ಬಿಟ್ಟುಕೊಟ್ಟು ಮೆಂಬರರಾಗಿ ಉಳಿದರು.

ಶಾಲೆಯ ಆಡಳಿತದಿಂದ ದೂರವಿದ್ದರೂ ಅವರ ಹಿತಚಿಂತನೆ ಅವರ ಮನದಲ್ಲಿ ಸದಾ ಕಾಲವೂ ಇದ್ದಿತು. ಕ್ರಿ.ಶ. ೧೯೪೮ರಲ್ಲಿ ಸಂಸ್ಥಾನದ ವಿಮೋಚನೆಯಾದ ಅನಂತರ, ಕಾಂಗ್ರೆಸ್ ಆಡಳಿತ ಬಂದಿತಷ್ಟೆ. ಈ ರಾಜಕೀಯ ಹೋರಾಟದಲ್ಲಿ ಕನ್ನಡಿಗರ ಪಾತ್ರ ಕಡಿಮೆಯದೇನಲ್ಲ. ಅವರು ಸರಕಾರದ ಸಹಾಯವನ್ನು ಪಡೆಯುವುದು ಸುಲಭಸಾಧ್ಯವಿತ್ತು. ಅದಾಗಲೇ ಮಹಾರಾಷ್ಟ್ರದ ಕೆಲ ಧುರೀಣರು ಪುಣೆ ಮುಂಬಯಿಗಳಿಂದ ಬಂದು, ಹೈದರಾಬಾದದ ಪ್ರಜೆಗಳನ್ನು ಹುರಿದುಂಬಿಸಿ, ಹಲವು ಸೌಲಭ್ಯಗಳನ್ನು ಪಡೆದಿದ್ದರು. ಕನ್ನಡಿಗರು ಹಾಗೆ ಯೋಚಿಸಲಿಲ್ಲವೆಂದು ಚಿಮ್ಮಲಗಿಯವರು ಹಳಹಳಿಸಿದುದುಂಟು. ಉದಾಹರಣೆಗೆ, ನೃಪತುಂಗ ವಿದ್ಯಾಲಯಕ್ಕೆ ಬೇಕಾಗಿದ್ದ ಸ್ವಂತದ ಕಟ್ಟಡ. ಕಟ್ಟಡದ ನಿವೇಶನವನ್ನು ಕ.ಶಿ. ಸಮಿತಿಯವರು ೫೦ ಸಾವಿರರೂಪಾಯಿ ಕೊಟ್ಟು ಕೊಂಡಿದ್ದರು. ಹಾಗೆ ಮಾಡದೇ, ಸರಕಾರದ ಕಡೆಯಿಂದ ಯಾವದಾದರೂ ಜಾಗ ಅಥವಾ ಕಟ್ಟಡವನ್ನು ನಾವು ಮಾತ್ರ ಬೆಲೆಗೆ ಕೊಳ್ಳಬಹುದಿತ್ತಲ್ಲವೆ? ನಮ್ಮವರೇ ಆದ ಮಂತ್ರಿಗಳು ಆಗಿನ ಮಂತ್ರಿ ಮಂಡಲದಲ್ಲಿ ಇದ್ದೂ ಈ ದೃಷ್ಟಿಯಿಂದ ಯೋಚಿಸದೇ ಹೋದರಲ್ಲ ಎಂಬುದಾಗಿ ಚಿಮ್ಮಲಗಿಯವರು ಬೇಸರಪಟ್ಟರು.

"ಏನೇ ಆಗಲಿ. ವಿದ್ಯಾಲಯಕ್ಕೆ ಸ್ವಂತ ಕಟ್ಟಡವಾಗಿದೆ. ಈ ದೊಡ್ಡ ಕಟ್ಟಡದಲ್ಲಿ ೬೦೦ ವಿದ್ಯಾರ್ಥಿಗಳ ಅಭ್ಯಾಸ ಚೆನ್ನಾಗಿ ಆಗುತ್ತಿದೆ. ಕನ್ನಡಿಗರ ಸಂಖ್ಯೆ ಅಂತೂ ಹೆಚ್ಚುತ್ತಲಿದೆ. ಇದನ್ನು ನೋಡಿ ಆನಂದವೇ ಆನಂದ" ಎಂಬ ಅಭಿಪ್ರಾಯವನ್ನು ಚಿಮ್ಮಲಗಿಯವರು ತಮ್ಮ ಆತ್ಮಚರಿತ್ರೆಯ ಟಿಪ್ಪಣಿಯಲ್ಲಿ ಬರೆದಿದ್ದಾರೆ.

ಚಿಮ್ಮಲಗಿಯವರು ಸಾಹಿತಿಗಳೇನೂ ಅಲ್ಲ. ಆದರೆ ಆ ಕಾಲದಲ್ಲಿ ಅವರು ಸಾಹಿತ್ಯ ರಂಗದಲ್ಲಿ ಸಂಬಂಧಿಸಿದವರಿಗೆ ಅಖಂಡವಾಗಿ ನೆರವಾದರು. ನಿಜಾಮ ಸಂಸ್ಥಾನದ ಕನ್ನಡ ಗ್ರಂಥೋದ್ಯಮವನ್ನು ಅವರು ಪೋಷಿಸಿದ ರೀತಿ ಬೇರೆಯೇ ಆಗಿದ್ದಿತು. ಅದರಲ್ಲಿ ವ್ಯಾವಹಾರಿಕವಾದ ಆದರೆ ನಿಸ್ವಾರ್ಥ ದೃಷ್ಟಿ ಬೆಳೆದಿದ್ದಿತು. ಹೈದರಾಬಾದಿನ ಕರ್ನಾಟಕ ಸಾಹಿತ್ಯ ಮಂದಿರ, ಕೊಪ್ಪಳದ ಸಾಹಿತ್ಯ ಸೇವಾ ಸಂಘ, ನಿಜಾಮ ಕರ್ನಾಟಕದ ವಿದ್ಯಾಸೇವಾ ಸಂಘ–ಮೊದಲಾದ ಸಂಸ್ಥೆಗಳವರು ಹಲವಾರು ಪುಸ್ತಕಗಳನ್ನು ಪ್ರಕಟಿಸಿದರಷ್ಟೆ. ಚಿಮ್ಮಲಗಿಯವರು ಒಂದೊಂದು ಪ್ರಕಟಣೆಗೆ ೫೦೦ರಿಂದ ೧೦೦೦ ರೂ.ಗಳವರೆಗೆ ಹಣ ಕೊಟ್ಟು ಅಷ್ಟು ಬೆಲೆಯ ಪ್ರತಿಗಳನ್ನು ಪಡೆಯುತ್ತಿದ್ದರು. ಅವನ್ನು ನಿಜಾಮ ರಾಜ್ಯ ಆದರಂತೆ ಕರ್ನಾಟಕದ ಇತರ ಜಿಲ್ಲೆಗಳಲ್ಲಿಯೂ ಪುಕ್ಕಟೆಯಾಗಿ ವಿತರಣೆ ಮಾಡುತ್ತಿದ್ದರು. ಅಷ್ಟೇ ಹಣವನ್ನು ಅವರು ಮುದ್ರಣ ವೆಚ್ಚ, ಇಲ್ಲವೆ ಕಾಗದ ಖರೀದಿಗಾಗಿ ದೇಣಿಗೆ ಕೊಟ್ಟು ಕಳುಹಿಸಬಹುದಿತ್ತು. (ಹಾಗೆ ಧನಸಹಾಯ ಮಾಡುವವರು ಈಗಲೂ ಇದ್ದಾರೆ.) ಆದರೆ ಅದರಿಂದ ಪುಸ್ತಕಗಳು ಪ್ರಸಾರವಾಗದೇ ಆ ಆ ಪ್ರಕಾಶನ ಸಂಸ್ಥೆಗಳಲ್ಲಿ ಧೂಳು ತಿನ್ನುತ್ತ ಕೊಡುತ್ತಿದ್ದವು! ಮಾಸ್ತಿ ನರಸಿಂಗರಾಯರ 'ಕನ್ನಡ ಯಾತ್ರೆ' ಸಿದ್ದಯ್ಯ ಪುರಾಣಿಕರು ಹೈದರಾಬಾದಿನಲ್ಲಿದ್ದಾಗ ಬರೆದ ಕೃತಿಗಳು, ಗೋಕಾಕರ 'ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು' ಇವೇ ಮೊದಲಾದ ಪುಸ್ತಕಗಳ ಪ್ರಸಾರ ಮೇಲೆ ವಿವರಿಸಿದ ರೀತಿಯಲ್ಲಿ ನಡೆಯಿತು.

ಹೊಸತಾಗಿ ಆರಂಭವಾದ ಹಲವಾರು ಖಾಸಗೀ ಉದ್ಯಮ ಸಂಸ್ಥೆಗಳ ಶೇರುಗಳನ್ನು ಚಿಮ್ಮಲಗಿಯವರು ಹಿಂದು ಮುಂದೆ ಯೋಚಿಸದೆ ಕೊಳ್ಳುತ್ತಿದ್ದರು– ಅವು ಕನ್ನಡಿಗರಿಂದ ಸ್ಥಾಪಿತವಾಗಿ


ಹೊಂದು. ಇಂಥ ಸಂಸ್ಥೆಗಳಲ್ಲಿ ಹೆಚ್ಚಿನವು ದಿವಾಳಿ ತೆಗೆದು ಶೇರುಗಳು ಕಳೆದುಹೋದುವು. ಆದರೆ ಒಮ್ಮೆ ಹಾಗೆ ಕೈ ಸುಟ್ಟುಕೊಂಡರೂ ಮತ್ತೊಬ್ಬ ಕನ್ನಡಿಗ ಬಂದು ಶೇರುಗಳನ್ನು ಕೊಡಹೋದ ದಾಗ ಚಿಮ್ಮಲಗಿಯವರು ನಿರಾಕರಿಸುತ್ತಿದ್ದಿಲ್ಲ.

೪

ಹೈದರಾಬಾದ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆದ ಕಾಲದ ಆರಂಭದಿಂದ ಸಂಸ್ಥಾನದ ವಿಮೋಚನೆ ಆಗುವವರೆಗೂ ಚಿಮ್ಮಲಗಿಯವರು ಅಲ್ಲಿಯೇ ಇದ್ದರು. ಅಲ್ಲಿ ರಾಜಕೀಯ ಜಾಗೃತಿಯು ಸುಸ್ಪಷ್ಟವಾಗಿ ತಲೆದೋರಿದ್ದು ೧೯೩೦ನೆಯ ದಶಕದ ಆರಂಭದಿಂದ. ಬ್ರಿಟಿಶರ ನೇರ ಆಡಳಿತದ ಪ್ರದೇಶಗಳಿಗಿಂತಲೂ ಇಲ್ಲಿಯ ಕಾಂಗ್ರೆಸಿಗರ ಮೇಲೆ ಹೆಚ್ಚಿನ ನಿರ್ಬಂಧಗಳಿದ್ದುವು. ಹೀಗಾಗಿ ಚಳುವಳಿಯನ್ನು ಇಲ್ಲಿ ನಡೆಸುವುದು ಹೆಚ್ಚು ಕಷ್ಟದಾಯಕವಿದ್ದಿತು. ರಜಾಕಾರರ ಹಾವಳಿಯುಳ್ಳಂತೂ (೧೯೪೭–೪೮) ಸಂಸ್ಥಾನದ ಪ್ರಜೆಗಳು ಎದುರಿಸಬೇಕಾಗಿ ಬಂದ ಕಷ್ಟನಷ್ಟಗಳಿಗೆ ಮಿತಿಯಿರಲಿಲ್ಲ. ಅಂತೂ ೧೯೪೮ರಲ್ಲಿ ಸಂಸ್ಥಾನವು 'ಮುಕ್ತ'ವಾಗುವ ವರೆಗಿನ ಸುಮಾರು ಎರಡು ದಶಕಗಳ ಸ್ವಾತಂತ್ರ್ಯಾಂದೋಲನದಲ್ಲಿ ಕನ್ನಡ ಧುರೀಣರ ಪಾತ್ರವು ಎದ್ದು ಕಾಣುವಂತೆಯೇ ಇದ್ದಿತು. ಕ್ರಿ.ಶ ೧೯೩೭ರಲ್ಲಿ ನಿಜಾಮ ಕನ್ನಡಿಗರ ರಾಜಕೀಯ ಪರಿಷತ್ತು ಸೇರಿತು. ಆಮೇಲೆ ಇನ್ನು ಹಲವು ಸಮ್ಮೇಲನಗಳು ಆ ಹೆಸರಿನಲ್ಲಿ ನಡೆದುವು. ಆಗಿನ ರಾಜಕೀಯ ಧುರೀಣರಾಗಿ ಮೆರೆದ ಕನ್ನಡಿಗರೆಂದರೆ ಸ್ವಾಮೀ ರಮಾನಂದತೀರ್ಥ. ಬಿ. ರಾಮಕೃಷ್ಣರಾವ್, ಕಿಶನರಾವ್, ಜನಾರ್ದನ ದೇಸಾಯಿ, ಜಿ. ಎಸ್. ಮೇಲುಕೋಟೆ, ಕೃಷ್ಣಾಚಾರ್ಯ ಜೋಶಿ ಇತ್ಯಾದಿ. ಪಂಡಿತ ತಾರಾನಾಥ, ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಜೆ. ಕೆ. ಪ್ರಾಣೇಶಾಚಾರ್ಯ, ರಾ. ಗು. ಜೋಶಿ, ಇವರು ರಾಜಕೀಯ ಹಾಗೂ ಸಾಂಸ್ಕೃತಿಕ ರಂಗ– ಎರಡರಲ್ಲಿಯೂ ಶ್ರಮಿಸಿದ್ದಾರೆ, ರಾಚೋಟಯ್ಯ ಎಂಬುವರು ನಿಜಾಂ ಕನ್ನಡಿಗರಿಗಾಗಿ ರಾಷ್ಟ್ರೀಯ ದಿನಪತ್ರಿಕೆಯನ್ನು ಹೊರಡಿಸಿದ ಧೀರರು. ಶಿಕ್ಷಣ ಕ್ಷೇತ್ರದಲ್ಲಿ ದುಡಿದವರೆಂದು ಪುನಃ ತಾರಾನಾಥ, ಪದ್ಮನಾಭ ಪುರಾಣಿಕ ಮುಂತಾದವರನ್ನು ಹೆಸರಿಸಬೇಕು. ಸಾಹಿತ್ಯ ಕ್ಷೇತ್ರದಲ್ಲಿ ಡಿ. ಕೆ. ಭೀಮಸೇನರಾವ್ ಹಾಗೂ ನರಸಿಂಗರಾವ್ ವಾಸ್ಟ್ರಿ ಇವರ ಹೆಸರು ಆಗಿನ ಕಾಲಕ್ಕೆ ಎದ್ದು ಕಾಣುವಂತಿತ್ತು. ಇತ್ತ ದಿವಾಕರ ರಂಗರಾವ್, ಹರ್ಡೇಕರ ಮಂಜಪ್ಪ–ಮುಂತಾದವರು ಹೊರಗಿನಿಂದ ಬಂದವರಾಗಿ ಹೈದರಾಬಾದ ಕನ್ನಡಿಗರ ಜಾಗೃತಿಗೆ ಸಾಕಷ್ಟು ನೆರವಾದರು.

ಹೈದರಾಬಾದಿನಲ್ಲಿ ನೆಲಸಿದ್ದ ಕನ್ನಡಿಗರಲ್ಲಿ ಅನೇಕರು ಪ್ರಮುಖ ವಕೀಲರಾಗಿದ್ದರು. ಕಾಗಲ ಶ್ರೀನಿವಾಸರಾವ್, ಗುಂಡೇರಾವ್ ಜೋಶಿ, ಬಿ. ಕೆ. ರಾಮಾನುಜಯ್ಯಂಗಾರ್, ಎನ್. ಎಸ್. ರಾಘವರಾವ್, ಗುಡೂರು ಶ್ರೀನಿವಾಸರಾವ್, ರಾಮಾಚಾರ್ಯ ಜೋಶಿ, ಜಯಾಚಾರ್ಯ ಪುರಾಣಿಕ ಈ ವ್ಯಕ್ತಿಗಳು ಕನ್ನಡೇತರರಲ್ಲಿಯೂ ಪ್ರಸಿದ್ಧರಾಗಿದ್ದರು. ವಿವಿಧ ಸರಕಾರೀ ಖಾತೆಗಳಲ್ಲಿಯೂ ಹಲವು ಕನ್ನಡಿಗರು ಉಚ್ಚ ಸ್ಥಾನದಲ್ಲಿದ್ದರು. ಈ ಮುಂಚೆ ಹೇಳಿದ ಡಾ. ಬದಾಮಿಯವರಲ್ಲದೆ ಡಾ. ಎಲ್. ಜಿ. ಕುಲಕರ್ಣಿ ಎಂಬುವರು, ಜರ್ಮನಿಯಲ್ಲಿ ಒಕ್ಕಲುತನದ ವಿಷಯವಾಗಿ ಪಿಎಚ್. ಡಿ ಪಡೆದು. ಆ ಖಾತೆಯಲ್ಲಿ ಹಿರಿಯ ಅಧಿಕಾರಿಗಳಾಗಿದ್ದರು.

ಚಿಮ್ಮಲಗಿಯವರು ಅಪ್ಪಟ ಕಾಂಗ್ರೆಸ್ ಅನುಯಾಯಿಗಳೇ ಆಗಿದ್ದು, ಹೈದರಾಬಾದಿನ ಕರ್ನಾಟಕ ಕಾಂಗ್ರೆಸ್ ಸ್ಥಾಪನೆಯಾದಂದಿನಿಂದ ಅದರ ಸದಸ್ಯರಿದ್ದರು. ಅದರ ಸಭೆಗಳಲ್ಲಿ ಹಾಜರಿರುತ್ತಿದ್ದರು. ಆದರೆ ಸ್ವಾತಂತ್ರ್ಯದ ಹೋರಾಟದಲ್ಲಿ ನೇರವಾಗಿ ಧುಮುಕದೇ, ಹಿನ್ನಲೆಯಲ್ಲಿ ಸಹಾಯ ಸಲ್ಲಿಸಿದರು. ಕನ್ನಡಿಗರಾದ ರಾಜಕೀಯ ಧುರೀಣರೆಲ್ಲರೊಡನೆ ಚಿಮ್ಮಲಗಿಯವರ ನಿಕಟ ಸಂಪರ್ಕವಿದ್ದಿತು. ಅಲ್ಲದೆ, ವಕೀಲ ಮುಂತಾದ ಪ್ರತಿಷ್ಠಿತ ವಲಯಗಳಲ್ಲಿಯೂ ಇವರಿಗೆ ಮನ್ನಣೆಯಿದ್ದಿತು. ಮೇಲೆ ಹೆಸರಿಸಿದ ಯಾರೊಬ್ಬ ಕನ್ನಡಿಗರಿಗಿಂತ ಮುಂಚೆಯೇ, ಆ ನಗರದ ಕನ್ನಡ ಚಟುವಟಿಕೆ


ಕೋರೈಸುವ ಬಿಳಿಪು ಯಾರೇ
ನೋಡಲಿ, ಒಂದೇ ಮಾತು...
ಇದು ಖಂಡಿತ
ಡೆಟ್
ಡಿಟರ್ಜೆಂಟ್
ಬಿಲ್ಲೆಯ ಒಗೆತ
Supreme
Det

ಗಳಲ್ಲಿ ಅವರು ನಿರತರಾಗಿದ್ದರೆಂಬುದು ಮಹತ್ವದ್ದಾಗಿದೆ.

ಇತ್ತ ಕರ್ನಾಟಕದ ಒಳ ಪ್ರದೇಶದಿಂದ ಹೈದರಾಬಾದಿಗೆ ಹೋದ ಪ್ರಮುಖ ಕನ್ನಡಿಗರು ಯಾರೇ ಇರಲಿ, ಅವರಿಗೆ ಚಿಮ್ಮಲಗಿಯವರು ಆದರಾತಿಥ್ಯ ಮಾಡಿ, ಅವರ ಕಾರ್ಯವನ್ನು ನೆರವೇರಿಸಿಕೊಡುವುದು ಸರ್ವಸಾಮಾನ್ಯವಾಗಿದ್ದಿತು. ಕಾರ್ಯಕ್ರಮಗಳಿಗೆ ಆಮಂತ್ರಿತರಾದ ಅನೇಕ ಕನ್ನಡಿಗರು, ಅದರಂತೆ ಸ್ವಂತದ ಕಾರ್ಯಾರ್ಥಿಯಾಗಿ ಹೋದವರು ಚಿಮ್ಮಲಗಿಯವರಲ್ಲಿಯೆ ಇಳಿದುಕೊಳ್ಳುತ್ತಿದ್ದರು. ದಿ. ಆಲೂರ ವೆಂಕಟರಾಯರು, ಶ್ರೀರಂಗರು, ಮಾಸ್ತಿಯವರು, ದಿವಾಕರರು ಹಾಗೆ ಚಿಮ್ಮಲಗಿಯವರ ಆತಿಥ್ಯವನ್ನು ಪಡೆದದ್ದುಂಟು.

ಶಿವರಾಮ ಕಾರಂತರು ಒಮ್ಮೆ ಹೈದರಾಬಾದಿಗೆ ಹೋದಾಗ ಒಂದು ಅನರ್ಥವೆ ಜರುಗಿತು. ಕಾರಂತರ ಭಾಷಣ ಕಾರ್ಯಕ್ರಮ ಮುಗಿದ ಮೇಲೆ, ಅವರಿಗೆ ಮತ್ತು ನಗರದ ಪ್ರಮುಖ ಕನ್ನಡಿಗರಿಗೆ, ಅದರಂತೆ ಕಾರ್ಯಕರ್ತರಿಗೆ ರಾತ್ರಿಯ ಭೋಜನ ಸಮಾರಂಭವನ್ನು ಚಿಮ್ಮಲಗಿಯವರು ಹಮ್ಮಿಕೊಂಡಿದ್ದರು. ಹೊರಗಡೆ ಈ ಸುಮಾರು ಐವತ್ತು ಜನ ಹರಟೆಯಲ್ಲಿ ಹಾಗೂ ಕಾರಂತರ ವ್ಯಂಗ್ಯಾತ್ಮಕ ಸಂಭಾಷಣೆ ಕೇಳುವಲ್ಲಿ ನಿರತರಾಗಿದ್ದರೆ, ಒಳಗಡೆ ಚಿಮ್ಮಲಗಿಯವರ ಮನೆ ಜನರೆಲ್ಲ ಪಕ್ವಾನ್ನದ ಅಡಿಗೆಯ ತಯಾರಿಯಲ್ಲಿದ್ದರು. ಅವರ ಹಿರಿಯ ಮಗಳು ಕುದಿಯುತ್ತಿದ್ದ ಹುಳಿ ಪಲ್ಯದ ಕೊಳಗದಲ್ಲಿ ಸೌಟಿನಿಂದ ಕೈಯಾಡಿಸುತ್ತಿದ್ದಾಗ, ಗೇಣುದ್ದದ ದೊಣ್ಣೇಕಾಟವು ಅದರಲ್ಲಿ ಬಿದ್ದು ಬೆಂದುಹೋದದ್ದು ಕಾಣಿಸಿತು! ಅದು ಹಸಿರು ಬಣ್ಣದ ಕೀಟವಾದ್ದರಿಂದ ಆ ಮೊದಲು ಇತರರ ಕಣ್ಣಿಗೆ ಬಿದ್ದಿರಲಿಲ್ಲ. ಕೂಡಲೇ ಬೇರೊಂದು ಹುಳಿಯನ್ನು ಮಾಡಲು ತೊಡಗಿಸಿದರು. ಆಗಲೆ ೧೦ ಗಂಟೆಯಾಗಿತ್ತು. ಇದರಿಂದಾಗಿ ಇನ್ನೊಂದು ಗಂಟೆ ಸಮಯ ಬೇಕಾಯಿತು. ಹಸಿವು, ದಣಿಕೆ ಎರಡರಿಂದ ಅತಿಥಿಗಳು ಸಿಡಿಮಿಡಿಗೊಂಡಿದ್ದರು. ಊಟ ಮುಗಿಯುತ್ತ ಬಂದಾಗ ಚಿಮ್ಮಲಗಿಯವರು, ತಡವಾದದ್ದರ ಕಾರಣವನ್ನು ವಿವರಿಸಿ ಕ್ಷಮೆ ಕೇಳಿದರು. ದೊಣ್ಣೇಕಾಟವು ಭಾರೀ ವಿಷದ ಪ್ರಾಣಿ. ಒಂದು ವೇಳೆ, ಅವರ ಮಗಳು ಅದನ್ನು ಗಮನಿಸದೇ ಹೋಗಿದ್ದರೆ, ಅದೆಂಥ ಅನರ್ಥವಾಗುತ್ತಿತ್ತೋ! "ಅದನ್ನು ನೆನೆದರೆ ಈಗೂ ಭಯವೆನಿಸುತ್ತದೆ. ಅನೇಕ ಜನ ಗಣ್ಯರ ದುರ್ಮರಣದ, ಘೋರ ಪಾತಕಕ್ಕೆ ಗುರಿಯಾಗುತ್ತಿದ್ದೆನಲ್ಲ, ಪರಮೇಶ್ವರನೇ ನನ್ನನ್ನು ಕಾಪಾಡಿದ" ಎಂದು ಮುಂತಾಗಿ, ತಮ್ಮ ಟಿಪ್ಪಣಿಗಳಲ್ಲಿ ಎರಡು ಮೂರು ಬಾರಿ ಬರೆದಿದ್ದಾರೆ.


ಚಿಮ್ಮಲಗಿಯವರಿಗೆ ೭೦ನೆಯ ವಯಸ್ಸು ಸಮೀಪಿಸಿದ್ದ ಕಾಲದಲ್ಲಿ, ಹೊರನಾಡ ಕನ್ನಡಿಗರ ಸಾಹಿತ್ಯ ಸಮ್ಮೇಳನ—ಹೈದರಾಬಾದ ನಗರದಲ್ಲಿ ಜರುಗಿತು. (೧೯೫೮). ದಿಲ್ಲಿಯಲ್ಲಿದ್ದ ಎಚ್. ಎಸ್. ಪಾಟೀಲರು ಮತ್ತು ಹೈದರಾಬಾದದಲ್ಲಿಯ ಪ್ರೊಫೆಸರರಾಗಿದ್ದ ಎಚ್. ಬಿ. ಕುಲಕರ್ಣಿಯವರು ಅದರ ಪ್ರೋತ್ಸಾಹಕರು. ಕಾರ್ಯಕರ್ತರೆಲ್ಲ ಚಿಮ್ಮಲಗಿಯವರೇ ಸ್ವಾಗತಾಧ್ಯಕ್ಷರಾಗಬೇಕೆಂದು ಆಗ್ರಹಪಟ್ಟರು. "ನನ್ನ ಕಡೆಯಿಂದ ಏನೂ ಕೆಲಸವಾಗದು; ಬೇಡ ಎಂದರು ಚಿಮ್ಮಲಗಿಯವರು. "ಹಿರಿಯರು ನೀವು; ಮಾರ್ಗದರ್ಶನ ಮಾಡಿದರೆ ಸಾಕು, ನಾವೆಲ್ಲ ಕೆಲಸ ನೋಡಿಕೊಳ್ಳುತ್ತೇವೆ" ಎಂದು ಆಶ್ವಾಸನವಿತ್ತದ್ದರಿಂದ ಒಪ್ಪಿಕೊಂಡರು. ನಿಜಲಿಂಗಪ್ಪನವರು ಉದ್ಘಾಟಿಸಿದ ಮತ್ತು ದ.ಪ. ಕರಮರಕರು ಅಧ್ಯಕ್ಷರಾಗಿದ್ದ ಆ ಸಮ್ಮೇಳನ ಯಶಸ್ವಿಯಾಯಿತು. "ಅವರೇ (ಕಾರ್ಯಕರ್ತರು) ಎಲ್ಲ ಕೆಲಸ ಮಾಡಿದರು. ಉತ್ಸವಮೂರ್ತಿಯಂತೆ ಸುಮ್ಮನೆ ನನ್ನನ್ನು ಒಯ್ದು ಕೂರಿಸಿದರು" ಎಂದು ಬರೆದಿದ್ದಾರೆ ಚಿಮ್ಮಲಗಿಯವರು ಆ ದಿನ ಅವರಿಗೆ ತಾವು ಮೂವತ್ತು ವರ್ಷಗಳ ಹಿಂದೆ ನಡೆಸುತ್ತಿದ್ದ ಕನ್ನಡಿಗರ ಗಣೇಶೋತ್ಸವದ ದಿನಗಳು ನೆನಪಾದುವಂತೆ. ಜನರನ್ನು ಸೇರಿಸಲು ತಾವು ಆಗ ಒದ್ದಾಡುತ್ತಿದ್ದುದು ಕಣ್ಣಿಗೆ ಕಟ್ಟಿತು. ಈ ಸಮ್ಮೇಳನಕ್ಕೆ ಜನ ತಾವಾಗಿ ಬಹುಸಂಖ್ಯೆಯಲ್ಲಿ ನೆರೆದಿದ್ದನ್ನು ಕಂಡು

ಹರ್ಷಿತರಾದರು.

ತಮ್ಮ ತುರೀಯಾಶ್ರಮದ ಅವಧಿಯಲ್ಲಿ ಚಿಮ್ಮಲಗಿಯವರು ಹಲವಾರು ಬಾರಿ ತೀರ್ಥ ಯಾತ್ರೆ ಮಾಡಿಬಂದರು. ಅದರಿಂದ ತುಂಬ ಸಂತೃಪ್ತಿಯನ್ನು ಹೊಂದಿದರು. ಅವರ ೭೫ನೆಯ ವರ್ಷದಲ್ಲಿ ಅರ್ಧಾಂಗ ವಾಯುವಿನ ಬೇನೆ ಹೊಡೆಯಿತು. ಆದರೆ ೬–೭ ತಿಂಗಳಲ್ಲಿಯೆ ಚೇತರಿಸಿಕೊಂಡರು– ಮೊದಲಿನಷ್ಟು ದೈಹಿಕ ಶಕ್ತಿ ಉಳಿದಿರಲಿಲ್ಲ. ಇನ್ನೂ ಅಷ್ಟು ದಾನ–ಧರ್ಮ ಮಾಡಬೇಕೆಂದು ಸಂಕಲ್ಪಿಸಿದರು. ಅದರಲ್ಲಿ ಎದ್ದು ಕಾಣುವಂಥದ್ದೆಂದರೆ ನೃಪತುಂಗ ವಿದ್ಯಾಲಯದ ಲೈಬ್ರರಿ ಕಟ್ಟಡಕ್ಕಾಗಿ ಆರು ಸಾವಿರ ರೂಪಾಯಿಗಳನ್ನು ಕೊಟ್ಟದ್ದು (೧೯೬೬). ಹಲವಾರು ಧಾರ್ಮಿಕ ಸಂಸ್ಥೆಗಳಿಗೂ ಅವರು ಧಾರಾಳವಾಗಿ ದಾನ ಮಾಡಿದರು. ದಾಸಕೂಟದಲ್ಲಿ ಮೊದಲಿನಿಂದಲೂ ಅವರಿಗೆ ಆಸ್ಥೆ ಇದ್ದಿತು. ದಾಸಸಾಹಿತ್ಯದ ಪ್ರಕಟನೆಗೆಂದು ಠೇವಣಿ ಇಟ್ಟು ಅದರ ಬಡ್ಡಿಯ ಹಣದಿಂದ ಪ್ರತಿವರ್ಷವೂ ಆರ್ಥಿಕ ಸಹಾಯ ಒದಗಿಸಿದರು. ಅವರ ಕೊನೆಗಾಲದ ಟಿಪ್ಪಣಿಗಳಲ್ಲಿ ಹಾಗೆ ದಾನ ಪಡೆದ ಸಂಸ್ಥೆಗಳ ಯಾದಿ ಇದ್ದು, ಧಾರೆಯೆರೆದ ಹಣವು ಇಪ್ಪತ್ತು ಸಾವಿರದಷ್ಟಿದೆ.

ಮತ್ತೊಮ್ಮೆ ಪಾರ್ಶ್ವವಾಯು ಬಡಿದಾಗ ಮಾತ್ರ ಅವರಿಗೆ ಚೇತರಿಸಿಕೊಳ್ಳಲಾಗಲಿಲ್ಲ. ಆಗಸ್ಟ್ ೨೭, ೧೯೭೩ ರಂದು ಇಹಲೋಕವನ್ನು ತ್ಯಜಿಸಿದರು. ಅಂದಿಗೆ ಅರ್ಧ ಶತಕದ ಹಿಂದೆ ಹೈದರಾಬಾದಿನಲ್ಲಿ ಕನ್ನಡವು ಅನಾಥವಾಗಿದ್ದಾಗ ಎತ್ತಿ ಹಿಡಿದರು. ಕನ್ನಡದ ಸೆಲೆ ಬತ್ತಿ ಹೋದಾಗ ಚಾಲನೆ ಕೊಟ್ಟರು. ತಮ್ಮ ಸಂಪತ್ತನ್ನು ಕನ್ನಡದ ಕಾರ್ಯಕ್ಕೆಂದು ಮೀಸಲಿರಿಸಿದರು. ಪ್ರಸಿದ್ಧಿ ಅಧಿಕಾರ ಮೊದಲಾದ ಪ್ರಲೋಭನೆಗಳಿಗೆ ಒಳಗಾಗದೇ, ಇತರರು ಮುಂದೆ ಬಂದಾಗ, ಅವಕಾಶಮಾಡಿಕೊಟ್ಟರು. ಕನ್ನಡವನ್ನುದ್ಧರಿಸಿದ ಹಳೆಯ ತಲೆಮಾರಿನ ಪುಣ್ಯಪುರುಷರ ಮಾಲಿಕೆಯಲ್ಲಿ ಸೇರಿಕೊಂಡರು. ✡

(ಲೇಖಕರ ಇದೇ ಹೆಸರಿನ ಪುಸ್ತಕದಿಂದ ಸಂಗ್ರಹಿತ.)



ಬ್ಯಾಕ್ಟೀರಿಯಗಳು ನನ್ನ ನಿಮ್ಮ ಹಾಗೆ ಪರಸ್ಪರ ಮಾತಾಡಬಹುದೊ ಹೇಗೆ ಎಂಬುದು ಗೊತ್ತಿಲ್ಲ. ಆದರೆ ಅವುಗಳಿಗೆ ಅತೀಂದ್ರಿಯ ಪ್ರಜ್ಞೆಯಿರುವುದಂತೂ ನಿಜ. ಕ್ಲೀವ್ ಬ್ಯಾಕ್ಸರ್ ಎನ್ನುವವರೊಬ್ಬರು ಇತ್ತೀಚೆ ಮೊಸರು ಇದ್ದ ಪಾತ್ರೆಯೊಂದನ್ನು ಒಂದು ಕೋಣೆಯಲ್ಲಿರಿಸಿ ಅನಂತರ ಇನ್ನೊಂದು ಕೋಣೆಯಲ್ಲಿ ಮತ್ತೊಂದು ಮೊಸರಿನ ಪಾತ್ರೆಯಲ್ಲಿ ಹಾಲು ಸುರಿದರು. ಅವರು ಹಾಗೆ ಮಾಡುವುದೇ ತಡ, ಆ ಇನ್ನೊಂದು ಕೋಣೆಯಲ್ಲಿನ ಮೊಸರಿನ ಪಾತ್ರೆಯಿಂದ ವಿದ್ಯುತ್ ಸ್ಪಂದನವಾಗತೊಡಗಿತು. ಈ ಪ್ರಯೋಗವನ್ನು ಹಲವಾರು ಬಾರಿ ಪುನರಾವರ್ತಿಸಿದಾಗಲೂ ಇದೇ ಪರಿಣಾಮ ಕಂಡು ಬಂತು. ಇನ್ನೊಂದು ಕೋಣೆಯಲ್ಲಿರಿಸಿದ ಮೊಸರಿನ ಪಾತ್ರೆಗೆ ಹಾಲು ಸುರಿದದ್ದನ್ನು ಅವು ಅತೀಂದ್ರಿಯ ಪ್ರಜ್ಞೆಯ ಮೂಲಕವೇ ತಿಳಿದುಕೊಂಡವೆನ್ನುವುದಕ್ಕೆ ಬೇರೆ ಸಾಕ್ಷಿ ಬೇಕಿಲ್ಲ ಎನ್ನುತ್ತಾರೆ ಬ್ಯಾಕ್ಸ್ಟರ್.

Printed & published by P. S. Bhat for the Jayakarnatak News Printers Ltd., at the Samyukta Karnataka Press, Koppikar Road, Hubli-580 020. Rept Bombay: V. Satyamurty Phone: 522412; Calcutta: H. Muzamdar 46-4233: Madras: K. A. Subramanian Phone: 842201; New Delhi. P. R. Chopra Phone: 714130.







KASTURI PRICE : 1-50 Regd. No. KRNG 43
Registered with the Registrar of Newspapers for India under No. 3533/57

ಮುನ್ನಡೆಯುವ ಶಕ್ತಿ

